# ಅಧ್ಯಾಯ–೧೬
# ಇತರ ಸಮಾಜ ಸೇವಾ ಸಂಸ್ಥೆಗಳು

ಯಾವುದೇ ದೇಶದ ಅಭಿವೃದ್ಧಿ ನಿಜವಾದ ರೀತಿಯಲ್ಲಿ ಆಗ ಬೇಕೆಂದರೆ ಆ ದೇಶದ ದುರ್ಬಲ ವರ್ಗದವರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮೇಲೆತ್ತ ಬೇಕಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಪ್ರತಿಯೊಬ್ಬ ಪ್ರಜೆಯ ಪ್ರಗತಿಯಾದರೆ, ಒಂದು ದೇಶ ಸಂಪೂರ್ಣವಾಗಿ ಮುಂದುವರಿದಂತಹ ದೇಶವೆಂಬ ಪರಿಗಣನೆಗೆ ಬರಲು ಸಾಧ್ಯ. ಈ ನಿಟ್ಟಿನಲ್ಲಿ ಭಾರತ ಸರ್ಕಾರವು ಮೊದಲಿನಿಂದಲೂ ಶ್ರಮಿಸುತ್ತ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜ ಕಲ್ಯಾಣದ ಯೋಜನೆಗಳ ಮೂಲಕ ರಾಷ್ಟ್ರವನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುತ್ತಿವೆ. ಇದೇ ರೀತಿಯಲ್ಲಿ ರಾಜ್ಯದ ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನದಲ್ಲಿ ಸಮಾನತೆಯನ್ನು ಸ್ಥಾಪಿಸುವುದು ಕರ್ನಾಟಕ ಸರ್ಕಾರದ ಧ್ಯೇಯವೂ ಆಗಿದೆ. ದಲಿತರು, ಹಿಂದುಳಿದವರು, ಮಹಿಳೆಯರು, ಮಕ್ಕಳು, ಕಾರ್ಮಿಕರು, ವಿಕಲ ಚೇತನರು, ಮುಂತಾದವರ ಏಳಿಗೆಗಾಗಿ ಕೈಗೊಳ್ಳುವ ಕಾರ್ಯಕ್ರಮಗಳೆಲ್ಲವೂ ಸಮಾಜ ಸೇವೆಯ ವಿವಿಧ ವಿಧಾನಗಳಾಗಿವೆ. ಸರ್ಕಾರದೊಂದಿಗೆ ಖಾಸಗಿ ಸಂಸ್ಥೆಗಳೂ ಈ ನಿಟ್ಟಿನಲ್ಲಿ ತಮ್ಮ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು, ಕರ್ನಾಟಕವನ್ನು ಸರ್ವ ಸಮಾನತೆಯುಳ್ಳ ಹಾಗೂ ಅಭಿವೃದ್ಧಿಶೀಲ ರಾಜ್ಯವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿವೆ. ಈ ಅಧ್ಯಾಯವು ಚಾಮರಾಜನಗರ ಜಿಲ್ಲೆಯಲ್ಲಿ, ಜನತೆಗೆ ಒದಗಿಸಿಕೊಟ್ಟಿರುವ ಸಾಮಾಜಿಕ ಸೇವಾ ಸೌಕರ್ಯಗಳನ್ನು, ಹಾಗೂ ಅವುಗಳ ಪ್ರಗತಿಯನ್ನು ಲಭ್ಯ ಅಂಕಿ ಅಂಶಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ವಿವಿಧೆಡೆ ಸರ್ಕಾರದ ವತಿಯಿಂದ ಒದಗಿಸಲ್ಪಟ್ಟಿರುವ ಹಲವಾರು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳ ಯಶಸ್ಸಿನ ಅಂಶಗಳು ಮತ್ತು ಖಾಸಗಿ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಜನತೆಗಾಗಿ ಒದಗಿಸಿರುವ ಸೇವೆಗಳ ಕುರಿತು ಒಂದು ಕಿರು ನೋಟವನ್ನು ಈ ಅಧ್ಯಾಯದಲ್ಲಿ ಕಾಣಬಹುದು.

## ಕಾರ್ಮಿಕ ಕಲ್ಯಾಣ

ಸ್ವಾತಂತ್ರ್ಯಪೂರ್ವದಲ್ಲಿ ಕೈಗಾರಿಕಾ ಅಭಿವೃದ್ಧಿಯು ಒಂದು ಮಿತಿಯಲ್ಲಿದ್ದು, ಕಾರ್ಮಿಕ ಸಂಘಟನೆಯೂ ಸೀಮಿತವಾಗಿತ್ತು. ಇದೇ ರೀತಿ ಕಾರ್ಮಿಕ ಕಾನೂನುಗಳೂ ಕಡಿಮೆಯಿದ್ದವು. ಮೊದಲ ಮಹಾಯುದ್ಧದ ಅಂತ್ಯದ ವೇಳೆಗೆ ಕರ್ನಾಟಕದಲ್ಲಿ ಆಧುನಿಕ ಕೈಗಾರಿಕೆಗಳು ತಲೆದೋರಿದ್ದವಾದರೂ ಕಾರ್ಮಿಕ ಸಂಘಟನೆಯಾಗಿರಲಿಲ್ಲ. ಬ್ರಿಟಿಷ್ ಸರ್ಕಾರವು ಭಾರತದಲ್ಲಿ ೧೯೩೧ರ ಕೊನೆಯ ದಶಕದಲ್ಲಿ ಕಾರ್ಮಿಕ ನಿಯೋಜನೆ ಸಮಿತಿಯೊಂದನ್ನು ನೇಮಿಸಿ ಅನಿಯಂತ್ರಿತ ಕೈಗಾರಿಕಾ ವ್ಯವಹಾರಗಳನ್ನು ಮತ್ತು ಕೂಲಿಕಾರರ ಪರಿಸ್ಥಿತಿಗಳನ್ನು ವರದಿ ಮಾಡುವಂತೆ ಆದೇಶಿಸಿತು. ೧೯೨೬ರಲ್ಲಿ ಕೇಂದ್ರದಲ್ಲಿ ಜಾರಿಗೆ ಬಂದ ಕಾರ್ಮಿಕ

ಸಂಘಗಳ ಅಧಿನಿಯಮವು, ಹಳೆಯ ಮೈಸೂರು ಪ್ರದೇಶಗಳಿಗೆ ೧೯೪೧ರ ವರೆಗೆ ಅನ್ವಯವಾಗಲಿಲ್ಲ. ಆದರೂ ಕಾಂಗ್ರೆಸ್ ಮುಖಂಡರು ಮೊದಲ ಬಾರಿಗೆ ಕೆಲಸಗಾರರ ಸಂಘಟನೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ವೃತ್ತಿ ಸಂಘಗಳಿಗೆ ನೋಂದಣಿ ಮಾಡಿಸುವ ಮತ್ತು ಅವುಗಳಿಗೆ ವ್ಯಾಖ್ಯೆ ಕೊಡುವ ಉದ್ದೇಶದಿಂದ ಸರ್ಕಾರ ಟ್ರೇಡ್ ಯೂನಿಯನ್ ಕಾಯ್ದೆಯನ್ನು ಜಾರಿಗೆ ತಂದಿತು. ಆ ನಂತರ ರಾಜ್ಯದಲ್ಲಿ ಅಲ್ಲಲ್ಲಿ ಕಾರ್ಮಿಕರು ಸಂಘಟನೆಗೊಂಡು, ಸಂಘಗಳು ಅಸ್ತಿತ್ವಕ್ಕೆ ಬರತೊಡಗಿದವು.

ಕರ್ನಾಟಕದಲ್ಲಿ ಕೆಲವು ಉದ್ದಿಮೆದಾರರು ಸ್ವಪ್ರೇರಣೆಯಿಂದ ತಮ್ಮ ಕಾರ್ಖಾನೆಗಳಲ್ಲಿ ಹಲವಾರು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಈ ಸೌಲಭ್ಯಗಳು ಹೆಚ್ಚು ಪರಿಣಾಮಕಾರಿಯಾಗಿ ಇಲ್ಲದಿದ್ದುದರಿಂದ ಮತ್ತು ಕಾರ್ಮಿಕ ಸಂಘಗಳು ಇವುಗಳನ್ನು ಹೇಗೆ ಜಾರಿಗೊಳಿಸಬೇಕೆಂಬ ತಿಳುವಳಿಕೆ ಇಲ್ಲದ್ದರಿಂದ ಸರ್ಕಾರದ ಮಧ್ಯ ಪ್ರವೇಶ ಅವಶ್ಯಕವಾಯಿತು. ಇದರೊಂದಿಗೆ ಭಾರತ ಸರ್ಕಾರದ ೧೯೪೭ ರ ಔದ್ಯೋಗಿಕ ವ್ಯಾಜ್ಯ ಕಾಯ್ದೆಯೂ ಜಾರಿಗೆ ಬಂದಿತು. ಸಂಧಾನದ ಮತ್ತು ಕಡ್ಡಾಯ ಮಧ್ಯಸ್ಥಿಕೆ ಮುಖಾಂತರ ಔದ್ಯೋಗಿಕ ಶಾಂತಿಯನ್ನು ದೊರಕಿಸಿಕೊಡುವುದು, ಸಂಘಟಿತ ಕಾರ್ಮಿಕರ ವ್ಯಾಜ್ಯಗಳಿಗೆ ಪರಿಹಾರವನ್ನು ನೀಡುವುದು ಈ ಕಾಯ್ದೆಯ ಮುಖ್ಯ ಉದ್ದೇಶಗಳಾಗಿದ್ದವು. ಅದರಂತೆ ಕೇಂದ್ರ ಸರ್ಕಾರದ, ೧೯೪೮ರ ಕಾರ್ಖಾನೆಯ ಕಾನೂನಿನ ಅನ್ವಯದಿಂದಾಗಿ ರಾಜ್ಯದಲ್ಲಿ ೧೯೫೦ರಿಂದ ಪ್ರತಿಯೊಬ್ಬ ಉದ್ಯಮಿಯೂ ತನ್ನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಯಿತು. ಈ ಯೋಜನೆಯಡಿ ಕುಡಿಯಲು ತಂಪಾದ ಮತ್ತು ಶುದ್ಧವಾದ ನೀರು, ಶೌಚಾಲಯ ೨೫೦ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಉಪಹಾರ ಮಂದಿರ, ೧೫೦ಕ್ಕೂ ಹೆಚ್ಚು ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲೂ ಉಪಹಾರ ಕೋಣೆಯ ವ್ಯವಸ್ಥೆ ಮಾಡಬೇಕೆಂದು; ೫೦ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರಿರುವ ಪ್ರತಿಯೊಂದು ಕಾರ್ಖಾನೆಯಲ್ಲೂ ವಿಶ್ರಾಂತಿ ಗೃಹ, ನೌಕರರ ಮಕ್ಕಳಿಗೆ ಶಿಶುವಿಹಾರವನ್ನು, ಒದಗಿಸಬೇಕೆಂದು ನಿರ್ಬಂಧವನ್ನು ತರಲಾಯಿತು. ಕಾರ್ಯಾಗಾರದಲ್ಲಿ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ಕಾರ್ಖಾನೆಯಲ್ಲೂ ಆವಿ, ಹೊಗೆ ಮತ್ತು ಧೂಳು ಹೊರಗೆ ಹೋಗಲು ಸೂಕ್ತ ವ್ಯವಸ್ಥೆ, ಆಕಸ್ಮಿಕ ಅಪಘಾತಗಳನ್ನು ತಡೆಗಟ್ಟಲು ಯಂತ್ರಗಳಿಗೆ ಬೇಲಿ ನಿರ್ಮಾಣ, ಕಾರ್ಮಿಕರಿಗೆ ಸುರಕ್ಷತೆಯ ವಸ್ತ್ರಗಳ ಪೂರೈಕೆ, ಪಾದರಕ್ಷೆಗಳು ಹಾಗೂ ಕನ್ನಡಕಗಳನ್ನು ಒದಗಿಸುವಿಕೆ, ಇವೇ ಮುಂತಾದ ಅಗತ್ಯ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲೇಬೇಕೆಂಬ ಕಡ್ಡಾಯ ನೀತಿ ಜಾರಿಗೆ ಬಂದಿತು. ಸಾಮಾನ್ಯ ಭವಿಷ್ಯ ನಿಧಿ ಸೌಕರ್ಯ, ಕಾರ್ಮಿಕ ಪರಿಹಾರ, ವೇತನ ಸಹಿತ ರಜಾ ಸೌಲಭ್ಯಗಳೇ ಮುಂತಾದ ಕಾನೂನು ಸೌಲಭ್ಯಗಳಲ್ಲದೆ, ವಾಚನಾಲಯ, ಗ್ರಂಥಾಲಯ, ವೈದ್ಯಕೀಯ, ಮತ್ತು ಕ್ರೀಡಾ ಸೌಕರ್ಯಗಳನ್ನೂ ಕೆಲವು ಅಭಿವೃದ್ಧಿ ಹೊಂದಿದ ಕಾರ್ಖಾನೆಗಳಲ್ಲಿ ಒದಗಿಸಲಾಯಿತು. ಕೆಲಸದ ವೇಳೆಗೆ ಮಿತಿ, ಕ್ರಮಬದ್ಧ ವೇತನ ಪಾವತಿ, ಸೇವಾ ನಿಯಮಗಳು, ಹೆರಿಗೆ ಭತ್ಯೆ ಮುಂತಾದ ಸೌಲಭ್ಯಗಳನ್ನು ಒದಗಿಸಲು ವಿವಿಧ ಕಾರ್ಮಿಕ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ೧೯೭೬ರಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಶಾಸನವೊಂದನ್ನೂ ಮಾಡಲಾಯಿತು. ಈ ಶಾಸನವು ಪುರುಷ ಹಾಗೂ ಮಹಿಳಾ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಸಲ್ಲಬೇಕು ಎಂದು ಸ್ಪಷ್ಟ ಪಡಿಸಿದೆ. ಅಲ್ಲದೆ ಕೆಲಸಕ್ಕೆ ಸೇರಿಸಿಕೊಳ್ಳುವ ಸಮಯದಲ್ಲಾಗಲೀ, ಕೆಲಸದ ಇತರೇ ವಿಷಯಗಳಿಗೆ ಸಂಬಂಧಿಸಿದಂತಾಗಲೀ ಲಿಂಗಾಧಾರದ ಮೇಲೆ ಮಹಿಳಾ ಕಾರ್ಮಿಕರ ವಿರುದ್ಧ ಭೇದಭಾವ ಮಾಡುವುದನ್ನು ತಪ್ಪಿಸಿದೆ. ಈ ಕಾಯಿದೆಗಳಿಂದಾಗಿ ಮಹಿಳಾ ಕಾರ್ಮಿಕರೂ ಸೇರಿದಂತೆ ಎಲ್ಲ ಕಾರ್ಮಿಕರಿಗೆ ಹಲವು ರೀತಿಯಲ್ಲಿ ತುಂಬ ಸಹಾಯವಾಗಿದೆ.

ಅವಿಭಜಿತ ಮೈಸೂರು ಜಿಲ್ಲೆಯ, ಚಾಮರಾಜನಗರ ಜಿಲ್ಲಾ ಪ್ರದೇಶವನ್ನು ಪ್ರತ್ಯೇಕವಾಗಿ ಗಮನಿಸಿದರೆ, ಕಾರ್ಮಿಕ ಕ್ಷೇತ್ರದಲ್ಲಿ ದಾಖಲಾರ್ಹ ಸೇವೆಗಳನ್ನು ಸಲ್ಲಿಸಿದವರಾಗಲೀ ಅಥವಾ ಚಳವಳಿಗಳು ನಡೆದಿರುವುದಾಗಲೀ ಕಂಡು ಬರುವುದಿಲ್ಲ. ಯಳಂದೂರು ತಾಲೂಕಿನ ಅಂಬಳೆ ಗ್ರಾಮದವರಾದ ನಂಜಯ್ಯ, ತಮಿಳುನಾಡಿನ ಗೂಡಲೂರಿನಲ್ಲಿ ಕೂಲಿ ಕಾರ್ಮಿಕರ ಮುಂದಾಳತ್ವ ವಹಿಸಿದ್ದರು. ಇವರು ಉದಕಮಂಡಲ ಜಿಲ್ಲೆಯ ಗುಡಲೂರು ಕ್ಷೇತ್ರದ ಶಾಸಕರಾಗಿದ್ದರು. ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ತಮಿಳುನಾಡು ಘಟಕದ ಉಪಾಧ್ಯಕ್ಷರಾಗಿದ್ದರು.

## ಕಾರ್ಮಿಕ ಇಲಾಖೆ

ಕಾರ್ಮಿಕ ಇಲಾಖೆಯು ಸಂಘಟಿತ ಉದ್ದಿಮೆಗಳ ಮತ್ತು ಗ್ರಾಮಾಂತರ ಕೆಲಸಗಾರರ ಕಲ್ಯಾಣಕ್ಕಾಗಿ ಕೆಲವು ಅಧಿನಿಯಮಗಳನ್ನು ರಚಿಸಿದೆ. ಈ ಎಲ್ಲಾ ನಿಯಮಗಳಂತೆ ಕಾರ್ಮಿಕ ಕಾಯ್ದೆಯಲ್ಲಿನ ಕಲ್ಯಾಣ ಯೋಜನೆಗಳ ಪ್ರಯೋಜನವನ್ನು ಕಾರ್ಮಿಕರು ಪಡೆಯಬಹುದಾಗಿದೆ. ಇವರು ಕೆಲಸ ಮಾಡುತ್ತಿರುವ ಸ್ಥಳಗಳನ್ನು ಗುರುತಿಸಿ ಕೇಂದ್ರ ಮತ್ತು ರಾಜ್ಯ ಕಾರ್ಮಿಕ ನಿಗಮಗಳ ಮುಖಾಂತರ ಆಡಳಿತ ಯೋಜನೆಗಳನ್ನು ಪ್ರಚಾರ ಮಾಡಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿದೆ. ಕಾರ್ಮಿಕ ಇಲಾಖೆಯು ಕಾರ್ಮಿಕ ಮತ್ತು ಮಾಲೀಕರ ನಡುವೆ ವ್ಯಾಜ್ಯ–ವಿವಾದಗಳನ್ನು ಸಂಧಾನದ ಮೂಲಕ ಬಗೆಹರಿಸಿ ಉತ್ತಮವಾದ ಕೈಗಾರಿಕಾ ಶಾಂತಿಯನ್ನು ಉಂಟು ಮಾಡುತ್ತದೆ. ಹಾಗೂ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸುವ ಅಥವಾ ಪರಿಷ್ಕರಿಸುವುದರ ಮೂಲಕ ಅಸಂಘಟಿತ ವಲಯದ ಕಾರ್ಮಿಕ ವರ್ಗಗಳಿಗೆ ಕನಿಷ್ಠ ವೇತನ ಸೌಲಭ್ಯವನ್ನು ತಲುಪಿಸುವ ಜವಾಬ್ದಾರಿ ಹೊಂದಿದೆ.

ಚಾಮರಾಜನಗರ ಜಿಲ್ಲಾ ಕಛೇರಿಯು ೧೯೯೮ರಲ್ಲಿ ಆರಂಭಗೊಂಡಿದೆ. ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಇಲ್ಲಿಯ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಕಾರ್ಯ ನಿರ್ವಹಣೆಯ ಉಸ್ತುವಾರಿ ನಿರ್ವಹಿಸುವ ಸಹಾಯಕ ಕಾರ್ಮಿಕ ಆಯುಕ್ತರ ನಿಯಂತ್ರಣಕ್ಕೆ ಈ ಜಿಲ್ಲಾ ಕಛೇರಿಯು ಒಳಪಟ್ಟಿದೆ. ರಾಜ್ಯ ಮಟ್ಟದಲ್ಲಿ, ಬೆಂಗಳೂರಿನ ಕೇಂದ್ರ ಕಛೇರಿಯ ಕಾರ್ಮಿಕ ಆಯುಕ್ತರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ.

ಕೇಂದ್ರದ ಕಾರ್ಮಿಕ ಕಾನೂನುಗಳಾದ ವೇತನ ಪಾವತಿ ಕಾಯ್ದೆ ೧೯೩೬, ಔದ್ಯೋಗಿಕ ನೇಮಕಾತಿ (ಸ್ಥಾಯಿ ಆದೇಶ) ಕಾಯ್ದೆ ೧೯೪೬, ಔದ್ಯೋಗಿಕ ವ್ಯಾಜ್ಯ ಕಾಯ್ದೆ ೧೯೪೭, ಕನಿಷ್ಠ ವೇತನ ಕಾಯ್ದೆ ೧೯೪೮, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾಯ್ದೆ ೧೯೬೧ ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್, ದುಡಿಯುವ ಪತ್ರಕರ್ತರ ಕಾಯ್ದೆ, ಮುಂತಾದ ಕಾಯ್ದೆಗಳನ್ನು ಚಾಮರಾಜನಗರ ಜಿಲ್ಲೆಗೂ ಅನ್ವಯಿಸಲಾಗಿದೆ.

೨೦೦೮–೦೯ರಿಂದ ೨೦೧೦–೧೧ನೇ ಸಾಲುಗಳಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿರುವ ಪ್ರಮುಖ ಕಾರ್ಮಿಕ ಸಂಘಟನೆಗಳ ವಿವರಗಳನ್ನು ಕೋಷ್ಟಕ ೧೬.೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧: ೨೦೦೮–೨೦೦೯ರಿಂದ೨೦೧೦–೧೧ನೇ ಸಾಲುಗಳಲ್ಲಿ ಜಿಲ್ಲೆಯಲ್ಲಿರುವ ಪ್ರಮುಖ ಕಾರ್ಮಿಕ ಸಂಘಟನೆಗಳ ವಿವರ**

| ಕ್ರ. ಸಂ. | ಸಂಘಟನೆಯ ಹೆಸರು | ಸ್ಥಾಪನೆಯ ವರ್ಷ | ಸದಸ್ಯರ ಸಂಖ್ಯೆ |
|---|---|---|---|
| ೧ | ಚಾಮರಾಜೇಶ್ವರ ಕೂಲಿ ಕಾರ್ಮಿಕರ ಸಂಘ | ೨೦೦೮ | ೩೯೦ |
| ೨ | ದ್ವಿಚಕ್ರ ವಾಹನ ದುರಸ್ತಿಗಾರರ ಸಂಘ, ಚಾಮರಾಜನಗರ | ೨೦೦೯ | ೧೮೫ |
| ೩ | ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿ ಕಾರ್ಮಿಕರ ಸಂಘ, ಕುಂತೂರು, ಕೊಳ್ಳೇಗಾಲ ತಾ: | ೨೦೦೮–೦೯ | ೧೫೦ |
| ೪ | ಕೊಳ್ಳೇಗಾಲ ತಾಲ್ಲೂಕು ಕಟ್ಟಡ ಕಾರ್ಮಿಕರ ಸಂಘ, ಕೊಳ್ಳೇಗಾಲ | ೨೦೦೯–೧೦ | ೧೮೯ |
| ೫ | ಕೊಳ್ಳೇಗಾಲ ತಾಲ್ಲೂಕು ಬಣ್ಣ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ, ಕೊಳ್ಳೇಗಾಲ | ೨೦೦೯–೧೦ | ೧೫೦ |
| ೬ | ಕೊಳ್ಳೇಗಾಲ ಮರಗೆಲಸ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ, ಕೊಳ್ಳೇಗಾಲ | ೨೦೦೯–೧೦ | ೨೦೦ |
| ೭ | ಮಹದೇಶ್ವರ ಸರಕು ಸಾಗಣೆ ಏರಿಳಿಸುವ ಕ್ಷೇಮಾಭಿವೃದ್ಧಿ ಸಂಘ, ಕೊಳ್ಳೇಗಾಲ | ೨೦೦೯–೧೦ | ೨೨೦ |
| ೮ | ದ್ವಿಚಕ್ರ ವಾಹನ ದುರಸ್ಥಿದಾರರ ಸಂಘ, ಕೊಳ್ಳೇಗಾಲ | ೨೦೦೯–೧೦ | ೭೦ |
| ೯ | ಕೊಳ್ಳೇಗಾಲ ಲಾರಿ ವಾಹನ ಚಾಲಕರ ಸಂಘ, ಕೊಳ್ಳೇಗಾಲ | ೨೦೦೯–೧೦ | ೧೦೦ |
| ೧೦ | ಯಳಂದೂರು ತಾಲೂಕು ಮೂಟೆ ಕಾರ್ಮಿಕರ ಸಂಘ, ಯಳಂದೂರು | ೨೦೧೦–೧೧ | ೫೦ |
| ೧೧ | ಕೊಳ್ಳೇಗಾಲ ತಾಲೂಕು ಬಾರ್ ಮತ್ತು ಹೋಟೆಲ್ ಕಾರ್ಮಿಕರ ಸಂಘ | ೨೦೧೦–೧೧ | ೭೦ |
| ೧೨ | ನಾಡನೇಳದಮ್ಮ ಗಾರೆ ಕಾರ್ಮಿಕರ ಸಂಘ, ಯಳಂದೂರು | ೨೦೧೦–೧೧ | ೫೦ |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

ಈ ಜಿಲ್ಲೆಯಲ್ಲಿ ೨೦೦೬ರಿಂದ ೨೦೧೧ರವರೆಗಿನ ವರ್ಷಗಳಲ್ಲಿ ಇರುವ ಅಂಗಡಿ ಮುಂಗಟ್ಟುಗಳು ಮತ್ತು ಅವುಗಳಲ್ಲಿರುವ ಕಾರ್ಮಿಕರ ಸಂಖ್ಯೆಯ ವಿವರಗಳನ್ನು ಕೋಷ್ಟಕ ೧೬.೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೨: ಜಿಲ್ಲೆಯಲ್ಲಿ ೨೦೦೬ನೇ ಸಾಲಿನಿಂದ ೨೦೧೧ನೇ ಸಾಲಿನ ವರೆಗಿನ ಅಂಗಡಿ ಮುಂಗಟ್ಟುಗಳ ಸಂಖ್ಯೆ**

| ಕ್ರ. ಸಂ. | ವಿವರಗಳು | ೨೦೦೬ | ೨೦೦೭ | ೨೦೦೮ | ೨೦೦೯ | ೨೦೧೦ | ೨೦೧೧ |
|---|---|---|---|---|---|---|---|
| ೧ | ಅಂಗಡಿಗಳ ಸಂಖ್ಯೆ | ೧೭೩೧ | ೧೭೬೩ | ೧೭೩೧ | ೧೯೧೭ | ೧೯೪೯ | ೨೧೩೦ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೨೧೨೦ | ೨೧೯೬ | ೧೩೪೦ | ೧೪೯೬ | ೧೫೭೮ | ೧೭೦೩ |
| ೧ | ವಾಣಿಜ್ಯ ಉದ್ದಿಮೆಗಳ ಸಂಖ್ಯೆ | ೪೨೧ | ೪೩೭ | ೪೪೧ | ೫೯೫ | ೫೯೪ | ೫೪೮ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೧೧೫೪ | ೧೧೯೭ | ೧೧೬೬ | ೨೧೬೩ | ೨೨೩೬ | ೧೩೨೭ |
| ೧ | ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ | ೧೨೮ | ೧೩೩ | ೧೨೪ | ೧೧೮ | ೧೩೬ | ೧೨೫ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೧೨೨೦ | ೧೨೨೦ | ೪೦೩ | ೪೦೮ | ೪೫೭ | ೪೦೯ |
| ೧ | ಥಿಯೇಟರ್ ಮತ್ತು ಸಿನಿಮಾಗಳ ಸಂಖ್ಯೆ | ೨೫ | ೨೫ | ೧೬ | ೧೪ | ೧೫ | ೧೩ |
| ೨ | ಅದರಲ್ಲಿ ನೇಮಕಗೊಂಡ ವ್ಯಕ್ತಿಗಳ ಸಂಖ್ಯೆ | ೧೬೧ | ೧೬೧ | ೯೦ | ೯೪ | ೯೧ | ೭೪ |
| | ವಿವಿಧ ಉದ್ದಿಮೆಗಳ ಒಟ್ಟು ಸಂಖ್ಯೆ | ೨೨೦೫ | ೨೩೫೮ | ೨೩೦೯ | ೨೬೪೪ | ೨೬೯೪ | ೨೮೧೬ |
| | ನೇಮಕಗೊಂಡವರ ಒಟ್ಟು ಸಂಖ್ಯೆ | ೪೬೫೫ | ೪೭೪೭ | ೨೯೪೯ | ೪೧೬೧ | ೪೩೬೨ | ೩೫೧೩ |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

೨೦೦೫–೦೬ರಿಂದ ೨೦೧೦–೧೧ನೇ ಸಾಲಿನವರೆಗೆ ಇದ್ದ ಕನಿಷ್ಟ ವೇತನ ಕಾಯ್ದೆಯಲ್ಲಿ ಬರುವ ಉದ್ದಿಮೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಅವುಗಳಲಿದ್ದ ಕಾರ್ಮಿಕರ ಸಂಖ್ಯೆ ಕೋಷ್ಟಕ ೧೬.೩ರಲ್ಲಿ ಮತ್ತು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ಹಾಗೂ ನವೀಕರಣದಿಂದ ಸಂದಾಯವಾದ ಹಣದ ವಿವರವನ್ನು ಕೋಷ್ಟಕ ೧೬.೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩: ೨೦೦೫-೦೬ರಿಂದ ೨೦೧೦-೧೧ನೇ ಸಾಲಿನವರೆಗೆ ಇದ್ದ ಕನಿಷ್ಠ ವೇತನ ಕಾಯ್ದೆಯಲ್ಲಿ ಬರುವ ಉದ್ದಿಮೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಅವುಗಳಲ್ಲಿದ್ದ ಕಾರ್ಮಿಕರ ಸಂಖ್ಯೆ**

| ವರ್ಷ | ಉದ್ದಿಮೆಗಳ ಸಂಖ್ಯೆ | ವಾಣಿಜ್ಯ ಸಂಸ್ಥೆಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|---|
| ೨೦೦೫-೦೬ | ೩೩ | ೨೪೫೧ | ೫೭೯೦ |
| ೨೦೦೬-೦೭ | ೩೬ | ೨೪೮೮ | ೫೩೪೧ |
| ೨೦೦೭-೦೮ | ೩೬ | ೨೪೨೩ | ೪೬೦೦ |
| ೨೦೦೮-೦೯ | ೩೫ | ೩೨೨೪ | ೮೮೫೮ |
| ೨೦೦೯-೧೦ | ೪೨ | ೩೨೯೩ | ೯೦೭೫ |
| ೨೦೧೦-೧೧ | ೪೪ | ೩೩೩೦ | ೧೦೧೭೦ |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಕೋಷ್ಟಕ ೧೬.೪: ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಹೊಸ ನೋಂದಣಿ ಹಾಗೂ ನವೀಕರಣದಿಂದ ಸಂದಾಯವಾದ ಹಣದ ವಿವರಗಳು**

| ವರ್ಷ | ಹೊಸ ನೊಂದಣಿಗಳ ಸಂಖ್ಯೆ | ಸಂದಾಯವಾದ ಹಣ ₹ ಗಳಲ್ಲಿ | ನವೀಕರಣದಿಂದ ಬಂದ ಹಣ ₹ ಗಳಲ್ಲಿ |
|---|---|---|---|
| ೨೦೦೫-೦೬ | ೫೮ | ೧೬,೯೭೫ | ೧೯,೭೭೫ |
| ೨೦೦೬-೦೭ | ೭೬ | ೨೧,೪೫೦ | ೧೦,೪೦೦ |
| ೨೦೦೭-೦೮ | ೧೦೦ | ೩೦,೭೫೦ | ೨೮,೯೦೦ |
| ೨೦೦೮-೦೯ | ೯೪ | ೨೯,೨೫೦ | ೧,೦೩,೪೨೫ |
| ೨೦೦೯-೧೦ | ೯೫ | ೩೦,೬೭೫ | ೧,೦೯,೧೦೦ |
| ೨೦೧೦-೧೧ | ೧೦೧ | ೯೦೭೫೦ | ೮೫,೨೫೦ |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಕೋಷ್ಟಕ ೧೬.೫: ೧೯೨೩ರ ಕಾರ್ಮಿಕ ಪರಿಹಾರ ಕಾಯ್ದೆಯ ಪ್ರಕಾರ ಜಿಲ್ಲೆಯ ಕೈಗಾರಿಕೆಗಳಲ್ಲಿ, ಸಮುದಾಯ ಭವನದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು, ಪಡೆದ ಪರಿಹಾರ ಧನದ ವಿವರಗಳು (₹ ಗಳಲ್ಲಿ)**

| ವರ್ಷ | ತಾತ್ಕಾಲಿಕ ಅಂಗಹೀನತೆ | | ಶಾಶ್ವತ ಅಂಗನ್ಯೂನತೆ | | ಆಕಸ್ಮಿಕ ಮರಣ | | ಒಟ್ಟು ಪರಿಹಾರ ಧನ | |
|---|---|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ | ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ | ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ | ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ |
| ೨೦೦೫-೦೬ | – | – | ೭೨ | ೧,೨೨,೯೨,೨೨೮ | ೧೦ | ೩೨,೫೩,೪೦೬ | ೮೨ | ೧,೫೫,೪೫,೬೩೪ |
| ೨೦೦೬-೦೭ | – | – | ೬೩ | ೧,೦೩,೪೯,೮೦೩ | ೦೯ | ೩೨,೫೨,೪೬೭ | ೭೨ | ೧,೩೬,೦೨,೨೭೦ |
| ೨೦೦೭-೦೮ | – | – | ೮೧ | ೧,೪೬,೬೫,೧೨೨ | ೦೬ | ೧೫,೧೧,೯೩ | ೮೭ | ೧,೬೧,೧೭,೭೧೫ |
| ೨೦೦೮-೦೯ | – | – | ೯೭ | ೧,೬೮,೩೩,೨೦೬ | ೫ | ೧೩,೪೬,೧೦೪ | ೧೦೨ | – |
| ೨೦೦೯-೧೦ | – | – | ೩೩ | ೫೪,೦೭,೫೩೦ | ೨ | ೭,೫೭,೯೨೭ | ೩೫ | – |
| ೨೦೧೦-೧೧ | – | – | ೦೫ | ೧೦,೪೭,೪೯೨ | ೨ | ೪,೧೫,೮೩೮ | ೦೭ | ೧೪,೬೩,೩೩೦ |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

ಕೈಗಾರಿಕಾ ಪ್ರಕರಣಗಳಲ್ಲಿ ಯಾವುದೇ ಅಪಘಾತ ಸಂಭವಿಸಿರುವುದಿಲ್ಲವಾದ್ದರಿಂದ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ.

ಕಾರ್ಮಿಕ ವಿವಾದ ಕಾಯ್ದೆಯ ಪ್ರಕಾರ ಜಿಲ್ಲೆಯಲ್ಲಿ ಕೆಲಸವಿಲ್ಲದಿರುವುದರಿಂದ ತಾತ್ಕಾಲಿಕವಾಗಿ ಕೆಲಸದಿಂದ ತೆಗೆದು ಹಾಕಲಾದ (ಲೇ ಆಫ್) ಹಾಗೂ ಬೀಗ ಮುದ್ರೆಗಳಾಗಿರುವ ಪ್ರಕರಣಗಳು ಕಳೆದ ಮೂರು ವರ್ಷಗಳಲ್ಲಿ ಯಾವುದೂ ಇರುವುದಿಲ್ಲ. ೧೯೯೮ರಿಂದ ಈ ಕಛೇರಿಯಲ್ಲಿ ಕೈಗಾರಿಕಾ ವಿವಾದ ಕಾಯ್ದೆಗಳಡಿಯಲ್ಲಿ ೭೪ ಪ್ರಕರಣಗಳು ದಾಖಲಾಗಿರುತ್ತವೆ. ಅವುಗಳಲ್ಲಿ ೨೮ ಪ್ರಕರಣಗಳು ವಿಫಲತೆ, ೧೦ ಪ್ರಕರಣಗಳು ಒಪ್ಪಂದ ಹಾಗೂ ೩೬ ಪ್ರಕರಣಗಳು ವಜಾ/ವಾಪಸ್/ಪುನರ್ ನೇಮಕ ಇತ್ಯಾದಿ ಮೂಲಕ ಮುಕ್ತಾಯಗೊಂಡಿರುತ್ತವೆ. ಕೆಲಸಗಾರರ ಜೀವನ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಹಾಗೂ ಅವರ ಆಸಕ್ತಿಗಳನ್ನು ಪೋಷಿಸಲು, ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯ ಮೂಲಕ ಜಾರಿಗೊಂಡಿರುವ ವಿವಿಧ ಕಾಯ್ದೆಗಳಲ್ಲಿ ೨೦೦೯–೧೦ರ ಸಾಲಿನಲ್ಲಿ ಒಟ್ಟು ೧೨೬ ಮೊಕದ್ದಮೆಗಳು ಹೂಡಲ್ಪಟ್ಟಿದ್ದು, ೨೧ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಪಡಿಸಲಾಗಿದೆ. ಈ ಪ್ರಕರಣಗಳಿಂದ ₹ ೨೯೯೦೦ ಗಳನ್ನು ದಂಡ ವಿಧಿಸಲಾಗಿದೆ ಹಾಗೂ ೩೨ ವಿಲೇಯಾದ ಮೊಕದ್ದಮೆಗಳು ಹಾಗೂ ೯೫ ಬಾಕಿ ಉಳಿದ ಮೊಕದ್ದಮೆಗಳು. ಸ್ಥಾಯಿ ಆದೇಶ ಕಾಯಿದೆ, ವೃತ್ತಿ ಸಂಘಗಳ ಕಾಯಿದೆಗಳು ಕಳೆದ ಐದು ವರ್ಷಗಳಲ್ಲಿ ಈ ಜಿಲ್ಲೆಯಲ್ಲಿ ಕಾರ್ಯಗತಗೊಂಡಿಲ್ಲ.

ಮಕ್ಕಳನ್ನು ಬಾಲ ಕಾರ್ಮಿಕರಾಗಿ ಹಲವಾರು ಸಂಸ್ಥೆಗಳಲ್ಲಿ, ಕಾರ್ಖಾನೆಗಳಲ್ಲಿ ಮತ್ತು ಮನೆಗಳಲ್ಲಿ ದುಡಿಸಿಕೊಳ್ಳುವುದು ಈ ದೇಶದ ಎಲ್ಲ ಭಾಗಗಳಲ್ಲಿ ಕಂಡು ಬರುವ ಒಂದು ಪದ್ಧತಿ. ಈ ಪದ್ಧತಿಯನ್ನು ಹೋಗಲಾಡಿಸಲು ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ೧೯೮೬ ಹಾಗೂ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ ೧೯೬೧ನ್ನು ಕಾರ್ಮಿಕ ಇಲಾಖೆಯಿಂದ ಕಾರ್ಯಗತ ಗೊಳಿಸಲಾಗುತ್ತಿದೆ. ಅಪಾಯಕಾರಿ ಉದ್ದಿಮೆಯಲ್ಲಿ ಬಾಲ ಕರ್ಮಿಕರನ್ನು ತೊಡಗಿಸಿಕೊಳ್ಳುವುದಕ್ಕೆ ೧೯೮೬ರ ಕಾಯಿದೆಯ ಕಲಂ–೩ರಲ್ಲಿ ನಿಷೇಧಿಸಿದೆ. ಎಲ್ಲಾ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ, ೧೪ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ನೇಮಕಕ್ಕೆ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯಿದೆ ೧೯೬೧ರ ಕಲಂ ೨೪ರಲ್ಲಿ ನಿಷೇಧಿಸಲಾಗಿದೆ. ಕರ್ನಾಟಕ ರಾಜ್ಯವನ್ನು 'ಬಾಲ ಕಾರ್ಮಿಕ ಮುಕ್ತ' ರಾಜ್ಯವನ್ನಾಗಿ ಮಾಡುವ ಗುರಿ ಹೊಂದಿದ್ದು, ಇದಕ್ಕಾಗಿ ಈ ಇಲಾಖೆಯು ಹಲವಾರು ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುತ್ತಿದೆ.

ಬಾಲ ಕಾರ್ಮಿಕರಾಗಿ ದುಡಿಯುತ್ತಿರುವವರನ್ನು ಪತ್ತೆ ಮಾಡಿ, ಅವರನ್ನು ಅಲ್ಲಿಂದ ಬಿಡಿಸಿ ಕರೆ ತಂದು, ಸರ್ಕಾರದಿಂದ ನಿಯೋಜಿತವಾಗಿರುವ ತರಬೇತಿ ಶಾಲೆಗೆ ಸೇರಿಸುವುದು; ಅಲ್ಲಿ ಅವರಿಗೆ 'ಬ್ರಿಜ್ ಕೋರ್ಸ್' ಅಂದರೆ ಅವರವರ ವಯೋಮಾನಕ್ಕೆ ಆಗಬೇಕಾಗಿದ್ದ ವಿದ್ಯಾಭ್ಯಾಸದ ಕೊರತೆಯನ್ನು, ಆರು ತಿಂಗಳಿನಿಂದ ಹಿಡಿದು ಒಂದು ವರ್ಷದ ತರಬೇತಿಯ ಮೂಲಕ ಪೂರೈಸುವುದು; ಆ ನಂತರ ಮಕ್ಕಳ ಮಾನಸಿಕ, ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿಯಾಗುವ ಕ್ರಮಗಳನ್ನು ಕೈಗೊಂಡು ಅವರವರ ವಯೋಮಾನಕ್ಕೆ ಹೊಂದುವ ಶಾಲೆಗಳಿಗೆ ಸೇರಿಸುವುದು ಕಾರ್ಮಿಕ ಇಲಾಖೆಯ ಕೆಲಸವಾಗಿರುತ್ತದೆ. ಮುಂದೆ, ಈ ಮಕ್ಕಳ ಮುಂದಿನ ವಿದ್ಯಾಭ್ಯಾಸ, ವಸತಿ, ಪಠ್ಯ ಪುಸ್ತಕಗಳ ಪೂರೈಕೆ, ಊಟ ಇವೇ ಮುಂತಾದವನ್ನು ಶಿಕ್ಷಣ ಇಲಾಖೆಯು ನೋಡಿಕೊಳ್ಳಬೇಕಾಗುತ್ತದೆ.

ಬಾಲ ಕಾರ್ಮಿಕ ಪದ್ಧತಿ ಚಾಲ್ತಿಯಲ್ಲಿರುವ ವಲಯಗಳಲ್ಲಿ ಚಾಮರಾಜನಗರ ಜಿಲ್ಲೆಯೂ ಒಂದು. ಬೀಡಿ ಕಟ್ಟುವುದು, ರೇಷ್ಮೆ ಸುತ್ತುವುದು ಮತ್ತು ಹುರಿ ಮಾಡುವುದು ಮುಂತಾದವು ಇಲ್ಲಿಯ ಬಾಲ ಕಾರ್ಮಿಕರ ಹೆಚ್ಚಿನ ದುಡಿಮೆ. ಬಾರ್ ಬೆಂಡಿಂಗ್, ಗ್ರೀಸಿಂಗ್, ಮಣ್ಣು ಮತ್ತು ಜೆಲ್ಲಿಕಲ್ಲು ಹೊರುವುದು, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿಸುವುದು, ಮುಂತಾದ ಕೆಲಸಗಳನ್ನು ಅಪಾಯಕಾರಿ ಕೆಲಸಗಳೆಂದೂ; ಅಂಗಡಿಗಳಲ್ಲಿ ಸಾಮಾನು ಪ್ಯಾಕ್ ಮಾಡುವುದು, ಬೀಡಿ ಕಟ್ಟುವುದು, ಹೋಟೆಲ್‌ಗಳಲ್ಲಿ ಆಹಾರ ವಿತರಿಸುವುದು, ಇತ್ಯಾದಿಗಳನ್ನು

ಅಪಾಯಕಾರಿಯಲ್ಲದ ಕೆಲಸಗಳೆಂದೂ ವಿಂಗಡಿಸಿದ್ದು ಈ ಎರಡೂ ವಿಧದ ಕೆಲಸಗಳಿಗೆ ಬಳಸಿಕೊಳ್ಳುವ ಮಾಲೀಕರ ಮೇಲೆ ನಿಯಮ ಪ್ರಕಾರ ದಂಡ ವಿಧಿಸಿ, ಶಿಕ್ಷೆಯನ್ನು ವಿಧಿಸಲಾಗುವುದು. ಬಾಲ ಕಾರ್ಮಿಕರನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಸೇರಿಸುವುದರಿಂದ, ಕೆಲಸ ಮಾಡುತ್ತಿದ್ದ ಆ ಮಗುವಿನ ದುಡಿಮೆ ಮತ್ತು ಅದರಿಂದ ಸಿಗುವ ಆದಾಯಗಳು ಆ ಕುಟುಂಬದಲ್ಲಿ ನಿಂತು ಹೋಗುವುದರಿಂದ, ಆ ಕುಟುಂಬದ ಯಾವುದೇ ವ್ಯಕ್ತಿಗೆ ಅವರ ಅರ್ಹತೆಯ ಆಧಾರದ ಮೇಲೆ, ಸರ್ಕಾರದ ನಾನಾ ಯೋಜನೆಗಳಡಿಯ ಯಾವುದಾದರೂ ಒಂದರಲ್ಲಿ ಕೆಲಸ ಕೊಡಿಸಿ, ಜೀವನ ನಿರ್ವಹಣೆಗೆ ದಾರಿ ಮಾಡಿ ಪರಿಹಾರ ಒದಗಿಸಿ ಕೊಡುವುದಕ್ಕೂ, ಇಲಾಖೆಯ ಕಾನೂನಿನಲ್ಲಿ ಅವಕಾಶವಿದೆ. ಜಿಲ್ಲೆಯಲ್ಲಿ ಸಮೀಕ್ಷೆ ನಡೆಸಿ, ಬಾಲ ಕಾರ್ಮಿಕರನ್ನು ಗುರುತಿಸಿ ಅವರಿಗೆ ಪುನರ್‌ವಸತಿ ಕಲ್ಪಿಸುವ ಕಾರ್ಯವನ್ನು ಈ ಜಿಲ್ಲೆಯಲ್ಲೂ ಮಾಡಲಾಗುತ್ತಿದ್ದು, ನಿಯಮಗಳನ್ವಯ ಪುನರ್‌ವಸತಿ ಕಲ್ಪಿಸಲ್ಪಟ್ಟ ವಿವರಗಳನ್ನು ಕೋಷ್ಟಕ ೧೬.೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬: ೨೦೦೫–೦೬ರಿಂದ ೨೦೧೦–೧೧ರವರೆಗಿನ ವರ್ಷಗಳಲ್ಲಿ ಬಾಲ ಕಾರ್ಮಿಕರಿಗೆ ಪುನರ್‌ವಸತಿ ಕಲ್ಪಿಸಲ್ಪಟ್ಟ ವಿವರಗಳು**

| ಅವಧಿ | ಅವಧಿಯಲ್ಲಿ ಗುರುತಿಸಿದ ಬಾಲ ಕಾರ್ಮಿಕರ ಸಂಖ್ಯೆ | | ಅವಧಿಯಲ್ಲಿ ಪುನರ್‌ವಸತಿಗೊಳಿಸಿದ ಬಾಲ ಕಾರ್ಮಿಕರ ಸಂಖ್ಯೆ | | | | ಷರಾ |
|---|---|---|---|---|---|---|---|
| | | | ಮುಖ್ಯ ವಾಹಿನಿಗೆ | | ವಿಶೇಷ ವಸತಿ ಶಾಲೆಗೆ | | |
| | ಅಪಾಯಕಾರಿ | ಅಪಾಯಕಾರಿ ಯಲ್ಲದ | ಅಪಾಯಕಾರಿ | ಅಪಾಯಕಾರಿ ಯಲ್ಲದ | ಅಪಾಯಕಾರಿ | ಅಪಾಯಕಾರಿ ಯಲ್ಲದ | |
| ೨೦೦೫–೦೬ | ೩೪ | ೩೭ | -- | ೦೨ | ೦೫ | – | ೫ ಮಕ್ಕಳು ಚಿಂದಿ ಆಯುತ್ತಿದ್ದರು |
| ೨೦೦೬–೦೭ | ೦೭ | ೧೯ | -- | ೦೬ | ೦೪ | ೦೨ | |
| ೨೦೦೭–೦೮ | ೩೭ | ೩೬ | -- | -- | ೦೩ | ೦೨ | |
| ೨೦೦೮–೦೯ | ೨ | ೬ | – | ೩ | ೨ | ೩ | |
| ೨೦೦೯–೧೦ | ೧ | ೫ | ೧ | ೨ | – | ೨ | |
| ೨೦೧೦–೧೧ | ೨೦ | ೪೯ | ೪ | ೧೨ | ೧೬ | ೩೭ | |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

ಕೆಲವು ಜಿಲ್ಲೆಗಳಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯ ಮೂಲಕ ಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿ, ಕಾರ್ಮಿಕರ ಕುಟುಂಬಗಳಿಗಾಗಿ ವಾಚನಾಲಯ ಸೌಲಭ್ಯ ಹಾಗೂ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳಂತಹ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದ್ದು, ಈಗ ಈ ಜಿಲ್ಲೆಯಲ್ಲಿ ಯಾವುದೇ ಕಲ್ಯಾಣ ಕೇಂದ್ರಗಳಿಲ್ಲದ ಕಾರಣ ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ.

ಯೋಜನಾ ನಿರ್ದೇಶಕರು, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಚಾಮರಾಜನಗರ ಜಿಲ್ಲೆ, ಇವರಿಂದ ಬಾಲ ಕಾರ್ಮಿಕರಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಅವುಗಳಲ್ಲಿ ಕೆಲವು ಪ್ರಮುಖ ಯೋಜನೆಗಳ ಕುರಿತು ಸಂಕ್ಷಿಪ್ತ ವಿವರಗಳನ್ನು ಕೋಷ್ಟಕ ೧೬.೭ರಲ್ಲಿ ನೀಡಲಾಗಿದೆ. ಬಾಲ ಕಾರ್ಮಿಕರನ್ನು ಗುರುತಿಸುವುದೇ ಅಲ್ಲದೆ ಈ ಪದ್ಧತಿಯನ್ನು ನಿಷೇಧಿಸಿರುವ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವುದು ಒಂದು ಪ್ರಮುಖ ಕಾರ್ಯಕ್ರಮ. ಇದಕ್ಕಾಗಿ ಪ್ರತಿ ವರ್ಷ ಜೂನ್ ಹನ್ನೆರಡರ ದಿನಾಂಕವನ್ನು 'ಅಂತರರಾಷ್ಟ್ರೀಯ ಬಾಲ ಕಾರ್ಮಿಕ ವಿರೋಧಿ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಬಾಲ ಕಾರ್ಮಿಕರ ಪತ್ತೆ, ಪುನರ್‌ವಸತಿ ಮತ್ತು ಕಲ್ಯಾಣ

ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ)ಯು ಬೀದರ್ ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಆ ಜಿಲ್ಲೆಗಳ ಉಸ್ತುವಾರಿ ನಡೆಸುತ್ತಿದೆ.

**ಕೋಷ್ಟಕ ೧೬.೭: ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸೊಸೈಟಿಯಿಂದ ಬಾಲ ಕಾರ್ಮಿಕರಿಗಾಗಿ ವಿವಿಧ ಕಾರ್ಯಕ್ರಮಗಳ ವಿವಿರ.**

| ಯೋಜನೆಗಳ ಹೆಸರು | ಕಾರ್ಯಕ್ರಮದ ವಿವರ | ಬಾಲ ಕಾರ್ಮಿಕರ ಸಂಖ್ಯೆ | ಫಲಾನುಭವಿಗಳು | ಖರ್ಚು | | |
|---|---|---|---|---|---|---|
| | | | | ೨೦೦೭-೦೮ | ೨೦೦೮-೦೯ | ೨೦೦೯-೧೦ |
| ಜಾತಿ ಜಾಗೃತಿ ಮತ್ತು ಶಿಕ್ಷಣದ ಮೂಲಕ ಬಾಲ ಕಾರ್ಮಿಕ ಪದ್ಧತಿಯನ್ನು ತಡೆಯುವುದು | ಬೀದಿ ನಾಟಕ, ಗೊಂಬೆ ಆಟ, ಜಾಥ, ವಯಸ್ಕರ ತರಬೇತಿ, ಪೋಸ್ಟರ್ಸ್ | ೬೯೦೦ | ಬಾಲ ಕಾರ್ಮಿಕರು ಮತ್ತು ಶಾಲೆ ಬಿಟ್ಟ ಮಕ್ಕಳು | ೬೮೭೮೮೬೧ | ೫೮೬೮೩೬೪ | ೪೬೨೬೮೬೭ |
| ಬಾಲ ಕಾರ್ಮಿಕ ತಾಯಂದಿರಿಗೆ ವೃತ್ತಿ ಕೌಶಲ್ಯ ನೀಡುವುದು | ಬಾಲ ಕಾರ್ಮಿಕರ ತಾಯಂದಿರಿಗೆ ಸ್ವಸಹಾಯ ಸಂಘಗಳ ರಚನೆ | ೪೦೦ | ಬಾಲ ಕಾರ್ಮಿಕರ ತಾಯಂದಿರು ಮತ್ತು ಸ್ವಸಹಾಯ ಸಂಘಗಳ ಸದಸ್ಯರು | ೯೪೮೨೦೪ | ೬೧೮೩೮೨ | ೧೬೪೩೪೧೫ |
| ಬಾಲ ಕಾರ್ಮಿಕ ಕುಟುಂಬದ ಹದಿಹರೆಯದವರಿಗೆ ಕೌಶಲ್ಯ ತರಬೇತಿ | ಕೌಶಲ್ಯ ತರಬೇತಿ ಹದಿಹರೆಯದವರಿಗೆ | ೮೦೭ | ಬಾಲ ಕಾರ್ಮಿಕ ಕುಟುಂಬದ ಹದಿಹರೆಯದವರು | ೧೨೩೦೫೮೯ | ೧೫೬೦೨೬೧ | ೨೪೨೩೮೪೪ |

*(ಮಾಹಿತಿ: ಕಾರ್ಮಿಕ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆ

ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯ ಮುಖ್ಯ ಪರಿವೀಕ್ಷಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಆಡಳಿತ ಹಾಗೂ ತಾಂತ್ರಿಕ ವಿಭಾಗಗಳೆರಡೂ ಅವರ ನಿಯಂತ್ರಣದಲ್ಲಿರುತ್ತವೆ. ಜಿಲ್ಲಾ ಮಟ್ಟದಲ್ಲಿ ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ವಹಣೆ ಪ್ರತ್ಯೇಕವಾಗಿದ್ದು, ಆ ವಿಭಾಗಗಳಿಗೆ ಪ್ರತ್ಯೇಕ ಪರಿವೀಕ್ಷಕರಿರುತ್ತಾರೆ.

## ಕಾರ್ಖಾನೆಗಳ ಇಲಾಖೆ

ಹೊಸದಾಗಿ ಆರಂಭಗೊಂಡ ಕಾರ್ಖಾನೆಗಳ ತಪಾಸಣೆ, ಕಾರ್ಖಾನೆಗಳ ಕಾಯ್ದೆ ೧೯೪೮ ಮತ್ತು ಕರ್ನಾಟಕ ಕಾರ್ಖಾನೆಗಳ ನಿಯಮಾವಳಿ ೧೯೬೯ರಂತೆ ನೋಂದಣಿ ಸುರಕ್ಷತೆ, ಪರಿಸರ ಮಾಲಿನ್ಯ ನಿವಾರಣೆ, ಪ್ರಸೂತಿ ಸೌಲಭ್ಯ, ಕ್ಯಾಂಟೀನ್ ಸೌಲಭ್ಯ, ಬಾಲ ಕಾರ್ಮಿಕರ ತಪಾಸಣೆ, ಮುಂತಾದ ಪರಿವೀಕ್ಷಣಾ ಕಾರ್ಯವು ಸುಗಮವಾಗಿ ಆಗಬೇಕೆಂಬ ಉದ್ದೇಶದಿಂದ, ವಿಭಾಗೀಯ ಕಛೇರಿಯೊಂದರ ಅವಶ್ಯಕತೆಯನ್ನು ಮನಗಂಡು, ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯ ವಿಭಾಗವು, ಮೈಸೂರಿನಲ್ಲಿ ಸ್ಥಾಪನೆಗೊಂಡಿದೆ.

ಕಾರ್ಖಾನೆಗಳಿಗೆ ಸಂಬಂಧಿಸಿದ ಕಾರ್ಯ ನಿರ್ವಹಣೆಗೆ ಅನುಕೂಲವಾಗುವಂತೆ, ಕಾರ್ಖಾನೆಗಳ ಒಟ್ಟು ಸಂಖ್ಯೆಗಳ ಆಧಾರದ ಮೇಲೆ, ರಾಜ್ಯದಲ್ಲಿ ವಿವಿಧ ವಿಭಾಗಗಳನ್ನು ರಚಿಸಿಕೊಳ್ಳಲಾಗಿದೆ. ಒಂದು ವಿಭಾಗದ ಅಡಿ, ಮುನ್ನೂರಕ್ಕಿಂತ ಹೆಚ್ಚು ಕಾರ್ಖಾನೆಗಳಿರುವ ಅಥವಾ ಅದಕ್ಕಿಂತ ಕಡಿಮೆ ಇದ್ದರೂ ಅತಿ ಅಪಾಯಕಾರಿ ಕಾರ್ಖಾನೆಗಳ ಸಂಖ್ಯೆ ಹೆಚ್ಚಾಗಿರುವ ಪ್ರದೇಶವನ್ನು ಒಂದು ವಿಭಾಗವಾಗಿ ವಿಂಗಡಿಸಿಕೊಳ್ಳಲಾಗಿದೆ. ಚಾಮರಾಜನಗರ

ಜಿಲ್ಲೆಯಲ್ಲಿ ಒಟ್ಟು ಇಪ್ಪತ್ತೆಂಟು ಕಾರ್ಖಾನೆಗಳು ಇವೆ. ಆದ್ದರಿಂದ ಮೈಸೂರು ವಿಭಾಗದ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರ ಅಧೀನಕ್ಕೆ ಒಳಪಟ್ಟಿದೆ. ಚಾಮರಾಜನಗರ ಜಿಲ್ಲೆಯಲ್ಲದೆ, ಮೈಸೂರು ಜಿಲ್ಲೆಯ ಅಲ್ಪ ಭಾಗ, ಹಾಸನ ಮತ್ತು ಮಂಡ್ಯ ಜಿಲ್ಲೆಗಳೂ, ಈ ವಿಭಾಗದ ಕಾರ್ಯವ್ಯಾಪ್ತಿಗೆ ಒಳಪಡುತ್ತಿದ್ದು, ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು. ಈ ವಿಭಾಗದ (ವಿಭಾಗ–೨) ಮುಖ್ಯಸ್ಥರಾಗಿರುತ್ತಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೮ರ ಅಂತ್ಯದಲ್ಲಿ, ಒಟ್ಟು ಇಪ್ಪತ್ತೆಂಟು ನೋಂದಾಯಿತ ಕಾರ್ಖಾನೆಗಳು ಇರುತ್ತವೆ. ಇವುಗಳಲ್ಲಿ ೨೦೦೬, ೨೦೦೭ ಮತ್ತು ೨೦೦೮ರ ವರ್ಷಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆಯು ಕ್ರಮವಾಗಿ ೧೪೯೨, ೫೬೬ ಮತ್ತು ೮೦ ಆಗಿರುತ್ತದೆ. ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಕಾನೂನುಗಳನ್ನು ಈ ವಿಭಾಗವು ಅನುಷ್ಠಾನಗೊಳಿಸುತ್ತದೆ. ವೇತನ ಸಂದಾಯ ಕಾಯ್ದೆ ೧೯೩೬. ೨) ಕಾರ್ಖಾನೆಗಳ ಕಾಯ್ದೆ ೧೯೪೮ ಹಾಗೂ ಕರ್ನಾಟಕ ಕಾರ್ಖಾನೆಗಳ ನಿಯಮಗಳು ೧೯೬೯ ಹಾಗೂ ಇದರಡಿ ರೂಪಿತವಾದ ವಿವಿಧ ನಿಯಮಗಳು. ಪ್ರಸೂತಿ ಸೌಲಭ್ಯ ಕಾಯ್ದೆ ೧೯೬೧. ೪)ಸೀಮಾ ರೂಲ್ಸ್ (ಕೆಮಿಕಲ್ ಇಂಡಸ್ಟ್ರಿಯಲ್ ಮೇಜರ್ ಆಕ್ಸಿಡೆಂಟ್ ರೂಲ್ಸ್ ೧೯೬೬ (CIMA Rules- Chemical Industrial Major Accident Rules 1966) ೫) ಬಾಲ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ೧೯೮೬. ೬)ಪರಿಸರ (ಸಂರಕ್ಷಣೆ) ಕಾಯ್ದೆ, ೧೯೮೬ (ಭಾಗಶಃ ಮತ್ತು ಇದರಡಿ ರೂಪಿತವಾದ ನಿಯಮಗಳು) ೭) ಮೇಜರ್ ಹಸಾರ್ಡಸ್ ರೂಲ್ಸ್ ೧೯೯೪. (Major Hazardous Rules 1994), ಇತ್ಯಾದಿ.

ಕಾರ್ಖಾನೆಗಳಲ್ಲಿನ ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಪ್ರಗತಿಯ ಹಿತದೃಷ್ಟಿಯು ಈ ಕಛೇರಿಯ ಕಾರ್ಯ ನಿರ್ವಹಣೆಯ ಪ್ರಮುಖ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಯಾವುದೇ ಕಾರ್ಖಾನೆಯ ನಿವೇಶನ, ಕಟ್ಟಡ ಮತ್ತು ಯಂತ್ರ ವಿನ್ಯಾಸದ ನಕ್ಷೆಗಳನ್ನು, ಬೆಳಕು, ಓಡಾಡುವ ಸ್ಥಳ, ಸುತ್ತಮುತ್ತಲಿನ ಚಟುವಟಿಕೆಗಳು ಮತ್ತು ಜನವಸತಿಯನ್ನು ಪರಿಗಣನೆಗೆ ತೆಗೆದುಕೊಂಡು ಕಾರ್ಖಾನೆಯ ನೋಂದಣಿ ಮತ್ತು ನಕ್ಷೆಗೆ ಅನುಮೋದನೆ ನೀಡಲಾಗುತ್ತದೆ. ನೋಂದಾವಣೆಯಾಗಿಲ್ಲದ ಕಾರ್ಖಾನೆಗಳನ್ನು ಪತ್ತೆ ಹಚ್ಚಿ ನೋಂದಾಯಿಸಿಕೊಳ್ಳಲಾಗುತ್ತದೆ. ಕಾರ್ಖಾನೆಗಳನ್ನು ರ್‍ಯಾಂಡಂ ಸ್ಯಾಂಪ್ಲಿಂಗ್ ಆಧಾರದ ಮೇಲೆ, ಪರಿವೀಕ್ಷಿಸುವುದು, ಕಾರ್ಖಾನೆಗಳಲ್ಲಿ ಸಂಭವಿಸಿರುವ ಮರಣಾಂತಿಕ ಅಪಘಾತಗಳ ಬಗ್ಗೆ ತನಿಖೆ ಮಾಡುವುದು, ಅಂತಹ ಅಪಘಾತಗಳು ಮನರ್ಘಟಿಸದ ಹಾಗೆ ಸೂಕ್ತ ಸುರಕ್ಷತೆಗಳನ್ನು ಮಾಡುವುದು, ರಾಸಾಯನಿಕ ಕಾರ್ಖಾನೆಗಳಲ್ಲಿ ಯಾವುದೇ ದುರಂತ ಸಂಭವಿಸದಂತೆ ನಿಗಾ ವಹಿಸುವುದು, ಅತೀ ಅಪಾಯಕಾರಿ ಕಾರ್ಖಾನೆಗಳಲ್ಲಿ ನಿಯತಕಾಲಿಕವಾಗಿ ಆನ್‌ಸೈಟ್ ತುರ್ತು ಪ್ರದರ್ಶನ ಏರ್ಪಡಿಸಿ, ಸಾಮರ್ಥ್ಯ ಮತ್ತು ಗುಣಮಟ್ಟಗಳ ಕುರಿತು ಪರಿಶೀಲಿಸಿ, ಸೂಕ್ತ ಮಾರ್ಗದರ್ಶನವನ್ನು ನೀಡುವುದು, ಹೆಚ್ಚು ಸುರಕ್ಷತಾ ದೃಷ್ಟಿಯಿಂದ ಕಾರ್ಯ ನಿರ್ವಹಿಸಲು ಕಾರ್ಖಾನೆಗಳ ಕಾರ್ಮಿಕರಿಗೆ ತರಬೇತಿ ನೀಡುವುದು, ಇವೇ ಮುಂತಾದ ಕೆಲಸಗಳನ್ನು ಈ ಇಲಾಖೆಯಿಂದ ಪರಿಣಾಮಕಾರಿಯಾಗಿ ಮಾಡಲಾಗುತ್ತದೆ. ನಕ್ಷೆ ಅನುಮೋದನೆ, ಕಾರ್ಖಾನೆಗಳ ನೋಂದಣಿ, ಕಾರ್ಖಾನೆ ಲೈಸೆನ್ಸ್, ಅರ್ಧ ವಾರ್ಷಿಕ ವರದಿ ತಯಾರಿಕೆ, ಅಪಘಾತಗಳ ತಪಾಸಣೆ, ಮಾಹಿತಿ ಹಕ್ಕು ಅಧಿನಿಯಮಗಳನ್ವಯ ಮಾಹಿತಿ ಪೂರೈಕೆ, ಕಾರ್ಖಾನೆಗಳ ಪರಿವೀಕ್ಷಣೆ, ದೂರುಗಳ ಪರಿಹಾರ ಇವೇ ಮಂತಾದುವು ಈ ಕಛೇರಿಯ ಇನ್ನಿತರ ಕಾರ್ಯ ಚಟುವಟಟಿಕೆಗಳಾಗಿರುತ್ತವೆ.

ಈ ಕಛೇರಿಯ ವ್ಯಾಪ್ತಿಯಲ್ಲಿ ೨೦೦೫–೦೬ರಿಂದ ೨೦೧೦–೧೧ನೇ ಸಾಲಿನವರೆಗಿನ ಅವಧಿಯಲ್ಲಿ ಇದ್ದ ಕಾರ್ಖಾನೆಗಳ ಮತ್ತು ಕಾರ್ಮಿಕರ ಸಂಖ್ಯೆಯನ್ನು ಕೋಷ್ಟಕ ೧೬.೮ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೮: ೨೦೦೫–೦೬ರಿಂದ ೨೦೧೦–೧೧ನೇ ಸಾಲಿನವರೆಗೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳು ಮತ್ತು ಕಾರ್ಮಿಕರ ವಿವರಗಳು.**

| ವರ್ಷ | ನೋಂದಾಯಿತ ಕಾರ್ಖಾನೆಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|
| ೨೦೦೫–೦೬ | ೨೦ | ೧೪೯೨ |
| ೨೦೦೬–೦೭ | ೨೪ | ೫೬೬ |
| ೨೦೦೭–೦೮ | ೨೮ | ೮೦ |
| ೨೦೦೮–೦೯ | ೨೫ | ೧೧೪೪ |
| ೨೦೦೯–೧೦ | ೨೫ | ೧೧೪೪ |
| ೨೦೧೦–೧೧ | ೨೬ | ೧೧೬೪ |

*(ಮಾಹಿತಿ : ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ–೨, ಮೈಸೂರು)*

ಈ ಕಛೇರಿಯ ವತಿಯಿಂದ ೨೦೦೫–೦೬ರಿಂದ ೨೦೧೦–೧೧ನೇ ಸಾಲುಗಳಲ್ಲಿ ಮಾಡಿರುವ ಪರಿವೀಕ್ಷಣೆಗಳ ಸಂಖ್ಯೆಯನ್ನು ಕೋಷ್ಟಕ ೧೬.೯ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೯: ೨೦೦೫–೦೬ರಿಂದ ೨೦೧೦–೧೧ನೇ ಸಾಲಿನವರೆಗೆ ಜಿಲ್ಲೆಯಲ್ಲಿ ಮಾಡಿರುವ ಪರಿವೀಕ್ಷಣೆಗಳ ವಿವರಗಳು**

| ವರ್ಷ | ಜಂಟಿ ಪರಿವೀಕ್ಷಣೆಗಳ ಸಂಖ್ಯೆ | ಉಪದೇಶಕ ಪರಿವೀಕ್ಷಣೆಗಳ ಸಂಖ್ಯೆ | ಸುರಕ್ಷತಾ ತರಬೇತಿ |
|---|---|---|---|
| ೨೦೦೫–೦೬ | – | ೨೦ | ೦೧ |
| ೨೦೦೬–೦೭ | – | ೨೪ | ೦೧ |
| ೨೦೦೭–೦೮ | – | ೨೮ | ೦೧ |
| ೨೦೦೮–೦೯ | ೦ | ೧೫ | ೦ |
| ೨೦೦೯–೧೦ | ೦ | ೧೩ | ೦ |
| ೨೦೧೦–೧೧ | ೦ | ೧೨ | ೦ |

ಅತಿ ಅಪಾಯಕಾರಿ ಚಟುವಟಿಕೆಗಳನ್ನು ಹೊಂದಿರುವಂತಹ ಯಾವುದೇ ಕಾರ್ಖಾನೆಗಳು ಈ ಜಿಲ್ಲೆಯಲ್ಲಿ ಇರುವುದಿಲ್ಲ. ಆದರೆ ಅಪಾಯಕಾರಿ ಚಟುವಟಿಕೆಗಳನ್ನು ಹೊಂದಿರುವ ಕಾರ್ಖಾನೆಗಳ ವಿವರಗಳನ್ನು ಕೋಷ್ಟಕ ೧೬.೧೦ರಲ್ಲಿ ನೀಡಿದೆ.

**ಕೋಷ್ಟಕ ೧೬.೧೦: ಜಿಲ್ಲೆಯಲ್ಲಿರುವ ಅಪಾಯಕಾರಿ ಚಟುವಟಿಕೆಗಳನ್ನು ಹೊಂದಿರುವ ಕಾರ್ಖಾನೆಗಳ ವಿವರಗಳು**

| ವರ್ಷ | ಕಾರ್ಖಾನೆಗಳ ಸಂಖ್ಯೆ | ಕಾರ್ಖಾನೆಗಳ ಹೆಸರು | ಪರಿವೀಕ್ಷಣೆಗಳು |
|---|---|---|---|
| ೨೦೦೫–೦೬ | ೧ | ೧. ವೇಲನ್ ಟೆಕ್ಸ್‌ಟೈಲ್ಸ್ | ೧ |
| ೨೦೦೬–೦೭ | ೩ | ೧. ವೇಲನ್ ಟೆಕ್ಸ್‌ಟೈಲ್ಸ್ | |
| | | ೨. ಮಹದೇಶ್ವರ ಶುಗರ್ಸ್ | |
| | | ೩. ಭರೂಕ ಪವರ್ ಕಾರ್ಪೋರೇಷನ್ | ೩ |
| ೨೦೦೭–೦೮ | ೪ | ೧. ವೇಲನ್ ಟೆಕ್ಸ್‌ಟೈಲ್ಸ್ | |
| | | ೨. ಮಹದೇಶ್ವರ ಶುಗರ್ಸ್ | |
| | | ೩. ಭರೂಕ ಪವರ್ ಕಾರ್ಪೋರೇಷನ್ | |
| | | ೪. ಪಯನಿಯರ್ ಪವರ್ ಕಾರ್ಪೋರೇಷನ್ | ೪ |

| ವರ್ಷ | ಕಾರ್ಖಾನೆಗಳ ಸಂಖ್ಯೆ | ಕಾರ್ಖಾನೆಗಳ ಹೆಸರು | ಪರಿವೀಕ್ಷಣೆಗಳು |
|---|---|---|---|
| ೨೦೦೮-೦೯ | ೩ | ೧. ಬನ್ನಾರಿ ಅಮ್ಮನ್ ಶುಗರ್ಸ್ | |
| | | ೨. ಪಯೋನಿರ್ ಪವರ್ ಕಾರ್ಪೋರೇಷನ್ | |
| | | ೩. ಭರೂಕ ಪವರ್ ಕಾರ್ಪೋರೇಷನ್ | ೩ |
| ೨೦೦೯-೧೦ | ೩ | ೧. ಬನ್ನಾರಿ ಅಮ್ಮನ್ ಶುಗರ್ಸ್ | |
| | | ೨. ಪಯೋನಿರ್ ಪವರ್ ಕಾರ್ಪೋರೇಷನ್ | ೩ |
| | | ೩. ಭರೂಕ ಪವರ್ ಕಾರ್ಪೋರೇಷನ್ | |
| ೨೦೧೦-೧೧ | ೩ | ೧. ಬನ್ನಾರಿ ಅಮ್ಮನ್ ಶುಗರ್ಸ್ | |
| | | ೨. ಪಯೋನಿರ್ ಪವರ್ ಕಾರ್ಪೋರೇಷನ್ | ೩ |
| | | ೩. ಭರೂಕ ಪವರ್ ಕಾರ್ಪೋರೇಷನ್ | |

*(ಮಾಹಿತಿ : ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ-೨, ಮೈಸೂರು)*

# ಬಾಯ್ಲರುಗಳ ಇಲಾಖೆ

ಬಾಯ್ಲರುಗಳಿಂದ ಆಗಬಹುದಾದ ಅಪಘಾತಗಳನ್ನು ತಡೆದು, ಸುರಕ್ಷತೆಗೆ ಉತ್ತೇಜನ ನೀಡಿ, ಸಾರ್ವಜನಿಕರ ಜೀವ ಮತ್ತು ಆಸ್ತಿ-ಪಾಸ್ತಿಗಳನ್ನು ಸಂರಕ್ಷಿಸುವುದು ಬಾಯ್ಲರು ಇಲಾಖೆಯ ಕರ್ತವ್ಯವಾಗಿರುತ್ತದೆ. ಬಾಯ್ಲರುಗಳ ಡಿಸೈನ್, ಮೆಟೀರಿಯಲ್, ತಯಾರಿಕಾ ಗುಣಮಟ್ಟ, ಬಾಯ್ಲರಿನ ತಯಾರಿಕೆಯ ಸಮಯದಲ್ಲಿ ವಿವಿಧ ಹಂತದ ಪರಿವೀಕ್ಷಣೆ, ವೆಲ್ಡರ್‌ಗಳ ಅರ್ಹತಾ ಪರೀಕ್ಷೆ ಮುಂತಾದವುಗಳ ಬಗ್ಗೆ, ಭಾರತೀಯ ಬಾಯ್ಲರ್ ರೆಗ್ಯುಲೇಷನ್ ೧೯೫೦ರ ನಿಯಮಗಳಲ್ಲಿ ಮಾರ್ಗದರ್ಶನವಿದೆ. ಅದರಂತೆ ಬಾಯ್ಲರುಗಳ, ಹಬೆಕೊಳವೆಗಳ ಮತ್ತು ಎಕಾನಮೈಸರ್‌ಗಳ ಪರಿವೀಕ್ಷಣೆ ಹಾಗೂ ಪ್ರಮಾಣ ಪತ್ರ ನೀಡಿಕೆ, ಅಗತ್ಯವಿದ್ದಲ್ಲಿ ದುರಸ್ತಿಗೆ ಸಲಹೆ, ಮಾಲೀಕರು, ಆಪರೇಷನ್ ಎಂಜಿನಿಯರ್ಸ್, ಬಾಯ್ಲರ್ ಅಟೆಡೆಂಟ್ಸ್ ಹಾಗೂ ಬಾಯ್ಲರುಗಳಲ್ಲಿ ಕೆಲಸ ಮಾಡುವ ಇತರೆ ಸಿಬ್ಬಂದಿಗೆ ಬಾಯ್ಲರುಗಳ ಸುರಕ್ಷತೆ ಮತ್ತು ದಕ್ಷ ನಿರ್ವಹಣೆ ಬಗ್ಗೆ ಸೂಕ್ತ ತರಬೇತಿ ನೀಡಿಕೆ; ಬಾಯ್ಲರುಗಳ ದುರಸ್ತಿ ಪ್ರೆಶರ್ ಪಾರ್ಟ್ಸ್‌ಗಳ ತಯಾರಿಸುವ ಸಂಸ್ಥೆಗಳ ಗುರುತಿಸುವಿಕೆ ಮತ್ತು ಈ ಸಂಬಂಧದ ಕಾರ್ಯ ಚಟುವಟಿಕೆಗಳಿಗೆ ಉತ್ತೇಜನ, ಮುಂತಾದವು ಈ ಇಲಾಖೆಯ ಪ್ರಕಾರ್ಯಗಳಲ್ಲಿ ಸೇರಿವೆ.

ಚಾಮರಾಜನಗರ ಜಿಲ್ಲೆಯ ಬಾಯ್ಲರುಗಳ ಇಲಾಖೆಯು ಮೈಸೂರು ವಿಭಾಗದ ಬಾಯ್ಲರುಗಳ ಸಹಾಯಕ ನಿರ್ದೇಶಕರ ಕಛೇರಿಯ ಅಧೀನಕ್ಕೆ ಒಳಪಟ್ಟಿದೆ. ಚಾಮರಾಜನಗರ ಜಿಲ್ಲೆಯನ್ನು ಈ ಕಛೇರಿಯ ನಿಯಂತ್ರಣಕ್ಕೆ ೨೦೦೦ನೇ ಸಾಲಿನ ಡಿಸೆಂಬರ್ ೧೯ರಿಂದ ಸೇರ್ಪಡೆಗೊಳಿಸಲಾಗಿದೆ.

ಬಾಯ್ಲರುಗಳ ಪರಿವೀಕ್ಷಕರ ವ್ಯಾಪ್ತಿಯಲ್ಲಿ ಕೆಳಕಂಡ ನಿಯಮಗಳನ್ನು ಜಾರಿಗೊಳಿಸಲಾಗುತ್ತದೆ. ೧) ದಿ ಇಂಡಿಯನ್ ಬಾಯ್ಲರ್ ಆಕ್ಟ್ ೧೯೨೩ (೨) ದಿ ಕರ್ನಾಟಕ ಬಾಯ್ಲರ್ ಆಪರೇಷನ್ ಎಂಜಿನಿಯರ್ಸ್ ರೂಲ್ಸ್ ೧೯೫೯, (೩) ದಿ ಕರ್ನಾಟಕ ಬಾಯ್ಲರ್ ಅಟೆಂಡೆಂಟ್ಸ್ ರೂಲ್ಸ್ ೧೯೬೨ ೪) ದಿ ಕರ್ನಾಟಕ ಎಕನಾಮೈಸರ್ಸ್ ರೂಲ್ಸ್ ೧೯೫೯ (೫) ದಿ ಕರ್ನಾಟಕ ಬಾಯ್ಲರ್ ರೂಲ್ಸ್, ೧೯೮೨.

ಜಿಲ್ಲಾ ಮಟ್ಟದ ಅಧಿಕಾರಿಗಳು, ಬಾಯ್ಲರುಗಳನ್ನು ಪ್ರಮಾಣೀಕರಿಸುವ ಪ್ರಾಧಿಕಾರಿಗಳಂತೆ ಕಾರ್ಯ ನಿರ್ವಹಿಸುತ್ತಾರೆ. ಜಿಲ್ಲಾ ಮಟ್ಟದ ಅಧಿಕಾರಿಗಳಲ್ಲದೆ, ಸರ್ಕಾರದಿಂದ ರಚನೆಗೊಂಡ ಆಪರೇಶನ್ ಎಂಜಿನಿಯರ್ ಎಕ್ಸಾಮಿನೇಶನ್ ಬೋರ್ಡ್ ಮತ್ತು ಬಾಯ್ಲರ್ ಅಟೆಂಡೆಂಟ್ಸ್ ಬೋರ್ಡ್ ಎಂಬ ಎರಡು ಪ್ರತ್ಯೇಕ ಮಂಡಳಿಗಳೂ ಇದ್ದು, ಈ ಎರಡೂ ಮಂಡಳಿಗಳಿಗೆ ಇಲಾಖೆಯ ನಿರ್ದೇಶಕರೇ ಅಧ್ಯಕ್ಷರಾಗಿ ಇನ್ನಿತರ ಐದೈದು ಸದಸ್ಯರು ನೇಮಕಗೊಂಡಿರುತ್ತಾರೆ. ಎಂಜಿನಿಯರ್ ಎಕ್ಸಾಮಿನೇಶನ್ ಬೋರ್ಡ್‌ಗೆ ಇಲಾಖೆಯ ಜಂಟಿ ನಿರ್ದೇಶಕರು ಮತ್ತು ಬಾಯ್ಲರ್ ಅಟೆಂಡೆಂಟ್ಸ್ ಬೋರ್ಡ್‌ಗೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಕಾರ್ಯದರ್ಶಿಗಳಾಗಿ ನೇಮಕಗೊಂಡವರಾಗಿರುತ್ತಾರೆ.

**ಕೋಷ್ಟಕ ೧೬.೧೧: ಜಿಲ್ಲೆಯಲ್ಲಿ ೨೦೦೫–೦೬ರಿಂದ ೨೦೧೦–೧೧ನೇ ಸಾಲಿನಲ್ಲಿ ಇದ್ದ ಮತ್ತು ನೋಂದಾವಣೆಯಾದ ಬಾಯ್ಲರುಗಳು, ಎಕನಾಮೈಸರ್‌ಗಳು ಮತ್ತು ಹಬೆಕೊಳವೆಗಳ ವಿವರಗಳು**

| ವರ್ಷ | ವರ್ಷದ ಪ್ರಾರಂಭದಲ್ಲಿ ನೋಂದಾವಣೆಯಾಗಿದ್ದ ಬಾಯ್ಲರುಗಳ ಸಂಖ್ಯೆ | ಸದರಿ ಅವಧಿಯಲ್ಲಿ ನೋಂದಾವಣೆಯಾದವು | ವರ್ಷಾಂತ್ಯಕ್ಕೆ ನೋಂದಣಿಯಾಗಿರುವ ಮತ್ತು ಬಾಯ್ಲರುಗಳು | ವರ್ಷದ ಪ್ರಾರಂಭದಲ್ಲಿ ನೋಂದಣಿಯಾಗಿದ್ದ ಏಕನಾಮೈಸರ್‌ಗಳ ಸಂಖ್ಯೆ | ಸದರಿ ಅವಧಿಯಲ್ಲಿ ನೋಂದಾವಣೆಯಾದವು | ವರ್ಷಾಂತ್ಯಕ್ಕೆ ನೋಂದಣಿಯಾಗಿರುವ ಮತ್ತು ಏಕನಾಮೈಸರ್‌ಗಳು | ವರ್ಷದ ಪ್ರಾರಂಭದಲ್ಲಿ ನೋಂದಾವಣೆಯಾಗಿದ್ದ ಹಬೆಕೊಳವೆಗಳ ಸಂಖ್ಯೆ | ಸದರಿ ಅವಧಿಯಲ್ಲಿ ನೋಂದಾವಣೆಯಾದವು | ವರ್ಷಾಂತ್ಯಕ್ಕೆ ನೋಂದಣಿಯಾಗಿರುವ ಮತ್ತು ಹಬೆಕೊಳವೆಗಳು |
|---|---|---|---|---|---|---|---|---|---|
| ೨೦೦೫–೦೬ | ೮ | – | ೮ | – | – | – | ೪ | – | ೪ |
| ೨೦೦೬–೦೭ | ೮ | – | ೮ | – | – | – | ೪ | – | ೪ |
| ೨೦೦೭–೦೮ | ೮ | – | ೮ | – | – | – | ೪ | – | ೪ |
| ೨೦೦೮–೦೯ | ೮ | – | ೮ | – | – | – | ೪ | – | ೪ |
| ೨೦೦೯–೧೦ | ೮ | ೧ | ೯ | – | – | – | ೪ | ೧ | ೫ |
| ೨೦೧೦–೧೧ | ೮ | – | ೮ | – | – | – | ೪ | – | ೪ |

*(ಮಾಹಿತಿ : ಬಾಯ್ಲರುಗಳ ಸಹಾಯಕ ನಿರ್ದೇಶಕರು, ಮೈಸೂರು ವಿಭಾಗ, ಮೈಸೂರು)*

**ಕೋಷ್ಟಕ ೧೬.೧೨: ಜಿಲ್ಲೆಯಲ್ಲಿ ಐದು ವರ್ಷಗಳಲ್ಲಿ ಬಾಯ್ಲರುಗಳು, ಎಕನಾಮೈಸರ್‌ಗಳು ಮತ್ತು ಹಬೆಕೊಳವೆಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕದ ವಿವರಗಳು (₹ ಗಳಲ್ಲಿ)**

| ವರ್ಷ | ಬಾಯ್ಲರುಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ | ಎಕನಾಮೈಸರ್‌ಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ | ಹಬೆಕೊಳವೆಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ | ಬಾಯ್ಲರುಗಳ ಬಿಡಿ ಭಾಗಗಳತಯಾರಿಕೆಯ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ |
|---|---|---|---|---|
| ೨೦೦೫–೦೬ | ೧೦,೭೦೦ | –– | ೪೯,೯೫೦ | – |
| ೨೦೦೬–೦೭ | ೧೬,೨೦೦ | –– | ೬೪,೬೫೦ | –– |
| ೨೦೦೭–೦೮ | ೧೯,೩೫೦ | –– | ೬೪,೯೫೦ | –– |
| ೨೦೦೮–೦೯ | ೧೬,೨೦೦ | –– | ೬೩,೩೦೦ | –– |
| ೨೦೦೯–೧೦ | ೮,೯೦೦ | –– | ೪೬,೩೫೦ | –– |
| ೨೦೧೦–೧೧ | ೮,೯೦೦ | –– | ೪೬,೩೫೦ | –– |

*(ಮಾಹಿತಿ : ಬಾಯ್ಲರುಗಳ ಸಹಾಯಕ ನಿರ್ದೇಶಕರು, ಮೈಸೂರು ವಿಭಾಗ, ಮೈಸೂರು)*

# ಸಮಾಜ ಕಲ್ಯಾಣ ಇಲಾಖೆ

ಚಾಮರಾಜನಗರ ತಾಲೂಕು ಮೈಸೂರು ಜಿಲ್ಲೆಯ ಒಂದು ಭಾಗವಾಗಿದ್ದು, ಮೈಸೂರು ಜಿಲ್ಲೆಯ ಆಡಳಿತಕ್ಕೆ ಹಾಗೂ ಇತರ ಘಟನೆಗಳ ಮತ್ತು ಚಳವಳಿಗಳ ಪ್ರಭಾವಕ್ಕೆ ಒಳಗಾಗಿತ್ತು. ಅದ್ದರಿಂದ ಮೈಸೂರಿನ ಚರಿತ್ರಾಂಶಗಳು ಚಾಮರಾಜನಗರಕ್ಕೂ ಅನ್ವಯಗೊಳ್ಳುತ್ತವೆ. ಮಹಾತ್ಮ ಗಾಂಧಿಯವರು ಹರಿಜನೋದ್ಧಾರ ಚಳವಳಿಯನ್ನು ಆರಂಭಿಸುವುದಕ್ಕೆ ಮುನ್ನವೇ, ಹರಿಜನ ಹಾಗೂ ಇತರ ದಲಿತ ವರ್ಗಗಳ ಚಳವಳಿಯು ಮೈಸೂರು ಜಿಲ್ಲೆಯಲ್ಲಿ ಆರಂಭಗೊಂಡಿತ್ತು. ಹೊಲೆಯರಿಗಾಗಿ ಮೈಸೂರಿನಲ್ಲಿ ೧೮೮೧ನೇ ಇಸವಿಯಲ್ಲಿ ಒಂದು ಮಿಷನ್ ಶಾಲೆಯನ್ನು ತೆರೆಯಲಾಯಿತು. ಮೈಸೂರಿನಲ್ಲಿ ೧೮೯೬ರಲ್ಲಿ, ತನ್ನ ಚಟುವಟಿಕೆಗಳನ್ನು ಆರಂಭಿಸಿದ ಥಿಯಾಸಫಿಕಲ್ ಸೊಸೈಟಿಯು, ಹರಿಜನರ ಕಲ್ಯಾಣದ ಬಗ್ಗೆ ಆಸಕ್ತಿ ತಳೆದು ಈ ನಿಟ್ಟಿನಲ್ಲಿ, ೧೯೦೬ರಲ್ಲಿ ಕಾರ್ಯಾರಂಭ ಮಾಡಿತು.

ಮದ್ರಾಸ್ ಪ್ರಾಂತ್ಯದ ಬೇರೆಡೆಗಳಲ್ಲಿದ್ದಂತೆಯೇ, ೧೯೨೦ರ ಆರಂಭದಲ್ಲಿ, ಆಗ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಕೊಳ್ಳೇಗಾಲ ತಾಲೂಕಿನಲ್ಲಿ ಪ್ರತ್ಯೇಕ ಪಂಚಮ ಶಾಲೆಗಳನ್ನು ಹರಿಜನರ ಪ್ರದೇಶಗಳಲ್ಲಿ ಆರಂಭಿಸಿ, ಹರಿಜನ ಶಿಕ್ಷಕರನ್ನು ನೇಮಿಸಲಾಗಿತ್ತು. ಆ ನಂತರದಲ್ಲಿ ಈ ಶಾಲೆಗಳನ್ನು ರದ್ದುಗೊಳಿಸಿ, ಹರಿಜನ ಮಕ್ಕಳನ್ನು ಇತರೆ ಶಾಲೆಗಳಿಗೆ ಸೇರಿಕೊಳ್ಳುವಂತೆ ಉತ್ತೇಜಿಸಲಾಯಿತು.

ಮೈಸೂರಿನ ಶ್ರೀಮದಭಿನವ ರಂಗನಾಥಸ್ವಾಮಿಗಳನ್ನು ಭೇಟಿ ಮಾಡಲೆಂದು, ಮದನ ಮೋಹನ ಮಾಳವೀಯರು ೧೯೨೭ರಲ್ಲಿ ಬಂದಾಗ, ಸ್ವಾಮೀಜಿ ಹಾಗೂ ಇತರ ಅನೇಕ ಮಹಾ ಪಂಡಿತರ ನಡುವೆ ಹರಿಜನರಿಗೆ ಮಂತ್ರ ದೀಕ್ಷೆ ಪಡೆಯಲು ಅರ್ಹತೆ ಇರುವ ಬಗ್ಗೆ ಒಂದು ಸಂಧಾನ ನಡೆಯಿತು. ಹರಿಜನರೂ ಮಂತ್ರ ದೀಕ್ಷೆಗೆ ಅರ್ಹರು ಎಂಬುದಾಗಿ ಅವರಿಗೆಲ್ಲ ಸ್ವಾಮೀಜಿಯವರು ಮನವರಿಕೆ ಮಾಡಿ ಕೊಟ್ಟರು.

ಹರಿಜನರು ಸಾರ್ವಜನಿಕ ಕೆರೆ ಮತ್ತು ಬಾವಿಗಳನ್ನು ಬಳಸಲು, ಶಾಲೆಗಳಿಗೆ ಹಾಗೂ ದೇವಸ್ಥಾನಗಳಿಗೆ ಪ್ರವೇಶ ನೀಡಲು ಇದ್ದ ನಿರ್ಬಂಧಗಳನ್ನು ಗಟ್ಟಿಯಾಗಿ ವಿರೋಧಿಸಿದ ತಗಡೂರು ರಾಮಚಂದ್ರ ರಾಯರು ಒಂದು ಚಳವಳಿಯನ್ನೇ ಆರಂಭಿಸಿದರು. ಸಾಮಾಜಿಕ ಸಮಾನತೆಗಾಗಿ ತಗಡೂರಿನಲ್ಲಿ ೧೯೩೧ರಲ್ಲಿ ಸತ್ಯಾಗ್ರಹಾಶ್ರಮವನ್ನು ಅವರು ಸ್ಥಾಪಿಸಿದರು. ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಹರಿಜನರ ಪ್ರವೇಶ ಮಾಡಿಸಲು ೧೯೩೨ರಲ್ಲಿ ಅವರು ಪ್ರಯತ್ನ ಪಟ್ಟಾಗ, ಸ್ಥಳೀಯರು ಹಾಗೂ ದೇವಸ್ಥಾನದ ಅಧಿಕಾರಿಗಳು ಬಲವಾಗಿ ವಿರೋಧಿಸಿದರು. ಆದರೆ ಹರಿಜನ ಸೇವಕ ಸಂಘದ ಅಧ್ಯಕ್ಷರಾದ, ವಕೀಲ ಕೆ. ಶೇಷಾದ್ರಿ, ವಕೀಲ ನಾರಾಯಣರಾವ್ ಮತ್ತು ವಿಶ್ವೇಶ್ವರ ಗೌಡರಂತಹ ಅನೇಕ ಜನರ ಸಹಕಾರದಿಂದಾಗಿ, ಕ್ರಾಂತಿಕಾರರ ಹಾಗೂ ದೇವಸ್ಥಾನದ ಅಧಿಕಾರಿಗಳ ನಡುವೆ ಒಂದು ಒಪ್ಪಂದವಾಯಿತು. ತಗಡೂರಿನಲ್ಲಿ ರಾಮಚಂದ್ರ ರಾಯರು ಒಂದು ಗಣಪತಿ ಗುಡಿಯನ್ನು ಮತ್ತು ಒಂದು ಸ್ನಾನಘಟ್ಟವನ್ನೂ ಹರಿಜನರ ಪ್ರದೇಶದಲ್ಲಿ ಸ್ಥಾಪಿಸಿದರು. ಆ ವರ್ಷ ಅವರು ಮಾಡಿದ ಸತತ ಪ್ರಯತ್ನದಿಂದಾಗಿ, ಸಾರ್ವಜನಿಕ ಕೆರೆಗಳ ನೀರನ್ನು ಹರಿಜನರೂ ಕೂಡ ಒಳ್ಳೆಯ ಕೆಲಸಕ್ಕಾಗಿ ಬಳಸಹುದೆಂದು ಸರ್ಕಾರವು ಆದೇಶ ಹೊರಡಿಸಿತು.

ಚಾಮರಾಜನಗರ ಜಿಲ್ಲೆಯನ್ನೂ ಒಳಗೊಂಡಂತೆ, ಹಿಂದೂ ಧರ್ಮದಿಂದ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸುವ ಪ್ರಯತ್ನಗಳು ಬಹಳ ಪ್ರಭಾವಯುತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ನಡೆಯತೊಡಗಿತ್ತು.

ತಗಡೂರು ರಾಮಚಂದ್ರರಾಯರು ಈ ಕಾರ್ಯವನ್ನು ವಿರೋಧಿಸಿ ಮತಾಂತರಕ್ಕೆ ತಡೆ ಹಾಕಿದರು. ಯಳಂದೂರು ತಾಲೂಕಿನಲ್ಲಿ ೧೨೦೦ ಕುಟುಂಬಗಳು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುವುದನ್ನು ಅವರು ತಪ್ಪಿಸಿದರು. ಸತ್ಯಾಗ್ರಹಾಶ್ರಮದಲ್ಲಿ ಒಂದು ಹರಿಜನ ವಿದ್ಯಾರ್ಥಿ ನಿಲಯವನ್ನು ರಾಮಚಂದ್ರ ರಾಯರು ಸ್ಥಾಪಿಸಿದರು. ಹೆಸರಾಂತ ಸ್ವಾತಂತ್ರ್ಯ ಹೋರಾಟಗಾರರಾದ ಮೈಸೂರಿನ ಎಚ್.ಸಿ ದಾಸಪ್ಪನವರು ಒಬ್ಬ ಹರಿಜನ ಹುಡುಗಿಯನ್ನು ದತ್ತು ತೆಗೆದುಕೊಂಡರು. ಮೈಸೂರು ಗವಿಮಠದ ಶ್ರೀ ಗೌರಿಶಂಕರ ಸ್ವಾಮಿಯವರು ಮೈಸೂರಿನ ಅಶೋಕಪುರಂ ಹರಿಜನ ಕಾಲೋನಿಯ ಮಹಾಲಿಂಗೇಶ್ವರ ದೇವಸ್ಥಾನವನ್ನು ಉದ್ಘಾಟಿಸಿ ಹರಿಜನೋದ್ಧಾರ ಚಳವಳಿಗೆ ತಮ್ಮ ಬೆಂಬಲವನ್ನು ಸೇರಿಸಿದರು. ಮೈಸೂರಿನ ಟಿ. ಎಸ್. ಸುಬ್ಬಣ್ಣನವರು, ಸಾರ್ವಜನಿಕರಿಂದ ಹಣ ಸಂಗ್ರಹಿಸಿ ನಡೆಸುತ್ತಿದ್ದ ವಿದ್ಯಾರ್ಥಿ ನಿಲಯದಲ್ಲಿ, ಎಲ್ಲ ಸಮುದಾಯಗಳ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿದರು. ಅನೇಕ ಹರಿಜನರು ಈ ನಿಲಯದ ಮೂಲಕ ತಮ್ಮ ಶಿಕ್ಷಣವನ್ನು ಗಳಿಸಿಕೊಂಡರು.

ರಾಜ್ಯಗಳ ಪುನರ್ವ್ಯವಸ್ಥೆಯ ಮುನ್ನ ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ಮೂಲಕ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಗಳನ್ನು ನಿರ್ವಹಿಸಲಾಗುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ನಿಮ್ನ ವರ್ಗದ ಜನತೆಯ ಶಿಕ್ಷಣ ಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಶಾಲೆಗಳನ್ನು ತೆರೆಯಲಾಯಿತಲ್ಲದೆ, ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯ ಧನವನ್ನೂ ಬಿಡುಗಡೆ ಮಾಡಲಾಯಿತು. ಬೋಧನಾ ಶುಲ್ಕ ವಿನಾಯಿತಿ, ವಿದ್ಯಾರ್ಥಿವೇತನ, ಪುಸ್ತಕ ಹಾಗೂ ಇತರ ಸಲಕರಣೆಗಳ ವಿತರಣೆ, ಸರ್ಕಾರಿ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಪ್ರವೇಶಕ್ಕೆ ಮೀಸಲಾತಿ ಮತ್ತು ಇನ್ನೂ ಇತರ ರೀತಿಯ ಸೌಲಭ್ಯಗಳನ್ನು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿತ್ತು.

ನಿಮ್ನ ವರ್ಗಗಳ ಕಮೀಷನರ್‌ರವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣಕ್ಕಾಗಿ; ಆರ್ಥಿಕ ಅಭಿವೃದ್ಧಿ, ಆರೋಗ್ಯ, ಶಿಕ್ಷಣ, ವಸತಿ ಮೊದಲಾದ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದರು. ಸ್ವಾತಂತ್ರ್ಯಾನಂತರದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಸರ್ವತೋಮುಖ ಪ್ರಗತಿಯ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯು ಆರಂಭಗೊಂಡು, ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸತೊಡಗಿತು. ರಾಜ್ಯಗಳ ಪುನರ್ವಿಂಗಡಣೆಯ ನಂತರವೂ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಹಿಂದುಳಿದ ವರ್ಗಗಳು ಹಾಗೂ ಅಲ್ಪ ಸಂಖ್ಯಾತರು– ಈ ಎಲ್ಲ ವರ್ಗಗಳ ಅಭಿವೃದ್ಧಿ ಕಾರ್ಯಗಳನ್ನೂ ಸಹ ಸಮಾಜ ಕಲ್ಯಾಣ ಇಲಾಖೆಯಿಂದಲೇ ನಿರ್ವಹಿಸಲಾಗುತ್ತಿತ್ತು. ೧೯೭೭ರ ಅಕ್ಟೋಬರ್ ತಿಂಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆಯೂ; ೧೯೯೮ ಡಿಸೆಂಬರ್‌ನ ಆದೇಶದ ಮೂಲಕ ೧೯೯೯ರಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯೂ ಮತ್ತು ೧೯೯೯ರಲ್ಲಿಯೇ ಪರಿಶಿಷ್ಟ ವರ್ಗಗಳ ಇಲಾಖೆಯೂ ಪ್ರತ್ಯೇಕವಾಗಿ ಸ್ಥಾಪಿಸಲ್ಪಟ್ಟಿದ್ದರಿಂದ, ಆಯಾ ವರ್ಷಗಳ ಆನಂತರದಿಂದ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು, ಪರಿಶಿಷ್ಟ ಜಾತಿಯವರ ಅಭಿವೃದ್ಧಿಗೆ ಮಾತ್ರವೇ ಸೀಮಿತಗೊಂಡಿದೆ.

ಆಯುಕ್ತರು, ಈ ಸಮಾಜ ಕಲ್ಯಾಣ ಇಲಾಖೆಯ ಮುಖ್ಯಸ್ಥರಾಗಿದ್ದು, ಇವರ ಸಹಾಯಕ್ಕೆ ಮೂರು ಜಂಟಿ ನಿರ್ದೇಶಕರು, ಐದು ಉಪ ನಿರ್ದೇಶಕರು, ಒಬ್ಬ ಲೆಕ್ಕಾಧಿಕಾರಿಗಳು ಮತ್ತು ಒಬ್ಬ ಸಹಾಯಕ ನಿರ್ದೇಶಕರು (ಸಾಂಖ್ಯಿಕ ಮತ್ತು ಸಂಶೋಧನೆ), ಇವರುಗಳು ಕೇಂದ್ರ ಸ್ಥಾನದಲ್ಲಿ ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಇಲಾಖೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ, ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಾರೆ.

ತಾಲೂಕು ಮಟ್ಟದಲ್ಲಿಯೂ ಇಲಾಖೆಯ ಕಛೇರಿಗಳನ್ನು ಪ್ರಾರಂಭಿಸಲಾಗಿದ್ದು, ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು ಕಛೇರಿಯ ಮುಖ್ಯಸ್ಥರಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವವರಾಗಿದ್ದಾರೆ.

೨೦೦೧ರ ಜನಗಣತಿಯಂತೆ ರಾಜ್ಯದಲ್ಲಿ ಒಟ್ಟು ಜನಸಂಖ್ಯೆಯು ೫೨೮.೫೧ಲಕ್ಷವೂ, ಪರಿಶಿಷ್ಟ ಜಾತಿಯವರ ಜನಸಂಖ್ಯೆಯು ೮೫.೬೪ ಲಕ್ಷವೂ ಇರುತ್ತದೆ. ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೧೬.೨೦ ಆಗಿರುತ್ತದೆ. ಚಾಮರಾಜನಗರ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಒಟ್ಟು ಜನಸಂಖ್ಯೆಯು ೯೬೫,೪೬೨ ಇದ್ದು, ಇದರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆಯು ೨೩೭,೬೨೪ ಲಕ್ಷ ಆಗಿರುತ್ತದೆ. ಇದು, ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯ ಶೇಕಡ ೨೪.೬೧ ಆಗುತ್ತದೆ. ಸಾಕ್ಷರತೆಯಲ್ಲಿ ಈ ಜಿಲ್ಲೆಯು ಇಪ್ಪತ್ತೈದನೇ ಸ್ಥಾನದಲ್ಲಿದೆ. ೨೦೦೧ರ ಜನಗಣತಿಯ ಪ್ರಕಾರ, ಪರಿಶಿಷ್ಟ ಜಾತಿಯವರ ತಾಲೂಕುವಾರು ಸಾಕ್ಷರತಾ ಪ್ರಮಾಣವನ್ನು ಕೋಷ್ಟಕ ೧೬.೧೩ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೧೩**

| ಕ್ರ. ಸಂ. | ತಾಲೂಕು | ಒಟ್ಟು ಜನಸಂಖ್ಯೆ | ಪ.ಜಾ.ಯವರ ಸಂಖ್ಯೆ | ಅಕ್ಷರಸ್ಥರು | | | ಸಾಕ್ಷರತೆ ಪ್ರಮಾಣ | | |
|---|---|---|---|---|---|---|---|---|---|
| | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | **ಚಾಮರಾಜನಗರ** | ೩೩೭೫೭೧ | ೭೮೭೫೫ | ೧೩೯೮೫ | ೭೨೪೨ | ೨೧೨೨೭ | ೫೫.೯೨ | ೨೦.೧೪ | ೨೮.೩೪ |
| ೨ | **ಗುಂಡ್ಲುಪೇಟೆ** | ೨೧೩೦೮೨ | ೪೦೭೨೮ | ೮೮೨೭ | ೩೩೦೮ | ೧೦೧೩೫ | ೩೪.೬೫ | ೧೭.೧೭ | ೨೬.೦೧ |
| ೩ | **ಕೊಳ್ಳೇಗಾಲ** | ೩೩೬೮೩೮ | ೯೧೫೯೨ | ೧೫೨೨೨ | ೮೨೪೯ | ೨೩೪೭೧ | ೩೪.೫೪ | ೨೦.೩೫ | ೨೭.೭೪ |
| ೪ | **ಯಳಂದೂರು** | ೭೭೯೭೧ | ೨೬೫೪೯ | ೪೯೧೨ | ೩೦೩೨ | ೭೯೪೪ | ೩೭.೨೬ | ೨೩.೯೦ | ೩೦.೧೭ |
| | ಒಟ್ಟು | **೯೬೫೪೬೨** | **೨೩೭೬೨೪** | **೪೨೯೪೬** | **೨೧೮೩೧** | **೬೨೭೭೭** | **೩೫.೩೩** | **೨೦.೧೩** | **೨೭.೯೮** |

***(ಮಾಹಿತಿ: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಚಾಮರಾಜನಗರ)***

ರಾಜ್ಯದ ಎಲ್ಲಾ ಪರಿಶಿಷ್ಟ ಜಾತಿಯ ಪ್ರಗತಿಗಾಗಿ ಸರ್ಕಾರವು, ೧೯೫೧ರಿಂದ ೧೯೫೬ರ ವರೆಗಿನ ಮೊದಲನೇ ಯೋಜನಾವಧಿಯಲ್ಲಿ ₹ ೧೧೫.೯೦ ಲಕ್ಷಗಳನ್ನು ಒದಗಿಸಿದ್ದು, ಈ ಮೊತ್ತವನ್ನು ಹಂತಹಂತವಾಗಿ ಹೆಚ್ಚಿಸುತ್ತ ೨೦೦೭–೦೮ನೇ ಸಾಲಿನಲ್ಲಿ ₹ ೪೦೭೮೪.೫೪ ಲಕ್ಷಗಳನ್ನು ಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿಯೂ, ₹ ೧೮೧೪೨.೩೧ ಲಕ್ಷಗಳನ್ನು ಯೋಜನೇತರ ಕಾರ್ಯಕ್ರಮಗಳಿಗಾಗಿಯೂ ಒದಗಿಸಿರುತ್ತದೆ. ಇದಲ್ಲದೇ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ರಾಜ್ಯದ ಪಾಲು ₹ ೨೮೩೯.೪೯ ಲಕ್ಷ ಹಾಗೂ ಕೇಂದ್ರದ ಪಾಲು ₹ ೧೨೪೨.೦೫ ಲಕ್ಷಗಳು ಆಗಿರುತ್ತವೆ. ಆಯವ್ಯಯದ ಈ ಮೊತ್ತದಂತೆಯೇ ಇವರಿಗಾಗಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳನ್ನೂ ಈ ಜಾತಿಯವರ ಶೈಕ್ಷಣಿಕ, ಆರ್ಥಿಕ ಮತ್ತು ಇತರ ರೀತಿಯ ಬೆಳವಣಿಗೆಗಾಗಿ ಕ್ರಮೇಣ ಹೆಚ್ಚಿಸುತ್ತ ಬರಲಾಗಿದೆ. ಹಲವು ರೀತಿಯ ಉಪಕಾರ್ಯಕ್ರಮಗಳೂ ಜಾರಿಗೊಳ್ಳುತ್ತಿವೆ.

ಚಾಮರಾಜನಗರ ಜಿಲ್ಲೆಯಲ್ಲಿ, ಈ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಹಿಂದಿನ ವರ್ಷಗಳಲ್ಲಿ, ಯೋಜನೆ ಹಾಗೂ ಯೋಜನೇತರ ಲೆಕ್ಕದಲ್ಲಿ ಬಿಡುಗಡೆಯಾದ ಮತ್ತು ಖರ್ಚು ಮಾಡಲ್ಪಟ್ಟ ಹಣದ ವಿವರಗಳನ್ನು ಕೋಷ್ಟಕ ೧೬.೧೪ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೧೪: ಚಾಮರಾಜನಗರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಯೋಜನೆ ಹಾಗೂ ಯೋಜನೇತರ ಲೆಕ್ಕದಲ್ಲಿ ಬಿಡುಗಡೆಯಾದ ಮತ್ತು ಖರ್ಚು ಮಾಡಲ್ಪಟ್ಟ ಹಣದ ವಿವರಗಳು (₹ ಲಕ್ಷಗಳಲ್ಲಿ)**

| ಕಾರ್ಯಕ್ರಮದ ವಿವರ | ೨೦೦೬-೦೭ | | | ೨೦೦೭-೦೮ | | | ೨೦೦೮-೦೯ | | |
|---|---|---|---|---|---|---|---|---|---|
| | ನಿಗದಿ | ಬಿಡುಗಡೆ | ಖರ್ಚು | ನಿಗದಿ | ಬಿಡುಗಡೆ | ಖರ್ಚು | ನಿಗದಿ | ಬಿಡುಗಡೆ | ಖರ್ಚು |
| ಯೋಜನೆ | ೩೬೮.೮೪ | ೪೧೩.೭೭ | ೩೯೪.೯೦ | ೪೭೭.೭೫ | ೪೬೧.೬೪ | ೪೨೬.೧೪ | ೫೭೪.೯೭ | ೪೮೫.೭೮ | ೪೬೦.೯೩ |
| ಯೋಜನೇತರ | ೪೨೪.೦೦ | ೪೪೬.೧೭ | ೪೪೪.೦೧ | ೫೯೬.೪೮ | ೬೧೯.೪೭ | ೬೦೪.೯೬ | ೬೮೦.೨೯ | ೬೯೯.೪೭ | ೬೪೪.೪೭ |
| ಒಟ್ಟು | ೭೯೨.೮೪ | ೮೫೯.೯೪ | ೮೩೮.೯೧ | ೧೦೭೪.೨೩ | ೧೦೮೧.೧೧ | ೧೦೩೧.೧ | ೧೨೫೫.೨೬ | ೧೧೮೫.೨೫ | ೧೧೦೫.೪ |

ಮುಂದುವರೆದಿದೆ

| ಕಾರ್ಯಕ್ರಮದ ವಿವರ | ೨೦೦೯-೧೦ | | | ೨೦೧೦-೧೧ | | |
|---|---|---|---|---|---|---|
| | ನಿಗಧಿ | ಬಿಡುಗಡೆ | ಖರ್ಚು | ನಿಗಧಿ | ಬಿಡುಗಡೆ | ಖರ್ಚು |
| ಯೋಜನೆ | ೬೪೭.೫೫ | ೫೯೧.೦೮ | ೪೮೫.೪೪ | ೬೪೬.೯ | ೬೩೬.೯ | ೫೮೩.೧೪ |
| ಯೋಜನೇತರ | ೬೮೮.೬೪ | ೭೦೮.೮೮ | ೬೪೩.೧೬ | ೭೫೯.೩೪ | ೭೭೮.೯೭ | ೭೦೧.೨೭ |
| ಒಟ್ಟು | ೧೩೩೬.೧೯ | ೧೨೯೯.೯೬ | ೧೧೨೮.೬ | ೧೪೦೬.೨೪ | ೧೪೧೫.೮೭ | ೧೨೮೪.೪೧ |

*(ಮಾಹಿತಿ : ಜಿಲ್ಲಾ ಸಮಾಜಕಲ್ಯಾಣಾಧಿಕಾರಿಗಳು, ಚಾಮರಾಜನಗರ ಜಿಲ್ಲೆ)*

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

ಗ್ರಾಮಾಂತರ ಪ್ರದೇಶದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಪ್ರಾಥಮಿಕ ಹಂತದಿಂದ ಕಾಲೇಜು ಹಂತದವರೆಗೆ ವಿದ್ಯಾರ್ಥಿನಿಲಯಗಳಿವೆ. ಸಾಮಾನ್ಯವಾಗಿ ದೂರದ ಹಳ್ಳಿಗಳಿಂದ ಬಂದು ಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಿಲ್ಲದ ವಿದ್ಯಾರ್ಥಿಗಳಿಗೆ ಈ ವಸತಿ ನಿಲಯಗಳಲ್ಲಿ ಉಚಿತವಾಗಿ ಊಟ, ವಸತಿ ಹಾಗೂ ಇತರೆ ಸೌಲಭ್ಯವನ್ನು ಒದಗಿಸಲಾಗುವುದು.

ಜಿಲ್ಲೆಯಲ್ಲಿ ೨೯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳನ್ನೂ, ಮತ್ತು ೧೧ ಬಾಲಕಿಯರ ನಿಲಯಗಳನ್ನೂ ನಡೆಸಲಾಗುತ್ತಿದೆ. ಸರ್ಕಾರದಿಂದ ನಡೆಸುವ ನಿಲಯಗಳಲ್ಲದೆ ಪರಿಶಿಷ್ಟ ಜಾತಿಯವರಿಗಾಗಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಮೆಟ್ರಿಕ್ ಪೂರ್ವ ನಿಲಯಗಳೂ ಇದ್ದು ಇವಗಳಿಗೆ ಉತ್ತೇಜನ ನೀಡಲು, ಸರ್ಕಾರವು ಧನ ಸಹಾಯ ನೀಡುತ್ತದೆ. ಜಿಲ್ಲೆಯಲ್ಲಿರುವ ಮೆಟ್ರಿಕ್ ಪೂರ್ವ ನಿಲಯಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯಾವಾರು ವಿವರಗಳನ್ನು ಕೋಷ್ಟಕ ೧೬.೧೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೫: ೨೦೧೦-೧೧ನೇ ಸಾಲಿನಲ್ಲಿದ್ದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯಾವಾರು ವಿವರಗಳು (ಯೋಜನೆ + ಯೋಜನೇತರ)**

| ಕ್ರ.ಸಂ. | ತಾಲೂಕಿನ ಹೆಸರು | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ೧ | ಚಾಮರಾಜನಗರ | ೧೧ | ೩ | ೧೪ | ೭೬೦ | ೨೭೦ | ೧೦೩೦ |
| ೨ | ಗುಂಡ್ಲುಪೇಟೆ | ೫ | ೩ | ೮ | ೩೬೦ | ೨೪೦ | ೬೦೦ |
| ೩ | ಕೊಳ್ಳೇಗಾಲ | ೯ | ೪ | ೧೩ | ೮೮೦ | ೪೦೦ | ೧೨೮೦ |
| ೪ | ಯಳಂದೂರು | ೪ | ೧ | ೫ | ೩೩೦ | ೧೧೫ | ೪೪೫ |
| | ಒಟ್ಟು | ೨೯ | ೧೧ | ೪೦ | ೨೩೩೦ | ೧೦೨೫ | ೩೩೫೫ |

*(ಮಾಹಿತಿ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ಗ್ರಾಮಾಂತರ ಪ್ರದೇಶಗಳಿಂದ ಬಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲ ಮಾಡಿಕೊಡುವುದಕ್ಕಾಗಿ ಇಲಾಖಾವತಿಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ಈ ಜಿಲ್ಲೆಯಲ್ಲಿ ಒಂಬತ್ತು ಬಾಲಕರ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳೂ ಹಾಗೂ ಆರು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳೂ ಇರುತ್ತವೆ. ಈ ನಿಲಯಗಳ ಮತ್ತು ನಿಲಯಾರ್ಥಿಗಳ ತಾಲೂಕುವಾರು ವಿವರಗಳನ್ನು ಕೋಷ್ಟಕ ೧೬.೧೬ರಲ್ಲಿ ಕಾಣಬಹುದು.

**ಕೋಷ್ಟಕ ೧೬.೧೬: ಜಿಲ್ಲೆಯಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ**

| ಕ್ರ.ಸಂ. | ತಾಲೂಕಿನ ಹೆಸರು | ಮೆಟ್ರಿಕ್ ನಂತರೆದ ವಿದ್ಯಾರ್ಥಿನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ೧ | ಚಾಮರಾಜನಗರ | ೫ | ೨ | ೭ | ೧೧೪೬ | ೨೩೭ | ೧೩೮೩ |
| ೨ | ಗುಂಡ್ಲುಪೇಟೆ | ೧ | ೧ | ೨ | ೧೦೭ | ೧೨೨ | ೨೨೯ |
| ೩ | ಕೊಳ್ಳೇಗಾಲ | ೩ | ೩ | ೬ | ೭೮೧ | ೨೯೮ | ೧೦೭೯ |
| ೪ | ಯಳಂದೂರು | – | – | – | – | – | – |
| | ಒಟ್ಟು | ೯ | ೬ | ೧೫ | ೨೦೩೪ | ೬೫೭ | ೨೬೯೧ |

*(ಮಾಹಿತಿ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಕೋಷ್ಟಕ ೧೬.೧೭: ಪರಿಶಿಷ್ಟ ಜಾತಿಯವರಿಗಾಗಿ ಜಿಲ್ಲೆಯಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ೨೦೦೫–೦೬ರಿಂದ ೨೦೧೦–೧೧ರ ವರೆಗಿನ ವರ್ಷಗಳಲ್ಲಿ ಪ್ರಯೋಜನ ಪಡೆದವರ ಮತ್ತು ಖರ್ಚಿನ ವಿವರಗಳು (ಯೋಜನೆ+ಯೋಜನೇತರ)**

| ಕ್ರ ಸಂ | ವರ್ಷ | ಮೆಟ್ರಿಕ್ ನಂತರದ ನಿಲಯಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | | ವೆಚ್ಚ (ಲಕ್ಷ ' ಗಳಲ್ಲಿ) | | |
|---|---|---|---|---|---|---|---|---|
| | | | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ೧ | ೨೦೦೫–೦೬ | ೮ | ೪ | ೧೨ | ೧೦೦೦ | ೧೮೫ | ೧೧೮೫ | ೫೩.೩೩ |
| ೨ | ೨೦೦೬–೦೭ | ೮ | ೪ | ೧೨ | ೧೦೩೦ | ೨೧೯ | ೧೨೪೯ | ೩೬.೨೧ |
| ೩ | ೨೦೦೭–೦೮ | ೮ | ೪ | ೧೨ | ೧೦೩೦ | ೨೨೨ | ೧೨೫೨ | ೫೬.೩೪ |
| ೪ | ೨೦೦೮–೦೯ | ೧೦ | ೫ | ೧೫ | ೧೧೯೧ | ೪೨೪ | ೧೬೧೫ | ೧೨೧.೫೦ |
| ೫ | ೨೦೦೯–೧೦ | ೧೦ | ೫ | ೧೫ | ೧೨೯೨ | ೪೩೮ | ೧೭೩೦ | ೧೨೯.೭೯ |
| ೬ | ೨೦೧೦–೧೧ | ೧೦ | ೫ | ೧೫ | ೧೩೪೩ | ೪೯೭ | ೧೮೪೦ | ೧೫೬.೪೦ |

*(ಮಾಹಿತಿ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಇದು ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮವಾಗಿದ್ದು, ಭಾರತ ಸರ್ಕಾರದ ನಿಯಮಾವಳಿಯನ್ವಯ ಕುಟುಂಬದ ವಾರ್ಷಿಕ ವರಮಾನ ಒಂದು ಲಕ್ಷಕ್ಕಿಂತ ಹೆಚ್ಚಿಲ್ಲದ ಎಲ್ಲ ಅರ್ಹ ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ನಿರ್ವಹಣಾ ವೆಚ್ಚ ಭರಿಸಲು ಹಾಗೂ ಶುಲ್ಕ ಮರು ಪಾವತಿಸುವ ಸಲುವಾಗಿ ಪೂರ್ಣ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ಈ ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳು ಓದುತ್ತಿರುವ ತರಗತಿಯ ಮಟ್ಟಕ್ಕನುಸಾರವಾಗಿ ನಿಗದಿತವಾಗಿರುವ ದರಗಳಲ್ಲಿ ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸ್‌ಗಳಿಗೆ ನಿಗದಿಸಿರುವ ವಿದ್ಯಾರ್ಥಿ ವೇತನದ ತಿಂಗಳ ದರಗಳನ್ನು ಕೋಷ್ಟಕ–೧೮ರಲ್ಲಿ  ನೀಡಲಾಗಿದೆ.

**ಕೋಷ್ಟಕ ೧೬.೧೮: ವಿವಿಧ ಕೋರ್ಸ್‌ಗಳಿಗೆ ನಿಗದಿಸಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ತಿಂಗಳ ದರಗಳು**

| ಕೋರ್ಸ್‌ಗಳ ವಿವರ | ನಿಲಯಾರ್ಥಿಗಳಲ್ಲದವರಿಗೆ (₹ ಗಳಲ್ಲಿ) | ನಿಲಯಾರ್ಥಿಗಳಿಗೆ (₹ ಗಳಲ್ಲಿ) |
|---|---|---|
| ಗ್ರೂಪ್ ೧: ವೈದ್ಯಕೀಯ, ತಾಂತ್ರಿಕ(ಬಿ.ಇ.), ವ್ಯವಸಾಯ(ಬಿ.ಎಸ್.ಸಿ.,ಎಜಿ), ಪಶುವೈದ್ಯ, (ಬಿ.ಡಿ.ಎಸ್. ಮುಂತಾದುವು, (ಎಂ.ಫಿಲ್ ಹಾಗೂ ಪಿಎಚ್.ಡಿ.ಗಳೂ ಸೇರಿದಂತೆ) | ೩೩೦ | ೭೪೦ |
| ಗ್ರೂಪ್೨: ಮೊದಲನೇ ಗ್ರೂಪ್‌ನಲ್ಲಿ ಸೇರದಿರುವ ವಿಜ್ಞಾನ, ವಾಣಿಜ್ಯ, ಕಲೆ ಮುಂತಾದ ಸ್ನಾತಕೋತ್ತರ ಪದವಿ ಕೋರ್ಸ್‌ಗಳು   ಹಾಗೂ ಇತರ ಡಿಪ್ಲಮೊ ಕೋರ್ಸ್‌ಗಳು ಮುಂತಾದುವು. | ೩೩೦ | ೫೧೦ |
| ಗ್ರೂಪ್ ೩: ಪದವಿ ಕೋರ್ಸ್‌ಗಳು (ಬಿ.ಎ.,ಬಿ.ಕಾಂ, ಬಿ.ಎಸ್.ಸಿ, ಇತ್ಯಾದಿ) | ೧೮೫ | ೩೫೫ |
| ಗ್ರೂಪ್ ೪: ಇತರ ಸಾಮಾನ್ಯ ವೃತ್ತಿಪರ ಪದವಿ ಕೋರ್ಸ್‌ಗಳು ಮತ್ತು ಪಿ.ಯು.ಸಿ | ೧೪೦ | ೨೩೫ |

*(ಮಾಹಿತಿ : ಇಲಾಖೆಯ ವಾರ್ಷಿಕ ವರದಿ)*

## ಪ್ರತಿಭಾ ಪುರಸ್ಕಾರ ಬಹುಮಾನ

ವಿದ್ಯಾರ್ಥಿಗಳಿಗೆ ಓದಿನಲ್ಲಿ ಉತ್ಸಾಹ ಹೆಚ್ಚಿಸಲು ಮತ್ತು ಚೆನ್ನಾಗಿ ಓದುವವರಿಗೆ ಉತ್ತೇಜನ ನೀಡಿ ಓದು ಮುಂದುವರಿಸುವಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಮೂಡಿಸುವ ಉದ್ದೇಶದಿಂದ, ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ, ಆಯಾ ತರಗತಿಗಳಿಗೆ ಸರ್ಕಾರವು ನಿಗದಿಪಡಿಸಿದ ದರಗಳಲ್ಲಿ ಬಹುಮಾನವನ್ನು ನೀಡಲಾಗುತ್ತದೆ. ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸರ್ಕಾರವು ನಿಗದಿಪಡಿಸಿರುವ ಬಹುಮಾನದ ದರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ. ೨೦೧೦–೧೧ರ ವರ್ಷದಲ್ಲಿ ಈ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೧೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೯: ೨೦೧೦–೧೧ನೇ ಸಾಲಿನಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರಗಳು**

| ಕ್ರ. ಸಂ | ಪರೀಕ್ಷೆಗಳ ವಿವರ | ನಿಗದಿತ ಬಹುಮಾನದ ಮೊತ್ತ ₹ ಗಳಲ್ಲಿ | ಖರ್ಚಾದ ಮೊತ್ತ ಲಕ್ಷ ₹ ಗಳಲ್ಲಿ | ಫಲಾನುಭವಿಗಳ ಸಂಖ್ಯೆ |
|---|---|---|---|---|
| ೧ | ಎಸ್.ಎಸ್.ಎಲ್.ಸಿ. | ೫೦೦ | – | – |
| ೨ | ಎರಡನೇ ಪಿ.ಯು.ಸಿ/ಮೂರು ವರ್ಷದ ಡಿಪ್ಲಮೊ | ೭೫೦ | ೨.೬೪ | ೩೫೩ |
| ೩ | ಪದವಿ ಪರೀಕ್ಷೆಗಳು | ೧೦೦೦ | ೦.೪೫ | ೪೫ |
| ೪ | ಸ್ನಾತಕೋತ್ತರ ಪದವಿಗಳು | ೧೨೫೦ | ೦.೦೯ | ೬ |
| ೫ | ವೈದ್ಯಕೀಯ | ೧೫೦೦ | – | – |
| ೬. | ತಾಂತ್ರಿಕ ಪದವಿ, ವ್ಯವಸಾಯ ಮತ್ತು ಪಶುವೈದ್ಯಕೀಯ, ಇಂಜಿನಿಯರಿಂಗ್, ವೈದ್ಯಕೀಯ ಪದವಿಗಳು | ೧೫೦೦ | – | – |

*(ಮಾಹಿತಿ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಪಡೆಯಲು ಅನರ್ಹರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲವಾಗುವಂತೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಖಾಸಗಿ ಅಥವಾ ಸರ್ಕಾರಿ ನಿಲಯಗಳಲ್ಲಿ ನಿಲಯಾರ್ಥಿಗಳಾಗಿಲ್ಲದ ವಿದ್ಯಾರ್ಥಿಗಳಿಗೆ, ಇಲಾಖೆಯ ಮೂಲಕ ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸ್‌ಗಳಿಗೆ ವಿವಿಧ ವಿದ್ಯಾರ್ಥಿ ವೇತನದ ಮೊತ್ತವನ್ನು ನಿಗದಿಸಲಾಗಿದ್ದು, ತಿಂಗಳಿಗೆ ₹ ೭೫ ರಿಂದ ₹ ೧೦೦ರ ವರೆಗೆ ವಿದ್ಯಾರ್ಥಿಗಳ ತರಗತಿಗಳಿಗನುಸಾರವಾಗಿ ನೀಡಲಾಗುತ್ತದೆ. ೨೦೦೯–೧೦ ಮತ್ತು ೨೦೧೦–೧೧ರ ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೨೦ ರಲ್ಲಿ ನೀಡಲಾಗಿದೆ.

## ಅನೈರ್ಮಲ್ಯ ಕಸುಬುಗಳಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಲ್ಲಿ ಚರ್ಮ ಹದ ಮಾಡುವ, ಚರ್ಮ ಸುಲಿಯುವ, ಕಸ ಗುಡಿಸುವ ಮತ್ತು ಇತರ ರೀತಿಯ ಅನೈರ್ಮಲ್ಯ ಕಸುಬುಗಳನ್ನು ಮಾಡುವವರ ಮಕ್ಕಳು, ಉತ್ತಮ ವಿದ್ಯಾಭ್ಯಾಸವನ್ನು ಹೊಂದಲು ಮತ್ತು ವಿದ್ಯೆ ಗಳಿಸುವಲ್ಲಿ ಅವರಿಗೆ ಆರ್ಥಿಕವಾಗಿ ನೆರವಾಗಲು, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ಇಲಾಖೆಯ ನಿಲಯಾರ್ಥಿಗಳಲ್ಲದವರಿಗೆ, ಒಂದರಿಂದ ಐದನೇ ತರಗತಿಯ ವಿದ್ಯಾರ್ಥಿಗಳಿಗೆ ತಿಂಗಳಿಗೆ ₹ ೪೦ ; ಆರರಿಂದ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ತಿಂಗಳಿಗೆ ₹ ೬೦; ಒಂಬತ್ತರಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ತಿಂಗಳಿಗೆ ₹ ೭೫ ರಂತೆ ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಹತ್ತು ತಿಂಗಳ ಅವಧಿಗೆ ಮಂಜೂರು ಮಾಡಲಾಗುತ್ತದೆ. ನಿಲಯಾರ್ಥಿಗಳಾಗಿದ್ದರೆ ಮೂರನೇ ತರಗತಿಯಿಂದ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ತಿಂಗಳಿಗೆ ₹ ೩೦೦; ಒಂಭತ್ತನೇ ತರಗತಿಯಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ತಿಂಗಳಿಗೆ ₹ ೩೭೫ ರಂತೆ ಹತ್ತು ತಿಂಗಳ ಅವಧಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ. ೨೦೦೯–೧೦ ಮತ್ತು ೨೦೧೦–೧೧ರ ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೨೦ ರಲ್ಲಿ ನೀಡಲಾಗಿದೆ.

## ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು

ಚಿಕ್ಕ ವಯಸ್ಸಿನಲ್ಲಿಯೇ ಶಾಲೆಗೆ ಹೋಗುವ ಅಭ್ಯಾಸ, ಅಕ್ಷರಾಭ್ಯಾಸ ಮತ್ತು ಕ್ರಮಬದ್ಧವಾಗಿ ಸರಿಯಾದ ಸಮಯಕ್ಕೆ ಆಹಾರ ಸೇವಿಸುವ ಅಭ್ಯಾಸಗಳನ್ನು ರೂಢಿಸಲು, ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳನ್ನು ಇಲಾಖೆಯು ನಡೆಸುತ್ತಿದೆ. ಮೂರರಿಂದ ಐದು ವರ್ಷ ವಯಸ್ಸಿನೊಳಗಿನ ಮಕ್ಕಳನ್ನು ಇಲ್ಲಿ ದಾಖಲಿಸಿಕೊಳ್ಳಲಾಗುತ್ತದೆ. ಪ್ರತಿ ಕೇಂದ್ರದಲ್ಲಿ ಐವತ್ತು ಮಕ್ಕಳಿಗೆ ಪ್ರವೇಶ ನೀಡಲಾಗುತ್ತದೆ. ಈ ಕೆಂದ್ರಗಳಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ನೀಡಲಾಗುತ್ತದೆ. ಅಲ್ಲದೆ ಪ್ರತಿ ಮಧ್ಯಾಹ್ನ ಉಪಹಾರವನ್ನೂ, ಸೋಪು ಮತ್ತು ಎಣ್ಣೆ ಹಾಗೂ ವರ್ಷಕ್ಕೆ ಎರಡು ಜೊತೆ ಉಡುಪುಗಳನ್ನು ಮಕ್ಕಳ ಬಳಕೆಗೆ ಉಚಿತವಾಗಿ ನೀಡಲಾಗುತ್ತದೆ. ೨೦೦೯–೧೦ ಮತ್ತು ೨೦೧೦–೧೧ರ ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೨೦ರಲ್ಲಿ ನೀಡಲಾಗಿದೆ.

## ಶೈಕ್ಷಣಿಕ ಪ್ರವಾಸಕ್ಕೆ ನೆರವು

ಶೈಕ್ಷಣಿಕ ಪ್ರವಾಸವು ಕಡ್ಡಾಯವಾಗಿದ್ದು, ಹಣವಿಲ್ಲದೇ ಈ ಪ್ರವಾಸದಿಂದ ದೊರೆಯುವ ಅನುಭವ ಮತ್ತು ಜ್ಞಾನವನ್ನು ಪಡೆಯದೇ ಉಳಿಯುವಂತಾಗಬಾರದೆಂಬ ದೃಷ್ಟಿಯಿಂದ, ತಾಂತ್ರಿಕ ಮತ್ತು ಇತರ ವೃತ್ತಿ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ, ಪ್ರವಾಸ ಕಡ್ಡಾಯವಾಗಿದ್ದರೆ, ಒಂದು ಸಾವಿರ ರೂಪಾಯಿಗಳಿಗೆ ಮೀರದಂತೆ ಈ ಕಾರ್ಯಕ್ರಮದಡಿ ಅಧ್ಯಯನ ಪ್ರವಾಸ ವೆಚ್ಚವೆಂದು ಮಂಜೂರು ಮಾಡಲಾಗುತ್ತದೆ. ೨೦೦೯–೧೦ ಮತ್ತು ೨೦೧೦–೧೧ರ ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೨೦ರಲ್ಲಿ ನೀಡಲಾಗಿದೆ.

## ಕಾನೂನು ಪದವೀಧರರಿಗೆ ಶಿಷ್ಯವೇತನ ಹಾಗೂ ವಕೀಲ ವೃತ್ತಿ ಆರಂಭಿಸಲು ಧನ ಸಹಾಯ

ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧಿಕರಣದಲ್ಲಿ ಹೆಚ್ಚಿನ ಜ್ಞಾನ ಹೊಂದುವಂತೆ ಮಾಡಲು, ಪ್ರತಿ ಮಾಸಿಕ ₹ ಒಂದು ಸಾವಿರಗಳಂತೆ ಶಿಷ್ಯವೇತನವನ್ನು ನೀಡಿ, ನಾಲ್ಕು ವರ್ಷಗಳ ಕಾಲ ತರಬೇತಿ ನೀಡಲಾಗುತ್ತದೆ. ಸ್ವತಂತ್ರವಾಗಿ ವಕೀಲಿ ವೃತ್ತಿ ಪ್ರಾರಂಭಿಸುವುದಕ್ಕೆ ಮತ್ತು ಈ ಸಂಬಂಧ ವಕೀಲರ ಸಂಘದಲ್ಲಿ ಹೆಸರು ನೋಂದಾಯಿಸಿಕೊಳ್ಳಲು, ಕಾನೂನು ಗ್ರಂಥಗಳನ್ನು ಕೊಳ್ಳಲು ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಒಂದು ಸಲ ಐದು ಸಾವಿರ ರೂಪಾಯಿಗಳ ಸಹಾಯ ಧನ ನೀಡುವ ಕಾರ್ಯಕ್ರಮವೂ ಜಾರಿಯಲ್ಲಿದೆ. ಈ ಕಾರ್ಯಕ್ರಮವನ್ನು ೧೯೭೮–೭೯ನೇ ಸಾಲಿನಿಂದ ಈ ಜಿಲ್ಲೆಯಲ್ಲಿ ಜಾರಿಗೊಳಿಸಲಾಗುತ್ತಿದೆ. ೨೦೦೯–೧೦ ಮತ್ತು ೨೦೧೦–೧೧ರ ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೨೦ರಲ್ಲಿ ನೀಡಲಾಗಿದೆ.

## ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಾಮಗ್ರಿಗಳನ್ನು ಒದಗಿಸುವುದು:

ತಾಂತ್ರಿಕ ತರಗತಿಗಳಲ್ಲಿ ಓದುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅಗತ್ಯ ಸಾಧನ–ಸಾಮಗ್ರಿಗಳನ್ನು ಕೊಂಡುಕೊಳ್ಳುವುದರಲ್ಲಿ ಆಗಬಹುದಾದ ಸಮಸ್ಯೆಗಳನ್ನು ತಪ್ಪಿಸಲು ಮತ್ತು ನಿರಾಳವಾಗಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು, ಡ್ರಾಯಿಂಗ್ ಬೋರ್ಡ್, ಕ್ಯಾಲ್ಕುಲೇಟರ್ ಮುಂತಾಗಿ ಅವರ ಓದಿಗೆ ಅವಶ್ಯಕವಾದ ಪರಿಕರಗಳನ್ನು, ಮೊದಲ ವರ್ಷದ ವಿದ್ಯಾರ್ಥಿಗಳಿಗೆ, ₹ ೭೦೦ರ ಮಿತಿಗೆ ಒಳಪಟ್ಟು ಸರಬರಾಜು ಮಾಡುವ ಕಾರ್ಯಕ್ರಮವೂ ಈ ಇಲಾಖೆಯಲ್ಲಿದೆ.

**ಕೋಷ್ಟಕ ೧೬.೨೦: ೨೦೦೯–೧೦ ಮತ್ತು ೨೦೧೦–೧೧ನೇ ಸಾಲುಗಳಲ್ಲಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿ ವೇತನ ಮತ್ತು ಇತರ ಸೌಲಭ್ಯಗಳ ವಿವರಗಳು**

| ಕ್ರ. ಸಂ. | ಯೋಜನೆಯ ಹೆಸರು | ೨೦೦೯–೧೦ | | ೨೦೧೦–೧೧ | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ ₹ ಲಕ್ಷಗಳಲ್ಲಿ | ಫಲಾನುಭವಿಗಳು | ವೆಚ್ಚ ₹ ಲಕ್ಷಗಳಲ್ಲಿ |
| ೧ | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | ೪೦೫೨೦ | ೩೪.೦೫ | ೩೦೧೧೦ | ೩೩.೧೪ |
| ೨ | ಪ್ರತಿಭಾ ವಿದ್ಯಾರ್ಥಿ ವೇತನ | – | – | – | – |
| ೩ | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | ೬೭೦೨ | ೩೨೬.೫೩ | ೭೪೩೩ | ೩೭೭.೪೫ |
| ೪ | ಎಸ್.ಎಸ್.ಎಲ್.ಸಿ.ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನಗಳು | – | – | – | – |
| ೫ | ವಿದ್ಯಾರ್ಥಿಗಳ ಊಟ ವಸತಿಗಾಗಿ ಮಾಡಿದ ವೆಚ್ಚ | ೧೭೨೩ | – | ೧೬೦೮ | ೫೬.೨೯ |
| ೬ | ಒಂದರಿಂದ ನಾಲ್ಕನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಮಾಡಿದ ವೆಚ್ಚ | – | – | – | – |
| ೭ | ನರ್ಸರಿ ಮತ್ತು ಮಹಿಳಾ ಕೇಂದ್ರಗಳು | – | ೧೫.೧೮ | – | ೧೩.೩೪ |
| ೮ | ವಸತಿ ಶಾಲೆಗಳು | – | – | – | – |
| ೯ | ಕಾಲೇಜು ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನಗಳು | ೩೯೫ | ೩.೧೨ | ೪೦೪ | ೩.೧೮ |
| ೧೦ | ಅನೈರ್ಮಲ್ಯ ಉದ್ಯೋಗಗಳಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | ೨೮೦ | ೪.೮೭ | ೧೫೭ | ೨.೯೮ |
| ೧೧ | ಶೈಕ್ಷಣಿಕ ಪ್ರವಾಸ | ೬೨೧ | ೫.೧೫ | ೫೪೮ | ೫.೯೬ |
| ೧೨ | ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಾಮಗ್ರಿಗಳು | – | – | – | – |
| ೧೩ | ಕಾನೂನು ಪದವೀಧರರಿಗೆ ಶಿಷ್ಯವೇತನ ಹಾಗೂ ವಕೀಲ ವೃತ್ತಿ ಆರಂಭಿಸಲು ಧನ ಸಹಾಯ: | ೯೩ | ೧೨.೪೨ | – | – |
| ೧೪ | ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು: | ೧೪೮೧ | ೫.೩೨ | ೨೦೫ | ೭.೩೨ |

*(ಮಾಹಿತಿ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಕಾನೂನು ನೆರವು ಸಮಿತಿ

ಈ ಸಮಿತಿಯು ೧೯೯೮–೯೯ನೇ ಸಾಲಿನಿಂದ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕಾಗಿ ಮಾಡಿದ ವೆಚ್ಚ ಮತ್ತು ಸೌಕರ್ಯ ಪಡೆದ ಫಲಾನುಭವಿಗಳ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೋಡಬಹುದಾಗಿದೆ. ಈ ಯೋಜನೆಯಡಿ ವಕೀಲರ ವಕಾಲತ್ತು ಶುಲ್ಕ ಮತ್ತು ಕೋರ್ಟ್ ಸ್ಟ್ಯಾಂಪ್ ಶುಲ್ಕದ ವೆಚ್ಚವನ್ನು ಭರಿಸಲಾಗುತ್ತದೆ.

**ಕೋಷ್ಟಕ ೧೬.೨೧: ೨೦೦೫-೦೬, ೨೦೦೬-೦೭ ಮತ್ತು ೨೦೦೭-೦೮ನೇ ಸಾಲುಗಳಲ್ಲಿ ಈ ಕಾರ್ಯಕ್ರಮಕ್ಕಾಗಿ ಮಾಡಿದ ಖರ್ಚು ಮತ್ತು ಫಲಾನುಭವಿಗಳ ವಿವರಗಳು.**

| ಕ್ರ. ಸಂ. | ವರ್ಷ | ಫಲಾನುಭವಿಗಳ ಸಂಖ್ಯೆ | ವೆಚ್ಚ ₹ ಗಳಲ್ಲಿ |
|---|---|---|---|
| ೧ | ೨೦೦೫-೦೬ | ೬ | ೦.೭೦ |
| ೨ | ೨೦೦೬-೦೭ | ೧೬ | ೨.೨೮ |
| ೩ | ೨೦೦೭-೦೮ | ೨೮ | ೬.೮೦ |

*(ಮಾಹಿತಿ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

ಅಸ್ಪೃಶ್ಯತೆಯ ನಿವಾರಣೆಗೆ ಸರ್ಕಾರವು ಕೆಲವು ಕಾರ್ಯಕ್ರಮಗಳನ್ನು ಯೋಜಿಸಿ ಈ ಇಲಾಖೆಯ ಮೂಲಕ ಜಾರಿಗೆ ತರುತ್ತಿದೆ. ಇವುಗಳಲ್ಲಿ ಅಂತರ್ಜಾತಿ ವಿವಾಹಿತ ದಂಪತಿಗಳಿಗೆ ಧನ ಸಹಾಯ ಹಾಗೂ ದೌರ್ಜನ್ಯಕ್ಕೆ ಒಳಗಾದವರಿಗೆ ಧನ ಸಹಾಯ ನೀಡುವ ಎರಡು ಕಾರ್ಯಕ್ರಮಗಳಿವೆ.

## ದೌರ್ಜನ್ಯಕ್ಕೆ ಒಳಗಾದವರಿಗೆ ಧನ ಸಹಾಯ

೧೯೯೭ರ ಅಕ್ಟೋಬರ್ ಹದಿನಾಲ್ಕರ ಸರ್ಕಾರಿ ಆದೇಶದನ್ವಯ ಪರಿಶಿಷ್ಟ ಜಾತಿಯವರಿಗೆ ₹ ೨೫,೦೦೦ ಗಳಿಂದ ₹ ಎರಡು ಲಕ್ಷಗಳ ವರೆಗೆ ನಷ್ಟದ ಪ್ರಮಾಣವನ್ನು ಅನುಸರಿಸಿ, ಧನ ಸಹಾಯವನ್ನು ಮಾಡಲಾಗುತ್ತದೆ. ಈ ಜಿಲ್ಲೆಯಲ್ಲಿ ದೌರ್ಜನ್ಯ ಪ್ರಕರಣದಡಿಯಲ್ಲಿ ದಾಖಲಾದ ಪ್ರಕರಣಗಳು ಮತ್ತು ಮಂಜೂರು ಮಾಡಿದ ಪರಿಹಾರ ಧನದ ವಿವರಗಳನ್ನು ಕೋಷ್ಟಕ ೧೬.೨೨ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೨೨: ಜಿಲ್ಲೆಯಲ್ಲಿ ೨೦೦೫-೦೬ ರಿಂದ ೨೦೧೦-೧೧ನೇ ಸಾಲಿನವರೆಗೆ ದೌರ್ಜನ್ಯ ಪ್ರಕರಣದಡಿಯಲ್ಲಿ ದಾಖಲಾದ ಪ್ರಕರಣಗಳು ಮತ್ತು ಮಂಜೂರು ಮಾಡಿದ ಪರಿಹಾರ ಧನದ ವಿವರಗಳು**

| ತಾಲೂಕು | ೨೦೦೫-೦೬ | | ೨೦೦೬-೦೭ | | ೨೦೦೭-೦೮ | | ೨೦೦೮-೦೯ | | ೨೦೦೯-೧೦ | | ೨೦೧೦-೧೧ | |
|---|---|---|---|---|---|---|---|---|---|---|---|---|
| | ದಾಖಲಾದ ಪ್ರಕರಣಗಳು | ಪರಿಹಾರ ಧನ ₹ ಗಳಲ್ಲಿ | ದಾಖಲಾದ ಪ್ರಕರಣಗಳು | ಪರಿಹಾರ ಧನ ₹ ಗಳಲ್ಲಿ | ದಾಖಲಾದ ಪ್ರಕರಣಗಳು | ಪರಿಹಾರ ಧನ ₹ ಗಳಲ್ಲಿ | ದಾಖಲಾದ ಪ್ರಕರಣಗಳು | ಪರಿಹಾರ ಧನ ₹ ಗಳಲ್ಲಿ | ದಾಖಲಾದ ಪ್ರಕರಣಗಳು | ಪರಿಹಾರ ಧನ ₹ ಲಕ್ಷಗಳಲ್ಲಿ | ದಾಖಲಾದ ಪ್ರಕರಣಗಳು | ಪರಿಹಾರ ಧನ ₹ ಲಕ್ಷಗಳಲ್ಲಿ |
| ಚಾಮರಾಜ ನಗರ | ೪ | ೩೦೦೦೦ | ೨ | ೩೨೦೦೦ | ೨ | ೧೧೫೦೦೦ | – | – | ೧ | ಸುಳ್ಳು ಜಾತಿ ಪ್ರಕರಣದ ತನಿಖೆ ಯಾಗಿದೆ | ೭ | ೧.೨೫ |
| ಗುಂಡ್ಲುಪೇಟೆ | ೪ | ೩೧೦೦೦ | ೧ | ೧೦೦೦೦ | ೨೭ | ೪೯೦೦೦೦ | ೩ | ೨೦೦೦೦ | ೧೧ | ೩.೦೨ | ೧೨ | ೪.೫೫ |
| ಕೊಳ್ಳೇಗಾಲ | ೬ | ೫೦೦೦೦ | ೭ | ೮೮೦೦೦ | ೨ | ೨೩೦೦೦ | ೩ | ೨೦೦೦೦ | ೪ | ೦.೫೭ | ೫ | ೨.೭೪ |
| ಯಳಂದೂರು | – | – | ೨ | ೩೫೦೦೦ | ೨ | ೨೦೦೦೦ | -- | | ೧ | ೦.೧೨ | ೧ | ೦.೧ |
| ಒಟ್ಟು | ೧೪ | ೧೧೧೦೦೦ | ೧೨ | ೧೬೫೦೦೦ | ೩೩ | ೫೬೭೦೦೦ | ೬ | ೪೦೦೦೦ | ೧೭ | ೩.೭೧ | ೨೫ | ೮.೬೪ |

*(ಮಾಹಿತಿ : ಜಿಲ್ಲಾ ಸಮಾಜಕಲ್ಯಾಣಾಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಅಂತರ್ಜಾತಿ ವಿವಾಹಿತ ದಂಪತಿಗಳಿಗೆ ಧನ ಸಹಾಯ

ಅಂತರ್ಜಾತಿ ವಿವಾಹಿತ ದಂಪತಿಗಳ ಪೈಕಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದ ಪಕ್ಷದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ₹ ೫೦,೦೦೦ಗಳ ಪ್ರೋತ್ಸಾಹ ಧನವನ್ನು ಮಂಜೂರು ಮಾಡಲಾಗುತ್ತದೆ. ಈ ಮೊತ್ತದಲ್ಲಿ ₹ ೨೫,೦೦೦ಗಳನ್ನು ನಗದು ರೂಪದಲ್ಲಿಯೂ, ಉಳಿದ ₹ ೨೫,೦೦೦ ಗಳನ್ನು ರಾಷ್ಟ್ರೀಯ ಉಳಿತಾಯ ಪತ್ರದ ರೂಪದಲ್ಲೂ ನೀಡಲಾಗುತ್ತದೆ. ಇದಕ್ಕಾಗಿ ಜಿಲ್ಲಾ ಹಾಗೂ ರಾಜ್ಯ ವಲಯದಲ್ಲಿ ಅನುದಾನವನ್ನು ಕಾಯ್ದಿರಿಸಲಾಗುತ್ತದೆ. (ಈ ಮೊತ್ತವು ಮೊದಲು ₹ ೨೫,೦೦೦ಗಳಿದ್ದು ಈಗ ಇದನ್ನು ₹ ೫೦,೦೦೦ಗಳಿಗೆ ಹೆಚ್ಚಿಸಲಾಗಿದೆ).

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೫–೦೬ನೇ ಸಾಲಿನಿಂದ ೨೦೦೮–೦೯ನೇ ಸಾಲಿನ ಅವಧಿಯಲ್ಲಿ, ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಪ್ರೋತ್ಸಾಹ ಧನ ಮಂಜೂರು ಮಾಡಲಾದ ವಿವರಗಳನ್ನು ಕೋಷ್ಟಕ ೧೬.೨೩ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೨೩: ಜಿಲ್ಲೆಯಲ್ಲಿ ೨೦೦೫–೦೬ನೇ ಸಾಲಿನಿಂದ ೨೦೧೦–೧೧ರವರೆಗೆ ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಮಂಜೂರು ಮಾಡಲಾದ ಪ್ರೋತ್ಸಾಹ ಧನದ ವಿವರಗಳು.**

| ತಾಲೂಕು | ೨೦೦೫–೦೬ | | ೨೦೦೬–೦೭ | | ೨೦೦೭–೦೮ | | ೨೦೦೮–೦೯ | | ೨೦೦೯–೧೦ | | ೨೦೧೦–೧೧ | |
|---|---|---|---|---|---|---|---|---|---|---|---|---|
| | ಫಲಾನುಭವಿ ದಂಪತಿಗಳು | ಮಂಜೂರಾದ ಮೊತ್ತ ₹ ಗಳಲ್ಲಿ | ಫಲಾನುಭವಿ ದಂಪತಿಗಳು | ಮಂಜೂರಾದ ಮೊತ್ತ ₹ ಗಳಲ್ಲಿ | ಫಲಾನುಭವಿ ದಂಪತಿಗಳು | ಮಂಜೂರಾದ ಮೊತ್ತ ₹ ಗಳಲ್ಲಿ | ಫಲಾನುಭವಿ ದಂಪತಿಗಳು | ಮಂಜೂರಾದ ಮೊತ್ತ ₹ ಗಳಲ್ಲಿ | ಫಲಾನುಭವಿ ದಂಪತಿಗಳು | ಮಂಜೂರಾದ ಮೊತ್ತ ₹ ಗಳಲ್ಲಿ | ಫಲಾನುಭವಿ ದಂಪತಿಗಳು | ಮಂಜೂರಾದ ಮೊತ್ತ ₹ ಗಳಲ್ಲಿ |
| ಚಾಮರಾಜ ನಗರ | ೨ | ೫೦೦೦೦ | ೩ | ೭೫೦೦೦ | ೯ | ೨೨೫೦೦೦ | ೨ | ೫೦೦೦೦ | ೧೨ | ೨೫೦೦೦೦ | ೧೨ | ೨೧೦೦೦೦ |
| ಗುಂಡ್ಲುಪೇಟೆ | ೨ | ೫೦೦೦೦ | ೬ | ೧೫೦೦೦ | ೫ | ೧೫೦೦೦೦ | – | – | ೧ | ೨೦೦೦೦ | ೧ | ೨೦೦೦೦ |
| ಕೊಳ್ಳೇಗಾಲ | ೭ | ೧೭೫೦೦೦ | ೪ | ೧೦೦೦೦ | ೧೦ | ೨೫೦೦೦೦ | ೧ | ೨೫೦೦೦ | ೧೧ | ೨೦೦೦೦೦ | ೧೨ | ೨೧೫೦೦೦ |
| ಯಳಂದೂರು | – | – | ೧ | ೨೫೦೦೦೦ | ೪ | ೧೦೦೦೦೦ | – | – | ೧ | ೨೦೦೦೦ | ೮ | ೧೩೦೦೦೦ |
| ಒಟ್ಟು | ೧೧ | ೨೭೫೦೦೦ | ೧೪ | ೩೫೦೦೦೦ | ೨೮ | ೭೨೫೦೦೦ | ೩ | ೭೫೦೦೦ | ೨೫ | ೪೯೦೦೦೦ | ೩೩ | ೫೭೫೦೦೦ |

*(ಮಾಹಿತಿ : ಜಿಲ್ಲಾ ಸಮಾಜಕಲ್ಯಾಣಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ವಿಶೇಷ ಘಟಕ ಯೋಜನೆ

ಸಮಾಜದಲ್ಲಿನ ಎಲ್ಲಾ ಜನಾಂಗದವರಿಗೂ ಸಮಾನತೆ ದೊರಕಿಸುವುದು, ಬಡತನ ರೇಖೆಯಿಂದ ಕೆಳಗಿರುವವರನ್ನು ಗುರುತಿಸುವುದು ಹಾಗೂ ಪರಿಶಿಷ್ಟ ಜನಾಂಗದವರ ಸಾಮಾಜಿಕ, ಆರ್ಥಿಕ ಮತ್ತು ಇತರ ಸರ್ವ ರೀತಿಯಲ್ಲಿ ಅಭಿವೃದ್ಧಿಗೊಳಿಸುವುದು ಇವೇ ಮೊದಲಾದ ಉದ್ದೇಶದಿಂದ ಸರ್ಕಾರವು ನಡೆಸುತ್ತಿರುವ ಹಲವಾರು ಪ್ರಯತ್ನಗಳಲ್ಲಿ 'ವಿಶೇಷ ಘಟಕ ಯೋಜನೆ'ಯೂ ಒಂದು. ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳಿಗೆ ಅಭಿವೃದ್ಧಿ ಯೋಜನೆಗಳ ಪ್ರತಿಫಲವನ್ನು ನೇರವಾಗಿ ದೊರಕಿಸಿ ಕೊಡುವ ಉದ್ದೇಶದಿಂದ, ಈ ಯೋಜನೆಯನ್ನು ರೂಪಿಸಲಾಗಿದೆ. ಎಲ್ಲ ಅಭಿವೃದ್ಧಿ ಇಲಾಖೆಗಳು/ನಿಗಮಗಳು ತಮ್ಮ ವಾರ್ಷಿಕ ಯೋಜನಾ ಆಯವ್ಯಯದ ಶೇಕಡ ೧೫ರಷ್ಟು ಭಾಗವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಪುರೋಭಿವೃದ್ಧಿಗಾಗಿ ಮೀಸಲಿಟ್ಟು

ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜನಾಂಗದವರ ಕುಟುಂಬಗಳಿಗೆ ಕುಡಿಯುವ ನೀರಿನ ಪೂರೈಕೆ, ವಿದ್ಯುದೀಕರಣ, ವಸತಿ, ಸಂಪರ್ಕ ರಸ್ತೆಗಳು, ನೀರಾವರಿ, ಆರೋಗ್ಯ, ಶಿಕ್ಷಣ, ಇವೇ ಮುಂತಾದ ಅತ್ಯಗತ್ಯ ಮೂಲಭೂತ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಒದಗಿಸುವ ಯೋಜನೆಯೇ 'ವಿಶೇಷ ಘಟಕ ಯೋಜನೆ'. ಈ ಯೋಜನೆಯನ್ನು ಸರ್ಕಾರವು ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಿಸಿತು. ಚಾಮರಾಜನಗರ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆಯನ್ನು ೧೯೭೮–೭೯ನೇ ಸಾಲಿನಿಂದ ಆರಂಭಿಸಲಾಗಿದೆ. ರಾಜ್ಯದ ಇತರ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿಯೂ ಈ ಯೋಜನೆ ಉತ್ತಮವಾಗಿ ಅನುಷ್ಠಾನಗೊಳ್ಳುತ್ತಿದೆ.

ತೋಟಗಾರಿಕೆ ಇಲಾಖೆ, ಪಶು ಸಂಗೋಪನೆ, ಸಾರಿಗೆ ಸಂಪರ್ಕ ಇಲಾಖೆಗಳು ಈ ಜಿಲ್ಲೆಯ ವಿಶೇಷ ಘಟಕ ಯೋಜನೆಗೆ ಸಹಕರಿಸಿವೆ. ತೋಟಗಾರಿಕೆ ಇಲಾಖೆಯ ಫಲಾನುಭವಿಗಳಿಗೆ ಅರ್ಧ ಎಕರೆ ತೆಂಗಿನ ಅಥವಾ ಹಣ್ಣಿನ ತೋಟದ ಅಭಿವೃದ್ಧಿಗೆಂದು ಆರ್ಥಿಕ ನೆರವನ್ನೂ, ಎರಡು ವರ್ಷಗಳ ನಿರ್ವಹಣಾ ವೆಚ್ಚವನ್ನೂ ಮತ್ತು ಕಾಲುವೆ ಬದಿಯಲ್ಲಿ ತೆಂಗಿನ ಸಸಿಗಳನ್ನು ನೆಡಲು ಕೃಷಿ ಕಾರ್ಮಿಕರಿಗೆ ಸಹಾಯವನ್ನೂ ನೀಡಲಾಗುತ್ತದೆ. ಅಲ್ಲದೆ ಇವುಗಳ ಇಳುವರಿಯನ್ನು ಕೂಡ ಫಲಾನುಭವಿಗಳಿಗೇ ನೀಡಲಾಗುತ್ತದೆ. ತೋಟಗಾರಿಕೆಗೆ ಅಗತ್ಯವಾಗಿ ಬೇಕಾದ ಸಿಂಪಡಿಕೆ ಸಾಧನಗಳನ್ನು ಸಹ ಒದಗಿಸಲಾಗುವುದು. ಪಶು ಸಂಗೋಪನೆ ಇಲಾಖೆಯ ಫಲಾನುಭವಿಗಳಿಗೆ ಒಂದು ಜೊತೆ ಕರೆಯುವ ಹಸು ಮತ್ತು ಎಮ್ಮೆ, ಕುರಿ ಘಟಕ ಅಥವಾ ಹಂದಿ ಘಟಕಗಳನ್ನು ಸಾಲದ ರೂಪದಲ್ಲಿ ನಬಾರ್ಡ್ ನಿಯಮಗಳಿಗನುಸಾರ ಇಲಾಖೆಯಿಂದ ಒದಗಿಸಲಾಗುತ್ತದೆ. ಪಶು, ಆಹಾರ, ವಿಮೆ, ವೈದ್ಯಕೀಯ ಸೇವೆ, ಶೆಡ್ಡಿನ ನಿರ್ಮಾಣ ವೆಚ್ಚ,–– ಇವುಗಳನ್ನೂ ಇದು ಒಳಗೊಂಡಿರುತ್ತದೆ.

ವಿಶೇಷ ಘಟಕ ಯೋಜನೆಯಡಿ ೨೦೦೫–೦೬ರಿಂದ ೨೦೧೦–೧೧ರವರೆಗೆ ವಿವಿಧ ಇಲಾಖೆಗಳು ಮಾಡಿರುವ ವೆಚ್ಚ ಹಾಗೂ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೨೪ರಲ್ಲಿ ನೀಡಲಾಗಿದೆ.

**ಕೋಷ್ಟಕ –೧೬.೨೪**

| ಇಲಾಖೆ | ೨೦೦೫–೦೬ | | ೨೦೦೬–೦೭ | | ೨೦೦೭–೦೮ | | ೨೦೦೮–೦೯ | | ೨೦೦೯–೧೦ | | ೨೦೧೦–೧೧ | |
|---|---|---|---|---|---|---|---|---|---|---|---|---|
| | ವೆಚ್ಚ ₹ ಲಕ್ಷ ಗಳಲ್ಲಿ | ಭೌತಿಕ ಸಾಧನೆ | ವೆಚ್ಚ ₹ ಲಕ್ಷ ಗಳಲ್ಲಿ | ಭೌತಿಕ ಸಾಧನೆ | ವೆಚ್ಚ ₹ ಲಕ್ಷ ಗಳಲ್ಲಿ | ಭೌತಿಕ ಸಾಧನೆ | ವೆಚ್ಚ ₹ ಲಕ್ಷ ಗಳಲ್ಲಿ | ಭೌತಿಕ ಸಾಧನೆ | ವೆಚ್ಚ ₹ ಲಕ್ಷ ಗಳಲ್ಲಿ | ಭೌತಿಕ ಸಾಧನೆ | ವೆಚ್ಚ ₹ ಲಕ್ಷ ಗಳಲ್ಲಿ | ಭೌತಿಕ ಸಾಧನೆ |
| ತಾಲೂಕು ಪಂಚಾಯತ್ | ೩೫.೭೯ | ೮೮ | ೪೦.೨೮ | ೮೬ | ೪೯.೨೪ | ೯೬ | ೪೬.೫೨ | ೧೦೦ | ೪೭.೮೭ | ೯೬ | ೫೦.೬೭ | ೯೫ |
| ಕೃಷಿ | ೭ | ೧೮೮ | ೮.೧೧ | ೨೪೭ | ೧೧.೨೨ | ೨೭೩ | ೧೧.೨೫ | ೨೧೭ | ೧೧.೨೫ | ೨೩೫ | ೧೧.೨೫ | ೩೨೫ |
| ತೋಟಗಾರಿಕೆ | ೩.೫೯ | ೪೩೧ | ೩.೫೮ | ೫೬೮ | ೪.೯೬ | ೬೦೩ | ೫.೦೧ | ೧೨೩೬ | ೫.೦೧ | ೭೭೨ | ೫.೦೧ | ೪೧೨ |
| ಪಶು ಸಂಗೋಪನೆ | ೪.೦೪ | ೩೨ | ೪.೦೦ | ೨೮ | ೫.೭೭ | ೪೦ | ೫.೬೨ | ೩೯ | ೫.೯೧ | ೪೧ | ೫.೭೭ | ೪೦ |
| ಗ್ರಾಮೀಣ ಮತ್ತು ಸಣ್ಣ ಉದ್ಯಮ | ೨.೪೫ | ೯೫ | ೨.೪೫ | ೯೭ | ೩.೩೨ | ೮೭ | ೩.೪೭ | ೮೪ | ೩.೪೭ | ೮೪ | ೩.೪೭ | ೭೫ |
| ರೇಷ್ಮೆ ಇಲಾಖೆ | ೬.೨೯ | ೨೪೩ | ೭.೦೧ | ೨೫೬ | ೯.೬೭ | ೨೪೪ | ೯.೯೫ | ೧೮೭ | ೯.೬೫ | ೧೭೭ | ೯.೮೧ | ೧೯೧ |
| ಒಟ್ಟು | ೫೯.೧೬ | ೧೦೭೭ | ೬೫.೪೩ | ೧೨೮೨ | ೮೪.೧೮ | ೧೩೪೩ | ೮೧.೮೨ | ೧೮೬೩ | ೮೩.೧೬ | ೧೪೦೫ | ೮೫.೯೮ | ೧೧೩೮ |

*(ಮಾಹಿತಿ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು

ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಜಿಲ್ಲಾ ಯೋಜನೆಯಡಿಯಲ್ಲಿ ಲಘು ವಾಹನ ಚಾಲನೆ ಮತ್ತು ಆಟೋ ರಿಕ್ಷಾ ಚಾಲನೆ ಕಲಿಸಲು ಮೂರು ತಿಂಗಳ ತರಬೇತಿ ಕೊಡಿಸಿ, ಅವರಿಗೆ ವಾಹನ ಪರವಾನಗಿಯನ್ನೂ ಕೊಡಿಸಿ ಕೊಡಲಾಗುವುದು. ಅಲ್ಲದೆ ತರಬೇತಿಯ ಅವಧಿಯಲ್ಲಿ, ನಗರದವರಿಗೆ ರೂ.೧೫೦ರಂತೆ ಹಾಗೂ ಗ್ರಾಮವಾಸಿಗಳಿಗೆ ರೂ.೩೦೦ರಂತೆ ಶಿಷ್ಯ ವೇತನವನ್ನೂ ಕೊಡಲಾಗುವುದು. ಜಿಲ್ಲೆಯ ಪ್ರಾದೇಶಿಕ ಅಧಿಕಾರಿಗಳು ನಿಗದಿ ಪಡಿಸುವ ದರಗಳಲ್ಲಿ ತರಬೇತಿ ಶುಲ್ಕವನ್ನು ತರಬೇತಿ ನೀಡಿದ ಡ್ರೈವಿಂಗ್ ಶಾಲೆಗಳಿಗೆ ಇಲಾಖೆಯು ನೀಡುತ್ತದೆ.

ಮೇಲಿನವಲ್ಲದೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಇತರ ಸಾಮಾನ್ಯ ವಿಷಯಗಳ ಬಗ್ಗೆ ಅಂಶಕಾಲಿಕ ಬೋಧಕರನ್ನು ನೇಮಿಸಿ ವಿಶ್ಲೇಷ ಬೋಧನೆ; ಎಂ.ಫಿಲ್ ಹಾಗೂ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಫೆಲೋಷಿಪ್ ನೀಡಿಕೆ; ಲೋಕಸೇವಾ ಆಯೋಗಗಳು ಮತ್ತು ಇತರ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಗೂ ಐ.ಎ.ಎಸ್/ಐ.ಪಿ.ಎಸ್ ಪರೀಕ್ಷೆಗಳಿಗೆ ಹಾಜರಾಗ ಬಯಸುವ ವಿದ್ಯಾರ್ಥಿಗಳಿಗೆ ಸ್ಪರ್ಧೆಯಲ್ಲಿ ಗೆಲ್ಲುವ ಮಟ್ಟಕ್ಕೆ ಕೊಂಡೊಯ್ಯಲು, ಪೂರ್ವ ತರಬೇತಿ ನೀಡುವ ಪರೀಕ್ಷಾ ತರಬೇತಿ ಕೇಂದ್ರಗಳು; ವೈದ್ಯಕೀಯ, ತಾಂತ್ರಿಕ, ಪಶುವೈದ್ಯ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪುಸ್ತಕ ಭಂಡಾರಗಳು; ಮೂರು ವಿದ್ಯಾರ್ಥಿಗಳಿಗೆ ಒಂದು ಸೆಟ್‌ನಂತೆ ಪುಸ್ತಕ ಖರೀದಿಗಾಗಿ ಹಣ ಪೂರೈಕೆ; ಬೆಳಗಾಂ ಸೈನಿಕ ಶಾಲೆಗೆ ಸೇರಿಸಲು ಅರ್ಹ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ಕಾರ್ಯಕ್ರಮ: ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಸ್ಟೈಫಂಡ್; ಸ್ವಯಂ ಉದ್ಯೋಗ ಕೈಗೊಳ್ಳುವ ಸಾಮರ್ಥ್ಯ ಬೆಳೆಸಲು ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು; ಮಹಿಳೆಯರಿಗೆ ವೃತ್ತಿ ಶಿಕ್ಷಣ ತರಬೇತಿ; ಹೆಣ್ಣು ಮಕ್ಕಳಿಗೆ ಟಿ.ಸಿ.ಹೆಚ್ ತರಬೇತಿ: ನವಚೇತನ ಯೋಜನೆ;ಮುಂತಾದ ಕಾರ್ಯಕ್ರಮಗಳನ್ನೂ ಇಲಾಖೆಯಿಂದ ಪರಿಶಿಷ್ಟ ಜಾತಿಯ ಜನಾಂಗದವರ ಬೆಳವಣಿಗೆಗಾಗಿ ಕಾರ್ಯಗತ ಗೊಳಿಸಲಾಗುತ್ತಿದೆ.

## ಪರಿಶಿಷ್ಟ ವರ್ಗಗಳ ಕಲ್ಯಾಣ

ರಾಜ್ಯದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳೂ ಮೊದಲು ಶಿಕ್ಷಣ ಇಲಾಖೆಯ ಮೂಲಕ, ನಂತರ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿತ್ತು. ದಿ:೩೦.೮.೧೯೯೮ರ ಆದೇಶದಲ್ಲಿ, ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸಲು ಸರ್ಕಾರವು ಅನುಮತಿ ನೀಡಿದ್ದರಿಂದ, ಅದರಂತೆ ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವು, ೧೯೯೯ರ ಜನವರಿಯಲ್ಲಿ ದಾವಣಗೆರೆಯಲ್ಲಿ ಪ್ರಾರಂಭಗೊಂಡಿತು. ೧೯೯೯ರ ನವೆಂಬರ್ ತಿಂಗಳಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡು ಈಗ ಇಲ್ಲಿಯೇ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದೆ.

ರಾಜ್ಯದಲ್ಲಿ ೧೯೭೧ರಲ್ಲಿ ಕೈಗೊಂಡ ಜನಗಣತಿ ಪ್ರಕಾರ, ಮೂಲನಿವಾಸಿ ಪಂಗಡಗಳು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ದಕ್ಷಿಣ ಕನ್ನಡ, ಮೈಸೂರು, (ಉಡುಪಿ ಮತ್ತು ಚಾಮರಾಜನಗರ ಜಿಲ್ಲೆಗಳು ರಚನೆಯಾಗುವ

ಮೊದಲು) ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಐದು ಸುಸಂಘಟಿತ ಯೋಜನಾ ಘಟಕಗಳು (Integrated Tribal Development) ಸ್ಥಾಪನೆಗೊಂಡು ಮೂಲನಿವಾಸಿಗಳ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಪ್ರಸ್ತುತವೂ ರಾಜ್ಯದ ಇದೇ ಐದು ಜಿಲ್ಲೆಗಳಲ್ಲಿ ಅಂದರೆ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಮೈಸೂರು(ಚಾಮರಾಜನಗರ ಜಿಲ್ಲೆಯೂ ಸೇರಿಕೊಂಡು) ಜಿಲ್ಲೆಗಳಲ್ಲಿ (ಐಟಿಡಿಪಿ) ಸಂಯೋಜಿತ ಬುಡಕಟ್ಟು ಜನಾಂಗಗಳ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಾಯಕ ಹಾಗೂ ಇದರ ತತ್ಸಮಾನ ಪಂಗಡಗಳಾದ ಬೇಡ, ಬೇಡರ್ ಮತ್ತು ವಾಲ್ಮೀಕಿ ಪಂಗಡಗಳು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಯಾದ ಮೇಲೆ, ಈ ಪಂಗಡದವರು ಇತರ ಎಲ್ಲಾ ಜಿಲ್ಲೆಗಳಲ್ಲಿಯೂ ವಾಸಿಸುತ್ತಿರುವುದರಿಂದ, ಗಿರಿಜನ ಉಪಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸುವಂತೆ, ೧೯೯೩ರಲ್ಲಿ ಸರ್ಕಾರವು ನಿರ್ದೇಶನವನ್ನು ನೀಡಿತು.

ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆ, ೨೦೦೧ರ ಜನಗಣತಿ ಪ್ರಕಾರ ೫,೨೮,೫೦,೫೬೦ ಇರುತ್ತದೆ. ೨೦೦೧ರ ಜನಗಣತಿಯನ್ವಯ ಪರಿಶಿಷ್ಟ ವರ್ಗದ ಜನಸಂಖ್ಯೆ ೩೪,೬೩,೯೮೬ ಆಗಿದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೬.೫೫ರಷ್ಟನ್ನು ಪ್ರತಿನಿಧಿಸುತ್ತದೆ. ಕರ್ನಾಟಕದ ಪರಿಶಿಷ್ಟ ವರ್ಗಗಳ ಜನಸಂಖ್ಯೆಯು ದೇಶದಲ್ಲಿರುವ ಪರಿಶಿಷ್ಟ ವರ್ಗಗಳ ಒಟ್ಟು ಜನಸಂಖ್ಯೆಯ ಶೇಕಡ ೪.೧೦ರಷ್ಟಿದೆ. ಭಾರತ ಸರ್ಕಾರವು, ೨೦೦೩ರ ಜನವರಿ ಎಂಟರಲ್ಲಿ, 'ಸಿದ್ದಿ' ಬುಡಕಟ್ಟು ಜನಾಂಗವನ್ನು; 'ಮೇದ' ಜನಾಂಗದ ಮೂರು ಪರ್ಯಾಯ ಪದಗಳಾದ ಮೇದಾರಿ, ಬುರುಡ್ ಮತ್ತು ಗೌರಿಗ, ಬುಡಕಟ್ಟುಗಳನ್ನು; ಮತ್ತು ಪಾನ್ಸೆಪರ್ದಿಯ ಒಂದು ಪರ್ಯಾಯ ಪದವಾದ 'ಹರನ್‌ಶಿಕಾರಿ' ಬುಡಕಟ್ಟನ್ನು, ಪರಿಶಿಷ್ಟ ವರ್ಗಗಳ ಪಟ್ಟಿಗೆ ಸೇರ್ಪಡೆಗೊಳಿಸಿದ ಮೇಲೆ, ಕರ್ನಾಟಕದಲ್ಲಿ ಪರಿಶಿಷ್ಟ ವರ್ಗಗಳ ಜನಸಂಖ್ಯೆಯು ೩೬ ಲಕ್ಷಕ್ಕೂ ಹೆಚ್ಚಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ವರ್ಗಕ್ಕೆ ನಿಗದಿಪಡಿಸಿರುವ ಮೀಸಲಾತಿಯ ಪ್ರಮಾಣವು ಶೇಕಡ ಮೂರು ಆಗಿರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿನ ಒಟ್ಟು ಜನಸಂಖ್ಯೆ ೯೬೫೪೬೨ ಇದ್ದು, ಇದರಲ್ಲಿ ಪರಿಶಿಷ್ಟ ವರ್ಗದವರ ಜನಸಂಖ್ಯೆ ೧೦೬೧೦೧ ಆಗಿರುತ್ತದೆ. ಅಂದರೆ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇಕಡ ೧೦.೯೯ರಷ್ಟು ಪರಿಶಿಷ್ಟ ವರ್ಗದವರಾಗಿರುತ್ತಾರೆ. ೨೦೦೧ರ ಜನಗಣತಿ ಪ್ರಕಾರ ಪರಿಶಿಷ್ಟ ವರ್ಗದ ಗಂಡಸರ ಸಾಕ್ಷರತೆ ಮಟ್ಟ ೫೦.೨ರಷ್ಟೂ, ಹೆಂಗಸರ ಸಾಕ್ಷರತೆ ಮಟ್ಟ ೩೨.೮ರಷ್ಟೂ ಇದ್ದು, ಇವರ ಸಾಕ್ಷರತೆಯು ಜಿಲ್ಲೆಯಲ್ಲಿ ಒಟ್ಟು ೪೧.೫ರಷ್ಟೂ ಇರುತ್ತದೆಂದು ಈ ಇಲಾಖೆಯ ದಾಖಲೆಗಳಿಂದ ತಿಳಿದು ಬರುತ್ತದೆ. (ಮಾಹಿತಿ: ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆಯ ೨೦೦೭–೦೮ನೇ ಸಾಲಿನ ವಾರ್ಷಿಕ ವರದಿ ಮತ್ತು ಕಾರ್ಯಕ್ರಮಗಳ ಪಟ್ಟಿ)

ಕರ್ನಾಟಕದಲ್ಲಿ ಐವತ್ತು ವಿವಿಧ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ವರ್ಗಗಳೆಂದು ಅಧಿಸೂಚಿಸಲಾಗಿದೆ. ಪರಿಶಿಷ್ಟ ವರ್ಗಗಳೆಂದು ಅಧಿಸೂಚಿಸಲಾದ ಸಮುದಾಯಗಳ ಹೆಸರುಗಳನ್ನು ಕೋಷ್ಟಕ ೧೬.೭೫ರಲ್ಲಿ ನೀಡಿದೆ ಹಾಗೂ ತಾಲ್ಲೂಕುವಾರು ಪರಿಶಿಷ್ಟ ವರ್ಗದವರ ಜನಸಂಖ್ಯೆಯನ್ನು ಕೋಷ್ಟಕ ೧೬.೭೬ರಲ್ಲಿ ನೀಡಿದೆ.

## ಕೋಷ್ಟಕ ೧೬.೨೫: ಅಧಿಸೂಚಿಸಲಾದ ಪರಿಶಿಷ್ಟ ವರ್ಗಗಳ ಪಟ್ಟಿ

| | |
|---|---|
| ೧) | ಆದಿಯನ್ |
| ೨) | ಬರ್ಡ |
| ೩) | ಬಾವಚ, ಬಾಮ್ಚ. |
| ೪) | ಭಿಲ್, ಭಿಲ್ ಗರಾಸಿಯಾ, ಧೋಲಿ ಭಿಲ್, ದುಂಗ್ರಿ ಭಿಲ್, ದುಂಗ್ರಿ ಗರಾಸಿಯಾ, ಮೇವಾಸಿ ಭಿಲ್, ರಾವಲ್ ಭಿಲ್, ತಡ್ವಿ ಭಿಲ್, ಭಾಗಲಿಯಾ, ಭಿಲಾಲ್, ಪಾವ್ರ, ವಾಸವ, ವಾಸವೆ. |
| ೫) | ಚೆಂಚು, ಚೆಂಚ್ವರ್ |
| ೬) | ಚೋದರ |
| ೭) | ದುಬ್ಲ, ವಲವಿಯ, ಹಲ್ಪತಿ |
| ೮) | ಗಾಮಿತ್, ಗಾಮ್ತ, ಗಾವಿತ್, ಮಾವ್ಚಿ, ಪದ್ವಿ, ವಾಲ್ವಿ |
| ೯) | ಗೋಂಡ್, ನಾಯ್ಕಪೋಡ್, ರಾಜ್‌ಗೊಂಡ್ |
| ೧೦) | ಗೌಡಲು, |
| ೧೧) | ಹಕ್ಕಿಪಿಕ್ಕಿ |
| ೧೨) | ಹಸಲರು |
| ೧೩) | ಇರುಳರ್ |
| ೧೪) | ಇರುಳಿಗ |
| ೧೫) | ಜೇನು ಕುರುಬ |
| ೧೬) | ಕಾಡು ಕುರುಬ |
| ೧೭) | ಕಮ್ಮಾರ (ದ.ಕ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿ) |
| ೧೮) | ಕಣಿಯನ್, ಕನ್ಯನ್ (ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿ). |
| ೧೯) | ಕಾಥೋಡಿ, ಕಟಿಕರಿ, ಧೋರ್ ಕಥೋಡಿ, ಧೋರ್ ಕಟಕರಿ, ಸೋನ್ ಕಥೋಡಿ, ಸೋನ್ ಕಟಕರಿ. |
| ೨೦) | ಕಟ್ಟುನಾಯಕನ್ |
| ೨೧) | ಕೋಕ್ನ, ಕೋಕ್ನಿ, ಕುಕ್ನ |
| ೨೨) | ಕೋಳಿ ಧೋರ್, ತೋಕ್ರೆ ಕೋಳಿ, ಕೊಲ್ಚ, ಕೊಲ್ಫ |
| ೨೩) | ಕೊಂಡ ಕಾಪುಗಳು |
| ೨೩ | ಕೊಂಡ ಕಾಪುಗಳು |
| ೨೪ | ಕೊರಗ |
| ೨೫ | ಕೋಟ |
| ೨೬ | ಕೋಯ, ಭಿನೇ ಕೋಯ, ರಾಜ್‌ಕೋಯ |
| ೨೭. | ಕುಡಿಯ, ಮೇಲಕುಡಿ |
| ೨೮ | ಕುರುಬ(ಕೊಡಗು ಜಿಲ್ಲೆಯಲ್ಲಿ) |
| ೨೯ | ಕುರುಮನ್ಸ್ |
| ೩೦ | ಮಹಾ ಮಲಸರ್ |
| ೩೧ | ಮಲೈ ಕುಡಿ |
| ೩೨ | ಮಲಸರ್ |
| ೩೩ | ಮಲಯೆಕಂಡಿ |
| ೩೪ | ಮಾಲೇರು |
| ೩೫ | ವ್ಮರಾಠ (ಕೊಡಗು ಜಿಲ್ಲೆಯಲ್ಲಿ) |
| ೩೬ | ಮರಾಠಿ (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ) |
| ೩೭ | ಮೇದ, ಮೇದಾರಿ, ಗೌರಿಗ, ಬುರುಡ್. |
| ೩೮ | ನಾಯಿಕ್ಡ, ನಾಯಕ,ಚೋಲಿವಾಲಾ ನಾಯಕ, ಕಪಾಡಿಯ ನಾಯಕ, ಮೋಟಾ ನಾಯಕ, ನಾನಾ ನಾಯಕ, ನಾಯಿಕ್, ನಾಯಕ್, ಬೇಡ, ಬೇಡರ್ ಮತ್ತು ವಾಲ್ಮೀಕಿ. |
| ೩೯ | ಪಳ್ಳಿಯನ್ |
| ೪೦ | ಪಣಿಯನ್. |
| ೪೧ | ಪಾರ್ಧಿ, ಅಡ್ವಿಚಿಂಚೇರ್, ಫಾನ್ಸೆಪಾರ್ಧಿ, ಹಂಸ್ |
| ೪೨ | ಪಟೇಲಿಯ |
| ೪೩ | ರಾಥವ |
| ೪೪ | ಶೋಲಗ |
| ೪೫ | ಸೋಲಿಗರು |
| ೪೬ | ತೋಡ |
| ೪೭ | ವರ್ಲಿ |
| ೪೮ | ವಿಟೋಲಿಯ, ಕೊತ್‌ವಾಲಿಯಾ, ಬರೋಡಿಯ |
| ೪೯ | ಯೆರವ |
| ೫೦ | ಸಿದ್ಧಿ(ಉತ್ತರ ಕನ್ನಡ ಜಿಲ್ಲೆಯಲ್ಲಿ) |

*(ಮಾಹಿತಿ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.)*

**ಕೋಷ್ಟಕ – ೧೬.೨೬: ಪರಿಶಿಷ್ಟ ವರ್ಗದವರ ತಾಲೂಕುವಾರು ಜನಸಂಖ್ಯಾ ವಿವರಗಳು.**

| ತಾಲೂಕು | ಗಂಡು | ಹೆಣ್ಣು | ಒಟ್ಟು |
|---|---|---|---|
| ಚಾಮರಾಜನಗರ | ೧೬೩೮೫ | ೧೬೫೮೩ | ೩೨೯೬೮ |
| ಗುಂಡ್ಲುಪೇಟೆ | ೧೨೨೩೧ | ೧೨೩೫೭ | ೨೪೫೮೮ |
| ಯಳಂದೂರು | ೬೯೬೩ | ೬೭೫೩ | ೧೩೭೧೬ |
| ಕೊಳ್ಳೇಗಾಲ | ೧೭೬೨೬ | ೧೭೨೧೩ | ೩೪೮೩೯ |
| ಒಟ್ಟು | ೫೩೨೦೫ | ೫೨೯೦೬ | ೧೦೬೧೧೧ |

*(ಮಾಹಿತಿ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಾಮರಾಜನಗರ)*

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯ ಪ್ರಕಾರ ಪರಿಶಿಷ್ಟ ವರ್ಗದವರ ತಾಲೂಕುವಾರು ಸಾಕ್ಷರತಾ ಪ್ರಮಾಣವನ್ನು ಕೋಷ್ಟಕ ೧೬.೨೭ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೨೭: ಪರಿಶಿಷ್ಟ ವರ್ಗದವರ ತಾಲೂಕುವಾರು ಸಾಕ್ಷರತಾ ಪ್ರಮಾಣದ ವಿವರಗಳು**

| ತಾಲೂಕು | ಗಂಡು | ಹೆಣ್ಣು | ಒಟ್ಟು |
|---|---|---|---|
| ಚಾಮರಾಜನಗರ | ೨೬.೨೪% | ೧೪.೭೨% | ೨೦.೪೭% |
| ಗುಂಡ್ಲುಪೇಟೆ | ೨೦.೮೩% | ೧೧.೯೦% | ೧೬.೪೫% |
| ಯಳಂದೂರು | ೩೫.೭೭% | ೧೯.೪೭% | ೨೭.೮೫% |
| ಕೊಳ್ಳೇಗಾಲ | ೩೨.೬೦% | ೧೭.೩೪% | ೨೫.೦೯% |

*(ಮಾಹಿತಿ: ಜಿಲ್ಲಾ ಆಡಳಿತ: ಜಿಲ್ಲಾ ಪಂಚಾಯತ್, ಚಾಮರಾಜನಗರ)*

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ಗ್ರಾಮಾಂತರ ಪ್ರದೇಶಗಳಿಂದ ಬಂದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲ ಮಾಡಿಕೊಡುವುದಕ್ಕಾಗಿ ಇಲಾಖಾವತಿಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ಈ ಜಿಲ್ಲೆಯಲ್ಲಿ ಒಂದು ಬಾಲಕರ ಗಿರಿಜನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯವು ಕೊಳ್ಳೇಗಾಲ ಪಟ್ಟಣದಲ್ಲಿದ್ದು, ೧೭ ವಿದ್ಯಾರ್ಥಿಗಳು ಸೌಲಭ್ಯ ಪಡೆಯುತ್ತಿದ್ದಾರೆ. ಹಾಗೆಯೇ ಒಂದು ಗಿರಿಜನ ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯವು ಚಾಮರಾಜನಗರದಲ್ಲಿದ್ದು, ೧೩ ಬಾಲಕಿಯರು ಸೌಲಭ್ಯ ಪಡೆಯುತ್ತಿದ್ದಾರೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

ದೂರದ ಗ್ರಾಮಗಳಿಂದ ಬಂದುದರಿಂದ ಹತ್ತನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ಅವರ ವಿದ್ಯಾಭ್ಯಾಸವನ್ನು ಮುಂದುವರಿಸಲು ನೆರವಾಗುವ ಸಲುವಾಗಿ, ಮೆಟ್ರಿಕ್ ಪೂರ್ವ

ವಿದ್ಯಾರ್ಥಿ ನಿಲಯಗಳನ್ನು ಇಲಾಖೆಯ ವತಿಯಿಂದ ನಡೆಸಲಾಗುತ್ತಿದ್ದು, ಈ ನಿಲಯಗಳಲ್ಲಿ ಉಚಿತ ಊಟ, ವಸತಿ, ಲೇಖನ ಸಾಮಗ್ರಿಗಳು, ಸಮವಸ್ತ್ರ ಮತ್ತು ಇತರ ಅಗತ್ಯ ಸೌಲಭ್ಯಗಳನ್ನು ಈ ನಿಲಯಗಳಲ್ಲಿ ಒದಗಿಸಲಾಗುತ್ತಿದೆ. ಈ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನಿರ್ವಹಿಸಲಾಗುತ್ತಿರುವ ಏಳು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಇವೆ. ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿವರಗಳನ್ನು ಕೋಷ್ಟಕ ೧೬.೨೮ರಲ್ಲಿ ಕಾಣಬಹುದಾಗಿದೆ.

**ಕೋಷ್ಟಕ ೧೬.೨೮**

| ತಾಲೂಕು | ಬಾಲಕರ ವಿದ್ಯಾರ್ಥಿ ನಿಲಯಗಳು | | ಬಾಲಕಿಯರ ವಿದ್ಯಾರ್ಥಿ ನಿಲಯಗಳು | | ಒಟ್ಟು ನಿಲಯಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|
| | ನಿಲಯಗಳು ಇರುವ ಸ್ಥಳ | ಬಾಲಕರ ಸಂಖ್ಯೆ | ನಿಲಯಗಳು ಇರುವ ಸ್ಥಳ | ಬಾಲಕಿಯರ ಸಂಖ್ಯೆ | | |
| **ಚಾಮರಾಜ ನಗರ** | ಗಿರಿಜನ ಬಾಲಕರ ವಿದ್ಯಾರ್ಥಿನಿಲಯ ಚಾಮರಾಜ ನಗರ ಟೌನ್ | ೫೦ | ಗಿರಿಜನ ಬಾಲಕಿಯರ ವಿದ್ಯಾರ್ಥಿನಿಲಯ ಚಾಮರಾಜ ನಗರ ಟೌನ್ | ೩೭ | ೨ | ೮೭ |
| **ಗುಂಡ್ಲುಪೇಟೆ** | – | – | ಗಿರಿಜನ ಬಾಲಕಿಯರ ವಿದ್ಯಾರ್ಥಿನಿಲಯ ಗುಂಡ್ಲುಪೇಟೆ ಟೌನ್ | ೪೭ | ೧ | ೪೭ |
| **ಯಳಂದೂರು** | – | – | – | – | – | – |
| **ಕೊಳ್ಳೇಗಾಲ** | ಗಿರಿಜನ ಬಾಲಕರ ವಿದ್ಯಾರ್ಥಿ ನಿಲಯ, ಬಂಡಳ್ಳಿ | ೪೭ | ಗಿರಿಜನ ಬಾಲಕಿಯರ ವಿದ್ಯಾರ್ಥಿನಿಲಯ ಮ. ಮ.ಬೆಟ್ಟ | ೯೧ | ೨ | ೧೩೮ |
| | ಗಿರಿಜನ ಬಾಲಕರ ವಿದ್ಯಾರ್ಥಿನಿಲಯ | ೬೧ | – | – | ೧ | ೬೧ |
| | ಗಿರಿಜನ ಬಾಲಕರ ವಿದ್ಯಾರ್ಥಿನಿಲಯ | ೫೦ | – | – | ೧ | ೫೦ |

*(ಆಧಾರ : ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಾಮರಾಜನಗರ)*

## ಆಶ್ರಮ ಶಾಲೆಗಳು

ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳ ಅಗತ್ಯಕ್ಕನುಸಾರವಾಗಿ ಪರಿಶಿಷ್ಟ ವರ್ಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿಕೊಡಲು ಆಶ್ರಮ ಶಾಲೆಗಳನ್ನು ತೆರೆದು ನಿರ್ವಹಿಸಲಾಗುತ್ತಿದೆ. ಈ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಐದನೇ ತರಗತಿಯವರೆಗಿನ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಭೋಜನ, ಸಮವಸ್ತ್ರ, ಹಾಸಿಗೆ-ಹೊದಿಕೆ ಸಾಮಗ್ರಿಗಳು, ಎಣ್ಣೆ, ಸೋಪು ಇತ್ಯಾದಿ ಅಗತ್ಯ ಸೌಕರ್ಯಗಳನ್ನು ಒದಗಿಸಲಾಗುತ್ತದೆ. ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ೧೯ ಆಶ್ರಮ ಶಾಲೆಗಳಿದ್ದು ಸರ್ಕಾರವು ನೀಡಿರುವ ಮಂಜೂರಾತಿಯನ್ವಯ ೨೨೭೫ ಮಕ್ಕಳಿಗೆ ಪ್ರವೇಶ ನೀಡಲು ಅವಕಾಶವಿದೆ. ಆದರೆ ೨೦೦೯-೨೦೧೦ನೇ ಸಾಲಿನಲ್ಲಿ ಈ ಜಿಲ್ಲೆಯ ಆಶ್ರಮ ಶಾಲೆಗಳಲ್ಲಿ ನಿಜವಾಗಿ ೧೩೦೧ ಮಕ್ಕಳು ಪ್ರವೇಶ ಪಡೆದಿರುತ್ತಾರೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೨೯ನ್ನು ನೋಡಿ.

ಕೋಷ್ಟಕ– ೧೬.೨೯: ೨೦೧೦–೨೦೧೧ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿರುವ ಆಶ್ರಮ ಶಾಲೆಗಳ ಸಂಖ್ಯೆ ಮತ್ತು ಪ್ರವೇಶ ಪಡೆದ ಮಕ್ಕಳ ವಿವರಗಳು

| ಕ್ರ. ಸಂ | ತಾಲೂಕು | ಗಿರಿಜನ ಆಶ್ರಮ ಶಾಲೆಗಳು ಇರುವ ಸ್ಥಳ | ಮಂಜೂರಾತಿ ಸಂಖ್ಯೆ | ಪ್ರವೇಶ ಪಡೆದ ಮಕ್ಕಳ ಸಂಖ್ಯೆ |
|---|---|---|---|---|
| ೧ | ಚಾಮರಾಜನಗರ | ೧. ಬೇಡಗುಳಿ | ೧೨೫' | ೫೨ |
| | | ೨. ಪುಣಜನೂರು | ೧೨೫ | ೩೪ |
| | | ೩. ಕೋಳಿಪಾಳ್ಯ | ೧೨೫ | ೬೦ |
| | | ೪. ರಂಗಸಂದ್ರ | ೧೨೫ | ೭೧ |
| | | ೫. ಕೆ. ಗುಡಿ | ೧೨೫ | ೫೮ |
| | | ೬. ಮುರಟೀಪಾಳ್ಯ | ೧೨೫ | ೫೨ |
| ೨. | ಕೊಳ್ಳೇಗಾಲ | ೧. ಮಲೆಮಹದೇಶ್ವರ ಬೆಟ್ಟ | ೧೨೫ | ೭೦ |
| | | ೨. ಪೊನ್ನಾಚಿ | ೧೨೫ | ೧೩೩ |
| | | ೩. ಕೋಣನಕೆರೆ | ೧೨೫ | ೧೦೦ |
| | | ೪. ರಾಚಪ್ಪಾಜಿ ನಗರ | ೧೨೫ | ೯೨ |
| | | ೫. ನಕ್ಕುಂದಿ | ೧೨ | ೮೯ |
| | | ೬. ಗಾಣಿಗಮಂಗಲ | ೧೨೫ | ೭೦ |
| | | ೭. ಹಿರಿಯಂಬಲ | ೧೨೫ | ೧೦೦ |
| | | ೮. ಬೈಲೂರು | ೧೨೫ | ೬೯ |
| | | ೯. ಜೀರಿಗೆ ಗದ್ದೆ | ೧೨೫ | ೮೬ |
| | | ೧೦. ಕಂಚಗಳ್ಳಿ | ೧೨೫ | ೨೫ |
| ೩ | ಯಳಂದೂರು | ೧. ಪುರಾಣಿಪೋಡು | ೧೨೫ | ೫೦ |
| ೪ | ಗುಂಡ್ಲುಪೇಟೆ | ೧. ಬಂಡೀಪುರ | ೧೨೫ | ೩೬ |
| | | ೨. ಮದ್ದೂರು | ೧೨೫ | ೭೧ |
| | ಒಟ್ಟು | ೧೯ | ೨೩೭೫ | ೧೩೧೮ |

(ಆಧಾರ : ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಾಮರಾಜನಗರ)

## ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

ಆರರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ, ನಿಗದಿತ ನಿಯಮಗಳನ್ನನುಸರಿಸಿ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರವೇಶ ನೀಡಲಾಗುತ್ತದೆ. ನಂತರ ಅವರಿಗೆ ಉಚಿತ ಶಿಕ್ಷಣ, ಊಟ, ವಸತಿಗಳ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಈ ಜಿಲ್ಲೆಯಲ್ಲಿ ಮೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದ್ದು ಇವುಗಳಲ್ಲಿ ಒಟ್ಟು ೫೫೦ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವಕಾಶವಿದ್ದು, ೨೦೧೦–೧೧ನೇ ಸಾಲಿನಲ್ಲಿ ೩೧೬ ವಿದ್ಯಾರ್ಥಿಗಳು ಪ್ರವೇಶ ಪಡೆದು, ಈ ನಿಲಯಗಳ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೩೦ ಅನ್ನು ನೋಡಿ.

**ಕೋಷ್ಟಕ– ೧೬.೩೦: ೨೦೧೦–೧೧ರ ಸಾಲಿನಲ್ಲಿ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಮತ್ತು ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳು**

| ಕ್ರಮ ಸಂಖ್ಯೆ | ತಾಲ್ಲೂಕು | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇರುವ ಸ್ಥಳ | ಮಂಜೂರಾತಿ ಸಂಖ್ಯೆ | ಪ್ರವೇಶ ಪಡೆದ ಮಕ್ಕಳ ಸಂಖ್ಯೆ |
|---|---|---|---|---|
| ೧ | **ಚಾಮರಾಜನಗರ** | ಚಾಮರಾಜನಗರ ಟೌನ್ | ೨೫೦ | ೧೪೯ |
| ೨ | **ಗುಂಡ್ಲುಪೇಟೆ** | ಹಂಗಳ | ೨೦೦ | ೭೫ |
| ೩ | **ಕೊಳ್ಳೇಗಾಲ** | ಕೊಳ್ಳೇಗಾಲ ಟೌನ್ | ೨೦೦ | ೯೨ |
|  | **ಒಟ್ಟು** | ೩ | **೪೫೦** | ೩೧೬ |

*(ಆಧಾರ : ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಾಮರಾಜನಗರ)*

## ಪ್ರತಿಭಾವಂತರಿಗೆ ನಗದು ಬಹುಮಾನ

ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನವಲ್ಲದೆ, ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನವನ್ನೂ, ಪ್ರತಿಭಾವಂತರಿಗೆ ನಗದು ಬಹುಮಾನಗಳನ್ನು ಮಂಜೂರು ಮಾಡುವಂತಹ ಕಾರ್ಯಕ್ರಮಗಳು ಮತ್ತು ಪರಿಶಿಷ್ಟ ಜಾತಿಯವರಿಗಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇರುವ ಇನ್ನಿತರ ಕಾರ್ಯಕ್ರಮಗಳೂ ಕೂಡ ಸಮಾನ ನಿಯಮಗಳನ್ನನುಸರಿಸಿ ಪರಿಶಿಷ್ಟ ವರ್ಗದವರಿಗಾಗಿ ಈ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಭಾರತ ಸರ್ಕಾರವು ನಿಗದಿ ಪಡಿಸಿರುವ ವಿದ್ಯಾರ್ಥಿ ವೇತನದ ದರಕ್ಕಿಂತಲೂ ಹೆಚ್ಚಾಗಿ, ನಿಲಯಾರ್ಥಿಗಳಿಗೆ ಆಹಾರಕ್ಕಾಗಿ ಖರ್ಚು ಮಾಡಿದ್ದಲ್ಲಿ, ರಾಜ್ಯ ಸರ್ಕಾರದಿಂದ ಹೆಚ್ಚುವರಿ ಊಟ ಮತ್ತು ವಸತಿಯ ವೆಚ್ಚಕ್ಕಾಗಿ ಅನುದಾನ ಮಂಜೂರು ಮಾಡಲಾಗುತ್ತದೆ.

## ಗಿರಿಜನ ಉಪ ಯೋಜನೆ

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ, ಗಿರಿಜನ ಉಪ ಯೋಜನೆಯನ್ನು ೧೯೭೬–೧೯೭೭ರಲ್ಲಿ ಪ್ರಾರಂಭಿಸಲಾಗಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ೧೯೯೨ರಿಂದ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ. ಈ ವರ್ಗಕ್ಕೆ ಸೇರಿದ ಕುಟುಂಬಗಳನ್ನು, ಬಡತನ ರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಅವರಿಗೆ ಒದಗಿಸುವುದು, ಅವರ ಕಲೆ ಮತ್ತು ಸಂಸ್ಕೃತಿಯನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು, ಈ ವರ್ಗದ ಹಾಡಿ ಹಾಗೂ ಕಾಲೋನಿಗಳಿಗೆ ಕನಿಷ್ಟ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು, ಮತ್ತು ಪರಿಶಿಷ್ಟ ವರ್ಗದವರ ಪ್ರಗತಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು––ಇವೇ ಮೊದಲಾದ ಅನುಕೂಲಗಳನ್ನು ಈ ಗಿರಿಜನ ಉಪ ಯೋಜನೆಯಡಿ, ಸುಮಾರು ಐವತ್ತೆರಡು ವಿವಿಧ ಇಲಾಖೆಗಳ ಮೂಲಕ ಮಾಡಿಕೊಡಲಾಗುತ್ತದೆ.

## ಮೂಲ ನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ಕಾರ್ಯಕ್ರಮ

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ವರ್ಗದ ಜೇನು ಕುರುಬ ಮತ್ತು ಕೊರಗ ಜಾತಿಗಳನ್ನು ಮೂಲ ನಿವಾಸಿ ಬುಡಕಟ್ಟು ಗುಂಪುಗಳೆಂದು ಗುರುತಿಸಲಾಗಿದೆ. ಈ ಜನಾಂಗದವರ ಅಭಿವೃದ್ಧಿಗೆ ಕೇಂದ್ರ ಮತ್ತು

ರಾಜ್ಯ ಸರ್ಕಾರಗಳೆರಡೂ ಕೆಲವು ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಿ ೨೦೦೪–೦೫ನೇ ಸಾಲಿನಿಂದ ಅನುಷ್ಠಾನಗೊಳಿಸುತ್ತಿವೆ. ಸಂವಿಧಾನದ ಪರಿಚ್ಛೇದ ೨೭೫(೧)ರಡಿಯಲ್ಲಿ ಕೇಂದ್ರ ಸರ್ಕಾರದ ವಿಶೇಷ ಸಹಾಯದೊಂದಿಗೆ ಮೂಲ ನಿವಾಸಿ ಬುಡಕಟ್ಟುಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸಲುವಾಗಿ, ಕೆಲ ಗುಂಪುಗಳನ್ನು ಆಯ್ಕೆ ಮಾಡಲಾಗಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನ ಅಗ್ಗದಹಳ್ಳ, ಕಣಿಯನಪುರ; ಕೊಳ್ಳೇಗಾಲ ತಾಲೂಕಿನ ಹೊಸಪೋಡುಗಳನ್ನು ೨೦೦೪–೦೫ನೇ ಸಾಲಿನಲ್ಲೂ; ಯಳಂದೂರು ತಾಲೂಕಿನ ಯರಕನಗದ್ದೆ ಮತ್ತು ಚಾಮರಾಜನಗರ ತಾಲೂಕಿನ ಬಾಣವಾಡಿಗಳನ್ನು ೨೦೦೫–೦೬ನೇ ಸಾಲಿನಲ್ಲೂ ಗುಂಪುಗ್ರಾಮಗಳಾಗಿ ಗುರುತಿಸಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಯಿತು.

ಮೂಲ ನಿವಾಸಿಗಳೆಂದು ಗುರುತಿಸಲಾದ ಜೇನು ಕುರುಬರು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಕೇಂದ್ರೀಕೃತಗೊಂಡಿದ್ದಾರೆ. ಇಲ್ಲಿ ೩೭೮ ಜೇನು ಕುರುಬರ ಕುಟುಂಬಗಳಿವೆ.

## ಕೇಂದ್ರ ವಲಯ ಕಾರ್ಯಕ್ರಮಗಳು

ಭಾರತ ಸರ್ಕಾರವು ಬಡತನರೇಖೆಗಿಂತ ಕೆಳಗಿರುವ ಪರಿಶಿಷ್ಟ ವರ್ಗದವರಿಗೆ ಆರ್ಥಿಕ ಉನ್ನತಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ, ಪರಿಶಿಷ್ಟ ವರ್ಗದವರ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸಿಕೊಡುವ ಸಲುವಾಗಿ ಹಾಗೂ ಮೂಲನಿವಾಸಿ ಬುಡಕಟ್ಟು ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ, ಭಾರತ ಸಂವಿಧಾನದ ಅನುಚ್ಛೇದ ೨೭೫(೧)ರ ಅಡಿಯಲ್ಲಿ ವಿಶೇಷ ಕೇಂದ್ರೀಯ ಸಹಾಯ ಧನವನ್ನು ಬಿಡುಗಡೆ ಮಾಡುತ್ತದೆ. ಈ ಜಿಲ್ಲೆಯ ಗಿರಿಜನ ಕಾಲೋನಿಗಳ ಫಲಾನುಭವಿಗಳಿಗೆ ೨೦೧೦–೧೧ನೇ ಸಾಲುಗಳಲ್ಲಿ ಬಿಡುಗಡೆಯಾದ ವಿಶೇಷ ಕೇಂದ್ರೀಯ ಅನುದಾನ ಮತ್ತು ಕೈ ಗೊಂಡ ಕಾರ್ಯಕ್ರಮಗಳ ವಿವರಗಳನ್ನು ಕೋಷ್ಟಕ ೧೬.೩೧ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ ೧೬.೩೧: ೨೦೧೦–೧೧ನೇ ಸಾಲಿನಲ್ಲಿ ಬಿಡುಗಡೆಯಾದ ವಿಶೇಷ ಕೇಂದ್ರೀಯ ಅನುದಾನ ಮತ್ತು ಕೈಗೊಂಡ ಕಾರ್ಯಕ್ರಮಗಳ ವಿವರ.**

| ತಾಲೂಕು | ಭೌತಿಕ ಗುರಿ | ಭೌತಿಕ ಸಾಧನೆ | ವೆಚ್ಚ (ಲಕ್ಷ ₹ ಗಳಲ್ಲಿ) | ಕಾರ್ಯಕ್ರಮಗಳ ವಿವರ |
|---|---|---|---|---|
| ಚಾಮರಾಜನಗರ | ೧೦ | ೧೦ | ೧೦ | ಚಾಮರಾಜನಗರ ತಾಲೂಕು ಅಮಚವಾಡಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗಳಿಗೆ ಸಹಾಯಧನ |
| | ೧೦ | ೧೦ | ೧೦ | ಚಾಮರಾಜನಗರ ತಾಲೂಕು ಹರದನಹಳ್ಳಿ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| | ೩೦ | ೩೦ | ೩೦ | ಚಾಮರಾಜನಗರ ತಾಲೂಕು ಬೇಡಗುಳಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆ ಎತ್ತು/ಪಶುಸಂಗೋನಾ ಚಟುವಟಿಕೆಗೆ ಸಹಾಯಧನ |
| | ೧೮ | ೧೮ | ೧೮ | ಚಾಮರಾಜನಗರ ತಾಲೂಕು ಮೊಣಕೈಪೋಡು ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗಳಿಗೆ ಸಹಾಯಧನ |
| | ೧೦ | ೧೦ | ೧.೫೦ | ಚಾಮರಾಜನಗರ ತಾಲೂಕು ಹೊಂಗನೂರು ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗಳಿಗೆ ಸಹಾಯಧನ |
| | ೪ | ೪ | ೦.೬೦ | ಚಾಮರಾಜನಗರ ತಾಲೂಕು ರಾಮಯ್ಯನಪೋಡು ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗಳಿಗೆ ಸಹಾಯಧನ |

*ಮುಂದುವರೆದಿದೆ*

| ತಾಲೂಕು | ಭೌತಿಕ ಗುರಿ | ಭೌತಿಕ ಸಾಧನೆ | ವೆಚ್ಚ (ಲಕ್ಷ ₹ ಗಳಲ್ಲಿ) | ಕಾರ್ಯಕ್ರಮಗಳ ವಿವರ |
|---|---|---|---|---|
| ಚಾಮರಾಜನಗರ | ೧೦ | ೧೦ | ೧.೫೦ | ಚಾಮರಾಜನಗರ ತಾಲೂಕು ಕೆಂಪನಪುರ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗಳಿಗೆ ಸಹಾಯಧನ |
| | ೧೦ | ೧೦ | ೧.೫೦ | ಚಾಮರಾಜನಗರ ತಾಲೂಕು ಕಾಡಿಗೆರೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗಳಿಗೆ ಸಹಾಯಧನ |
| **ಒಟ್ಟು** | **೧೨೨** | **೧೨೨** | **೧೭.೮೦** | |
| ಗುಂಡ್ಲುಪೇಟೆ | ೧೦ | ೧೦ | ೧.೫೦ | ಗುಂಡ್ಲುಪೇಟೆ ತಾಲೂಕು ಮದ್ದೂರು ಕಾಲೋನಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಗುಂಡ್ಲುಪೇಟೆ ತಾಲೂಕು ಚೆನ್ನಿಕಟ್ಟೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಗುಂಡ್ಲುಪೇಟೆ ತಾಲೂಕು ಕೊಡಸೋಗೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಗುಂಡ್ಲುಪೇಟೆ ತಾಲೂಕು ಹಂಗಳ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೪ | ೪ | ೦.೬೦ | ಗುಂಡ್ಲುಪೇಟೆ ತಾಲೂಕು ಕಾರೇಮಾಳ ಕಾಲೋನಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧ | ೧ | ೦.೧೫ | ಗುಂಡ್ಲುಪೇಟೆ ತಾಲೂಕು ಮೇಲುಕಾಮನಹಳ್ಳಿ ಕಾಲೋನಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| **ಒಟ್ಟು** | **೪೫** | **೪೫** | **೬.೭೫** | |
| ಕೊಳ್ಳೇಗಾಲ | ೨೦ | ೨೦ | ೩.೦೦ | ಕೊಳ್ಳೇಗಾಲ ತಾಲ್ಲೂಕು ಸೇಬಿನಕೋಬೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಕೊಳ್ಳೇಗಾಲ ತಾಲೂಕು ಇರುದಾಳ್‌ದೊಡ್ಡಿ ಕಾಲೋನಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಕೊಳ್ಳೇಗಾಲ ತಾಲ್ಲೂಕು ಮೊಳ್ಳಾಕಟ್ಟೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಕೊಳ್ಳೇಗಾಲ ತಾಲೂಕು ಚಂಗಡಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೮ | ೧೮ | ೨.೭೦ | ಕೊಳ್ಳೇಗಾಲ ತಾಲ್ಲೂಕು ಯರಕಟ್ಟೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೨೦ | ೨೦ | ೩.೦೦ | ಕೊಳ್ಳೇಗಾಲ ತಾಲ್ಲೂಕು ಗೊಂಬೆಗಲ್ಲು ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೩೦ | ೩೦ | ೪.೫೦ | ಕೊಳ್ಳೇಗಾಲ ತಾಲ್ಲೂಕು ಹಾವಿನಮೂಲೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೬ | ೧೬ | ೨.೪೦ | ಕೊಳ್ಳೇಗಾಲ ತಾಲ್ಲೂಕು ಕೆರೆದಿಂಬ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |

*ಮುಂದುವರೆದಿದೆ*

| ತಾಲೂಕು | ಭೌತಿಕ ಗುರಿ | ಭೌತಿಕ ಸಾಧನೆ | ವೆಚ್ಚ (ಲಕ್ಷ ₹ ಗಳಲ್ಲಿ) | ಕಾರ್ಯಕ್ರಮಗಳ ವಿವರ |
|---|---|---|---|---|
| ಕೊಳ್ಳೇಗಾಲ | ೧೫ | ೧೫ | ೨.೨೫ | ಕೊಳ್ಳೇಗಾಲ ತಾಲೂಕು ನಲ್ಲಿಕಲ್ಲು ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಉಳುಮೆಎತ್ತು/ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಕೊಳ್ಳೇಗಾಲ ತಾಲೂಕು ಬಂಡಳ್ಳಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೭ | ೭ | ೦.೭೦ | ಕೊಳ್ಳೇಗಾಲ ತಾಲ್ಲೂಕು ಬೆಂಡ್ರಳ್ಳಿ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| | ೬ | ೬ | ೦.೬೦ | ಕೊಳ್ಳೇಗಾಲ ತಾಲ್ಲೂಕು ಮುಡಿಗುಮಡ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| | ೬ | ೬ | ೦.೬೦ | ಕೊಳ್ಳೇಗಾಲ ತಾಲ್ಲೂಕು ಮುತ್ತಾಪುರದಹುಂಡಿ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| | ೪ | ೪ | ೦.೪೦ | ಕೊಳ್ಳೇಗಾಲ ತಾಲ್ಲೂಕು ಹಾಲಳ್ಳಿ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| | ೨ | ೨ | ೦.೨೦ | ಕೊಳ್ಳೇಗಾಲ ತಾಲ್ಲೂಕು ಕೋಡಿಪುರ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| | ೨ | ೨ | ೦.೨೦ | ಕೊಳ್ಳೇಗಾಲ ತಾಲ್ಲೂಕು ಗೊಬ್ಬಳೀಪುರ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| | ೪ | ೪ | ೦.೪೦ | ಕೊಳ್ಳೇಗಾಲ ತಾಲ್ಲೂಕು ಸೂರಾಪುರ ಗ್ರಾಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ |
| **ಒಟ್ಟು** | **೨೦೦** | **೨೦೦** | **೨೮.೪೫** | |
| ಯಳಂದೂರು | ೧೦ | ೧೦ | ೧.೫೦ | ಯಳಂದೂರು ತಾಲೂಕು ಕೆ.ದೇವರಹಳ್ಳಿ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೫ | ೫ | ೦.೭೫ | ಯಳಂದೂರು ತಾಲೂಕು ಈರನಕಟ್ಟೆ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| | ೧೦ | ೧೦ | ೧.೫೦ | ಯಳಂದೂರು ತಾಲೂಕು ಅಗರ ಗ್ರಾಮದ ಸ್ವಸಹಾಯ ಸಂಘದ ಫಲಾನುಭವಿಗಳಿಗೆ ಪಶುಸಂಗೋಪನಾ ಚಟುವಟಿಕೆಗೆ ಸಹಾಯಧನ |
| **ಒಟ್ಟು** | **೨೫** | **೨೫** | **೩.೭೫** | |

ಕೇಂದ್ರದ ನೆರವಿನಲ್ಲಿ ಆದಿವಾಸಿಗಳ ಅಭಿವೃದ್ಧಿಗೆ ಕೈಗೊಂಡಿರುವ ಇನ್ನೊಂದು ಕಾರ್ಯಕ್ರಮವೆಂದರೆ, ಮೂಲಭೂತ ಸೌಕರ್ಯಗಳ ಯೋಜನೆ. ಭಾರತ ಸಂವಿಧಾನ ಅನುಚ್ಛೇದ ೨೭೫(೧)ರಡಿಯಲ್ಲಿ ಈ ಜಿಲ್ಲೆಯ ಮೂಲ ನಿವಾಸಿ ಸಮುದಾಯಗಳ ಅಭಿವೃದ್ಧಿಗೆ ಆಯ್ದ ಪ್ರದೇಶಗಳು, ಫಲಾನುಭವಿಗಳು ಮತ್ತು ವೆಚ್ಚದ ವಿವರಗಳನ್ನು ಕೋಷ್ಟಕ ೧೬.೩೨ರಲ್ಲಿ ನಮೂದಿಸಲಾಗಿದೆ.

**ಕೋಷ್ಟಕ ೧೬.೩೨: ಸಂವಿಧಾನದ ಪರಿಚ್ಛೇದ ೨೭೫(೧)ರಡಿಯಲ್ಲಿ ಮೂಲ ನಿವಾಸಿ ಸಮುದಾಯಗಳ ಅಭಿವೃದ್ಧಿಗೆ ಜಿಲ್ಲೆಯಲ್ಲಿ ೨೦೦೬-೦೭ ರಿಂದ ೨೦೦೯-೨೦೧೦ರ ವರೆಗಿನ ಸಾಲುಗಳಲ್ಲಿ, ಆಯ್ದ ಪ್ರದೇಶಗಳು, ಫಲಾನುಭವಿಗಳು ಮತ್ತು ವೆಚ್ಚದ ವಿವರಗಳು**

| ವರ್ಷ | ತಾಲೂಕು | ಆಯ್ದ ಗಿರಿಜನ ಕಾಲೋನಿ ಪ್ರದೇಶಗಳು | ಚಟುವಟಿಕೆಗಳು | ಮಾಡಿದ ವೆಚ್ಚ (ಲಕ್ಷ ₹ ಗಳಲ್ಲಿ) |
|---|---|---|---|---|
| ೨೦೦೬-೦೭ | ಚಾಮರಾಜನಗರ | ೧. ರಂಗಸಂದ್ರ ಗಿರಿಜನ ಕಾಲೋನಿ | ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಕಿರು ನೀರು ಪೂರೈಕೆ. | ೮.೦೦ |
| | | ೨.ಮುನೇಶ್ವರ ಗಿರಿಜನ ಕಾಲೋನಿ | ರಸ್ತೆ ಅಭಿವೃದ್ಧಿ, ಕಲ್ವರ್ಟ್ /ಸೇತುವೆ ನಿರ್ಮಾಣ, ಕಿರು ನೀರು ಪೂರೈಕೆ, | ೫.೦೦ |
| | | ೩.ಗೋಡೆ ಮಡುವಿನ ದೊಡ್ಡಿ | ರಸ್ತೆ ಅಭಿವೃದ್ಧಿ, | ೫.೦೦ |
| | ಯಳಂದೂರು | ೧. ಪುರಾಣೀಪೋಡು | ರಸ್ತೆ ಅಭಿವೃದ್ಧಿ, ಕಲ್ವರ್ಟ್ /ಸೇತುವೆನಿರ್ಮಾಣ | ೩.೫೦ |
| | | ೨. ಬಂಗ್ಲೆಪೋಡು | ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಕಲ್ವರ್ಟ್/ ಸೇತುವೆ ನಿರ್ಮಾಣ | ೦.೯೦ |
| | ಕೊಳ್ಳೇಗಾಲ | ೧. ಒಡೆಯರ ಪಾಳ್ಯ | ರಸ್ತೆ ಅಭಿವೃದ್ಧಿ, ಕಿರು ನೀರು ಪೂರೈಕೆ. | ೪.೯೩ |
| | | ೨. ಗಾಣಿಗಮಂಗಲ | ರಸ್ತೆ ಅಭಿವೃದ್ಧಿ. | ೩.೦೦ |
| | ಗುಂಡ್ಲುಪೇಟೆ | ೧. ಗುಡ್ಡೇಕೇರಿ | ರಸ್ತೆ ಅಭಿವೃದ್ಧಿ, ಕಲ್ವರ್ಟ್/ಸೇತುವೆ ನಿರ್ಮಾಣ | ೬.೯೦ |
| | | ೨. ಮೂಕಹಳ್ಳಿ | ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಕಿರು ನೀರು ಪೂರೈಕೆ, ಕಲ್ವರ್ಟ್/ಸೇತುವೆ ನಿರ್ಮಾಣ | ೮.೦೦ |
| ೨೦೦೭-೦೮ | ಚಾಮರಾಜನಗರ | ೧.ಶ್ರೀನಿವಾಸಪುರ | ರಸ್ತೆ ಅಭಿವೃದ್ಧಿ, ರಸ್ತೆ ಮತ್ತು ಚರಂಡಿ ನಿರ್ಮಾಣ, | ೪.೦೦ |
| | | ೨.ಎತ್ತೇಗೌಡನ ದೊಡ್ಡಿ | ರಸ್ತೆ, ಚರಂಡಿ ಮತ್ತು ಡಕ್ಟ್ ನಿರ್ಮಾಣ | ೪.೯೦ |
| | ಯಳಂದೂರು | ೧.ಬಿಳಿಗಿರಿರಂಗನ ಬೆಟ್ಟ, ಕಲ್ಯಾಣೀ ಪೋಡು | ರಸ್ತೆ ನಿರ್ಮಾಣ, | ೨.೫೦ |
| | | ೨.ಯಳಂದೂರು | ಸಮುದಾಯ ಭವನ ನಿರ್ಮಾಣ | ೫.೦೦ |
| | ಕೊಳ್ಳೇಗಾಲ | ೧.ಕೆ.ಕೆ.ಪೋಡು | ರಸ್ತೆ ಅಭಿವೃದ್ಧಿ, ಚರಂಡಿ ಮತ್ತು ಡಕ್ಟ್ ನಿರ್ಮಾಣ, | ೬.೦೦ |
| | | ೨. ಹಿರಿಯಂಬಲ | ರಸ್ತೆ ಅಭಿವೃದ್ಧಿ, ಚರಂಡಿ ಮತ್ತು ಡಕ್ಟ್ ನಿರ್ಮಾಣ, | ೫.೯೯ |
| | | ೩. ಕೊಂಬುಡಿಕ್ಕಿ | ಕಾಂಕ್ರೀಟ್ ರಸ್ತೆ, ತೆರೆದ ಬಾವಿ, ಚರಂಡಿ ಮತ್ತು ಡಕ್ಟ್ ನಿರ್ಮಾಣ, ಮನೆಗೆ ಮೆಟ್ಟಿಲುಗಳು, ಶಾಲಾ ಮಕ್ಕಳಿಗೆ ಶೌಚಾಲಯ, ಸ್ನಾನದ ಮನೆ, ವಿದ್ಯುತ್ ಸೌಲಭ್ಯ ಇತ್ಯಾದಿ | ೭.೮೧೫ |
| | ಗುಂಡ್ಲುಪೇಟೆ | ೧. ಉಪಕಾರ | ಚರಂಡಿ ನಿರ್ಮಾಣ, ಪೈಪ್ ಲೈನ್, ಮೆಟ್ಲಿಂಗ್ ಮತ್ತು ತೊಂಬೆ ಅಳವಡಿಕೆ, ಕಲ್ವರ್ಟ್ ನಿರ್ಮಾಣ | ೧೨.೪೧ |
| | | ೨. ಚೆನ್ನಿಕಟ್ಟೆ | ರಸ್ತೆ ಮೆಟ್ಲಿಂಗ್, ಪೈಪ್ ಲೈನ್ ಮತ್ತು ಚರಂಡಿ ನಿರ್ಮಾಣ | ೭.೬೨ |

*ಮುಂದುವರೆದಿದೆ*

| | | | | |
|---|---|---|---|---|
| ೨೦೦೮-೦೯ | **ಚಾಮರಾಜನಗರ** | ೧. ಹೊಸಪೋಡು<br>೨. ಕಾಳಿಕಾಂಬ ಕಾಲೋನಿ | ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಸಮುದಾಯ ಭವನ ನಿರ್ಮಾಣ | ೧೯.೦೦ |
| | **ಯಳಂದೂರು** | ೧. ಪುರಾಣೀಪೋಡು<br>೨. ಮುತ್ತುಗದಗದ್ದೆ | ರಸ್ತೆ ಅಭಿವೃದ್ಧಿ, ಪೈಪ್ ಕಲ್ವರ್ಟ್, ಮನೆಗಳ ವಿದ್ಯುದೀಕರಣ, | ೧೪.೫೦ |
| | **ಕೊಳ್ಳೇಗಾಲ** | ೧. ದಂಟಳ್ಳಿ<br>೨. ಕೊಳ್ಳೇಗಾಲ ಟೌನ್ | ೪ ರಸ್ತೆಗಳ ಅಭಿವೃದ್ಧಿ ಮತ್ತು ಸಮುದಾಯ ಭವನ ನಿರ್ಮಾಣ | ೨೪.೪೮ |
| | **ಗುಂಡ್ಲುಪೇಟೆ** | ೧. ಮುಕ್ತಿ ಕಾಲೋನಿ<br>೨. ತೆರೆಕಣಾಂಬಿ | ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಕಂಕ್ರೀಟ್ ರಸ್ತೆ ನಿರ್ಮಾಣ, ಸಮುದಾಯ ಭವನ | ೧೯.೦೦ |

*(ಆಧಾರ : ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಾಮರಾಜನಗರ)*

**ಕೋಷ್ಟಕ ೧೬.೩೩: ಸಂವಿಧಾನದ ಪರಿಚ್ಛೇದ ೨೭೫(೧)ರಡಿಯಲ್ಲಿ ಮೂಲ ನಿವಾಸಿ ಸಮುದಾಯಗಳ ಅಭಿವೃದ್ಧಿಗೆ ಜಿಲ್ಲೆಯಲ್ಲಿ ೨೦೧೦-೧೧ನೇ ಸಾಲಿನಲ್ಲಿ, ಆಯ್ದ ಪ್ರದೇಶಗಳು, ಫಲಾನುಭವಿಗಳು ಮತ್ತು ವೆಚ್ಚದ ವಿವರಗಳು**

| **ತಾಲೂಕು** | **ಆಯ್ದ ಗಿರಿಜನ ಕಾಲೋನಿ ಪ್ರದೇಶಗಳು** | **ಚಟುವಟಿಕೆಗಳು** | **ಮಾಡಿದ ಖರ್ಚು (ಲಕ್ಷ ₹ ಗಳಲ್ಲಿ)** | |
|---|---|---|---|---|
| | | | **ಕೇಂದ್ರದ ಪಾಲು** | **ರಾಜ್ಯದ ಪಾಲು** |
| **ಗುಂಡ್ಲುಪೇಟೆ** | ಹಾಡಿನ ಕಣಿವೆ - ೨೦ | ಮನೆಗಳ ನಿರ್ಮಾಣ | ೮೯.೨೫ | ೫೯.೫೦ |
| | ಗುಡ್ಡೇಕೆರೆ - ೭ | | | |
| | ಕಾರೇಮಾಳ - ೧೦ | | | |
| | ಆನಂಜಿಹುಂಡಿ - ೭ | | | |
| | ಹಗ್ಗದಹಳ್ಳ - ೧೦ | | | |
| | ಲಕ್ಕಿಪುರ - ೭ | | | |
| | ಮಗುವಿನಹಳ್ಳಿ - ೫ | | | |
| | ಮದ್ದೂರು ಕಾಲೋನಿ - ೧೨ | | | |
| | ಮಗುವಿನಹಳ್ಳಿ - ೫ | | | |
| | ಮದ್ದೂರು ಕಾಲೋನಿ -೧೨ | | | |
| | ಆನಂಜಿಹುಂಡಿ - ೧೩ | ಆರ್ಥಿಕೋನ್ನತಿ ಕಾರ್ಯಕ್ರಮ | ೪.೫೦ | - |
| | ಉಪಕಾರ ಕಾಲೋನಿ - ೪೨ | | | |
| | ಗುಡ್ಡೇಕೆರೆ - ೨೨ | | | |
| | ಒಟ್ಟು ಮೊತ್ತ | | ೯೩.೭೫ | ೫೯.೫೦ |
| **ಯಳಂದೂರು** | - | - | - | - |
| **ಕೊಳ್ಳೇಗಾಲ** | - | - | - | - |
| **ಚಾಮರಾಜನಗರ** | - | - | - | - |

## ಮೂಲನಿವಾಸಿ ಸಮುದಾಯಗಳ ಶೈಕ್ಷಣಿಕ ಪ್ರೋತ್ಸಾಹ

ಒಂದರಿಂದ ನಾಲ್ಕನೇ ತರಗತಿ, ಐದರಿಂದ ಏಳನೇ ತರಗತಿ ಮತ್ತು ಎಂಟರಿಂದ ಹತ್ತನೇ ತರಗತಿ ಹಾಗೂ ಕಾಲೇಜುಗಳಲ್ಲಿ ಓದುತ್ತಿರುವ ಜೇನು ಕುರುಬ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ₹ ೧೦೦, ₹ ೧೫೦, ₹ ೨೦೦ ಮತ್ತು ₹ ೨೫೦ಗಳ ವಿಶೇಷ ವಾರ್ಷಿಕ ಪ್ರೋತ್ಸಾಹ ಧನ ಮಂಜೂರಾತಿ; ವಿದ್ಯಾರ್ಥಿಗಳ ಪೋಷಕರಿಗೆ

ವಾರ್ಷಿಕ ₹ ೨೦೦ಗಳ ವಿಶೇಷ ಪ್ರೋತ್ಸಾಹ ಧನ ಮಂಜೂರಾತಿ; ಒಂದರಿಂದ ಹತ್ತನೇ ತರಗತಿಯ ಕೊರಗ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು ಲೇಖನ ಸಾಮಗ್ರಿ ಮಂಜೂರಾತಿ; ಏಳನೇ ತರಗತಿಯಲ್ಲಿ ಮತ್ತು ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಗಳಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾಗುವ ಆದಿವಾಸಿ ಪಂಗಡದ ವಿದ್ಯಾರ್ಥಿಗಳಿಗೆ ಕ್ರಮವಾಗಿ ತಲಾ ₹ ೨೫೦೦ ಹಾಗೂ ₹ ೫೦೦೦ ಗಳ ಪ್ರೋತ್ಸಾಹ ಧನ ಮಂಜೂರಾತಿ; ಮುಂತಾದವು ವಿಶೇಷವಾಗಿ ಯೋಜಿಸಲ್ಪಟ್ಟ ಶೈಕ್ಷಣಿಕ ಕಾರ್ಯಕ್ರಮಗಳಾಗಿವೆ.

## ದೊಡ್ಡ ಪ್ರಮಾಣದ ಆದಿವಾಸಿ ವಿವಿಧೋದ್ದೇಶ ಸಹಕಾರಿ ಸಂಘಗಳು

ಮೇಲಿನವಲ್ಲದೆ, ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಪರಿಶಿಷ್ಟ ವರ್ಗದವರ ಪ್ರಗತಿಗಾಗಿ ಕಾರ್ಯಗತಗೊಳಿಸಲಾಗುತ್ತಿದ್ದು, ಅವುಗಳಲ್ಲಿ ಲ್ಯಾಂಪ್ಸ್ ಹಾಗೂ ಜನಶ್ರೀ ಕಾರ್ಯಕ್ರಮಗಳನ್ನು ಪ್ರಮುಖವಾಗಿ ಇಲ್ಲಿ ಉಲ್ಲೇಖಿಸಬಹುದಾಗಿದೆ. ಮೇಲೆ ಹೇಳಿರುವಂತೆ ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾಗಿದ್ದು, ರಾಜ್ಯದಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ಇಪ್ಪತ್ತೊಂದು ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘಗಳು(ಲ್ಯಾಂಪ್ಸ್) ಕೆಲಸ ಮಾಡುತ್ತಿವೆ. ಈ ಸಂಘಗಳಲ್ಲಿ ಪರಿಶಿಷ್ಟ ವರ್ಗದ ಜನರನ್ನು ಸದಸ್ಯರನ್ನಾಗಿ ನೋಂದಾಯಿಸಿಕೊಳ್ಳಲಾಗುತ್ತದೆ. ಮತ್ತು ಅವರು ಕೃಷಿ ಚಟುವಟಿಕೆಗಳನ್ನು ಹಾಗು ಕಲೆಗಾರಿಕೆ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಅವರಿಗೆ ಅಲ್ಪಾವಧಿ ಸಾಲ, ಮಧ್ಯಾವಧಿ ಸಾಲ ಹಾಗೂ ಇತರೇ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಿ ಲಾಭಾಂಶವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಇದಲ್ಲದೆ, ಸಹಕಾರ ಸಂಘದ ಮೂಲಕ ಜೇನು ಘಟಕಗಳನ್ನು ಪ್ರಾರಂಭಿಸಲು, ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಸಹಾಯಧನ ನೀಡಲಾಗುತ್ತಿದೆ. ಈ ಸಹಕಾರ ಸಂಘಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸಲಾಗುವ ಶೈಕ್ಷಣಿಕ ಸಂಸ್ಥೆಗಳಿಗೆ ಬುಡಕಟ್ಟು ಜನರಿಗೆ ಆಹಾರ ಧಾನ್ಯಗಳನ್ನೂ ಸರಬರಾಜು ಮಾಡುತ್ತವೆ. ಎಲ್ಲ ಲ್ಯಾಂಪ್ಸ್‌ಗಳಲ್ಲಿ ಬುಡಕಟ್ಟು ಜನಾಂಗದ ಸದಸ್ಯರಲ್ಲೇ ಒಬ್ಬರನ್ನು ಮಂಡಳಿಯ ನಿರ್ದೇಶಕರಾಗಿ ಚುನಾಯಿಸಲಾಗುತ್ತದೆ. ಈ ಜಿಲ್ಲೆಯಲ್ಲಿರುವ ಲ್ಯಾಂಪ್ಸ್ ಸಹಕಾರ ಸಂಘಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

೧) ಕೊಳ್ಳೇಗಾಲ ತಾಲೂಕು ಲ್ಯಾಂಪ್ ಸೊಸೈಟಿ, ಹನೂರು. ೨) ಗುಂಡ್ಲುಪೇಟೆ ತಾಲೂಕು ಲ್ಯಾಂಪ್ ಸೊಸೈಟಿ, ಗುಂಡ್ಲುಪೇಟೆ ೩) ಯಳಂದೂರು ತಾಲೂಕು ಲ್ಯಾಂಪ್ ಸೊಸೈಟಿ, ಬಿಳಿಗಿರಿರಂಗನ ಬೆಟ್ಟ ೪) ಚಾಮರಾಜನಗರ ತಾಲೂಕು ಲ್ಯಾಂಪ್ ಸೊಸೈಟಿ, ಚಾಮರಾಜನಗರ.

ಹುಣಿಸೇಹಣ್ಣು, ಜೇನು–ಮೇಣ, ಜೇನುತುಪ್ಪ, ಕರಿಮೆಣಸು, ಕಾಡು ಆಲಿವ್, ಮಾಕ್ಳಿಬೇರು, ಸೀಗೆಕಾಯಿ, ಅಂಟುವಾಳದ ಕಾಯಿ, ಅಂಟು, ಬೇವಿನಬೀಜ, ವಾಟೆಹುಳಿ, ಸೊಗದೇಬೇರು, ಮರಸೇಬು, ಕಕ್ಕೇಕಾಯಿ, ನೆಲ್ಲಿಕಾಯಿ, ರೇಷ್ಮೆಹತ್ತಿ, ರಾಮಪತ್ರೆ, ಮಾವಿನಹಣ್ಣು, ಲಿಚಿಹಣ್ಣು, ಕಾಡುಹರಳಬೀಜ, ಚಗಚೆಬೀಜ, ಅಳಲೆಕಾಯಿ, ಹೊಂಗೆಬೀಜ ಮುಂತಾದವು, ರಾಜ್ಯದಲ್ಲಿ ಲಭ್ಯವಿರುವ ಅರಣ್ಯ ಉತ್ಪನ್ನಗಳಾಗಿವೆ.

**ಜನಶ್ರೀ ವಿಮಾ ಯೋಜನೆ:** ಈ ಯೋಜನೆಯನ್ನು ೧೦.೮.೨೦೦೦ದಂದು ಪ್ರಧಾನ ಮಂತ್ರಿಗಳಿಂದ ಪ್ರಾರಂಭಿಸಲಾಗಿದೆ. ಅಲ್ಪ ಆದಾಯದ ಬಡಜನರು ವಿಮೆ ಮಾಡಿಸಿ ಭದ್ರತೆಯ ಭಾವನೆಯನ್ನು ಹೊಂದಲೆಂಬ ಉದ್ದೇಶದಿಂದ ಇದನ್ನು ಜೀವ ವಿಮಾ ನಿಗಮದಿಂದ ಯೋಜಿತಗೊಂಡು ಜಾರಿಗೊಳಿಸಲಾಗಿದೆ. ಮುವ್ವತ್ತೇಳು

ರೀತಿಯ ಉದ್ಯೋಗಿಗಳಿಗೆ ಇದು ಅನ್ವಯಿಸುತ್ತದೆ. ಹಾಗೂ ಒಂದು ವರ್ಷಕ್ಕೆ ಮಾತ್ರ ಅತ್ಯಂತ ಭದ್ರತೆ ಒದಗಿಸುತ್ತದೆ. ಯೂನಿಯನ್/ ಅಸೋಸಿಯೇಷನ್/ ರೋಟರಿ/ ಲಯನ್ಸ್ ಮತ್ತಿತರ ಸ್ವಯಂ ಸೇವಾ ಸಂಸ್ಥೆಗಳ/ ಗ್ರಾಮ ಪಂಚಾಯತಿಗಳ ಮೂಲಕ ಮಾತ್ರವೇ ಈ ಸಮುದಾಯ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯ. ವಿಮಾ ಅವಧಿಯೊಳಗೆ ಅಪಘಾತ ಅಥವಾ ಮರಣ ಸಂಭವಿಸಿದಲ್ಲಿ ವಾರಸುದಾರರಿಗೆ ಇಪ್ಪತ್ತರಿಂದ ಐವತ್ತು ಸಾವಿರದವರೆಗೆ ಪ್ರತಿ ಆಕಸ್ಮಿಕಕ್ಕೆ ನಿಗದಿಸಿದ ದರದಲ್ಲಿ ನೀಡಲಾಗುವುದು. ಪ್ರತಿ ಸದಸ್ಯರು ಒಂದು ವರ್ಷಕ್ಕೆ ₹ ಇನ್ನೂರು ಮಾತ್ರ ಕಟ್ಟಬೇಕಾಗಿದ್ದು, ಇದರಲ್ಲಿ ₹ನೂರನ್ನು ಸಬ್ಸಿಡಿಯಾಗಿ ಕೇಂದ್ರ ಸರ್ಕಾರದ ಸಾಮಾಜಿಕ ನಿಧಿಯಿಂದ ಲಭಿಸುತ್ತದೆ.

ಜನಶ್ರೀ ವಿಮಾ ಯೋಜನೆಗೆ ಭಾರತ ಸರ್ಕಾರದಿಂದ ಸಬ್ಸಿಡಿ ಹಣ ಬಿಡುಗಡೆಯಾಗಿದ್ದು ೨೦೦೪–೦೫ನೇ ಸಾಲಿನಲ್ಲಿ, ಗುಂಡ್ಲುಪೇಟೆ ತಾಲೂಕಿನ ಮೂಲ ನಿವಾಸಿ ಕುಟುಂಬಗಳ ಫಲಾನುಭವಿಗಳ ಸಂಖ್ಯೆ ನೂರು ಇದ್ದು, ತಲಾ ₹ ೫೦೦ರಂತೆ ೫ ವರ್ಷಗಳಿಗೆ ₹ ಐವತ್ತು ಸಾವಿರಗಳನ್ನು ಈ ವಿಮೆಗಾಗಿ ವೆಚ್ಚ ಮಾಡಲಾಗಿದೆ.

## ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಚಟುವಟಿಕೆಗಳು

ಪರಿಶಿಷ್ಟ ಜಾತಿಯ ಜನರು ಅತ್ಯಂತ ಹಿಂದುಳಿದ ಜನಾಂಗದವರಾಗಿದ್ದು, ಅವರ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅವರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕರ್ನಾಟಕ ಸರ್ಕಾರವು ಕಂಪನಿ ಕಾಯ್ದೆ ೧೯೫೬ರ ಅಡಿಯಲ್ಲಿ ದಿ.: ೨೦–೦೩–೧೯೭೫ರಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧ ನಿಗಮವನ್ನು ಸ್ಥಾಪಿಸಿರುತ್ತದೆ. ದಿ.: ೧೬–೦೮–೨೦೦೫ರಂದು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಎಂದು ಮರು ನಾಮಕರಣ ಮಾಡಲಾಗಿದೆ. ನಿಗಮದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಪ್ರತಿ ವರ್ಷವು ಅಯವ್ಯಯದಲ್ಲಿ ಹಣವನ್ನು ನಿಗದಿಪಡಿಸುತ್ತದೆ. ನಿಗದಿಪಡಿಸಿದ ಹಣಕ್ಕೆ ತಕ್ಕಂತೆ ಗುರಿಯನ್ನು ನಿಗದಿಪಡಿಸಲಾಗುವುದು.

## ನಿಗಮದ ಕಾರ್ಯಕ್ರಮಗಳು

**೧. ಸ್ವಯಂ ಉದ್ಯೋಗ ಯೋಜನೆ:** ಅ) ಸ್ವಯಂ ಉದ್ಯೋಗ ಯೋಜನೆ ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ) ಇ) ನೇರ ಸಾಲ ಯೋಜನೆ ಈ) ಮೈಕ್ರೋ ಕ್ರೆಡಿಟ್ ಯೋಜನೆ ಉ) ಮೈಕ್ರೋ ಕ್ರೆಡಿಟ್ ಫೈನಾನ್ಸ್ (ಕಿರುಸಾಲ) ಯೋಜನೆ ಊ) ತರಬೇತಿ ಯೋಜನೆ ಋ) ಮಹಿಳಾ ಕಿಸಾನ್ ಯೋಜನೆ ಎ) ಮಹಿಳಾ ಸಮೃದ್ಧಿ ಯೋಜನೆ.

**೨. ಭೂ ಒಡೆತನ ಯೋಜನೆ**

**೩. ಗಂಗಾ ಕಲ್ಯಾಣ ಯೋಜನೆ** ಅ) ವೈಯುಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಆ) ಸಾಮೂಹಿಕ ನೀರಾವರಿ ಯೋಜನೆ /ಏತ ನೀರಾವರಿ ಯೋಜನೆ

**೪. ಸಫಾಯಿ ಕರ್ಮಚಾರಿ ಪುನರ್ ವಸತಿ ಯೋಜನೆ**

## ನಿಗಮದಿಂದ ಸೌಲಭ್ಯ ಪಡೆಯಲು ಬೇಕಾದ ಅರ್ಹತೆಗಳು

೧.ಅರ್ಜಿದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು ೨. ಕನಿಷ್ಠ ೧೫ ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರಬೇಕು. ೩. ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿ ಇರಬಾರದು. ೪.ಅರ್ಜಿದಾರರು ಅಥವಾ ಅವರ ಕುಟುಂಬದವರು ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರುಬಾರದು. ೫.ವಾರ್ಷಿಕ ಆದಾಯವು ₹ ೨೨,೦೦೦ಗಳನ್ನು ಮೀರಿರಬಾರದು ೬.ಅರ್ಜಿದಾರರು ೧೮ ರಿಂದ ೬೦ ವರ್ಷಗಳ ವಯೋಮಾನದವರಾಗಿರಬೇಕು. ೭.ಅರ್ಜಿದಾರರ ಭಾವಚಿತ್ರ, ಪಡಿತರ ಚೀಟಿ, ಜಾತಿಪತ್ರ,

ವರಮಾನ ಪತ್ರ, ದರಪಟ್ಟಿ (ಕೊಟೇಷನ್) ಯೋಜನಾ ವರದಿ ಇತ್ಯಾದಿ ಲಗತ್ತಿಸಬೇಕು. ೮.ವಾಹನಗಳಿಗೆ ಸಾಲ ಪಡೆಯಲು ಚಾಲನಾ ಪರವಾನಗಿ (ಡಿ.ಎಲ್) ಪಡೆದಿರಬೇಕು ಮತ್ತು ಬ್ಯಾಡ್ಜ್ ಹೊಂದಿರಬೇಕು.

ಉಳಿದಂತೆ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು ಆಯಾ ಯೋಜನೆಯಲ್ಲಿ ಕಾಣಿಸಿದೆ. ಅರ್ಜಿಗಳನ್ನು ಸ್ವೀಕರಿಸಲು ಸ್ಥಳೀಯ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗುವದು ಹಾಗೂ ಫಲಾಪೇಕ್ಷಿಗಳಿಂದ ನಿಗಮದ ಯೋಜನೆಗಳಡಿ ಅರ್ಜಿಗಳನ್ನು ಬಿಳಿಯ ಹಾಳೆಯಲ್ಲಿ ಹೆಸರು, ವಿಳಾಸ, ಜಾತಿ ಮತ್ತು ಉಪಜಾತಿ, ಚಟುವಟಿಕೆಯ ವಿವರಗಳೊಂದಿಗೆ ಅರ್ಜಿಗಳನ್ನು ಪ್ರತಿ ವರ್ಷ ಜೂನ್ ಮಾಹೆಯಲ್ಲಿ ಸ್ವೀಕರಿಸಲಾಗುವುದು. ತಾಲೂಕು ಮಟ್ಟದ ಆಯ್ಕೆ ಸಮಿತಿ, ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಇರುವ ಸಮಿತಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಆಯ್ಕೆ ಸಮಿತಿ ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

**ಅ) ಸ್ವಯಂ ಉದ್ಯೋಗ ಯೋಜನೆ:** ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದರಲ್ಲಿ ಬಹುತೇಕ ವಿದ್ಯಾವಂತ ನಿರುದ್ಯೋಗಿಗಳು ಇರುತ್ತಾರೆ. ಇವರು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮವು ಸಾಲ ಸೌಲಭ್ಯ ಒದಗಿಸುತ್ತಿದೆ. ಹೈನುಗಾರಿಕೆ, ತರಕಾರಿ ವ್ಯಾಪಾರ, ಹೂವಿನ ವ್ಯಾಪಾರ, ಚಿಲ್ಲರೆ ಅಂಗಡಿ, ಎತ್ತು ಮತ್ತು ಗಾಡಿ, ಸೈಕಲ್ ಶಾಪ್, ಮೈಕ್ ಸೆಟ್, ಶಾಮಿಯಾನ, ಇತ್ಯಾದಿ ಚಟುವಟಿಕೆಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ₹ ೫೦,೦೦೦ ದವರೆಗೆ ಸಾಲ ಸೌಲಭ್ಯ ಒದಗಿಸಲಾಗುವುದು. ಸದರಿ ಯೋಜನೆಯಲ್ಲಿ ನಿಗಮದಿಂದ ಶೆ.೫೦ ಭಾಗ ಅಥವಾ ಗರಿಷ್ಠ ₹ ೧೦,೦೦೦ ಗಳ ಸಹಾಯಧನ ರೂಪದಲ್ಲಿ ಮಂಜೂರು ಮಾಡಲಾಗುತ್ತದೆ. ಉಳಿದ ಭಾಗ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳ ಮೂಲಕ ಸಾಲವನ್ನು ಮಂಜೂರು ಮಾಡಲಾಗುವುದು.

**ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ):** ನಿರುದ್ಯೋಗಿ ಯುವಕ–ಯುವತಿಯರು ನಡೆಸಲು ಇಚ್ಚಿಸುವ ಯೋಜನೆಗಳಿಗೆ ₹ ೫೦,೦೦೦ ದಿಂದ ₹ ೧.೦೦ ಲಕ್ಷದವರೆಗೆ ಬ್ಯಾಂಕ್‌ಗಳಲ್ಲಿ ಸಾಲ ಮಂಜೂರು ಮಾಡಿದಲ್ಲಿ ನಿಗಮದಿಂದ ಶೇ.೨೦ ಭಾಗ ಅಥವಾ ಗರಿಷ್ಠ ₹ ೧.೦೦ ಲಕ್ಷ ಅಂಚಿನ ಹಣ ಮಂಜೂರು ಮಾಡಲಾಗುವುದು. ಉಳಿದ ಶೇ.೭೫ ಭಾಗ ಬ್ಯಾಂಕ್ ಸಾಲ ಮತ್ತು ಶೇ.೫ ಭಾಗ ಫಲಾನುಭವಿಯ ಪಾಲು. ಅರ್ಜಿದಾರರು ಯಾವುದೇ ಲಾಭದಾಯಕ ಚಟುವಟಿಕೆಗಳನ್ನು ಪ್ರಾರಂಭಿಸಲು ಸಾಲ ಸೌಲಭ್ಯ ಒದಗಿಸಲಾಗುವುದು. ₹ ೧.೦೦ ಲಕ್ಷದವರೆಗೆ ಘಟಕ ವೆಚ್ಚದ ಅಂಚಿನ ಹಣ ಜೊತೆಗೆ ₹ ೧೦,೦೦೦ ಸಹಾಯಧನ ಒದಗಿಸಲಾಗುವುದು. ಬಡತನ ರೇಖೆಗಿಂತ ಕೆಳಗಿನವರು ಮಾತ್ರ ಸಹಾಯಧನಕ್ಕೆ ಅರ್ಹರು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ₹ ೪೦,೦೦೦ ಹಾಗೂ ನಗರ ಪ್ರದೇಶದಲ್ಲಿ ₹ ೫೫,೦೦೦ ಮೀರಕೂಡದು.

**ಇ) ನೇರ ಸಾಲ ಯೋಜನೆ:** ಈ ಯೋಜನೆಯಡಿ ಘಟಕ ವೆಚ್ಚವು ₹ ೨೫,೦೦೦ ದಿಂದ ₹ ೭.೦೦ ಲಕ್ಷದವರೆಗೆ ಇರುತ್ತದೆ. ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರ ಸಹಯೋಗದೊಂದಿಗೆ ಸಾಲ ಸೌಲಭ್ಯ ಮಂಜೂರು ಮಾಡಲಾಗುವುದು. ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವವರಿಗೆ ಮಾತ್ರ ಸಹಾಯ ಧನ ₹ ೧೦,೦೦೦ ಬಿಡುಗಡೆ ಮಾಡಲಾಗುವುದು. ಶೇ.೨೦

ಭಾಗ ಅಥವಾ ಗರಿಷ್ಠ ₹ ೧.೦೦ ಲಕ್ಷ ಬೀಜಧನ, ಉಳಿದ ಭಾಗ ಅವಧಿ ಸಾಲವಾಗಿರುತ್ತದೆ. ಇದರಲ್ಲಿ ಪ್ರವರ್ತಕರ ಪಾಲು ಯೋಜನಾ ವೆಚ್ಚಕ್ಕೆ ಅನುಗುಣವಾಗಿ ಕನಿಷ್ಠ ಪಾಲು ಈ ಕೆಳಗಿನಂತೆ ಇರುತ್ತದೆ. ಸೌಲಭ್ಯ ಪಡೆಯಬಯಸುವ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ₹ ೪೦,೦೦೦ ಹಾಗೂ ನಗರ ಪ್ರದೇಶದಲ್ಲಿ ₹ ೫೫೦೦೦ಗಳನ್ನು ಮೀರಕೂಡದು.

**ಈ) ಮೈಕ್ರೋ ಕ್ರೆಡಿಟ್ ಯೋಜನೆ:** ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ಸಣ್ಣಪುಟ್ಟ ಆರ್ಥಿಕ ಚಟುವಟಿಕೆ ಪ್ರಾರಂಭಿಸಲು ₹ ೨೫,೦೦೦ಗಳ ವರೆಗೆ ಸಾಲ ಸೌಲಭ್ಯ ಒದಗಿಸಲಾಘುವುದು. ಇದರಲ್ಲಿ ₹ ೧೫,೦೦೦ಗಳು ಎನ್.ಎಸ್.ಸಿ.ಎಫ್.ಡಿ.ಸಿ ಅವಧಿ ಸಾಲವಾಗಿರುತ್ತದೆ. ಉಳಿದ ₹ ೧೦,೦೦೦ ಗಳು ಜಿಲ್ಲಾ ಪಂಚಾಯಿತಿ ನಗರಾಭಿವೃದ್ಧಿ ಇಲಾಖೆ ಅಥವಾ ಸಮಾಜ ಕಲ್ಯಾಣ ಇಲಾಖೆಗಳಿಂದ ಪಡೆದ ಸಹಾಯಧನವಾಗಿರುತ್ತದೆ. ಈ ಸಾಲಕ್ಕೆ ಶೇ.೫ರಷ್ಟು ಬಡ್ಡಿ ಇದ್ದು ૩೦ ಸಮ ಕಂತುಗಳಲ್ಲಿ ಮರುಪಾವತಿ ಮಾಡಬೇಕು. ಈ ಯೋಜನೆಯನ್ನು ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳ ಮೂಲಕ ಹಾಗೂ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಘಗಳ ಮೂಲಕ ಅನುಷ್ಠಾನಗೊಳಿಸಲಾಗುವುದು. ಸದರಿಯವರಿಗೆ ನೀಡಿದ ಸಾಲದ ಮರುಪಾವತಿ ಮಾಡುವ ಜವಾಬ್ದಾರಿ ಸ್ವಯಂ ಸೇವಾ ಸಂಸ್ಥೆಗಳು ವಹಿಸಿಕೊಳ್ಳಬೇಕಾಗುತ್ತದೆ.

**ಉ) ಮೈಕ್ರೋ ಕ್ರೆಡಿಟ್ ಫೈನಾನ್ಸ್ ಯೋಜನೆ (ಕಿರುಸಾಲ):** ಕರ್ನಾಟಕ ಸರ್ಕಾರದ ೨೦೦೮–೦೯ನೇ ಸಾಲಿನ ಆಯವ್ಯಯದಲ್ಲಿ ದುರ್ಬಲ ವರ್ಗಗಳ ಆರ್ಥಿಕ ಸುಧಾರಣೆಗಾಗಿ ಕಿರುಸಾಲ ಯೋಜನೆ ಎನ್ನುವ ನೂತನ ಯೋಜನೆಯನ್ನು ಘೋಷಿಸಿರುತ್ತದೆ. ಅದರಂತೆ ಗ್ರಾಮೀಣ ಅರೆ ನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಬಡ ಪರಿಶಿಷ್ಟ ಜಾತಿ, ಕುಶಲಿ ಅಥವಾ ಕುಶಲಿಯಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಅವರು ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಕಿರುಸಾಲ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಫಲಾಪೇಕ್ಷಿಗಳ ಸ್ವಸಹಾಯ ಗುಂಪುಗಳನ್ನು ಇತರೆ ಇಲಾಖೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸಂಘಟನೆ ಮಾಡಿ ಸ್ವಸಹಾಯ ಗುಂಪುಗಳ ಮೂಲಕ ಅನುಷ್ಠಾನಗೊಳಿಸಲಾಗುವುದು. ಇದರಲ್ಲಿ ಶೇ.೫೦ರಷ್ಟು ಸಹಾಯ ಧನ ಮತ್ತು ಶೇ.೫೦ರಷ್ಟು ಸಾಲವಾಗಿರುತ್ತದೆ. ಘಟಕ ವೆಚ್ಚ ₹ ೫,೦೦೦ ಆಗಿರುತ್ತದೆ.

**ಮಹಿಳಾ ಕಿಸಾನ್ ಯೋಜನೆ:** ಸಣ್ಣ ಮತ್ತು ಅತೀ ಸಣ್ಣ ಪರಿಶಿಷ್ಟ ಜಾತಿಯ ಮಹಿಳಾ ರೈತರಿಗೆ ನಿಗಮದಿಂದ ಸಾಲ ಸೌಲಭ್ಯ ಕೊಡುವ ಯೋಜನೆ ಹಮ್ಮಿಕೊಂಡಿದೆ. ಇದರಂತೆ ₹ ೪೦,೦೦೦ಕ್ಕಿಂತ ವಾರ್ಷಿಕ ಆದಾಯ ಕಡಿಮೆ ಇರುವ ಜಮೀನು ಹೊಂದಿದ ಮಹಿಳೆ, ಜಂಟಿ ಖಾತೆ ಹೊಂದಿದ ಮಹಿಳೆಯರು ಅರ್ಹರಿರುತ್ತಾರೆ. ಕೃಷಿ ಮತ್ತು ಮಿಶ್ರಿತ ಬೇಸಾಯಕ್ಕೆ ಸಂಬಂಧಿಸಿದ ಆರ್ಥಿಕ ಚಟುವಟಿಕೆಗಾಗಿ ಒಟ್ಟು ₹ ೫೦,೦೦೦ ಯೋಜನಾ ವೆಚ್ಚದಲ್ಲಿ ಸಾಲ ಸೌಲಭ್ಯ ಕೊಡಲಾಗುವುದು, ಇದರಲ್ಲಿ ಶೇ. ೫೦ ಭಾಗ ಸಹಾಯಧನ ಗರಿಷ್ಠ ₹ ೧೦,೦೦೦ ಇರುತ್ತದೆ ಉಳಿದ ₹ ೪೦,೦೦೦ ಅವಧಿ ಸಾಲವನ್ನು ಫಲಾನುಭವಿಯು ಶೇ.೫ ಬಡ್ಡಿದರದಲ್ಲಿ ೪೦ ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು.

**ಮಹಿಳಾ ಸಮೃದ್ಧಿ ಯೋಜನೆ:** ಈ ಯೋಜನೆಯಡಿ ಎನ್.ಎಸ್.ಸಿ.ಎಫ್.ಡಿ.ಸಿ ಯಿಂದ ₹ ೨೫,೦೦೦ಗಳ ವರೆಗೆ ಸಣ್ಣ ಪುಟ್ಟ ಆರ್ಥಿಕ ಚಟುವಟಿಕೆ ಪ್ರಾರಂಭಿಸಲು ಮಹಿಳೆಯರಿಗೆ ಮಾತ್ರ ಸೌಲಭ್ಯ ಕಲ್ಪಿಸಲಾಗುವುದು. ಇದರಲ್ಲಿ ₹೧೫,೦೦೦ ಗಳು ಅವಧಿಸಾಲ ಮತ್ತು ₹ ೧೦,೦೦೦ಗಳು ಸಹಾಯಧನ ಇರುತ್ತದೆ. ಸಹಾಯಧನವನ್ನು

ಸಮಾಜ ಕಲ್ಯಾಣ ಇಲಾಖೆ, ಪಂಚಾಯಿತಿ ರಾಜ್ ಇಲಾಖೆಗಳು ಹಾಗೂ ನಗರಾಭಿವೃದ್ಧಿ ಇಲಾಖೆಗಳಿಂದ ಪಡೆಯಬಹುದು. ಇದಕ್ಕೆ ಶೇ.೪ರ ವಾರ್ಷಿಕ ಬಡ್ಡಿ ಇದ್ದು, ೩೬ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಬೇಕು. ಈ ಯೋಜನೆಯನ್ನು ಸ್ವ ಸಹಾಯ ಗುಂಪುಗಳ ಮೂಲಕ ಅನುಷ್ಠಾನಗೊಳಿಸಲಾಗುವುದು. ಸಾಲ ಮರುಪಾವತಿ ಜವಾಬ್ದಾರಿ ಸಂಬಂಧಿಸಿದ ಸ್ವ ಸಹಾಯ / ಸ್ತ್ರೀ ಶಕ್ತಿ ಸಂಘ ವಹಿಸಿಕೊಳ್ಳಬೇಕಾಗಿರುತ್ತದೆ.

**ಭೂ ಒಡೆತನ ಯೋಜನೆ:** ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರು ಬಹುತೇಕ ಕೃಷಿ ಕಾರ್ಮಿಕರಾಗಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ವ್ಯಕ್ತಿಯ ಸಾಮಾಜಿಕ ಅಂತಸ್ತು ಮತ್ತು ವ್ಯಕ್ತಿತ್ವ ಭೂ ಹಿಡುವಳಿಯ ಮೇಲೆ ಅವಲಂಬಿಸಿರುತ್ತದೆ. ಭೂ ರಹಿತ ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯರಿಗೆ ಮಾತ್ರ ಈ ಯೋಜನೆಯಡಿ ಸೌಲಭ್ಯವನ್ನು ನೀಡಲಾಗುತ್ತಿದೆ. ಫಲಾನುಭವಿಗೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನನ್ನು ಗ್ರಾಮವಾರು ನೋಂದಣಿ ಇಲಾಖೆ ನಿಗದಿಪಡಿಸಿದ ಮಾರ್ಗಸೂಚಿ ಬೆಲೆಗೆ ಅಥವಾ ಗರಿಷ್ಠ ಘಟಕವೆಚ್ಚ ₹ ೨.೫೦ ಲಕ್ಷಗಳಲ್ಲಿ ಜಿಲ್ಲಾ ಸಮಿತಿ ಆಯ್ಕೆ ಮಾಡಿದ ಜಮೀನು ಹಾಗೂ ಗ್ರಾಮ ಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಜಮೀನು ಖರೀದಿಸಿ, ನಿಗಮದಿಂದ ನೇರವಾಗಿ ನೀಡಲಾಗುವುದು. ಇದರಲ್ಲಿ ಶೇ.೫೦ ಭಾಗ ಸಹಾಯಧನ, ಶೇ.೫೦ ಭಾಗ ಸಾಲದ ರೂಪದಲ್ಲಿರುತ್ತದೆ. ಫಲಾನುಭವಿಯು ಸಾಲದ ಹಣವನ್ನು ೧೦ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು. ಇದಕ್ಕೆ ಬಡ್ಡಿದರ ಶೇ.೬ ವಿಧಿಸಲಾಗುತ್ತದೆ. ಜಮೀನನ್ನು ಮಾರಾಟ ಮಾಡುವವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗಕ್ಕೆ ಸೇರಿದವರಾಗಿರಬಾರದು.

## ಗಂಗಾ ಕಲ್ಯಾಣ ಯೋಜನೆ:

**ಅ) ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ:** ಪರಿಶಿಷ್ಟ ಜಾತಿಗೆ ಸೇರಿದ ಅತಿ ಸಣ್ಣ ರೈತರಿಗೆ ತಮ್ಮ ಜಮೀನಿನಲ್ಲಿ ಕೊಳವೆ ಬಾವಿಯನ್ನು ಕೊರೆಸಿಕೊಳ್ಳಲು ಯೋಜನೆಯನ್ನು ರೂಪಿಸಿದ್ದು ಕನಿಷ್ಠ ಎರಡು ಎಕರೆ ಜಮೀನು ಹೊಂದಿದ ಫಲಾನುಭವಿಗಳಿಗೆ ಬಾವಿ ಕೊರೆಸಿ, ಪಂಪ್ ಸೆಟ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಲಾಗುವುದು. ಘಟಕ ವೆಚ್ಚ ₹ ೧,೦೦,೦೦೦ ಇದ್ದು, ಇದರಲ್ಲಿ ₹ ೮೬,೦೦೦ ಸಹಾಯಧನವಿದ್ದು, ಉಳಿದ ₹ ೧೪,೦೦೦ವನ್ನು ಫಲಾನುಭವಿಯು ಶೇ.೬ರ ಬಡ್ಡಿ ದರದಲ್ಲಿ ಸಾಲದ ರೂಪದಲ್ಲಿ ಭರಿಸಬೇಕು. ಒಂದು ವೇಳೆ ಘಟಕ ವೆಚ್ಚ ₹ ೧,೦೦,೦೦೦ಗಳಿಗೆ ಮೀರಿದ್ದಲ್ಲಿ ಫಲಾನುಭವಿಯು ಪಂಪು ಅಳವಡಿಸುವ ಸಂದರ್ಭದಲ್ಲಿ ನಿಗಮಕ್ಕೆ ಹೆಚ್ಚುವರಿ ಹಣವನ್ನು ಪಾವತಿಸತಕ್ಕದ್ದು. ಸಾಲದ ಹಣವನ್ನು ನಾಲ್ಕು ವರ್ಷಗಳಲ್ಲಿ ಪ್ರತಿ ೬ ತಿಂಗಳಿಗೊಮ್ಮೆ ೮ ಸಮ ಕಂತುಗಳಲ್ಲಿ ನಿಗಮಕ್ಕೆ ಕಂತಿನ ಪ್ರಕಾರ ಸಾಲ ಮರುಪಾವತಿ ಮಾಡಬೇಕು.

**ಆ) ಸಾಮೂಹಿಕ ನೀರಾವರಿ ಯೋಜನೆ:** ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಗ್ರಾಮಾಂತರ ಪ್ರದೇಶದಲ್ಲಿ ಕಡಿಮೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಇದರಲ್ಲಿ ಎಂಟರಿಂದ ೧೫ ಎಕರೆ ಜಮೀನಿನಲ್ಲಿ ಎರಡರಿಂದ ಮೂರು ಕೊಳವೆ ಬಾವಿಗಳನ್ನು ಕೊರೆದು ಪಂಪು ಅಳವಡಿಸಿ ವಿದ್ಯುದ್ದೀಕರಣ ಗೊಳಿಸಲಾಗುವುದು. ಪೈಪ್‌ಲೈನ್ ಸಹಾ ನಿಗಮದಿಂದಲೇ ಒದಗಿಸಲಾಗುವುದು. ಎರಡು ವರ್ಷಗಳವರೆಗೆ ನಿಗಮದಿಂದ ನಿರ್ವಹಣೆ ಮಾಡಲಾಗುವುದು. ಸದರಿ ಯೋಜನೆ ವೆಚ್ಚ ಪೂರ್ಣ ಸಹಾಯಧನವಾಗಿರುತ್ತದೆ. ಘಟಕದಲ್ಲಿ ಮೂರರಿಂದ ಐದು ಫಲಾನುಭವಿಗಳ ಇರುತ್ತಾರೆ. ಈ ಯೋಜನೆಯ ಘಟಕದ ವೆಚ್ಚ ಎಂಟು ಎಕರೆಯವರೆಗೆ ₹ ೨.೫೦ ಲಕ್ಷ ಮತ್ತು ೧೫ ಎಕರೆಯವರೆಗೆ ₹ ೩.೫೯ ಲಕ್ಷ ನಿಗದಿಪಡಿಸಲಾಗಿದೆ.

**ಇ)ಏತ ನೀರಾವರಿ ಯೋಜನೆ:** ಗಂಗಾ ಕಲ್ಯಾಣ ಯೋಜನೆಯಡಿ ನಿಗದಿಪಡಿಸಿ ಘಟಕ ವೆಚ್ಚದ ಮಿತಿಯೊಳಗೆ ಪ್ರತಿ ಎಕರೆಗೆ ₹ ೨೩,೯೩೩ ಮಿತಿಯೊಳಗೆ ಪೈಪ್ ಲೈನ್ ಹಾಗೂ ನೀರೆತ್ತುವ ಯಂತ್ರ, ಟ್ಯಾಂಕ್ ಒಳಗೊಂಡಂತೆ (ಕನಿಷ್ಠ ಎಂಟು ಎಕರೆ ಹಾಗೂ ಗರಿಷ್ಠ ೩೦ ಎಕರೆ ಒಳಪಟ್ಟಂತೆ) ನದಿ ನಾಲೆಗಳಿಂದ ಏತ ನೀರಾವರಿ ಮೂಲಕ ಪರಿಶಿಷ್ಟ ಜಾತಿಯವರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ನಿಗಮವು ಈ ಯೋಜನೆಯಲ್ಲಿ ೩೦ ಎಕರೆಗಿಂತ ಒಳಪಟ್ಟ ಘಟಕಗಳಿಗೆ ಗಂಗಾ ಕಲ್ಯಾಣ ಯೋಜನೆ ಅನುದಾನದಲ್ಲಿ ಅನುಷ್ಠಾನಗೊಳಿಸುತ್ತಿದೆ. ೩೦ ಎಕರೆಗಳಿಗಿಂತ ಮೇಲ್ಪಟ್ಟ ಪ್ರಸ್ತಾವನೆಗಳಿಗೆ ಸಣ್ಣ ನೀರಾವರಿ ಇಲಾಖೆಯವರು ಯೋಜನೆ ಕೈಗೆತ್ತಿಕೊಳ್ಳಲು ಕಳುಹಿಸಲಾಗುತ್ತಿದೆ. ಈ ಯೋಜನೆಯಡಿ ಅಂದಾಜು ವೆಚ್ಚ ನಿಗದಿಪಡಿಸುವ ಸಮಯದಲ್ಲಿ ಕೆ.ಪಿ.ಟಿ.ಸಿ.ಎಲ್ ನಿಂದ ಸಿಂಧುತ್ವ ಪತ್ರ ಹಾಗೂ ನೀರು ಬಳಕೆಯ ಸಾಧ್ಯತೆ ಪತ್ರ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.

### ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ

ಇದೊಂದು ರಾಷ್ಟ್ರೀಯ ಯೋಜನೆ, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಯೋಜನೆಯನ್ನು ರಾಜ್ಯದ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಸಫಾಯಿ ಕರ್ಮಚಾರಿಗಳಿಗೆ ಮತ್ತು ಅವರ ಅವಲಂಬಿತರಿಗೆ ಆರ್ಥಿಕ ನೆರವು ಕಲ್ಪಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಸ್ವಯಂ ಉದ್ಯೋಗ ಯೋಜನೆ ಮತ್ತು ತರಬೇತಿ ಕೊಡಲಾಗುವುದು. ಸಫಾಯಿ ಕರ್ಮಚಾರಿ ಅವಲಂಭಿತರಿಗೂ ₹ ೫೦,೦೦೦ದ ವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗುವುದು. ಇದರಲ್ಲಿ ಶೇ.೫೦ ಭಾಗ ಸಹಾಯಧನ ಗರಿಷ್ಠ ಮಿತಿ ₹ ೧೦,೦೦೦ ಶೇ.೧೫ ಭಾಗ ಅಂಚಿನ ಹಣ, ಉಳಿದ ಭಾಗ ಬ್ಯಾಂಕ್ ಸಾಲ ಅಥವಾ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿನಿಗಮ, ನವದೆಹಲಿ ಇವರಿಂದ ಅವಧಿಸಾಲ ಮಾತ್ರ ಕೊಡಲಾಗುವುದು. ₹ ೧.೦೦ ಲಕ್ಷದೊಳಗಿನ ಪ್ರಸ್ತಾವನೆಗಳಿಗೆ ಮಾತ್ರ ಪ್ರಾಶಸ್ತ್ಯ ಕೊಡಲಾಗುವುದು.

## ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ಪರಿಶಿಷ್ಟ ಪಂಗಡಗಳ ಜನರು ಅತ್ಯಂತ ಹಿಂದುಳಿದ ಜನಾಂಗದವರಾಗಿದ್ದು, ಅವರ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅವರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕರ್ನಾಟಕ ಸರ್ಕಾರವು ಕಂಪನಿ ಕಾಯ್ದೆ ೧೯೫೬ರ ಅಡಿಯಲ್ಲಿ ದಿ. ೨೭-೦೫-೨೦೦೬ ರಂದು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿರುತ್ತದೆ. ನಿಗಮದ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಹಣವನ್ನು ನಿಗದಿಪಡಿಸುತ್ತದೆ. ನಿಗದಿಪಡಿಸಿದ ಹಣಕ್ಕೆ ತಕ್ಕಂತೆ ಗುರಿಯನ್ನು ನಿಗದಿಪಡಿಸಲಾಗುವುದು. ನಿಗಮದ ಅಧಿಕೃತ ಷೇರು ಬಂಡವಾಳವು ₹ ೫.೦೦ ಕೋಟಿ ಆಗಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲು ಶೇ. ೫೧, ಕೇಂದ್ರ ಸರ್ಕಾರದ ಪಾಲು ಶೇ.೪೯ ಆಗಿರುತ್ತದೆ.

### ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು

**೧) ಸ್ವಯಂ ಉದ್ಯೋಗ ಯೋಜನೆ:** ಅ) ಸ್ವಯಂ ಉದ್ಯೋಗ ಯೋಜನೆ ಆ) ಉದ್ಯಮ ಶೀಲತಾ ಅಭಿವೃದ್ಧಿಯೋಜನೆ (ಐ.ಎಸ್.ಬಿ) ಇ) ನೇರ ಸಾಲ ಯೋಜನೆ ಈ) ಮೈಕ್ರೋಕ್ರೆಡಿಟ್ ಯೋಜನೆ

**೨) ಭೂ ಒಡೆತನ ಯೋಜನೆ**

**೩) ಗಂಗಾ ಕಲ್ಯಾಣ ಯೋಜನೆ:** ಅ) ಸಾಮೂಹಿಕ ನೀರಾವರಿ ಕೊಳವೆ ಬಾವಿಯೋಜನೆ ಆ) ಏತ ನೀರಾವರಿ ಯೋಜನೆ ಇ) ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

## ನಿಗಮದಿಂದ ಸೌಲಭ್ಯ ಪಡೆಯಲು ಬೇಕಾದ ಅರ್ಹತೆಗಳು

೧)ಅರ್ಜಿದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು ೨)ಕನಿಷ್ಟ ೧೫ ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರಬೇಕು. ೩)ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿ ಇರಬಾರದು. ೪)ಅರ್ಜಿದಾರರು ಅಥವಾ ಅವರ ಕುಟುಂಬದವರು ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು. ೫)ವಾರ್ಷಿಕ ಆದಾಯವು ರೂ.೨೨೦೦೦ ಗಳನ್ನು ಮೀರಿರಬಾರದು. ೬)ಅರ್ಜಿದಾರರ ೧೮ ರಿಂದ ೬೦ ವರ್ಷಗಳ ವಯೋಮಾನದವರಾಗಿರ ಬೇಕು ೭)ಅರ್ಜಿದಾರರ ಭಾವಚಿತ್ರ, ಪಡಿತರ ಚೀಟಿ, ಜಾತಿ ಪತ್ರ, ವರಮಾನ ಪತ್ರ ದರಪಟ್ಟಿ (ಕೊಟೇಷನ್) ಯೋಜನಾ ವರದಿ ಇತ್ಯಾದಿ ಲಗತ್ತಿಸಬೇಕು. ೮)ವಾಹನಗಳಿಗೆ ಸಾಲಪಡೆಯಲು ಚಾಲನಾ ಪರವಾನಗಿ (ಡಿ.ಎಲ್) ಪಡೆದಿರಬೇಕು ಮತ್ತು ಬ್ಯಾಡ್ಜ್ ಹೊಂದಿರಬೇಕು.

ಉಳಿದಂತೆ ಪ್ರಯೋಜನೆ ಪಡೆಯಲು ಇರಬೇಕಾದ ಅರ್ಹತೆಗಳು ಆಯಾ ಯೋಜನೆಯಲ್ಲಿ ಕಾಣಿಸಿದೆ. ಅರ್ಜಿಗಳನ್ನು ಸ್ವೀಕರಿಸಲು ಸ್ಥಳೀಯ ದಿನ ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗುವುದು ಹಾಗೂ ಫಲಾಪೇಕ್ಷಿಗಳಿಂದ ನಿಗಮದ ಯೋಜನೆಗಳಡಿ ಅರ್ಜಿಗಳನ್ನು ಬಿಳಿಯ ಹಾಳೆಯಲ್ಲಿ ಹೆಸರು, ವಿಳಾಸ, ಜಾತಿ ಮತ್ತು ಉಪಜಾತಿ, ಚಟುವಟಿಕೆಯ ವಿವರಗಳೊಂದಿಗೆ ಅರ್ಜಿಗಳನ್ನು ಪ್ರತಿ ವರ್ಷ ಜೂನ್ ಮಾಹೆಯಲ್ಲಿ ಸ್ವೀಕರಿಸಲಾಗುವುದು. ಮಾನ್ಯ ಶಾಸಕರ ಅಧ್ಯಕತೆಯಲ್ಲಿ ರಚಿತವಾದ ಸಮಿತಿಯಲ್ಲಿ ಫಲಾನಭವಿಗಳನ್ನು ಆಯ್ಕೆ ಮಾಡಲಾಗುವುದು.

**ಅ) ಸ್ವಯಂ ಉದ್ಯೋಗ ಯೋಜನೆ:** ವಿದ್ಯಾವಂತ ನಿರುದ್ಯೋಗಿಗಳು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮವು ಸಾಲ ಸೌಲಭ್ಯ ಒದಗಿಸುತ್ತಿದೆ. ಹೈನುಗಾರಿಕೆ, ತರಕಾರಿ ವ್ಯಾಪಾರ, ಹೂವಿನ ವ್ಯಾಪಾರ, ಚಿಲ್ಲರೆ ಅಂಗಡಿ, ಎತ್ತು ಮತ್ತು ಗಾಡಿ, ಸೈಕಲ್ ಶಾಪ್, ಮೈಕ್ ಸೆಟ್, ಶಾಮಿಯಾನ, ಇತ್ಯಾದಿ. ಚಟುವಟಿಕೆಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ಘಟಕ ವೆಚ್ಚ ₹ ೧.೦೦ ಲಕ್ಷದವರೆಗೆ ಸಾಲ ಸೌಲಭ್ಯ ಒದಗಿಸಲಾಗುವುದು. ಸದರಿ ಈ ಯೋಜನೆಯಲ್ಲಿ ನಿಗಮದಿಂದ ಘಟಕ ವೆಚ್ಚದ ಶೆ.೫೦ ಭಾಗ ಅಥವಾ ಗರಿಷ್ಠ ₹ ೨೫,೦೦೦ಗಳ ಸಹಾಯಧನ ಮಂಜೂರು ಮಾಡಲಾಗುತ್ತದೆ. ಉಳಿದ ಭಾಗ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳ ಮೂಲಕ ಸಾಲವನ್ನು ಮಂಜೂರು ಮಾಡಲಾಗುವುದು.

**ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ):** ಈ ಯೋಜನೆಯಡಿ ನಿರುದ್ಯೋಗಿ ಯುವಕ–ಯುವತಿಯರು ನಡೆಸಲು ಇಚ್ಚಿಸುವ ಉದ್ದೇಶಗಳಿಗೆ ಘಟಕವೆಚ್ಚ ₹ ೧.೦೦ ಲಕ್ಷದಿಂದ ₹ ೧೦.೦೦ ಲಕ್ಷದವರೆಗೆ ಸಣ್ಣ ಕೈಗಾರಿಕೆ, ಪ್ರಯಾಣಿಕರ ಸರಕು ಸಾಮಗ್ರಿಗಳ ಸಾಗಾಣಿಕೆ ವಾಹನ, ಟ್ರ್ಯಾಕ್ಟರ್ ಮತ್ತು ಟ್ರೈಲರ್, ಟಾಟಾ ಇಂಡಿಕಾ, ಟಾಟಾ ಏಸ್, ಆಟೋರಿಕ್ಷಾ, ಇತ್ಯಾದಿ ಉದ್ದೇಶಗಳಿಗೆ ಬ್ಯಾಂಕ್ ಸಹಯೋಗದೊಂದಿಗೆ ಸಾಲ ಸೌಲಭ್ಯ ಒದಗಿಸಲಾಗುವುದು. ಬ್ಯಾಂಕ್ ಸಾಲದ ಮಂಜೂರಾತಿಗೆ ಅನುಗುಣವಾಗಿ ನಿಗಮದಿಂದ ಶೇ.೨೦ ಭಾಗ ಅಥವಾ

ಗರಿಷ್ಠ ₹ ೧.೦೦ ಲಕ್ಷದವರೆಗೆ ಅಂಚಿನ ಹಣ ಮಂಜೂರು ಮಾಡಲಾಗುವುದು. ಶೇ.೭೫ ಭಾಗ ಬ್ಯಾಂಕ್ ಸಾಲವಾಗಿದ್ದು ಉಳಿದ ಶೇ.೫ ಭಾಗ ಫಲಾನುಭವಿಯು ತನ್ನ ಸ್ವಂತ ವಂತಿಕೆಯಾಗಿ ಭರಿಸಬೇಕಾಗುವುದು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ₹ ೪೦,೦೦೦ ಹಾಗೂ ನಗರ ಪ್ರದೇಶದಲ್ಲಿ ₹ ೫೫,೦೦೦ ಮೀರಕೂಡದು.

**ಇ) ನೇರ ಸಾಲ ಯೋಜನೆ:** ಈ ಯೋಜನೆಯು ರಾಷ್ಟ್ರೀಯ ಪರಿಶಿಷ್ಟ ಪಂಗಡದ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಘಟಕ ವೆಚ್ಚವು ₹ ೫೮೫೦೦ ದಿಂದ ₹ ೧೦.೦೦ ಲಕ್ಷದವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ. ₹ ೧.೦೦ ಲಕ್ಷದೊಳಗಿನ ಘಟಕ ವೆಚ್ಚದ ಉದ್ದೇಶಗಳಿಗೆ ಸಹಾಯಧನ ₹ ೨೫೦೦೦ ಬಿಡುಗಡೆ ಮಾಡಲಾಗುವುದು. ಘಟಕ ವೆಚ್ಚದಲ್ಲಿ ಶೇ. ೨೦ ಭಾಗ ಅಥವಾ ಗರಿಷ್ಠ ₹ ೧.೦೦ ಲಕ್ಷ ಅಂಚಿನ ಹಣ, ಶೇಕಡಾ ಐದು ಭಾಗ ಫಲಾನುಭವಿಗಳು ಭರಿಸಬೇಕಿದ್ದು ಉಳಿದ ಭಾಗ, ಅವಧಿಸಾಲವಾಗಿರುತ್ತದೆ. ಸೌಲಭ್ಯ ಪಡೆಯ ಬಯಸುವ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ₹ ೪೦,೦೦೦ ಹಾಗೂ ನಗರ ಪ್ರದೇಶದಲ್ಲಿ ರೂ. ೫೫೦೦೦ ಮೀರಕೂಡದು.

**ಉ) ಮೈಕ್ರೋ ಫೈನಾನ್ಸ್ (ಕಿರುಸಾಲ) ಯೋಜನೆ :** ಈ ಯೋಜನೆಯಡಿ ಗ್ರಾಮೀಣ, ಅರೆನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಕುಶಲ ಅಥವಾ ಕುಶಲ ಅಲ್ಲದ ಪರಿಶಿಷ್ಟ ಪಂಗಡದ ಜನರಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪುಗಳ ಮೂಲಕ ಪ್ರತಿಯೊಬ್ಬ ಫಲಾಪೇಕ್ಷಿಗೆ ಘಟಕವೆಚ್ಚ ಗರಿಷ್ಟ ಮೊತ್ತ ₹ ೧೦೦೦೦ಗಳನ್ನು ಮಂಜೂರು ಮಾಡಲಾಗುವುದು. ಇದರಲ್ಲಿ ರೂ. ೫೦೦೦ ಸಹಾಯಧನ ಮತ್ತು ₹ ೫೦೦೦ಗಳು ಅಂಚಿನ ಹಣ ಸಾಲವಾಗಿದ್ದು, ಇದನ್ನು ನಿಗಮದಿಂದಲೇ ನೇರವಾಗಿ ಮಂಜೂರು ಮಾಡಲಾಗುವುದು.

## ಭೂ ಒಡೆತನ ಯೋಜನೆ

ಈ ಯೋಜನೆಯಡಿ ಭೂ ರಹಿತ ಕೃಷಿ ಕಾರ್ಮಿಕ ಕುಟುಂಬ ಮಹಿಳಾ ಫಲಾಪೇಕ್ಷಿಗೆ ಎರಡು ಎಕರೆ ಖುಷ್ಕಿ ಅಥವಾ ಹತ್ತು ಎಕರೆ ತರಿ ಜಮೀನನ್ನು ನೋಂದಣಿ ಇಲಾಖೆ ನಿಗದಿ ಪಡಿಸಿದ ಮಾರ್ಗಸೂಚಿ ಬೆಲೆಗೆ ನಿಗಮದಿಂದ ಖರೀದಿಸಿ ಘಟಕ ವೆಚ್ಚ ಗರಿಷ್ಟ ₹ ೫ ಲಕ್ಷದಲ್ಲಿ ಜಮೀನನ್ನು ಖರೀದಿ ಮಾಡಿ ಮಹಿಳೆಯ ಹೆಸರಿನಲ್ಲಿ ನೋಂದಣಿ ಮಾಡಿಸಿ ನೀಡಲಾಗುವುದು. ಘಟಕ ವೆಚ್ಚದಲ್ಲಿ ಶೇ.೫೦ ಭಾಗ ಸಹಾಯ ಧನ ಮತ್ತು ಶೇ.೫೦ ಭಾಗ ಅವಧಿ ಸಾಲವಾಗಿರುತ್ತದೆ. ಅವಧಿಸಾಲವನ್ನು, ಎನ್.ಎಸ್.ಟಿ.ಎಫ್,ಡಿ.ಸಿ. ನವದೆಹಲಿ ರವರಿಂದ ಪಡೆಯಲಾಗುವುದು. ಫಲಾನುಭವಿಯು ಸಾಲದ ಹಣವನ್ನು ೧೦ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು. ಇದಕ್ಕೆ ಬಡ್ಡಿದರ ಶೇ.೬ ವಿಧಿಸಲಾಗುತ್ತದೆ. ಜಮೀನನ್ನು ಮಾರಾಟ ಮಾಡುವವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗಕ್ಕೆ ಸೇರಿದವರಾಗಿರಬಾರದು. ಜಮೀನು ಫಲಾನುಭವಿಗಳ ವಾಸಸ್ಥಾನದಿಂದ ೫ ಕಿ.ಮೀ ಕ್ಕಿಂತ ದೂರದಲ್ಲಿರಬಾರದು ಹಾಗೂ ಕೃಷಿಗೆ ಯೋಗ್ಯವಾಗಿರಬೇಕು.

## ಗಂಗಾ ಕಲ್ಯಾಣ ಯೋಜನೆ

**ಅ) ಸಾಮೂಹಿಕ ನೀರಾವರಿ ಕೊಳವೆ ಬಾವಿಯೋಜನೆ:** ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ ಜಮೀನಿನಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಇದರಲ್ಲಿ ಎಂಟರಿಂದ ೧೫ ಎಕರೆ ಜಮೀನಿನಲ್ಲಿ ಎರಡರಿಂದ ಮೂರು ಕೊಳವೆ ಬಾವಿಗಳನ್ನು ಕೊರೆದು, ಪಂಪು ಅಳವಡಿಸಿ, ವಿದ್ಯುದ್ದೀಕರಣಗೊಳಿಸಲಾಗುವುದು. ಪೈಪ್‌ಲೈನ್ ಸಹಾ ನಿಗಮದಿಂದಲೇ ಒದಗಿಸಲಾಗುವುದು. ಸದರಿ ಯೋಜನೆಯ ಘಟಕದ ವೆಚ್ಚ ೮ ಎಕರೆಯವರೆಗೆ ₹ ೨.೫೩ ಲಕ್ಷ ಮತ್ತು ೧೫ ಎಕರೆವರೆಗೂ ₹ ೩.೫೯ ಲಕ್ಷ ನಿಗದಿಪಡಿಸಲಾಗಿದೆ.

**ಆ) ಏತ ನೀರಾವರಿ ಯೋಜನೆ:** ಈ ಯೋಜನೆಯಡಿ ನದಿ, ತೊರೆ, ಹಳ್ಳ ಮತ್ತು ನಾಲೆಗಳ ನೀರಾವರಿ ಮೂಲದಿಂದ ಪೈಪ್ ಲೈನ್ ಅಳವಡಿಸಿ, ನೀರೆತ್ತಿ ಪರಿಶಿಷ್ಠ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತದೆ. ಸದರಿ ಯೋಜನೆಯಲ್ಲಿ ಕನಿಷ್ಟ ಎಂಟು ಎಕರೆ ಖುಷ್ಕಿ ಜಮೀನಿನ ಘಟಕಕ್ಕೆ ₹ ೨.೫೩ ಲಕ್ಷದಲ್ಲಿ ೧೫.೦೦ ಎಕರೆ ಜಮೀನಿನ ಘಟಕಕ್ಕೆ ₹ ೩.೫೯ ಲಕ್ಷ ವೆಚ್ಚದಲ್ಲಿ ಪೈಪ್ ಲೈನ್, ಪಂಪ್ ಸೆಟ್ ಮತ್ತು ವಿದ್ಯುದೀಕರಣ ವೈ.ಎಂ.ಡಿ. ವೆಚ್ಚವನ್ನು ಭರಿಸಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುವುದು.

ನಿಗಮವು ಈ ಯೋಜನೆಯಲ್ಲಿ ೩೦ ಎಕರೆಗಿಂತ ಒಳಪಟ್ಟ ಘಟಕಗಳಿಗೆ ಗಂಗಾ ಕಲ್ಯಾಣ ಯೋಜನೆಯ ಅನುದಾನದಲ್ಲಿ ಅನುಷ್ಠಾನಗೊಳಿಸುತ್ತಿದೆ. ೩೦ ಎಕರೆಗಳಿಗಿಂತ ಮೇಲ್ಪಟ್ಟ ಪ್ರಸ್ತಾವನೆಗಳಿಗೆ ಸಣ್ಣ ನೀರಾವರಿ ಇಲಾಖೆಯವರು ಯೋಜನೆ ಕೈಗೊಳ್ಳಲು ಕಳುಹಿಸಲಾಗುತ್ತಿದೆ. ಈ ಯೋಜನೆಯಡಿ ಅಂದಾಜು ವೆಚ್ಚ ನಿಗದಿಪಡಿಸುವ ಸಮಯದಲ್ಲಿ ಕೆ.ಪಿ.ಟಿ.ಸಿ.ಎಲ್ ನಿಂದ ಫೀಸಿಬಲಿಟಿ ಪತ್ರ ಹಾಗೂ ನೀರಾವರಿ ಇಲಾಖೆಯಿಂದ ನೀರು ಬಳಕೆಯ ಅನುಮತಿ ಪತ್ರ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.

**ಇ) ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ:** ಪರಿಶಿಷ್ಟ ಪಂಗಡದ ಅತಿ ಸಣ್ಣ ರೈತರು ಹೊಂದಿರುವ ಕನಿಷ್ಟ ಎರಡು ಎಕರೆಯಿಂದ ಐದು ಎಕರೆಯವರೆಗಿನ ಖುಷ್ಕಿ ಜಮೀನಿನಲ್ಲಿ ಕೊಳವೆ ಬಾವಿಯನ್ನು ಕೊರೆಸಿ, ಪಂಪ್‌ಸೆಟ್ ಅಳವಡಿಸಿ ವಿದ್ಯುದ್ದೀಕರಣಗೊಳಿಸಲಾಗುವುದು. ಘಟಕ ವೆಚ್ಚ ₹ ೧.೫೦ ಲಕ್ಷ ಇದ್ದು ಇದರಲ್ಲಿ ₹ ಒಂದು ಲಕ್ಷ ಸಹಾಯಧನವಿದ್ದು, ಉಳಿದ ₹ ೫೦,೦೦೦ ಅವಧಿ ಸಾಲ ಮಂಜೂರು ಮಾಡಲಾಗುವುದು. ಅವಧಿ ಸಾಲಕ್ಕೆ ಶೇ.೬ರ ಬಡ್ಡಿ ದರದಲ್ಲಿ ಸಾಲದ ರೂಪದಲ್ಲಿ ಭರಿಸಬೇಕು. ಒಂದು ವೇಳೆ ಘಟಕ ವೆಚ್ಚ ₹ ೧.೫೦ ಲಕ್ಷಗಳನ್ನು ಮೀರಿದ್ದಲ್ಲಿ ಫಲಾನುಭವಿಯು ಪಂಪು ಅಳವಡಿಸುವ ಸಂದರ್ಭದಲ್ಲಿ ನಿಗಮಕ್ಕೆ ಹೆಚ್ಚುವರಿ ಹಣವನ್ನು ಪಾವತಿಸತಕ್ಕದ್ದು, ಸಾಲದ ಹಣವನ್ನು ಐದು ವರ್ಷಗಳಲ್ಲಿ ಪ್ರತಿ ೬ ತಿಂಗಳಿಗೊಮ್ಮೆ ೧೦ ಸಮ ಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕು.

## ಕೋಷ್ಟಕ ೧೬.೩೪
## ಡಾ॥ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಾಮರಾನಗರ ಜಿಲ್ಲೆ
## ೨೦೧೦–೧೧ನೇ ಸಾಲಿನಲ್ಲಿ ನಿಗಮದ ವಿವಿಧ ಯೋಜನೆಯಡಿ ನಿಗದಿಪಡಿಸಿರುವ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ವಿವರ

| ಯೋಜನೆಯ ಹೆಸರು | ವಾರ್ಷಿಕ ಗುರಿ | | ಆರ್ಥಿಕ ಗುರಿ | | ಸಾಧನೆ | | ಸಹಾಯಧನ | | ಅಂಚಿನಹಣ | | ಬ್ಯಾಂಕ್ ಸಾಲ | | ಬ್ಯಾಂಕ್ ಸಾಲ | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ಎಸ್ ಸಿ | ಎಸ್ ಟಿ | ಎಸ್ ಸಿ | ಎಸ್ ಟಿ | ಎಸ್ ಸಿ | ಎಸ್ ಟಿ | ಎಸ್ ಸಿ | ಎಸ್ ಟಿ | ಎಸ್ ಸಿ | ಎಸ್ ಟಿ | ಎಸ್ ಸಿ | ಎಸ್ ಟಿ | ಎಸ್ ಸಿ | ಎಸ್ ಟಿ | ಎಸ್ ಸಿ | ಎಸ್ ಟಿ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ | ೧೭ |
| ಸ್ವಯಂ ಉದ್ಯೋಗ ಯೋಜನೆ | ೨೩೫ | ೧೨೧ | ೨೩.೫೦ | ೧೨.೧೦ | ೨೯೩ | ೫೭ | ೨೦.೭೫ | ೪.೨೦ | – | – | – | – | ೬೫.೬೫ | ೧೪.೩೨ | ೮೬.೪೦ | ೧೮.೫೨ |
| ಐ ಎಸ್ ಬಿ ಯೋಜನೆ | ೨೩ | ೯ | ೧೨.೦೪ | ೫.೪೦ | ೧೧ | ೩ | ೦.೯೦ | ೦.೨೦ | ೩.೨೧ | ೦.೫೦ | – | – | ೧೨.೫೩ | ೧.೬೬ | ೧೬.೬೪ | ೨.೩೬ |
| ಹೈನುಗಾರಿಕೆ | ೭೧ | ೫೩ | ೨೪.೮೫ | ೧೮.೫೫ | ೯೬ | ೩ | ೪.೮೦ | ೦.೧೫ | ೩.೩೬ | ೦.೧೧ | ೮.೬೪ | ೦.೨೭ | – | – | ೧೬.೮೦ | ೦.೫೩ |
| ನೇರಸಾಲ ಗುಂಪು ಮತ್ತು ವೈಯಕ್ತಿಕ | ೩೨ | ೧೧ | ೫೯.೨೦ | ೩೪.೬೯ | ೪ | – | ೦.೬೩ | – | ೧.೪೪ | – | ೪.೯೩ | – | – | – | ೭.೦೦ | – |
| ಮೈಕ್ರೊ ಕ್ರೆಡಿಟ್ ಯೋಜನೆ | ೫೪ | – | ೮.೧೦ | – | ೮೬ | – | ೨.೧೦ | – | – | – | ೧೨.೯೦ | – | – | – | ೧೫.೦೦ | – |
| ಮೈಕ್ರೊ ಕ್ರೆಡಿಟ್ ಯೋಜನೆ (ಕಿರುಸಾಲ) | ೨೭೨ | ೬೦ | ೧೩.೬೦ | ೩.೦೦ | ೨೯೭ | ೫೪ | ೭.೪೩ | ೧.೩೫ | ೭.೪೩ | ೧.೩೫ | – | – | – | – | ೧೪.೮೫ | ೨.೭೦ |
| ಮೈಕ್ರೊ ಕ್ರೆಡಿಟ್ ಯೋಜನೆ (ಗುಂಪು ಯೋಜನೆ) | ೧೯೧ | – | ೯.೫೫ | – | ೭೦ | – | ೦.೭೦ | – | – | – | ೨.೮೦ | – | – | – | ೩.೫೦ | – |
| ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ | ೧೦ | – | ೧.೦೦ | – | ೯ | – | ೦.೯೦ | – | – | – | – | – | ೧.೮೦ | – | ೨.೭೦ | – |
| ಭೂ ಒಡೆತನ ಯೋಜನೆ | ೩೬ | ೯ | ೪೫.೦೬ | ೯.೦೦ | ೧೭ | ೩ | ೬.೦೩ | ೧.೦೫ | – | – | ೬.೦೪ | ೧.೦೬ | – | – | ೧೨.೦೭ | ೨.೩೧ |
| ಗಂಗಾ ಕಲ್ಯಾಣ ಯೋಜನೆ | ೧೮೭ | ೧೩೫ | ೧೮೭.೦೦ | ೧೩೫.೦೦ | ೧೪೭ | ೧೦೬ | – | – | – | – | – | – | – | – | – | – |
| ಒಟ್ಟು | ೧೧೧೧ | ೩೯೮ | ೩೮೩.೯೦ | ೨೧೭.೭೪ | ೧೦೩೦ | ೨೨೬ | ೪೪.೨೪ | ೭.೦೫ | ೧೫.೪೪ | ೧.೯೬ | ೩೫.೩೦ | ೧.೪೩ | ೭೯.೯೮ | ೧೫.೯೮ | ೧೭೪.೯೬ | ೨೬.೪೨ |

# ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಬಡ ಮಹಿಳೆಯರು, ಹಿಂದುಳಿದ ಮಹಿಳೆಯರು ಹಾಗೂ ಮಕ್ಕಳ ಅಭಿವೃದ್ಧಿಗಾಗಿ 'ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ' ಇಲಾಖೆಯು, ಕಾರ್ಯ ನಿರ್ವಹಿಸುತ್ತಿದೆ. ಈ ಇಲಾಖೆ ಮುಖ್ಯವಾಗಿ ಬಡತನ ರೇಖೆಗಿಂತ ಕೆಳಗಿರುವ ಅಥವಾ ಬಡತನದ ಅಂಚಿನಲ್ಲಿರುವ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಯತ್ತ ಗಮನವಿಟ್ಟು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸುತ್ತಿದೆ. ಮಹಿಳೆ ಕೇವಲ ಗೃಹಿಣಿಯಾಗಿದ್ದು, ಗೃಹಕಾರ್ಯಕ್ಕಷ್ಟೇ ತನ್ನ ಶಕ್ತಿ ಸಾಮರ್ಥ್ಯಗಳನ್ನು ಸೀಮಿತಗೊಳಿಸಿಕೊಳ್ಳದೇ, ಘನತೆ–ಗೌರವಗಳನ್ನು ಆಕೆಗೆ ದೊರಕಿಸಿ ಕೊಡುವಂತಹ ಇನ್ನಿತರ ಪ್ರಮುಖ ಕಾರ್ಯಗಳನ್ನೂ ನಿರ್ವಹಿಸಲು ಅನುವಾಗುವಂತೆ ಸೂಕ್ತ ನೆರವು ಮತ್ತು ಪ್ರೋತ್ಸಾಹಗಳನ್ನು ನೀಡುವಂತಹ ಅನೇಕ ಯೋಜನೆಗಳನ್ನು ಈ ಇಲಾಖೆಯ ಮೂಲಕ ಜಾರಿಗೊಳಿಸಲಾಗುತ್ತದೆ. ಸಮಾನತೆ ಹಾಗೂ ಸಾಮಾಜಿಕ ನ್ಯಾಯವನ್ನು ಗಳಿಸಿಕೊಡುವ ಮೂಲಕ ಸಾಮಾಜಿಕ ಸುಧಾರಣೆ ಮಾಡುವುದೂ ಈ ಇಲಾಖೆಯ ಉದ್ದೇಶಗಳಲ್ಲಿ ಒಂದು. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರುವ ಹೆಣ್ಣು ಮಕ್ಕಳು ಸುಖ ಸೌಲಭ್ಯಗಳನ್ನು ಹೊಂದಿರಬೇಕಾದರೆ ಮತ್ತು ರಾಷ್ಟ್ರದ ಅಭಿವೃದ್ಧಿವಾಹಿನಿಯಲ್ಲಿ ಬರಬೇಕಾದರೆ, ಅವರು ತಮ್ಮನ್ನು ವಿವಿಧ ಉತ್ಪಾದನಾ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳುವ ಕೌಶಲ್ಯವನ್ನು ಬೆಳೆಸಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಹೊಂದಬೇಕು, ಇದರೊಂದಿಗೆ ಉತ್ತಮವಾದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂಬ ದೃಷ್ಟಿಯಿಂದ ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಈ ಇಲಾಖೆಯ ಮುಖಾಂತರ ಕೆಲವಾರು ಆರೋಗ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಮಕ್ಕಳ ಉಳಿವು, ರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನೂ ಇದು ಅನುಷ್ಠಾನಗೊಳಿಸುತ್ತಿದೆ.

ಜಿಲ್ಲೆಯಲ್ಲಿ, ಜಿಲ್ಲಾ ಪಂಚಾಯಿತಿಯು ಈ ಇಲಾಖೆಯ ಕಾರ್ಯಕ್ರಮಗಳನ್ನು, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳ ಕಛೇರಿಯ ಮೂಲಕ ಅನುಷ್ಠಾನಗೊಳಿಸುತ್ತಿದೆ. ಸುಸಂಘಟಿತ ಶಿಶು ಅಭಿವೃದ್ಧಿ ಯೋಜನೆ, ಅಂಗನವಾಡಿ ಕೇಂದ್ರಗಳು, ಪೂರಕ ಪೌಷ್ಠಿಕ ಆಹಾರ ಯೋಜನೆ, ಬಾಲಿಕಾ ಸಮೃದ್ಧಿ ಯೋಜನೆ, ಸ್ತ್ರೀ ಶಕ್ತಿ ಯೋಜನೆ, ಸುಧಾರಣಾ ಸಂಸ್ಥೆಗಳ ಅನುಷ್ಠಾನ, ವೃದ್ಧರ ಮತ್ತು ಅಶಕ್ತರ ಯೋಜನೆ, ಉದ್ಯೋಗಿನಿ ಮಾರುಕಟ್ಟೆ ಸಹಾಯ ಯೋಜನೆ, ನಮ್ಮ ಮಗಳು ನಮ್ಮ ಶಕ್ತಿ ಯೋಜನೆ, ಅಂಗನವಾಡಿ ಕಟ್ಟಡಗಳ ನಿರ್ಮಾಣ ಯೋಜನೆ, ವೃತ್ತಿ ಶಿಕ್ಷಣ ಯೋಜನೆ, ಮಹಿಳಾ ಕಾನೂನು ಪದವೀಧರರಿಗೆ ಧನಸಹಾಯ, ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಹಾಜರಾತಿ ವಿದ್ಯಾರ್ಥಿವೇತನ, ಭಾಗ್ಯಲಕ್ಷ್ಮಿ ಯೋಜನೆ, ವಿಧವೆಯರ ಪುನರ್ವಿವಾಹಕ್ಕಾಗಿ ಹಣಕಾಸು ನೆರವು ಹಾಗೂ ಕಿತ್ತೂರು ಚೆನ್ನಮ್ಮ ಮಕ್ಕಳ ರಾಷ್ಟ್ರೀಯ ಪುರಸ್ಕಾರ ಯೋಜನೆ—ಇವು ಈ ಕಛೇರಿಯಿಂದ ಕಾರ್ಯಗತಗೊಳಿಸಲಾಗುತ್ತಿರುವ ಕಾರ್ಯಕ್ರಮಗಳಾಗಿವೆ.

## ೧) ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು

**ಅ. ಸ್ತ್ರೀ ಶಕ್ತಿ ಯೋಜನೆ:** ಈ ಯೋಜನೆಯನ್ನು ರಾಜ್ಯದಲ್ಲಿ, ೨೦೦೦ನೇ ಸಾಲಿನ ಅಕ್ಟೋಬರ್ ತಿಂಗಳಿಂದ ಜಾರಿಗೆ ತರಲಾಗಿದೆ. ರಾಜ್ಯದಲ್ಲಿ ಬಹಳ ಅಲ್ಪಾವಧಿಯಲ್ಲೇ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ ಕಾರ್ಯಕ್ರಮವೆಂದರೆ ಈ ಸ್ತ್ರೀ ಶಕ್ತಿ ಯೋಜನೆ. ರಾಜ್ಯದ ಹಲವಾರು ಸ್ತ್ರೀಯರು ಈ ಯೋಜನೆಯಡಿ ಆರ್ಥಿಕವಾಗಿ ಮಾತ್ರವಲ್ಲದೆ, ಹಣಕಾಸು ವ್ಯವಹಾರ, ಓದು–ವಿದ್ಯೆಗಳಲ್ಲೂ ಮುಂದುವರಿದಿದ್ದು, ಜೀವನವನ್ನು ಸ್ವತಃ ನಡೆಸಬಲ್ಲೆವೆಂಬ ಆತ್ಮ ವಿಶ್ವಾಸವನ್ನು ಪಡೆದುಕೊಂಡಿರುವ ಬಗ್ಗೆ, ಸ್ವಾವಲಂಬಿಗಳಾಗಿರುವ ಬಗ್ಗೆ ಮತ್ತು

ಸಂಕಷ್ಟದ ಬದುಕನ್ನು ಹಸನು ಮಾಡಿಕೊಂಡಿರುವ ಬಗ್ಗೆ ಈ ಯೋಜನೆಯಡಿ ಪ್ರಯೋಜನ ಪಡೆದಿರುವ ಸಾವಿರಾರು ಸ್ತ್ರೀಯರ ಉದಾಹರಣೆಗಳು ರಾಜ್ಯದಲ್ಲಿ ದೊರಕುತ್ತವೆ. ಗ್ರಾಮೀಣ ಮಹಿಳೆಯರಲ್ಲಿ ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಸಶಕ್ತತೆಯನ್ನು ತರುವುದು ಸ್ರೀ ಶಕ್ತಿ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯು ಸ್ತ್ರೀಯರಿಗೆ ಅತ್ಯಂತ ಸಹಕಾರಿಯಾಗಿದೆ.

ವಿವಿಧ ವ್ಯಾಪಾರಗಳ ಮೂಲಕ ಆರ್ಥಿಕವಾಗಿ ಸ್ತ್ರೀಯರು ಸ್ವಾವಲಂಬಿಗಳಾಗಿರುವುದಲ್ಲದೆ, ಮನೋಧಾರ್ಡ್ಯತೆಯನ್ನೂ ಹೊಂದಿ, ಸಮಾಜ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಷ್ಟು ಹಾಗೂ ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತುವಷ್ಟು ಆಸಕ್ತಿ ಮತ್ತು ಧೈರ್ಯವನ್ನೂ ಪಡೆದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇದರಿಂದ ಅವರಿಗೆ ಸಾಮಾಜಿಕ ಮನ್ನಣೆ ದೊರಕಿಸಿಕೊಡುವಲ್ಲಿಯೂ ಈ ಯೋಜನೆಯು ಒಂದು ಸಾಧನವಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ೩೬೦೦ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ರಚನೆಯಾಗಿದ್ದು, ೩೬೦೦ ಸ್ತ್ರೀಶಕ್ತಿ ಗುಂಪುಗಳಿಗೆ ತಲಾ ₹ ೫೦೦೦ ರಂತೆ ಸುತ್ತುನಿಧಿ ರೂಪದಲ್ಲಿ ಒಟ್ಟು ₹ ೧೮೫.೦೦ ಲಕ್ಷಗಳನ್ನು ನೀಡಲಾಗಿದೆ.

**ಆ) ಸಾಂತ್ವನ (ಮಹಿಳಾ ಸಹಾಯವಾಣಿ):** ಸರ್ಕಾರವು ಈ ಯೋಜನೆಗೆ ೨೦೦೦-೦೧ನೇ ಸಾಲಿನಲ್ಲಿ ಅನುಮೋದನೆ ನೀಡಿದೆ. ಈ ಯೋಜನೆಯಡಿ ಸಾಮಾಜಿಕ ಪಿಡುಗಾದ ವರದಕ್ಷಿಣೆ ಮತ್ತು ಶೋಷಣೆ, ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ, ವೈವಾಹಿಕ ಜೀವನದಲ್ಲಿನ ತೀವ್ರತರ ಸಮಸ್ಯೆಗಳು ಮತ್ತು ಇಂಥ ಇನ್ನಿತರ ಕಷ್ಟಗಳಿಂದ ಯಾತನೆ ಪಡುತ್ತಿರುವ ಮಹಿಳೆಯರಿಗೆ ಕಾನೂನು ನೆರವು, ಆರ್ಥಿಕ ಪರಿಹಾರ, ತಾತ್ಕಾಲಿಕ ಆಸರೆ ಹಾಗೂ ತರಬೇತಿ ನೀಡಿ, ಸ್ವಾವಲಂಬಿಗಳನ್ನಾಗಿ ಮಾಡಿ, ಸ್ಥಿರವಾಗಿ ನಿಲ್ಲುವಂತೆ ಮಾಡುವುದು ಈ ಯೋಜನೆಯ ಉದ್ದೇಶ.

ಈ ಯೋಜನೆಯನ್ನು ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಮಹಿಳಾ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕೇಂದ್ರಗಳಿಗೆ ಶುಲ್ಕ ರಹಿತ ದೂರವಾಣಿ ಸಂಖ್ಯೆ ೧೦೯೧ನ್ನು ಅಳವಡಿಸಲಾಗಿದೆ. ಈ ಮಹಿಳಾ ಸಹಾಯ ವಾಣಿಯು ಬೆಳಿಗ್ಗೆ ಆರು ಘಂಟೆಯಿಂದ ರಾತ್ರಿ ಹನ್ನೆರಡು ಘಂಟೆಯ ವರೆಗೆ ಸಂಕಷ್ಟಕ್ಕೆ ಒಳಗಾದ ಮಹಿಳೆಯರ ಕರೆಗಳನ್ನು ಸ್ವೀಕರಿಸುತ್ತದೆ. ಸಮಸ್ಯೆಯ ಸ್ವರೂಪ ಮತ್ತು ಗಂಭೀರತೆಯ ಆಧಾರದ ಮೇಲೆ ಪ್ರಕರಣಗಳನ್ನು ನೊಂದಾಯಿಸಿಕೊಂಡು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಜಿಲ್ಲಾ ಮಟ್ಟದ ಸಮಿತಿಯ ಮುಂದಿಟ್ಟು ಅಗತ್ಯ ಸಹಾಯವನ್ನು ಮತ್ತು ಇತರ ಪುನರ್ವಸತಿ ಸೌಲಭ್ಯಗಳನ್ನು ಅರ್ಹತೆಗನುಗುಣವಾಗಿ ಪ್ರತಿ ಪ್ರಕರಣದಲ್ಲಿ ನೀಡಲಾಗುತ್ತಿದೆ. ದೌರ್ಜನ್ಯಕ್ಕೊಳಗಾದ ಮಹಿಳೆಗೆ ಅವಶ್ಯಕತೆ ಇದ್ದಲ್ಲಿ ₹ ೨೦೦೦ದಿಂದ ಗರಿಷ್ಟ ₹ ೧೦,೦೦೦ದ ವರೆಗೆ, ತಕ್ಷಣದ ಅರ್ಥಿಕ ನೆರವನ್ನೂ ನೀಡಲಾಗುವುದು. ಒಟ್ಟು ಎಪ್ಪತ್ತಾರು ಸಾಂತ್ವನ ಕೇಂದ್ರಗಳು ೨೦೦೭-೦೮ನೇ ಸಾಲಿನ ವೇಳೆಗೆ, ರಾಜ್ಯದ ವಿವಿಧ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಈ ಜಿಲ್ಲೆಯಲ್ಲಿ ಈ ಯೋಜನೆಯನ್ನು ೨೦೦೩-೦೪ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದೆ. ಚಾಮರಾಜನಗರದ ರಾಜೀವ್ ಗಾಂಧಿ ಎಜುಕೇಷನ್ ಅಂಡ್ ವೆಲ್ಫೇರ್ ಟ್ರಸ್ಟ್ ಹಾಗೂ ಕೊಳ್ಳೇಗಾಲದ ಪೂರ್ಣಚಂದ್ರ ಎಜುಕೇಷನ್ ಟ್ರಸ್ಟ್ – ಈ ಸಂಸ್ಥೆಗಳು, ಈ ಜಿಲ್ಲೆಯಲ್ಲಿ ಸಾಂತ್ವನ ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವ ಎರಡು ಕೇಂದ್ರಗಳಾಗಿವೆ. ಚಾಮರಾಜನಗರ ಪಟ್ಟಣದ ರಾಜೀವ್ ಗಾಂಧಿ

ಎಜುಕೇಷನ್ ಅಂಡ್ ವೆಲ್ಫೇರ್ ಟ್ರಸ್ಟ್ ಸೇವಾ ಸಂಸ್ಥೆಯು, ಬಾಲಕಿಯರ ವಸತಿ ನಿಲಯವನ್ನೂ, ಅಲ್ಪಾವಧಿ ವಸತಿ ಗೃಹವನ್ನೂ ನಡೆಸುತ್ತಿದೆ. ಈ ವಸತಿ ಗೃಹವು ಈ ಕಾರ್ಯಕ್ಕಾಗಿ ೨೦೦೭–೦೮ರಲ್ಲಿ ಮಾಡಿರುವ ಖರ್ಚು ಎರಡು ಲಕ್ಷಗಳಾಗಿರುತ್ತವೆ.

**ಇ) ಕಾನೂನು ಪದವೀಧರ ಮಹಿಳೆಯರಿಗೆ ತರಬೇತಿ ಮತ್ತು ಶಿಷ್ಯ ವೇತನ:** ಕಾನೂನು ಪದವಿ ಪಡೆದ ಮಹಿಳೆಯರು, ಸ್ವತಂತ್ರವಾಗಿ ವಕೀಲಿ ವೃತ್ತಿ ಪ್ರಾರಂಭಿಸಲು ಅಗತ್ಯ ಅನುಭವ ಮತ್ತು ಜ್ಞಾನವನ್ನು ಹೊಂದುವುದಕ್ಕೆ ಅವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ಪ್ರತಿ ಪದವೀಧರೆಗೆ, ಮಾಸಿಕ ₹ ೧,೦೦೦ಗಳಂತೆ ಶಿಷ್ಯವೇತನದ ನೆರವು ನೀಡಿ, ಪರಿಣತ ವಕೀಲರ ಬಳಿ ವಕೀಲಿ ತರಬೇತಿಯನ್ನು ನಾಲ್ಕು ವರ್ಷಗಳ ಕಾಲ ನೀಡಲಾಗುತ್ತದೆ.

**ಕೋಷ್ಟಕ– ೧೬.೩೫: ೨೦೦೬–೦೭ ರಿಂದ ೨೦೧೦–೨೦೧೧ರವರೆಗಿನ ಸಾಲುಗಳಲ್ಲಿ ಶಿಷ್ಯ ವೇತನ ಪಡೆದ ಕಾನೂನು ಪದವೀಧರೆಯರ ಸಂಖ್ಯೆ ಮತ್ತು ಆದ ಖರ್ಚಿನ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ವೆಚ್ಚ (₹ ಲಕ್ಷಗಳಲ್ಲಿ) |
|---|---|---|
| ೨೦೦೫–೦೬ | ಯೋಜನೆ ಅನುಷ್ಠಾನದಲ್ಲಿರುವುದಿಲ್ಲ. | |
| ೨೦೦೬–೦೭ | ೬ | ೦.೭೨ |
| ೨೦೦೭–೦೮ | ೯ | ೧.೦೮ |
| ೨೦೦೮–೦೯ | ೯ | ೧.೦೮ |
| ೨೦೦೯–೧೦ | ೮ | ೦.೮೦ |
| ೨೦೧೦–೧೧ | ೮ | ೦.೯೦ |

*(ಮಾಹಿತಿ: ಜಿಲ್ಲಾ ಅಧಿಕಾರಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಾಮರಾಜನಗರ)*

**ಈ) ಸ್ವಯಂ ಸಿದ್ಧ:** ೧೯೯೬ನೇ ಸಾಲಿನಲ್ಲಿ ರಾಜ್ಯದ ಹತ್ತು ಬ್ಲಾಕ್‌ಗಳಲ್ಲಿ ಅನುಷ್ಠಾನಗೊಂಡ ಕೇಂದ್ರ ಸರ್ಕಾರದ 'ಇಂದಿರಾ ಮಹಿಳಾ ಯೋಜನೆ'ಯನ್ನು ೨೦೦೦–೦೧ನೇ ಸಾಲಿನಲ್ಲಿ 'ಸ್ವಯಂಸಿದ್ಧ' ಎಂದು ಮರು ನಾಮಕರಣ ಮಾಡಿ ಹತ್ತು ಬ್ಲಾಕ್‌ಗಳಲ್ಲಿ ಕಾರ್ಯಗತಗೊಳಿಸಲಾಯಿತು. ಒಟ್ಟು ಇಪ್ಪತ್ತು ಬ್ಲಾಕ್‌ಗಳಲ್ಲಿ ಈ ಯೋಜನೆಯು ಜಾರಿಗೊಳ್ಳುತ್ತಿದೆ.

ಬಡತನದಲ್ಲಿ ಇರುವ ಮಹಿಳೆಯರನ್ನು ಸಂಘಟನೆ ಮತ್ತು ಅವರ ಸರ್ವತೋಮುಖ ಅಭಿವೃದ್ಧಿಯೇ ಈ ಯೋಜನೆಯ ಮುಖ್ಯ ಉದ್ದೇಶ. ಸ್ವಸಹಾಯ ಗುಂಪುಗಳನ್ನು ರಚಿಸಿ, ಸಂಪನ್ಮೂಲಗಳ ಮೇಲೆ ಹತೋಟಿಯನ್ನು ಸಾಧಿಸುವ ಮೂಲಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಈ ಯೋಜನೆಯಡಿ ಸಾಧಿಸಲಾಗುತ್ತಿದೆ. ಈ ಜಿಲ್ಲೆಯ ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕುಗಳಲ್ಲಿ ಸ್ವಯಂಸಿದ್ಧ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಿರುವ ಎರಡು ಬ್ಲಾಕ್‌ಗಳಿವೆ.

**ಉ) ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ:** ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ, ಪ್ರತಿ ವರ್ಷವೂ, ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ ಎಂಟರಂದು ಇಲಾಖೆಯ ಮೂಲಕ, ಆಚರಿಸುವ ಕಾರ್ಯಕ್ರಮವಿದೆ. ಈ ಜಿಲ್ಲೆಯಲ್ಲಿ ತಾಲೂಕು ಮಟ್ಟದಲ್ಲಿಯೂ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಮಹಿಳೆಯ ಪ್ರಗತಿಗಾಗಿ ಐದು ವರ್ಷಗಳ ಕಾಲ ಸತತವಾಗಿ ಶ್ರಮಿಸಿದ ಸ್ವಯಂ ಸೇವಾ ಸಂಸ್ಥೆಗೆ ಮತ್ತು ಸಾಹಿತ್ಯ, ಕಲೆ, ಶಿಕ್ಷಣ, ಮಹಿಳಾಭಿವೃದ್ಧಿ, ಮುಂತಾದ ಕ್ಷೇತ್ರಗಳಲ್ಲಿ ಸತತ

ತೊಡಗಿದ ಮಹಿಳೆಯರಿಗೆ ಈ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿ ಪತ್ರಗಳೊಂದಿಗೆ, ಸ್ವಯಂ ಸೇವಾ ಸಂಸ್ಥೆಗೆ ಕೊಡುವ ಪ್ರಶಸ್ತಿಯು ₹ ೨೫,೦೦೦ ಗಳನ್ನೂ; ವೈಯಕ್ತಿಕ ಪ್ರಶಸ್ತಿಯು ₹ ೧೦,೦೦೦ ಗಳನ್ನೂ ಒಳಗೊಂಡಿರುತ್ತದೆ.

ಚಾಮರಾಜನಗರದ ಗುಂಡೇಗಾಲ ಗ್ರಾಮದ, ಅಮೃತೇಶ್ವರ ಸ್ತ್ರೀ ಶಕ್ತಿ ಸ್ವಸಹಾಯ ಗುಂಪನ್ನು ಮೂರನೇ ಅತ್ಯುತ್ತಮ ಸ್ತ್ರೀ ಶಕ್ತಿ ಗುಂಪು ಎಂದು ೨೦೦೭-೦೮ನೇ ಸಾಲಿನಲ್ಲಿ ಆಯ್ಕೆಗೊಂಡಿದೆ. ಈ ಪ್ರಶಸ್ತಿಯ ಮೊತ್ತ ₹ ಇಪ್ಪತ್ತು ಸಾವಿರಗಳಾಗಿದೆ.

**ಊ) ರಾಜ್ಯ ವಲಯದ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಷ್ಯ ವೇತನ:** ಈ ಯೋಜನೆಯಡಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಹಾಗೂ ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವ ಉದ್ದೇಶದಿಂದ, ಕನಿಷ್ಠ ಶೇಕಡ ೮೦ ಹಾಜರಾತಿ ಪಡೆದು ಉತ್ತೀರ್ಣರಾದ ಐದರಿಂದ ಹತ್ತನೇ ತರಗತಿಗಳಲ್ಲಿ ಓದುವ ವಿದ್ಯಾರ್ಥಿಯನಿರಿಗೆ, ಹತ್ತು ತಿಂಗಳ ಅವಧಿಗೆ ಶಿಷ್ಯ ವೇತನವನ್ನು ಕೊಡಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ವಿದ್ಯಾರ್ಥಿನಿಯ ಕುಟುಂಬದ ವಾರ್ಷಿಕ ವರಮಾನ ಹತ್ತು ಸಾವಿರಕ್ಕಿಂತ ಮೀರಿರಬಾರದು ಮತ್ತು ಆ ಬಾಲಕಿಯು ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಹಳ್ಳಿಯ ನಿವಾಸಿಯಾಗಿರಬೇಕಾದುದು ನಿಯಮ. ೨೦೦೫-೦೬ನೇ ಸಾಲಿನಿಂದ ೨೦೧೦-೧೧ನೇ ಸಾಲಿನ ಅವಧಿಯಲ್ಲಿ ಈ ಯೋಜನೆಯ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಮತ್ತು ಆದ ಖರ್ಚಿನ ವಿವರವನ್ನು ಕೋಷ್ಟಕ ೧೬.೩೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೬: ರಾಜ್ಯ ವಲಯದ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ಶಿಷ್ಯವೇತನವನ್ನು ಪಡೆದ ಫಲಾನುಭವಿಗಳು ಮತ್ತು ವೆಚ್ಚದ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ವೆಚ್ಚ (₹ ಲಕ್ಷಗಳಲ್ಲಿ) |
|---|---|---|
| ೨೦೦೫-೦೬ | ೨೨೭೫ | ೮.೦೩ |
| ೨೦೦೬-೦೭ | ೨೪೬೦ | ೮.೭೬ |
| ೨೦೦೭-೦೮ | ೫೮೬ | ೯.೦೦ |
| ೨೦೦೮-೦೯ | ೫೬೬ | ೨.೦೩ |
| ೨೦೦೯-೧೦ | ೫೫೭ | ೨.೦೦ |
| ೨೦೧೦-೧೧ | ೫೬೭ | ೧.೮೫ |

*(ಮಾಹಿತಿ: ಜಿಲ್ಲಾ ಅಧಿಕಾರಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಾಮರಾಜನಗರ)*

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅರ್ಹತೆ ಪಡೆದ ಐದು ಸ್ವಯಂ ಸೇವಾ ಸಂಸ್ಥೆಗಳು ಈ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಹೆಸರು ಮತ್ತು ಸ್ಥಳಗಳು ಹೀಗಿವೆ:

೧. ದೀನಬಂಧು ಚಿಲ್ಡ್ರನ್ಸ್ ಹೋಂ, ಪಿ.ಡಬ್ಲ್ಯೂ.ಡಿ ಕಾಲೋನಿ, ಚಾಮರಾಜನಗರ.

೨. ಶ್ರೀ ಮಲೆ ಮಹದೇಶ್ವರ ಸ್ವಾಮಿ ಕೃಪಾ ವಿದ್ಯಾ ಸಂಸ್ಥೆ, ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ತಾಲೂಕು.

೩. ಶ್ರೀ ಫಲಾಹಾರ ಪ್ರಭುದೇವ ಸ್ವಾಮಿ ವಿದ್ಯಾ ಸಂಸ್ಥೆ, ಬಂಡಳ್ಳಿ, ಕೊಳ್ಳೇಗಾಲ ತಾಲೂಕು.

೪. ಶ್ರೀ ನಿರಂಜನ ಶಿವಯೋಗಿ ವಿದ್ಯಾ ಸಂಸ್ಥೆ,, ಹಂಗಾಲ, ಗುಂಡ್ಲುಪೇಟೆ ತಾಲೂಕು.

೫. ಶ್ರೀ ಗಂಗಾಧರೇಶ್ವರ ವಿದ್ಯಾ ಸಂಸ್ಥೆ,, ಸೋಮಹಳ್ಳಿ, ಗುಂಡ್ಲುಪೇಟೆ ತಾಲೂಕು.

**ಋ) ಭಾಗ್ಯಲಕ್ಷ್ಮಿ ಯೋಜನೆ:** ಸಮಾಜದಲ್ಲಿ ಹೆಣ್ಣು ಮಕ್ಕಳ ಸ್ಥಿತಿಯನ್ನು ಉತ್ತಮಗೊಳಿಸಲು ಬಡತನ ರೇಖೆಗಿಂತ ಕೆಳಗಿರುವ ಕುಟುಂಗಳಲ್ಲಿ ಹೆಣ್ಣು ಮಗು ಜನಿಸಿದಾಗ ಅಂತಹ ಕುಟುಂಬಗಳಿಗೆ ನೈತಿಕ ಸ್ಥೈರ್ಯ ತುಂಬಲು ೨೦೦೬–೦೭ನೇ ಸಾಲಿನಿಂದ ಭಾಗ್ಯಲಕ್ಷ್ಮಿ ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ. ೨೦೦೬–೦೭, ೨೦೦೭–೦೮ ಮತ್ತು ೨೦೦೮–೦೯ನೇ ಸಾಲಿನಲ್ಲಿ ೧೯೧೫೭ ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಯೋಜನೆಯ ವಿಮಾ ಮತ್ತು ಸುರಕ್ಷ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕು ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿ ೨೦೧೦–೧೧ನೇ ಸಾಲಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ೫,೨೧೭ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.

## ೨) ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು

**ಅ) ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಇಂಟಿಗ್ರೇಟೆಡ್ ಚೈಲ್ಡ್ ಡೆವಲಪ್‌ಮೆಂಟ್ ಪ್ರೋಗ್ರಾಮ್ಸ್):** ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಸಮತೋಲನ ಆಹಾರ ಒದಗಿಸುವ ಅಗತ್ಯವನ್ನು ಕಂಡುಕೊಂಡು, ಈ ಆಶಯವನ್ನು ಕಾರ್ಯಗತಮಾಡಲು ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಪೂರಕ ಪೌಷ್ಠಿಕ ಆಹಾರಗಳನ್ನು ಇವರಿಗೆ ಒದಗಿಸಲಾಗುತ್ತಿದೆ. ಅದಲ್ಲದೆ ರೋಗ ನಿರೋಧಕ ಚುಚ್ಚುಮದ್ದು ನೀಡಿಕೆ, ಆಗಿಂದಾಗ್ಗೆ ಆರೋಗ್ಯ ತಪಾಸಣೆ ಮಾಡುವುದು ಮುಂತಾದವುಗಳನ್ನು ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ನರಳುತ್ತಿರುವ ೦–೬ ವಯೋವರ್ಗದ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಪ್ರತಿದಿನ ಪೌಷ್ಠಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳ ಮೂಲಕ ನೀಡಲಾಗುತ್ತದೆ.

**ಮಕ್ಕಳ ಕಲ್ಯಾಣ ಸಮಿತಿ:** ನಾನಾ ರೀತಿಯ ಸಮಸ್ಯೆಗಳಲ್ಲಿ ಸಿಲುಕಿದ ಮಕ್ಕಳ ಪೋಷಣೆಗೆ ಹಾಗೂ ರಕ್ಷಣೆಯ ಉದ್ದೇಶದಿಂದ ಒಂದು ಶಾಸನಬದ್ಧ ಸ್ಥಾಪಿತ ವ್ಯವಸ್ಥೆಯನ್ನು ಸರ್ಕಾರವು ಮಾಡಿದೆ. ಈ ಸಂಬಂಧದ ಕಾನೂನನ್ನು ಜಾರಿಗೊಳಿಸಲು ಮಕ್ಕಳ ಕಲ್ಯಾಣ ಸಮಿತಿಗಳನ್ನು (ಸಿಡಬ್ಲೂಸಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ರಚಿಸಿರುತ್ತದೆ. ತೊರೆಯಲ್ಪಟ್ಟ ಮಕ್ಕಳು, ಲೈಂಗಿಕ ದೌರ್ಜನ್ಯಕ್ಕೀಡಾದ ಅಥವಾ ಒಂದು ಸ್ಥಳದಿಂದ ಇನ್ನೊಂದು ಕಡೆಗೆ ದುರುದ್ದೇಶದಿಂದ ವರ್ಗಾಯಿಸಲ್ಪಟ್ಟ ಮಕ್ಕಳು, ಮೊದಲಾದವರು ಪತ್ತೆಯಾದಲ್ಲಿ ಯಾರೇ ಆದರೂ, ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಎದುರು ಹಾಜರು ಪಡಿಸುವುದು ನ್ಯಾಯಯುತ ಮಾರ್ಗ. ಈ ಸಮಿತಿಗಳು ಪ್ರತಿ ಜಿಲೆಯಲ್ಲೂ ಇದ್ದು, ರಾಜ್ಯ ಬಾಲ ಮಂದಿರಗಳಲ್ಲಿ ಕಾರ್ಯ ನಿರ್ವಹಿಸುತ್ತವೆ. ಹೀಗೆ ಹಾಜರು ಪಡಿಸಿದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವುದು ಪೋಷಕರನ್ನು ಹುಡುಕಿಸಿ ಒಪ್ಪಿಸುವುದು, ಪತ್ತೆ ಆಗದಿದ್ದಲ್ಲಿ ಮಗುವನ್ನು ರಕ್ಷಿಸಲು ಬಯಸಿದವರಿಗೆ ದತ್ತು ನೀಡುವುದು, ಅಥವಾ ಫಾಸ್ಟರ್ ಕೇರ್‌ನಲ್ಲಿ ಇಡುವುದು—ಇವೇ ಮುಂತಾದ ಮಾರ್ಗಗಳ ಮೂಲಕ ಮಕ್ಕಳಿಗೆ ಸೂಕ್ತ ನೆರವು ಮತ್ತು ರಕ್ಷಣೆಯನ್ನು ನೀಡಲಾಗುತ್ತದೆ.

**ಬಾಲಮಂದಿರಗಳು:** ಚಾಮರಾಜನಗರ ಜಿಲ್ಲೆಯಲ್ಲಿ ಯಾವುದೇ ಬಾಲಕರ ಬಾಲಮಂದಿರಗಳು ಇರುವುದಿಲ್ಲ. ಚಾಮರಾಜನಗರ ಪಟ್ಟಣದಲ್ಲಿ ಒಂದು ಬಾಲಕಿಯರ ಬಾಲಮಂದಿರವನ್ನು ಮಾತ್ರ ನಿರ್ವಹಿಸಲಾಗುತ್ತಿದೆ. ಸದರಿ ಮಂದಿರದಲ್ಲಿ ತನಿಖೆಗೆ ಒಳಪಟ್ಟ ಬಾಲಕಿಯರ ಸಂಖ್ಯಾ ವಿವರಗಳನ್ನು ಕೋಷ್ಟಕ ೧೬.೩೭ರಲ್ಲಿ ಕೊಡಲಾಗಿದೆ.

**ಕೋಷ್ಠಕ ೧೬.೩೭: ಜಿಲ್ಲೆಯಲ್ಲಿ ೨೦೦೮–೦೯ರಿಂದ ೨೦೧೦–೧೧ನೇ ಸಾಲುಗಳಲ್ಲಿ ತನಿಖೆಗೆ ಒಳಪಟ್ಟ ಮಕ್ಕಳ ಸಂಖ್ಯೆ ಮತ್ತು ಮಾಡಲಾದ ಖರ್ಚಿನ ವಿವರ**

| ಬಾಲಕಿಯರ ಬಾಲಮಂದಿರಗಳ ಸಂಖ್ಯೆ | ಇರುವ ಸ್ಥಳ | ವರ್ಷ | ಮಕ್ಕಳ ಸಂಖ್ಯೆ | ಮಾಡಲಾದ ಖರ್ಚು (₹ ಲಕ್ಷ ಗಳಲ್ಲಿ) |
|---|---|---|---|---|
| ಬಾಲಕಿಯರ ಬಾಲಮಂದಿರ | ಚಾಮರಾಜನಗರ ಪಟ್ಟಣ, ಚಾಮರಾಜನಗರ | ೨೦೦೮–೦೯ | ೧೯ | ೭.೫೦ |
| | | ೨೦೦೯–೧೦ | ೧೪ | ೮.೩೦ |
| | | ೨೦೧೦–೧೧ | ೬ | ೩.೨೯ |

*(ಆಧಾರ: ಜಿಲ್ಲಾ ಅಧಿಕಾರಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಾಮರಾಜನಗರ)*

**ಆ) ಅಂಗನವಾಡಿ ಕೇಂದ್ರಗಳು :** ಮೇಲೆ ತಿಳಿಸಿದಂತೆ, ಶಾಲಾ ಪೂರ್ವ ಮಕ್ಕಳಿಗೆ ಉತ್ತಮ ಆಹಾರ ಮತ್ತು ಆರೈಕೆ ನೀಡುವುದಲ್ಲದೆ, ಮಕ್ಕಳ ತಾಯಿಯರಿಗೆ ಗರ್ಭಿಣಿಯಾದ ಮೂರು ತಿಂಗಳಿನಿಂದ ಹೆರಿಗೆಯಾಗಿ ಆರು ತಿಂಗಳ ಅವಧಿಯವರೆಗೆ ಅವರ ಆರೈಕೆಗಾಗಿ ಅಕ್ಕಿ, ಮೊಟ್ಟೆ, ಹಣ್ಣು ಮೊದಲಾದ ಪೌಷ್ಠಿಕ ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸಲಾಗುವುದು. ಅಂಗನವಾಡಿಯ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಅರ್ಹ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಈ ಆಹಾರವನ್ನು ಪೂರೈಕೆ ಮಾಡುತ್ತಾರೆ ಮತ್ತು ಅಗತ್ಯ ಸೇವೆ ಸಲ್ಲಿಸುತ್ತಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ೧೩೮೧ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ತಾಲೂಕುವಾರು ವಿವರಗಳನ್ನು ಕೋಷ್ಟಕ ೧೬.೩೮ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೩೮**

| ಕ್ರಮ ಸಂಖ್ಯೆ | ತಾಲೂಕು | ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ | ಮಂಜೂರಾದ ವರ್ಷ |
|---|---|---|---|
| ೧ | **ಚಾಮರಾಜನಗರ** | ೫೪೦ | ೧೯೯೧–೯೨ |
| ೨ | **ಗುಂಡ್ಲುಪೇಟೆ** | ೨೭೨ | ೧೯೮೬–೮೭ |
| ೩ | **ಕೊಳ್ಳೇಗಾಲ** | ೪೫೯ | ೧೯೮೩–೮೪ |
| ೪ | **ಯಳಂದೂರು** | ೧೧೦ | ೧೯೮೬–೮೭ |
| | **ಒಟ್ಟು** | ೧೩೮೧ | |

*(ಆಧಾರ: ಜಿಲ್ಲಾ ಅಧಿಕಾರಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಾಮರಾಜನಗರ )*

**ಮಕ್ಕಳ ಕಲ್ಯಾಣ ಪ್ರಶಸ್ತಿ:** ಮಕ್ಕಳ ಅಭಿವೃದ್ಧಿಗಾಗಿ ಉತ್ತಮ ಸೇವೆ ಸಲ್ಲಿಸಿದ ಎರಡು ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸುವ ಕಾರ್ಯಕ್ರಮವಿದ್ದು, ೨೦೦೭–೦೮ನೇ ಸಾಲಿಗೆ ಈ ಪ್ರಶಸ್ತಿಯನ್ನು, ಚಾಮರಾಜನಗರದ ಆದಿವಾಸಿ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕ ಬಿ.ಎಸ್. ಬಸವರಾಜು ಅವರಿಗೆ ನೀಡಲಾಗಿದೆ. ಪ್ರಶಸ್ತಿಯ ಮೊತ್ತ ₹ ೨೫,೦೦೦ಗಳನ್ನು ನಗದು ರೂಪದಲ್ಲಿ ಕೊಡಲಾಗುವುದು. ೨೦೦೯–೧೦ನೇ ಸಾಲಿನಲ್ಲಿಯೂ, ಇದೇ ಚಾಮರಾಜನಗರದ ಆದಿವಾಸಿ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಮಕ್ಕಳ ಅಭಿವೃದ್ಧಿಗಾಗಿ ಮಾಡಿರುವ ಅತ್ಯುತ್ತಮ ಕೆಲಸಗಳಿಗಾಗಿ, ಪುನಃ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆಗೊಂಡಿದ್ದು, ನಗದು ರೂಪದಲ್ಲಿ ₹ ಒಂದು ಲಕ್ಷ ಮೊತ್ತದ ಪ್ರಶಸ್ತಿ ಪಡೆದಿದೆ.

**ಬಾಲಿಕಾ ಸಮೃದ್ಧಿ ಯೋಜನೆ:** ಸಮಾಜದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಇರುವ ಕೀಳು ಮನೋಭಾವನೆಯನ್ನು ಹೋಗಲಾಡಿಸಿ ಗೌರವ ಮತ್ತು ವಿಶ್ವಾಸದ ಭಾವನೆ ಮೂಡಿಸುವ ನಿಟ್ಟಿನಲ್ಲಿ ಹೆಣ್ಣು ಮಗುವಿಗೆ ಸಾಮಾಜಿಕ ಭದ್ರತೆ ನೀಡುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ದಿ. ೧೫–೬–೧೯೯೭ರ ನಂತರ ಹುಟ್ಟಿದ ಹೆಣ್ಣು ಮಗುವಿಗೆ ಕೊಡುಗೆ ರೂಪದಲ್ಲಿ ₹ ೫೦೦ಗಳನ್ನು ನೀಡಲಾಗುವುದು. ಮಕ್ಕಳು, ಗರ್ಭಿಣಿಯರು, ಬಾಣಂತಿಯರು ಮತ್ತು ಸಹಾಯಕಿಯರು ಈ ಯೋಜನೆಯಡಿಯಲ್ಲಿ ಫಲಾನುಭವಿಗಳೆಂದು ಪರಿಗಣಿಸಿ ಅವರಿಗೆ ಈ ಸೌಲಭ್ಯಗಳನ್ನು ನೀಡಲಾಗುತ್ತದೆ. ಶಾಲೆಯಲ್ಲಿ ಹೆಣ್ಣು ಮಕ್ಕಳ ಹಾಜರಾತಿ ಸುಧಾರಿಸುವ ಮತ್ತು ಬಾಲಕಿಯರ ಮದುವೆಯ ವಯಸ್ಸನ್ನು ಹೆಚ್ಚಿಸುವ ದೃಷ್ಟಿಯಿಂದಲೂ, ಈ ಯೋಜನೆಯನ್ನು ರೂಪಿಸಲಾಗಿದೆ. ಹೆಣ್ಣು ಮಗುವು ಶಾಲೆಗೆ ಹಾಜರಾಗಿ ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮುಂದುವರೆಸಿ, ಹದಿನೆಂಟು ವರ್ಷಗಳವರೆಗೆ ಮದುವೆಯಾಗದಿದ್ದಲ್ಲಿ, ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ, ಈ ಕೆಳಗಿನಂತೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಜಂಟಿ ಉಳಿತಾಯ ಖಾತೆಯಲ್ಲಿ ಠೇವಣಿಯನ್ನು ಬಡ್ಡಿ ಸಮೇತ ನೀಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೩೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೯: ವಿವಿಧ ತರಗತಿಳಲ್ಲಿ ಓದುವ ಮಕ್ಕಳಿಗೆ ತರಗತಿವಾರು ನಿಗದಿ ಪಡಿಸಿರುವ ವಾರ್ಷಿಕ ವಿದ್ಯಾರ್ಥಿ ವೇತನದ ಮೊತ್ತ**

| | | |
|---|---|---|
| **ಒಂದರಿಂದ ಮೂರನೇ ತರಗತಿವರೆಗೆ** | ₹ ೩೦೦ರಂತೆ | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| **ನಾಲ್ಕನೇ ತರಗತಿಗೆ** | ₹ ೫೦೦ರಂತೆ | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| **ಐದನೇ ತರಗತಿಗೆ** | ₹ .೬೦೦ರಂತೆ | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| **ಆರರಿಂದ ಏಳನೇ ತರಗತಿವರೆಗೆ** | ₹ ೭೦೦ರಂತೆ | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| **ಎಂಟನೇ ತರಗತಿಗೆ** | ₹ ೮೦೦ರಂತೆ | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |
| **ಒಂಬತ್ತರಿಂದ ಹತ್ತನೇ ತರಗತಿವರೆಗೆ** | ₹ ೧೦೦೦ರಂತೆ | ಪ್ರತಿ ತರಗತಿಗೆ ಪ್ರತಿ ವರ್ಷಕ್ಕೆ |

*(ಮಾಹಿತಿ: ಇಲಾಖೆಯ ವಾರ್ಷಿಕ ವರದಿ)*

ಸುವರ್ಣ ಸ್ವಾತಂತ್ರ್ಯೋತ್ಸವದ ಸಲುವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಲ್ಲಿ ಜನಿಸಿದ ಹೆಣ್ಣು ಮಗುವಿನ ತಾಯಂದಿರಿಗೆ ₹ ೫೦೦ಗಳನ್ನು ಬಹುಮಾನವಾಗಿಯೂ ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಅರ್ಹ ಬಾಲ ಸೇವಾ ಸಂಸ್ಥೆಗಳು ಮತ್ತು ಬಾಲಭವನ ಯೋಜನೆಯು ಅನುಷ್ಠಾನದಲ್ಲಿರುವುದಿಲ್ಲ ಎಂಬುದಾಗಿ ಜಿಲ್ಲಾ ಮಹಿಳಾ ಮತ್ತು ಅಭಿವೃದ್ಧಿ ಅಧಿಕಾರಿಗಳಿಂದ ತಿಳಿಯಲಾಗಿದೆ.

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಕಂಪೆನಿಯ ಕಾಯಿದೆ ೧೯೫೬ರಡಿಯಲ್ಲಿ ೧೯೮೭ರಲ್ಲಿ ಸ್ಥಾಪಿಸಲ್ಪಟ್ಟಿದೆ. ಕೆಳಗೆ ನಮೂದಿಸಿರುವ ಅಂಶಗಳು ಈ ನಿಗಮದ ಪ್ರಮುಖ ಉದ್ದೇಶಗಳಾಗಿವೆ. ೧)ಮಹಿಳಾ ಉದ್ಯಮಾಕಾಂಕ್ಷಿಗಳನ್ನು ಗುರುತಿಸುವುದು, ೨)ಮಹಿಳೆಯರಿಗಾಗಿ ನಿಗದಿತ ಸಂಯೋಜನಾ ವರದಿಗಳನ್ನು ತಯಾರಿಸುವುದು, ೩)ತಾಂತ್ರಿಕ ಸಲಹಾ ಸೇವೆಯನ್ನು ಒದಗಿಸುವುದು, ಬ್ಯಾಂಕ್ ಮತ್ತು ಇತರೆ ಆರ್ಥಿಕ

ಸಂಸ್ಥೆಗಳಿಂದ ಸಾಲವನ್ನು ಒದಗಿಸುವಲ್ಲಿ ಅನುಕೂಲ ಕಲ್ಪಸುವುದು, ೪)ಮಹಿಳೆಯರು ತಯಾರಿಸುವ ಸರಕುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸುವುದು, ೫)ಮಹಿಳಾ ಸಂಘಗಳನ್ನು, ಸಮಾಜಗಳನ್ನು ಮಂಡಳಿಗಳನ್ನು ಮತ್ತು ಸಹಕಾರಿ ಸಂಸ್ಥೆಗಳನ್ನು ಉತ್ತೇಜಿಸಿ ಬಲಪಡಿಸುವುದು ಹಾಗೂ, ೬)ಮಹಿಳೆಯರಿಗೆ ಅವಶ್ಯಕ ಕೌಶಲ್ಯ ತರಬೇತಿಯನ್ನು ವ್ಯವಸ್ಥೆಗೊಳಿಸುವುದು.

**ಮನೆ ಬೆಳಕು ಮತ್ತು ಉದ್ಯೋಗಿನಿ ಯೋಜನೆ:** ಯಾವುದೇ ವ್ಯಕ್ತಿಯ ಸ್ವಾವಲಂಬನೆಗೆ ಮತ್ತು ಆತ್ಮ ವಿಶ್ವಾಸಕ್ಕೆ ಆರ್ಥಿಕ ಉನ್ನತಿಯೇ ಮೊದಲ ಮೆಟ್ಟಿಲು. ಮಹಿಳೆಯರು ಅರ್ಥಿಕವಾಗಿ ಅಭಿವೃದ್ಧಿ ಹೊಂದುವುದಕ್ಕೆ ಒಂದು ಮಾರ್ಗವಾಗಿ ಅವರನ್ನು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಲು ಹಾಗೂ ವ್ಯಾಪಾರ ಉದ್ದಿಮೆಗಳನ್ನು ಸ್ಥಾಪಿಸಲು, ಈ ಯೋಜನೆಯಲ್ಲಿ ಅವರಿಗೆ ಸಾಲ ಮತ್ತು ಸಹಾಯ ಧನ ನೀಡಲು ಅವಕಾಶವಿದೆ. ಬ್ಯಾಂಕುಗಳ ಮೂಲಕ ₹ ಒಂದು ಲಕ್ಷಗಳವರೆಗೆ ಸಾಲ ಸೌಲಭ್ಯವನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಈ ಯೋಜನೆಯಡಿ ಪ್ರಯೋಜನ ಪಡೆಯಲು ಮಹಿಳೆಯರ ವಯೋಮಿತಿ ೧೮ ರಿಂದ ೪೫ ವರ್ಷಗಳು, ಕುಟುಂಬದ ವಾರ್ಷಿಕ ಆದಾಯ ₹ ೪೦,೦೦೦ ಗಳನ್ನು ಮೀರಿರಬಾರದು. ಸಂಕಷ್ಟಕ್ಕೊಳಗಾದ ಮಹಿಳೆಯರು, ವಿಧವೆಯರು ಮತ್ತು ಅಂಗವಿಕಲ ಮಹಿಳೆಯರಿಗೆ ಆದಾಯದ ಮಿತಿ ಇರುವುದಿಲ್ಲ. ವಿಶೇಷ ವರ್ಗದ ಮಹಿಳೆಯರಿಗೆ ₹ ೧೦,೦೦೦ ಅಥವಾ ಯೋಜನಾ ವೆಚ್ಚದ ೩೦% ರಷ್ಟು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ ₹ ೭೫೦೦ ಅಥವಾ ಯೋಜನಾ ವೆಚ್ಚದ ೨೦% ರಷ್ಟು ಇವೆರೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನವನ್ನು ನಿಗಮದಿಂದ ಜಿಲ್ಲಾ ಅನುಷ್ಠಾನಾಧಿಕಾರಿಗಳ ಮೂಲಕ ಸಂಬಂಧಿಸಿದ ಬ್ಯಾಂಕ್‌ಗಳಿಗೆ ನೀಡಲಾಗುತ್ತದೆ.

೨೦೧೦–೧೧ನೇ ಸಾಲಿನಲ್ಲಿ ₹ ೭೦೦.೦೦ ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ಈ ಯೋಜನೆಯಡಿ ೯೬೦೦ ಮಹಿಳೆಯರು ಪ್ರಯೋಜನ ಪಡೆಯುತ್ತಾರೆ. ದಿ:೩೧–೦೩–೨೦೧೧ ರವರೆಗೆ ₹ ೮೨೧.೦೫ ಲಕ್ಷಗಳನ್ನು ವೆಚ್ಚ ಮಾಡಿ ೭೯೧೦ ಫಲಾನುಭವಿಗಳಿಗೆ ಪ್ರಯೋಜನ ಕಲ್ಪಿಸಲಾಗಿದೆ.

**ಮಹಿಳಾ ತರಬೇತಿ ಯೋಜನೆ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ ಅನುಷ್ಠಾನಗೊಳಿಸುತ್ತಿದ್ದ ಸ್ವಶಕ್ತಿ ಯೋಜನೆಯನ್ನು ಮಹಿಳಾ ತರಬೇತಿ ಯೋಜನೆ ಎಂದು ಹೆಸರಿಸಿ, ಮಹಿಳಾ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸಲಾಗಿದೆ. ಮಹಿಳೆಯರು ಆರ್ಥಿಕ ಸಬಲೀಕರಣ ಹೊಂದಲು, ವಿವಿಧ ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿಪರ ತರಬೇತಿಗಳನ್ನು ಉಚಿತವಾಗಿ ನೀಡಿ ಅವರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸಿ ಸ್ವಾವಲಂಬಿಗಳನ್ನಾಗಿಸುವ ಉದ್ದೇಶವುಳ್ಳ ಯೋಜನೆ ಇದು. ಬ್ಯೂಟಿ ಪಾರ್ಲರ್, ಹೊಲಿಗೆ, ಎಂಬ್ರಾಯಿಡರಿ, ಸಿದ್ದ ಉಡುಪು ತಯಾರಿಕೆ, ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಮತ್ತು ನಿರ್ವಹಣೆ, ಕಂಪ್ಯೂಟರ್ ಹಾರ್ಡ್‌ವೇರ್, ಗಾರೆ ಕೆಲಸದ ತರಬೇತಿ, ನರ್ಸಿಂಗ್ ಮತ್ತು ವಾರ್ಡ್ ಅಸಿಸ್ಟೆನ್ಸ್, ಲಘು ಮೋಟಾರ್ ವಾಹನ ಚಾಲನಾ ತರಬೇತಿ, ಬೇಕರಿ ತಿನಿಸುಗಳ ತಯಾರಿಕಾ ತರಬೇತಿ, ಇತ್ಯಾದಿ ಈ ಯೋಜನೆಯಲ್ಲಿ ನೀಡುವ ತರಬೇತಿಗಳಾಗಿವೆ. ಜಿಲ್ಲೆಯಲ್ಲಿ ಹಿಂದಿನ ಮೂರು ವರ್ಷಗಳಲ್ಲಿ ಒಟ್ಟು ನೂರು ಮಹಿಳೆಯರಿಗೆ ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡಲಾಗಿದೆ.

**ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ:** ಮಹಿಳಾಭಿವೃದ್ಧಿಗೆ ಪೂರಕವಾಗುವ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಲು ಸಹಾಯ ಮಾಡುವುದು ಮತ್ತು ಗ್ರಂಥಾಲಯ ಸ್ಥಾಪಿಸುವುದು, ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳ ಮೌಲ್ಯ ಮಾಪನ ಮಾಡುವುದು ಮತ್ತು ಮಹಿಳೆಯರಿಗೆ ಸಲಹಾ ಕೇಂದ್ರವನ್ನು ಸ್ಥಾಪಿಸುವುದು ಈ ಯೋಜನೆಯ ಉದ್ದೇಶ.

# ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ

ಸ್ವಾತಂತ್ರ್ಯ ಪೂರ್ವದಲ್ಲಿ ಅಂಗವಿಕಲರ ಕಲ್ಯಾಣದ ಬಗ್ಗೆ ಸರ್ಕಾರವು ಹೆಚ್ಚು ಗಮನ ಹರಿಸಿರಲಿಲ್ಲ. ಆದರೆ ಸ್ವಾತಂತ್ರ್ಯೋತ್ತರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಗವಿಕಲರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿವೆ. ಅಂಗವಿಕಲರಿಗೆ ಸಂಬಂಧಿಸಿದ ಕಾರ್ಯಗಳನ್ನು ಮೊದಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿತ್ತು. ನಂತರ ರಾಜ್ಯ ಸರ್ಕಾರ ೧-೮-೧೯೮೮ ರಂದು ಅಂಗವಿಕಲರ ಕಲ್ಯಾಣಕ್ಕಾಗಿಯೇ ಪ್ರತ್ಯೇಕ ಇಲಾಖೆಯನ್ನು ತೆರೆಯಿತು. ಅಂಗವಿಕಲರನ್ನು ಕ್ರಿಯಾಶೀಲ ಪ್ರಜೆಗಳನ್ನಾಗಿಸುವ ದಿಕ್ಕಿನಲ್ಲಿ, ಸರ್ಕಾರವು ಅಂಗವಿಕಲರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದು ಅವುಗಳನ್ನು ಜಿಲ್ಲಾ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕವೆ ಕಾರ್ಯಗತಗೊಳಿಸುತ್ತಿದೆ. ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಕೇಂದ್ರ ಕಛೇರಿಯಲ್ಲಿ ಅವರಿಗೆ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ಪತ್ರಾಂಕಿತ ಅಧಿಕಾರಿಗಳು ಮತ್ತು ಇತರರು ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

ದೇಹದ ಯಾವುದಾದರೂ ಒಂದು ಅಥವಾ ಹೆಚ್ಚು ಅಂಗಾಂಗಗಳು ಊನವಾಗಿದ್ದು, ಅದರಿಂದ ಅವರ ಶಕ್ತಿ, ಸಾಮರ್ಥ್ಯಗಳು ಕ್ಷೀಣಗೊಂಡಿದ್ದರೆ, ಅಥವಾ ಯಾವುದೇ ವ್ಯಕ್ತಿ ತನ್ನ ದೈನಂದಿನ ಕ್ರಿಯೆಗಳನ್ನು ಸ್ವತಃ ಮಾಡಿಕೊಳ್ಳಲು ಅಸಮರ್ಥನಾಗಿದ್ದರೆ ಅಂತಹ ವ್ಯಕ್ತಿಯನ್ನು ಅಂಗವಿಕಲನೆಂದು ಪರಿಗಣಿಸಲಾಗುತ್ತದೆ. ಅಂಗವಿಕಲತೆಯಲ್ಲಿ ದೈಹಿಕ ಅಂಗವಿಕಲರು, ದೃಷ್ಟಿ ದೋಷವುಳ್ಳವರು, ಶ್ರವಣ ದೋಷದಿಂದ ಕೂಡಿರುವವರು, ಬುದ್ಧಿಮಾಂದ್ಯರು, ಕುಷ್ಟರೋಗ ನಿವಾರಿತ ಅಂಗವಿಕಲರು, ಮಾನಸಿಕ ಅಸ್ವಸ್ಥರು ಮತ್ತು ಬಹುವಿಕಲತೆಯುಳ್ಳವರು ಎಂದು ವರ್ಗೀಕರಣ ಮಾಡಲಾಗಿದೆ.

ಅಂಗವಿಕಲರು ಎಲ್ಲರಂತೆ ಬದುಕಲು ಬೇಕಾದದ್ದು ಶಿಕ್ಷಣ ಮತ್ತು ಉದ್ಯೋಗ. ಅವರು ಆರಿಸಿಕೊಳ್ಳುವ ವೃತ್ತಿಗೆ ಬೇಕಾದ ತರಬೇತಿ ಅಷ್ಟೇ ಸಾಲದು, ಅವರು ತಮ್ಮ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಲು ಅವಕಾಶ ಕಲ್ಪಿಸಿಕೊಟ್ಟು, ಸಾಮಾಜಿಕ ಭದ್ರತೆಯ ಬಗ್ಗೆ ಆಶ್ವಾಸನೆ ನೀಡಬೇಕಾಗುತ್ತದೆ. ಹೀಗಾದಲ್ಲಿ ಅವರು ದೇಶದ ಕ್ರಿಯಾಶೀಲ ಪ್ರಜೆಗಳಾಗಲು ಸಾಧ್ಯ ಎಂಬುದನ್ನು ಸರ್ಕಾರವು ಮನಗಂಡು ಹಲವಾರು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ.

**ಅ) ಶೈಕ್ಷಣಿಕ ಯೋಜನೆಗಳು: ಅಂಗವಿಕಲರ ವಿದ್ಯಾರ್ಥಿ ವೇತನ:** ಒಂದನೇ ತರಗತಿಯಿಂದ ವಿಶ್ವವಿದ್ಯಾಲಯ ಮಟ್ಟದವರೆಗೆ ಓದುತ್ತಿರುವ ಅರ್ಹ ಅಂಗವಿಕಲರಿಗೆ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮವನ್ನು ಈ ಇಲಾಖೆಯ ಮೂಲಕ ಜಾರಿಗೆ ತರಲಾಗುತ್ತಿದೆ. ೨೦೦೧-೦೨ನೇ ಸಾಲಿನಿಂದ ಆದಾಯ ಮಿತಿಯನ್ನು ವಿನಾಯಿತಿಗೊಳಿಸಲಾಗಿದೆ. ವಿದ್ಯಾರ್ಥಿ ವೇತನದ ಜೊತೆಗೆ ಅಂಧ ವಿದ್ಯಾರ್ಥಿಗಳಿಗೆ ಮತ್ತು ದೈಹಿಕ ಅಂಗವಿಕಲರಿಗೆ ಸಾರಿಗೆ ಭತ್ಯೆಯನ್ನು ನೀಡಲಾಗುತ್ತದೆ. ವಿದ್ಯಾರ್ಥಿ ವೇತನ ಹಾಗೂ ಸಂಚಾರಿ ಭತ್ಯೆಗಳ ದರವನ್ನು ಕೋಷ್ಟಕ ೧೬.೪೦ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೦: ೨೦೧೧ನೇ ಸಾಲಿನಲ್ಲಿ ವಿಕಲ ಚೇತನರಿಗೆ (ಅಂಗವಿಕಲರಿಗೆ) ನೀಡುವ ವಿದ್ಯಾರ್ಥಿ ವೇತನ ಹಾಗೂ ಸಂಚಾರಿ ಭತ್ಯೆಗಳ ವಿವರಗಳು**

₹ ಗಳಲ್ಲಿ

| ಅಂಗವಿಕಲ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ | ಮಾಹೆಯಾನ | ನಿಲಯಾರ್ಥಿ ಗಳಿಗೆ | ಅಂಧ ವಿದ್ಯಾರ್ಥಿಗಳಿಗೆ ಓದುಗರ ಭತ್ಯೆ | ದೈಹಿಕ ಅಂಗವಿಕಲರಿಗೆ ಸಂಚಾರಿ ಭತ್ಯೆ |
|---|---|---|---|---|
| ಒಂದರಿಂದ ಐದನೇ ತರಗತಿ | ೫೦ | ೨೫ | ೨೫ | ೨೫ |
| ಆರರಿಂದ ಹತ್ತನೇ ತರಗತಿ | ೧೦೦ | ೨೫ | ೨೫ | ೨೫ |
| ಪಿ.ಯು.ಸಿ. | ೧೫೦ | ೧೪೦ | ೭೫ | ೫೦ |
| ಪದವಿ ಶಿಕ್ಷಣ ಟಿ.ಸಿ.ಹೆಚ್. | ೨೦೦ | ೧೮೦ | ೭೫ | – |
| ಬಿ.ಎ, ಎಂ.ಬಿ.ಬಿ.ಎಸ್, ಎಲ್ಎಲ್.ಬಿ, ಡಿಪ್ಲೊಮ–ಇನ್–ಪ್ರೊಫೆಷನ್ ಮತ್ತು ಎಂಜಿನಿಯರಿಂಗ್ ಇನ್ ಪ್ಲಾಂಟ್ ಇಂಜಿನಿಯರಿಂಗ್ | ೨೫೦ | ೨೪೦ | ೧೦೦ | – |
| ಎಂ.ಎ., ಎಂಎಸ್ಸಿ., ಎಂ.ಕಾಂ, ಎಲ್ಎಲ್.ಎಂ ಹಾಗೂ ತತ್ಸಮಾನ | ೩೦೦ | ೨೪೦ | ೧೦೦ | –– |

**ಪ್ರತಿಭಾವಂತ ವಿಕಲ ಚೇತನ (ಅಂಗವಿಕಲ) ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ:** ಶೇಕಡ ೬೦ ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ಪ್ರತಿಭಾವಂತ ಅಂಗವಿಕಲರಿಗೆ ಪ್ರೋತ್ಸಾಹ ನೀಡಲು 'ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ' ಎಂಬ ವಿಶೇಷ ಯೋಜನೆ ಇದು. ಈ ಯೋಜನೆಯನ್ನು ೨೦೦೧–೦೨ನೇ ಸಾಲಿನಿಂದ ಬಿ.ಎಡ್, ಎಂ.ಎಡ್ ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

**ಆ) ಉದ್ಯೋಗ ಮತ್ತು ತರಬೇತಿ:** ಕರ್ನಾಟಕ ನಾಗರೀಕ ಸೇವಾ(ಸಾಮಾನ್ಯ ನೇಮಕಾತಿ)ನಿಯಮಗಳು, ೧೯೭೭ರ ನಿಯಮ ೯(೧ಎ) ಅನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳ ನೇರ ನೇಮಕಾತಿಯಲ್ಲಿ, ಶೇಕಡ ಐದು ಹುದ್ದೆಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. (ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ, ೧೧೫ ಸೆಸೆನಿ ೨೦೦೫ ದಿ. ೧೯.೧೧.೨೦೦೫). 'ಎ' ಮತ್ತು 'ಬಿ' ಹುದ್ದೆಗಳಲ್ಲಿ ಶೇಕಡ ಮೂರು ಹುದ್ದೆಗಳನ್ನು ಅಂಗವಿಕಲರಿಗಾಗಿ ಕಾಯ್ದಿರಿಸಲಾಗಿದೆ.

**'ಆಧಾರ' ಸ್ವಯಂ ಉದ್ಯೋಗಕ್ಕಾಗಿ ಸಹಾಯ ಯೋಜನೆ:** ಅಂಗವಿಕಲರು ಸ್ವಯಂ ಉದ್ಯೋಗ ಕೈಗೊಂಡು ಸಣ್ಣ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಯೋಜನೆಯನ್ನು ಇಲಾಖೆಯಿಂದ ಕಾರ್ಯರೂಪಕ್ಕೆ ತರಲಾಗಿದೆ. ಈ ಯೋಜನೆಯಡಿ ಸಣ್ಣ ವ್ಯಾಪಾರ ಮಾಡಲು ಒಟ್ಟು ₹ ೩೫,೦೦೦ಗಳ ಧನಸಹಾಯ ನೀಡಲಾಗುವುದು. ಇದರಲ್ಲಿ ₹ ೧೫,೦೦೦ಗಳಿಗೆ ಉಚಿತ ಪೆಟ್ಟಿಗೆ/ ಗೂಡಂಗಡಿಯನ್ನೂ, ಉಳಿದ ₹ ೨೦,೦೦೦ಗಳನ್ನು ಬಂಡವಾಳ ರೂಪದಲ್ಲಿ ಬಡ್ಡಿರಹಿತ ಸಾಲವಾಗಿಯೂ ಮಂಜೂರು ಮಾಡಲಾಗುತ್ತದೆ.

**ಪುನರ್ವಸತಿ ಯೋಜನೆಗಳು:** ಅಂಗವಿಕಲರಿಗೆ ಸಾಧನ ಸಲಕರಣೆಗಳ ಪೂರೈಕೆ: ಕುಟುಂಬದ ವಾರ್ಷಿಕ ಆದಾಯವು ₹ ೧೧,೫೦೦ ಗಳನ್ನು ಮೀರದ, ಗ್ರಾಮೀಣ ಪ್ರದೇಶದ ಅಂಗವಿಕಲರಿಗೆ ಮತ್ತು ಕುಟುಂಬದ ವಾರ್ಷಿಕ ಆದಾಯವು ₹ ೨೪,೦೦೦ಗಳನ್ನು ಮೀರದ, ನಗರ ಪ್ರದೇಶದ ಅಂಗವಿಕಲರಿಗೆ ಅವರ ನ್ಯೂನತೆಗೆ ಅಗತ್ಯವಾದ ಸಾಧನ ಸಲಕರಣೆಗಳನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ. ತ್ರಿಚಕ್ರ ವಾಹನಗಳು, ಕೃತಕ ಅವಯವಗಳು, ಶ್ರವಣ ಸಾಧನ, ಗಾಲಿ ಕುರ್ಚಿ ಮುಂತಾದ ಸಲಕರಣೆ ಸವಲತ್ತುಗಳನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ.

**ಈ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು:** ಈ ಯೋಜನೆಯ ಅಡಿಯಲ್ಲಿ ಭಿತ್ತಿ ಚಿತ್ರ, ನಿಯತ ಕಾಲಿಕೆಗಳನ್ನು ಮುದ್ರಿಸಿ ರಾಜ್ಯಾದ್ಯಂತ ಪ್ರಚಾರ, ಇತ್ಯಾದಿ ಕಾರ್ಯಕ್ರಮಗಳ ಮೂಲಕ ವಿವಿಧ ಕಾರ್ಯಕ್ರಮಗಳ ಕುರಿತು ಸಾಮಾನ್ಯರಿಗೆ ತಿಳುವಳಿಕೆ ನೀಡಲಾಗುವುದು.

**ವಿಶ್ವ ಅಂಗವಿಕಲರ ದಿನಾಚರಣೆ:** ವಿವಿಧ ಕ್ರೀಡೆಗಳಲ್ಲಿ ಅಂಗವಿಕಲರು ಭಾಗವಹಿಸುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಯೋಜನೆಯಡಿಯಲ್ಲಿ, ರಾಜ್ಯದ ಎಲ್ಲ ಭಾಗಗಳಲ್ಲಿಯೂ, ಡಿಸೆಂಬರ್ ತಿಂಗಳ ಮೂರನೇ ತಾರೀಖಿನಂದು, ಅಂಗವಿಕಲರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ವಿಶ್ವ ಅಂಗವಿಕಲರ ದಿನಾಚರಣೆ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರತಿಭಾ ಪುರಸ್ಕಾರ ಬಹುಮಾನ ವಿತರಣೆಗೆ ಅವಕಾಶವನ್ನೂ ಮಾಡಲಾಗುತ್ತದೆ. ಅಂಗ ವಿಕಲರಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ:– ದೈಹಿಕ ಚಟುವಟಿಕೆಗಳನ್ನು ಮತ್ತು ಆ ಮೂಲಕ ಆರೋಗ್ಯವನ್ನು ಹಾಗೂ ಆತ್ಮ ವಿಶ್ವಾಸವನ್ನೂ ಹೆಚ್ಚಿಸಲು, ಇಲಾಖೆಯು ಅಂಗ ವಿಕಲರಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿ ವರ್ಷ ನಡೆಸುತ್ತದೆ.

## ಉ) ಇತರ ಯೋಜನೆಗಳು

**ಗುರುತಿನ ಚೀಟಿ ವಿತರಣೆ:** ಈ ಯೋಜನೆಯಡಿ, ಜಿಲ್ಲೆಯ ಅಂಗವಿಕಲರಿಗೆ ಗುರುತಿನ ಚೀಟಿಗಳನ್ನು ಐದು ವರ್ಷಗಳಿಂದ ವಿತರಣೆ ಮಾಡುತ್ತ ಬರಲಾಗಿದೆ. ವಿವಿಧ ಬಗೆಯ ಅಂಗವಿಕಲತೆಯನ್ನು ಗುರುತಿಸುವ ಸಲುವಾಗಿ ವಿವಿಧ ಬಣ್ಣವಿರುವ ಗುರುತಿನ ಚೀಟಿಗಳನ್ನು ನೀಡಲಾಗುತ್ತದೆ.

**ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ರಿಯಾಯಿತಿ ಬಸ್ ಪಾಸ್:** ಸರ್ಕಾರವು, ಈ ಯೋಜನೆಯಡಿ, ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ರಿಯಾಯಿತಿ ದರದಲ್ಲಿ, ಬಸ್ ಪಾಸ್ ವಿತರಿಸುತ್ತಿದೆ. ಮೇಲಿನ ಯೋಜನೆಗಳಲ್ಲದೆ, ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗಾಗಿ 'ಸಮುದಾಯ ಪುನರ್ವಸತಿ ಯೋಜನೆ'ಯನ್ನೂ; ತರಬೇತಿಗೆ ಮತ್ತು ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ ಧನ ಸಹಾಯವನ್ನು ನೀಡಲು 'ತರಬೇತಿ ಹಾಗೂ ಉತ್ಪಾದನಾ ಘಟಕ ಸ್ಥಾಪಿಸುವ ಯೋಜನೆ'ಯನ್ನೂ: ಪಿ.ಯು.ಸಿ ಮತ್ತು ಬಿ.ಎ.ತರಗತಿಗಳಲ್ಲಿ ಓದುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಅವರ ಪಠ್ಯ ಪುಸ್ತಕಗಳನ್ನು ಆಡಿಯೋ ಕ್ಯಾಸೆಟ್‌ಗಳಲ್ಲಿ ಧ್ವನಿ ಮುದ್ರಿಸಿ ಟೇಪ್ ರೆಕಾರ್ಡರ್ ಸಹಿತ ಪ್ರಾಂಶುಪಾಲರ ಮುಖಾಂತರ ನೀಡುವಂಥ 'ಅಂಧ ವಿದ್ಯಾರ್ಥಿಗಳಿಗೆ ಶಬ್ದ ಗ್ರಂಥಾಲಯ' ಎಂಬ ಕಾರ್ಯಕ್ರಮವನ್ನೂ; ಇನ್ನಿತರ ಹಲವಾರು ಕಾರ್ಯಕ್ರಮಗಳೊಂದಿಗೆ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

# ಹಿರಿಯ ನಾಗರಿಕರ ಕಲ್ಯಾಣ

## ಹಿರಿಯ ನಾಗರಿಕರ ದಿನಾಚರಣೆ

ಯಾವುದೇ ವ್ಯಕ್ತಿಗೆ ಅರವತ್ತು ವರ್ಷಗಳ ನಂತರದ ಹಂತವು ಆಶ್ರಿತ ಜೀವನದ ಪ್ರಾರಂಭ ಕಾಲವೆಂಬ ಭಾವನೆಯು ಬಾರದಂತೆ ನೋಡಿಕೊಳ್ಳಲು ಹಾಗೂ ಅರವತ್ತರ ವಯಸ್ಸನ್ನು ದಾಟಿದವರೂ ಕ್ರಿಯಾತ್ಮಕವಾಗಿ, ಸೃಜನಾತ್ಮಕವಾಗಿ ಮತ್ತು ತೃಪ್ತಿಕರ ಜೀವನವನ್ನು ನಡೆಸುವಂತಾಗಬೇಕೆಂಬ ಕುರಿತು ಚಿಂತಿಸಿ, ೧೯೯೯–೨೦೦೦ನೇ ಸಾಲನ್ನು, ವಯಸ್ಸಾದ ವ್ಯಕ್ತಿಗಳ ಅಥವಾ ಹಿರಿಯ ನಾಗರಿಕರ ಅಂತರ ರಾಷ್ಟ್ರೀಯ ವರ್ಷವೆಂದು ಒಕ್ಕೂಟ ರಾಷ್ಟ್ರಗಳು ಘೋಷಿಸಿದವು. ಹಿರಿಯ ನಾಗರಿಕರ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಸಮಗ್ರ ಕಾರ್ಯ ನೀತಿಯನ್ನು ಸಿದ್ಧ ಪಡಿಸುವ ಪ್ರಯತ್ನದಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ರಾಷ್ಟ್ರ ಹಾಗೂ ರಾಜ್ಯ ನೀತಿಯನ್ನು ರೂಪಿಸಿವೆ.  ಈ ನೀತಿಯ ಉದ್ದೇಶದ ಕುರಿತು ಹಾಗೂ ಈ ಹಿರಿಯರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಸಲುವಾಗಿ ಪ್ರತಿ ವರ್ಷ ಅಕ್ಟೋಬರ್ ಒಂದರಂದು ವಿಶ್ವ ಹಿರಿಯರ ನಾಗರಿಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ರಾಜ್ಯದಲ್ಲಿಯೂ ಪ್ರಥಮ ಬಾರಿಗೆ ದಿನಾಂಕ:೧.೧೦.೨೦೦೪ರಂದು ವಿಶ್ವ ಹಿರಿಯರ ನಾಗರಿಕರ ದಿನಾಚರಣೆಯನ್ನು ಆಚರಿಸಲಾಯಿತು.

## ಹಿರಿಯ ನಾಗರಿಕರ ರಾಜ್ಯ ಕಾರ್ಯ ನೀತಿ

ದಿನಾಂಕ ೨೫.೮.೧೯೯೯ರ ಪತ್ರದಲ್ಲಿ ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಸಂಯೋಜನಾ ಮಂತ್ರಾಲಯವಾಗಿರುವ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಅಧಿಕಾರಯುಕ್ತ ಮಂತ್ರಾಲಯವು ೧೯೯೯ನೇ ಸಾಲಿಗೆ ವೃದ್ಧರಿಗೆ ರಾಷ್ಟ್ರೀಯ ನೀತಿಯನ್ನು ರಚಿಸಿತು. ವಯಸ್ಸಾದವರ ಸಮಸ್ಯೆಗಳ ಕುರಿತು ರಾಷ್ಟ್ರಕ್ಕೆ ಕಳಕಳಿ ಇದೆ ಎಂಬ ಅಂಶವನ್ನೂ, ಅವರು ರಕ್ಷಣೆರಹಿತರಾಗಿ ಇರುವುದಿಲ್ಲ ಮತ್ತು ನಿರ್ಲಕ್ಷ್ಯಕ್ಕೆ ಒಳಪಟ್ಟವರಲ್ಲ ಎಂಬ ಭರವಸೆಯನ್ನೂ ನೀಡುತ್ತದೆ. ಸಮಾಜದಲ್ಲಿ ಅವರ ಕಾನೂನು ಬದ್ಧ ಸ್ಥಾನವನ್ನು ಗಟ್ಟಿಗೊಳಿಸಿ, ಅವರಿಗೆ ಸಹಾಯ ನೀಡಿ ಅವರ ಜೀವಿತದ ಕೊನೆಯವರೆಗೂ ಶಾಂತಿ ಮತ್ತು ಗೌರವವನ್ನು ಬಲಪಡಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ಉದ್ದೇಶದಿಂದ, ವೃದ್ಧರಿಗಾಗಿ ಒಂದು ಕಾರ್ಯನೀತಿಯನ್ನು ಜಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರವನ್ನು ದಿನಾಂಕ ೧೩.೫.೨೦೦೩ರ ಪತ್ರದಲ್ಲಿ ಕೋರಿದ್ದು, ಅದರಂತೆ, ರಾಜ್ಯ ಸರ್ಕಾರವು ದಿನಾಂಕ ೫.೯.೨೦೦೩ರ ಆದೇಶದಲ್ಲಿ ಹಿರಿಯ ನಾಗರಿಕರಿಗಾಗಿ ಕಾರ್ಯ ನೀತಿಯನ್ನು ರೂಪಿಸಿ, ಈ ಆದೇಶವು ಕೂಡಲೇ ಜಾರಿಗೆ ಬರುವಂತೆ ಆದೇಶಿಸಿರುತ್ತದೆ.  ಈ ಎಲ್ಲಾ ಅನುಕೂಲಗಳನ್ನು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಹಾಗೂ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಹಿರಿಯ ನಾಗರಿಕರ ಕಲ್ಯಾಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನೂ ಜಾರಿಗೆ ತರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ವಯಸ್ಸಾದವರ ಸುರಕ್ಷತೆ, ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಕ್ಷೇಮಾಭಿವೃದ್ಧಿ, ತೃಪ್ತಿಕರ ಜೀವನ ನಡೆಸಲು ಅವಕಾಶ, ಆಸ್ತಿ ಮತ್ತು ಜೀವ ರಕ್ಷಣೆ, ವಸತಿ ಮತ್ತು ಆಶ್ರಯ, ವಯಸ್ಸಾದವರೂ ಸಂಪನ್ಮೂಲ ವ್ಯಕ್ತಿಗಳೆಂಬ ಸತ್ಯದ ಗುರುತಿಸುವಿಕೆ, ಇವೇ ಮುಂತಾದ ಅಂಶಗಳನ್ನು ಕರ್ನಾಟಕ ರಾಜ್ಯ ನೀತಿಯು ಒಳಗೊಂಡಿರುತ್ತದೆ. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಯನ್ನು ನೀಡುವುದು, ಸಾರ್ವಜನಿಕ ವಾಹನಗಳಲ್ಲಿ ಸೀಟುಗಳನ್ನು ಮೀಸಲಿರಿಸುವುದು, ವಂಚನೆ ಮತ್ತು ಮೋಸದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಯಸ್ಸಾದ ವ್ಯಕ್ತಿಗಳ ದೂರುಗಳನ್ನು ವಿಳಂಬ ಮಾಡದೇ ವಿಲೇವಾರಿ ಮಾಡುವುದು, ಇವೂ ಈ ನೀತಿಯಲ್ಲಿ ಅಳವಡಿಸಲಾಗಿರುವ ಇನ್ನಿತರ ಮುಖ್ಯ ಅಂಶಗಳಾಗಿವೆ.

**ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರದ ಅನುದಾನ:** ಹಿರಿಯ ನಾಗರಿಕರಿಗಾಗಿ ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಎಲ್ಲ ವೃದ್ಧರಿಗೆ ಆಹಾರ, ವೈದ್ಯಕೀಯ ಸವಲತ್ತು ಮತ್ತು ಮಂಚ, ಹಾಸಿಗೆ, ಹೊದಿಕೆ ಇತ್ಯಾದಿ ಇತರ ಮೂಲಭೂತ ಸೌಲಭ್ಯಗಳನ್ನು ಉಚಿತವಾಗಿ ನೀಡಲು, ರಾಜ್ಯ ಸರ್ಕಾರವು ನೂರಕ್ಕೆ ನೂರರಷ್ಟು ಅನುದಾನವನ್ನು ನೀಡಿ, ಈ ಸಂಸ್ಥೆಗಳನ್ನು ನಿರ್ವಹಿಸುವವರಿಗೆ ನೆರವಾಗುತ್ತಿದೆ. ಚಾಮರಾಜನಗರ ಜಿಲ್ಲೆಯ ಸಂತೇಮರಹಳ್ಳಿಯಲ್ಲಿ ಇರುವ ಜ್ಞಾನಸಿಂಧು ವೃದ್ಧಾಶ್ರಮ, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಇಂಥ ಒಂದು ಸ್ವಯಂ ಸೇವಾ ಸಂಸ್ಥೆಯಾಗಿದೆ. ಇದರಲ್ಲಿರುವ ಫಲಾನುಭವಿಗಳ ಸಂಖ್ಯೆ ಇಪ್ಪತ್ತೈದು. ಪ್ರತಿ ತಿಂಗಳು ತಲಾ ₹ ೪೦೦ ರ ಲೆಕ್ಕದಲ್ಲಿ ಇಪ್ಪತ್ತೈದು ವೃದ್ಧರಿಗೆ ಅನುದಾನ ನೀಡಲಾಗುತ್ತದೆ.

**ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಅನುದಾನ:** ರಾಜ್ಯ ಅನುದಾನಿತ ವೃದ್ಧಾಶ್ರಮಗಳನ್ನು ಹೊರತು ಪಡಿಸಿ, ಹಿರಿಯ ನಾಗರಿಕರಿಗಾಗಿ ನಡೆಸುತ್ತಿರುವ ಇತರ ಸ್ವಯಂ ಸೇವಾ ಸಂಸ್ಥೆಗಳಿಗೆ, ಸಿಬ್ಬಂದಿ ಸಹಿತ ಉಚಿತ ಸೌಲಭ್ಯಗಳನ್ನು ನೀಡಲು, ಕೇಂದ್ರ ಸರ್ಕಾರವು ಶೇಕಡ ೯೦ರಷ್ಟು ಅನುದಾನವನ್ನು ನೀಡಿ, ಈ ಸಂಸ್ಥೆಗಳನ್ನು ನಿರ್ವಹಿಸುವವರಿಗೆ ಪ್ರೋತ್ಸಾಹ ನೀಡುತ್ತಿದೆ.

## ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಮಹಿಳೆಯರ ಹಿತಾಸಕ್ತಿಗಳ ರಕ್ಷಣೆ, ಅವರ ಪ್ರಗತಿ ಮತ್ತು ಅಭಿವೃದ್ಧಿಯನ್ನು ಖಚಿತ ಪಡಿಸುವ ಸಂವಿಧಾನಿಕ ಧ್ಯೇಯಕ್ಕೆ ಅನುಸಾರವಾಗಿ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ ೧೯೯೫ರ ಅಡಿಯಲ್ಲಿ ೧೯೯೫ರ ಮೇ ತಿಂಗಳ ಇಪ್ಪತ್ತಾರರಂದು, ರಾಜ್ಯ ಮಹಿಳಾ ಆಯೋಗವನ್ನು ರಚಿಸಿರುತ್ತದೆ. ೧೯೯೬ರ ಆಗಸ್ಟ್ ಆರರಿಂದ ಈ ಆಯೋಗವು ಕಾರ್ಯಾರಂಭ ಮಾಡಿದೆ.

ರಾಜ್ಯದ ಏಳು ಜಿಲ್ಲೆಗಳಲ್ಲಿರುವ ಕೌಟುಂಬಿಕ ನ್ಯಾಯಲಯಗಳಲ್ಲಿ ಮಹಿಳಾ ಸಹಾಯ ವೇದಿಕೆಗಳನ್ನು ಪ್ರಾರಂಭಿಸಲಾಗಿದೆ. ದೀರ್ಘ ಕಾಲದಿಂದ ಇತ್ಯರ್ಥವಾಗದೇ ಉಳಿದ ಕೌಟುಂಬಿಕ ಪ್ರಕರಣಗಳ ವ್ಯಾಜ್ಯಗಳನ್ನು ಶೀಘ್ರ ಬಗೆ ಹರಿಸಲು, ಬೆಂಗಳೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ತಿಂಗಳಿಗೊಮ್ಮೆ ಪಾರಿವಾರಿಕ್ ಮಹಿಳಾ ಅದಾಲತ್ ಕಾರ್ಯಕ್ರಮವನ್ನು ನಡೆಸುತ್ತದೆ. ಆಯೋಗದಲ್ಲಿ ಒಂದು ಪೋಲಿಸ್ ವಿಭಾಗವನ್ನು ಮತ್ತು ಒಂದು ಕಾನೂನು ಸಲಹಾ ವಿಭಾಗವನ್ನು ತೆರೆದಿದ್ದು, ಈ ವಿಭಾಗಗಳ ಮೂಲಕ ಸೂಕ್ತ ಸಲಹೆಗಳನ್ನು ನೀಡಿ, ಆಯೋಗಕ್ಕೆ ಬರುವ ದೂರುಗಳನ್ನು ಬಗೆ ಹರಿಸಲು ಪ್ರಯತ್ನಿಸಲಾಗುತ್ತದೆ. ಗರ್ಭಧಾರಣ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗಪತ್ತೆಯ ನಿಯಂತ್ರಣ ಮತ್ತು ತಡೆಗಟ್ಟುವಿಕೆ, ಆಸಿಡ್ ದಾಳಿಗೆ ಶಿಕ್ಷೆ, ಅತ್ಯಾಚಾರ, ಹೆಣ್ಣು ಭ್ರೂಣ ಹತ್ಯೆ – ಇವೇ ಮುಂತಾದ ವಿಷಯಗಳ ಬಗ್ಗೆ ಸೂಕ್ತ ಕ್ರಮಗಳನ್ನು ಸೂಚಿಸುವುದು; ಆಸ್ತಿ ಹಕ್ಕು, ಕೌಟುಂಬಿಕ ದೌರ್ಜನ್ಯ, ವಿವಾಹ ವಿಚ್ಛೇದನೆ, ಜೀವನಾಂಶ, ಜಾಗೃತಿ, ಮುಂತಾದ ವಿಷಯಗಳ ಬಗ್ಗೆ ಮಹಿಳೆಯ ಪರವಾದ ಕಾನೂನುಗಳ ಕುರಿತು ಅರಿವು ಮೂಡಿಸುವುದು ಶಿಬಿರಗಳನ್ನು ನಡೆಸುವುದು, ಈ ಆಯೋಗದ ಚಟುವಟಿಕೆಗಳಾಗಿರುತ್ತವೆ.

ಈ ಶಿಬಿರಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಡೆಸಿದ್ದು, ೨೦೦೬ರ ನವೆಂಬರ್ ಮೂವ್ವತ್ತರಂದು, ಚಾಮರಾಜನಗರ ಹಾಗೂ ಇತರ ನಾಲ್ಕು ಜಿಲ್ಲೆಗಳ ಗ್ರಾಮ ಪಂಚಾಯತಿಯ ಮಹಿಳಾ ಸದಸ್ಯರಿಗೆ ಆಯೋಗದ ಕಛೇರಿಯಲ್ಲಿ ಕಾನೂನುಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ನಡೆಸಿರುತ್ತದೆ. ನಂತರದ ವರ್ಷಗಳಲ್ಲಿ ಯಾವುದೇ ಶಿಬಿರವನ್ನು ಅಥವಾ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಗದಿಂದ ಈ ಜಿಲ್ಲೆಯಲ್ಲಿ ನಡೆಸಿರುವುದಿಲ್ಲ.

# ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ

ದುರ್ಬಲ ವರ್ಗದವರು, ಮಹಿಳೆಯರು ಮತ್ತು ಮಕ್ಕಳ ಒಳಿತಿಗಾಗಿ ಶ್ರಮಿಸಬೇಕೆಂಬ ಉದ್ದೇಶದಿಂದ, ಕೇಂದ್ರ ಸಮಾಜ ಕಲ್ಯಾಣ ಮಂಡಳಿಯು ೧೯೫೩ರಲ್ಲಿ ಸ್ಥಾಪನೆಗೊಂಡಿತು. ಇದು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಮಂಡಳಿಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರತಿಯೊಂದು ರಾಜ್ಯದಲ್ಲೂ ಸಮಾಜ ಕಲ್ಯಾಣ ಮಂಡಳಿಗಳು ರಚನೆಗೊಂಡವು. ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯು ೧೯೫೪ರಲ್ಲಿ ಸ್ಥಾಪನೆಗೊಂಡಿದೆ.

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯ ಸಿಬ್ಬಂದಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಕೇಂದ್ರ ರಾಜ್ಯ ಸಮಾಜ ಕಲ್ಯಾಣ ಮಂಡಳಿ ಮತ್ತು ರಾಜ್ಯ ಸಮಾಜ ಕಲ್ಯಾಣ ಮಂಡಳಿಗಳು ಸಮನಾಗಿ ಶೇಕಡ ೫೦:೫೦ರಂತೆ ಭರಿಸುತ್ತವೆ.

ಉದ್ಯೋಗಸ್ಥ ತಾಯಂದಿರು, ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟ ಮಹಿಳೆಯರು, ಸಾಂಕ್ರಾಮಿಕ ಮಹಿಳಾ ರೋಗಿಗಳ ಮಕ್ಕಳನ್ನು ನೋಡಿಕೊಳ್ಳುವ ಶ್ರೀ ರಾಜೀವ ಗಾಂಧಿ ರಾಷ್ಟ್ರೀಯ ಶಿಶು ಪಾಲನಾ ಕೇಂದ್ರದ ನಿರ್ವಹಣೆ; ಕಡಿಮೆ ಆದಾಯವುಳ್ಳ ಮಹಿಳಾ ಉದ್ಯೋಗಿಗಳಿಗೆ ಊಟ ಮತ್ತು ವಸತಿ ಸೌಕರ್ಯಗಳನ್ನು ಒದಗಿಸುವ ಸೇವಾ ಸಂಸ್ಥೆಗಳಿಗೆ ಅನುದಾನ ನೀಡುವುದು; ವಯಸ್ಕ ಮಹಿಳೆಯರ ಸ್ವಾವಲಂಬನೆಗಾಗಿ ಅವರಿಗೆ ವೃತ್ತಿ ಶಿಕ್ಷಣ ನೀಡುವುದು ಅಥವಾ ಉದ್ಯೋಗಾವಕಾಶಕ್ಕೆ ಅನುವು ಮಾಡಿಕೊಡುವುದು; ಗ್ರಾಮೀಣ ಮಹಿಳೆಯರಿಗೆ ಜಾಗೃತಿ ಮೂಡಿಸುವ ಶಿಬಿರಗಳನ್ನು ನಡೆಸುವುದು; ಕೌಟುಂಬಿಕ ಸಲಹಾ ಕೇಂದ್ರಗಳ ಮೂಲಕ, ಕ್ರೌರ್ಯಕ್ಕೆ ಮತ್ತು ಶೋಷಣೆಗೆ ಒಳಗಾದ ಮಹಿಳೆಯರ ಮತ್ತು ಮಕ್ಕಳ ಪುನರ್ವಸತಿಗೆ ಸಹಾಯಿಸುವುದು; ಕಾನೂನಿನ ತಿಳಿವಳಿಕೆ ಹಾಗೂ ಉಚಿತ ಕಾನೂನು ಸಲಹೆಗಳನ್ನು ನೀಡುವುದು; ತಿರಸ್ಕೃತ ಮತ್ತು ನೊಂದ ಮಹಿಳೆಯರಿಗೆ ಪ್ರಾಕೃತಿಕವಾಗಿ, ಮನೋಜ್ಞವಾಗಿ ಹಾಗೂ ಮಾನಸಿಕವಾಗಿ ಬೆಂಬಲಿಸಿ ಅಗತ್ಯ ಸೌಕರ್ಯಗಳನ್ನು ಒದಗಿಸುವುದು, ಇವೇ ಮೊದಲಾದ ಕಾರ್ಯಕ್ರಮಗಳನ್ನು ರಾಜ್ಯ ಸಮಾಜ ಕಲ್ಯಾಣ ಮಂಡಳಿಯು ಅನುಷ್ಠಾನಗೊಳಿಸುತ್ತದೆ.

ಈ ಜಿಲ್ಲೆಯಲ್ಲಿ ೨೦೦೬-೦೭ರಲ್ಲಿ ಚಾಮರಾಜನಗರದ ಸಂಸ್ಥೆಯ ಮೂಲಕ ₹ ೯೪,೫೦೦ಗಳ ಅನುದಾನದಲ್ಲಿ, ಇಪ್ಪತ್ತೈದು ಫಲಾನುಭವಿಗಳಿಗೆ ಎರಡು ವರ್ಷದ ಸಂಕ್ಷಿಪ್ತ ಶಿಕ್ಷಣವನ್ನು ನೀಡಲಾಗಿದೆ.

ಚಾಮರಾಜನಗರದಲ್ಲಿ ಒಂದು ಅಲ್ಪಾವಧಿ ವಸತಿ ಗೃಹವಿದ್ದು ೨೦೦೬-೦೭ನೇ ಸಾಲಿನಲ್ಲಿ ಮುವ್ವತ್ತೆರಡು ಫಲಾನುಭವಿಗಳಿಗೆ ₹ ೫,೮೪,೮೬೬ಗಳನ್ನೂ, ೨೦೦೭-೦೮ನೇ ಸಾಲಿನಲ್ಲಿ ಮುವ್ವತ್ತು ಅಭ್ಯರ್ಥಿಗಳಿಗೆ ₹ ೬,೧೯,೬೬೦ಗಳನ್ನೂ ಖರ್ಚು ಮಾಡಲಾಗಿದೆ.

ಜಿಲ್ಲೆಯಲ್ಲಿ ಶಿಶು ಪಾಲನಾ ಕೇಂದ್ರಗಳಲ್ಲಿ ೨೦೦೬-೦೭ರಿಂದ ೨೦೧೦-೧೧ರವರೆಗಿನ ಸಾಲುಗಳಲ್ಲಿ ಸೌಕರ್ಯವನ್ನು ಪಡೆದ ಫಲಾನುಭವಿಗಳು ಮತ್ತು ಆದ ಖರ್ಚಿನ ವಿವರವನ್ನು ಕೋಷ್ಟಕ ೧೬.೪೧ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೧**

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | | | ಅನುದಾನ ₹ ಗಳಲ್ಲಿ | ಫಲಾನುಭವಿಗಳ ಸಂಖ್ಯೆ |
|---|---|---|---|---|---|
| | ನಗರ | ಗ್ರಾಮಾಂತರ | ಒಟ್ಟು | | |
| ೨೦೦೬–೦೭ | ೦೧ | ೦೦ | ೦೧ | ೪೨,೩೮೪ | ೨೫ |
| ೨೦೦೭–೦೮ | ೦೩ | ೦೧ | ೦೪ | ೧೧,೦೧,೯೮೪ | ೬೫೦ |
| ೨೦೦೮–೦೯ | – | ೦೨ | ೦೨ | ೯೪,೦೦೦ | ೫೦ |
| ೨೦೦೯–೧೦ | – | ೦೨ | ೦೨ | ೯೭,೦೦೦ | ೫೦ |
| ೨೦೧೦–೧೧ | – | ೦೨ | ೦೨ | ೯೫,೦೦೦ | ೫೦ |

*(ಆಧಾರ: ವಾರ್ಷಿಕ ವರದಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು)*

# ಹಿಂದುಳಿದ ವರ್ಗಗಳ ಕಲ್ಯಾಣ

ಹಳೆಯ ಮೈಸೂರು ರಾಜ್ಯವನ್ನು ಮಹಾರಾಜರು ಆಳುತ್ತಿದ್ದ ಕಾಲದಲ್ಲಿ, ಅವರು, ರಾಜ್ಯದ ಸೇವೆಗಳಲ್ಲಿ ಬ್ರಾಹ್ಮಣೇತರರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದರೆ ಹೆಚ್ಚು ಸ್ಥಿತಿವಂತರಲ್ಲದವರ ಕಲ್ಯಾಣಕ್ಕೆ ಮತ್ತು ಪುರೋಭಿವೃದ್ಧಿಗೆ ಮಾರ್ಗವಾಗುತ್ತದೆಂದು ಯೋಚಿಸಿ, ಈ ಬಗ್ಗೆ ಅವಶ್ಯ ಕ್ರಮಗಳನ್ನು ಸೂಚಿಸುವುದಕ್ಕಾಗಿ, ಮೈಸೂರಿನ ಮುಖ್ಯ ನ್ಯಾಯಾಲಯದ ಅಂದಿನ ಮುಖ್ಯ ನ್ಯಾಯಾಧೀಶರಾಗಿದ್ದ ಸರ್. ಲೆಸ್ಲಿ ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರು. ಬ್ರಾಹ್ಮಣರು, ಯರೋಪಿಯನ್ನರು ಮತ್ತು ಆಂಗ್ಲೋ ಇಂಡಿಯನ್ನರನ್ನು ಬಿಟ್ಟು ಇತರ ಎಲ್ಲಾ ಸಮುದಾಯಗಳನ್ನು ಹಿಂದುಳಿದ ವರ್ಗಗಳೆಂದು ಪರಿಭಾಷಿಸಿದ ಈ ಸಮಿತಿಯು, "ಏಳು ವರ್ಷಗಳನ್ನು ಮೀರದ ಅವಧಿಯೊಳಗೆ, ಸೇವೆಯಲ್ಲಿನ ಪ್ರತಿಯೊಂದು ದರ್ಜೆಯಲ್ಲಿ ಹಾಗೂ ಪ್ರತಿಯೊಂದು ಕಛೇರಿಯಲ್ಲಿ ಉನ್ನತ ಹುದ್ದೆಗಳ ಅರ್ಧದಷ್ಟು ಭಾಗವನ್ನು ಮತ್ತು ಹುದ್ದೆಗಳಲ್ಲಿ ಮೂರನೇ ಎರಡು ಭಾಗಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು, ಇತರೇ ಸಮುದಾಯಗಳಿಂದ ತುಂಬ ಬೇಕು" ಎಂದು ಶಿಫಾರಸ್ಸು ಮಾಡಿತು.

ರಾಜ್ಯದ ಏಕೀಕರಣದ ನಂತರದಲ್ಲಿ, ಉಚ್ಛ ನ್ಯಾಯಾಲಯವು, ಆಗ ಜಾರಿಯಲ್ಲಿದ್ದ, ೧೯೫೯ರ ಆದೇಶವನ್ನು ಅನೂರ್ಜಿತಗೊಳಿಸಿದ್ದರಿಂದ ಮತ್ತು ಸಾಮಾಜಿಕ ಮತ್ತು ಶೈಕ್ಷಣಿಕ ಹಾಗೂ ರಾಜ್ಯ ನೇಮಕಾತಿ ವಿಷಯದಲ್ಲಿ ಹಿಂದುಳಿದವರನ್ನು ಗುರುತಿಸುವ ದೃಷ್ಟಿಯಿಂದ, ಶಾಸಕರಾದ ಡಾ. ನಾಗನಗೌಡರವರ ಅಧ್ಯಕ್ಷತೆಯಲ್ಲಿ 'ಬ್ಯಾಕ್ ವರ್ಡ್ ಕ್ಲಾಸಸ್ ಕಮಿಟಿ' ಯೊಂದನ್ನು ರಚಿಸಲಾಯಿತು. ಈ ಸಮಿತಿಯು ೧೯೬೦ರಲ್ಲಿ ಸಲ್ಲಿಸಿದ ಮಧ್ಯಂತರ ಮತ್ತು ಅಂತಿಮ ವರದಿಯ ಆಧಾರದ ಮೇಲೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಆ ಮೊದಲೇ ಇದ್ದ ಶೇಕಡ ೧೮ ರಷ್ಟು ಮೀಸಲಾತಿಯನ್ನು ಹೊರತು ಪಡಿಸಿ; ಹಿಂದುಳಿದ ವರ್ಗಗಳಿಗಾಗಿಯೇ ಪ್ರತ್ಯೇಕವಾಗಿ, ಶೇಕಡ ೨೨ರಷ್ಟು ಪ್ರಮಾಣದ ಮೀಸಲಾತಿಯನ್ನು ಶಿಕ್ಷಣ ಕ್ಷೇತ್ರದಲ್ಲೂ ಮತ್ತು ಶೇಕಡ ೨೫ರಷ್ಟು ಪ್ರಮಾಣದ ಮೀಸಲಾತಿಯನ್ನು ಉದ್ಯೋಗ ಕ್ಷೇತ್ರದಲ್ಲೂ ನಿಗದಿಪಡಿಸಿ, ದಿ.೧.೩.೧೯೬೦ ಹಾಗೂ ದಿ. ೯.೬.೧೯೬೦ರಲ್ಲಿ ಸರ್ಕಾರವು ಅದೇಶಗಳನ್ನು ಹೊರಡಿಸಿತು. ಆ ನಂತರ ೧೯೬೧ರಲ್ಲಿ ಪುನಃ ಹೊರಡಿಸಲಾದ ಆದೇಶಗಳನ್ನು ಬಾಲಾಜಿ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ರದ್ದುಗೊಳಿಸಿದ ಮೇಲೆ, ಹೆತ್ತವರ ವಾರ್ಷಿಕ ಆದಾಯ ₹ ೧೨೦೦ ರೊಳಗೆ ಇರುವಂತಹ ಎಲ್ಲ ಅಭ್ಯರ್ಥಿಗಳೂ ಹಿಂದುಳಿದವರೆಂದು ಪರಿಗಣಿಸಲು ದಿ. ೧೬.೯.೧೯೬೩ರಲ್ಲಿ ಸರ್ಕಾರ ಆದೇಶ ನೀಡಿತು. ಈ ಆದೇಶದನ್ವಯ ಇತರ ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಿದ ಮೀಸಲಾತಿಯ ಪ್ರಮಾಣ ಶೇಕಡ ೩೦ ಆಗಿತ್ತು. ಕೆಲವರಿಗೆ ಈ ಆದೇಶದ ಬಗ್ಗೆ ಅತೃಪ್ತಿ

ಇದ್ದಿತಾದರೂ, ೧೯೬೩ರಿಂದ ೧೯೭೭ ರವರೆಗೆ ಈ ಅದೇಶವೇ ಜಾರಿಯಲ್ಲಿತ್ತು. ಚಾಮರಾಜನಗರ ಜಿಲ್ಲೆಯಲ್ಲೂ ಈ ಆದೇಶವೇ ಜಾರಿಯಲ್ಲಿತ್ತು.

೧೯೭೨ರಿಂದ ೧೯೮೦ರ ವರೆಗೆ ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ದೇವರಾಜ ಅರಸುರವರು, ತಮ್ಮ ಅಧಿಕಾರಾವಧಿಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಏಳಿಗೆಗಾಗಿ ಮಾಡಿದ ಕಾರ್ಯಗಳು ಗಣನೀಯ. ಇವರ ಅವಧಿಯಲ್ಲಿ, ಎಲ್. ಜಿ. ಹಾವನೂರುರವರ ಅಧ್ಯಕ್ಷತೆಯಲ್ಲಿ ೧೯೭೨ರಲ್ಲಿ ಮೊದಲನೇ ಹಿಂದುಳಿದ ವರ್ಗಗಳ ಆಯೋಗದ ರಚನೆಯಾಯಿತು. ಈ ಆಯೋಗವು, ೧೯೭೫ರ ನವೆಂಬರ್‌ನಲ್ಲಿ ಸಲ್ಲಿಸಿದ ವರದಿಯನ್ನು ಅಂಗೀಕರಿಸಿದ ಸರ್ಕಾರವು, ರಾಜ್ಯದ ಎಲ್ಲ ಹಿಂದುಳಿದ ಜನಾಂಗಗಳನ್ನು ೧) ಹಿಂದುಳಿದ ಸಮುದಾಯ (ಬಿ.ಸಿ.ಎಂ.), ೨) ಹಿಂದುಳಿದ ಜಾತಿಗಳು (ಬಿ.ಸಿ.ಟಿ.) ೩) ಹಿಂದುಳಿದ ಬುಡಕಟ್ಟು (ಬಿ.ಟಿ) ಎಂದು ಮೂರು ಭಾಗಗಳಾಗಿ ವಿಂಗಡಿಸಿ, ವಾರ್ಷಿಕ ಆದಾಯ ₹ ೪೮೦೦ ರೊಳಗೆ ಇರುವಂತಹವರನ್ನು ಹಿಂದುಳಿದ ವಿಶೇಷ ಗುಂಪು (ಬಿ.ಎಸ್.ಜಿ.) ಎಂದು ಪರಿಗಣಿಸಿ ಶೇ.೪೦ರಷ್ಟು ಮೀಸಲಾತಿಯನ್ನು ಶಿಕ್ಷಣ ಮತ್ತು ನೇಮಕಾತಿಗಾಗಿ ನಿಗದಿಸಲು ದಿ:೨೨.೨.೧೯೭೭ರಲ್ಲಿ ಆದೇಶ ಮಾಡಿತು.

ಮೀಸಲಾತಿ ಮಾತ್ರವಲ್ಲದೆ, ಹಾವನೂರು ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ಅಕ್ಟೋಬರ್ ೧೯೭೭ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿಯೇ ಪ್ರತ್ಯೇಕವಾದ ಒಂದು ಇಲಾಖೆಯನ್ನೂ ; ಕಂಪೆನಿ ಕಾಯಿದೆ ೧೯೫೬ರ ಅನುಸಾರ, ೧೯೭೭ರ ಅಕ್ಟೋಬರ್ ಇಪ್ಪತ್ತೆಂಟರಲ್ಲಿ ಹಿಂದುಳಿದ ವರ್ಗಗಳ ನಿಗಮವನ್ನೂ ಸಂಸ್ಥಾಪಿಸಿತು. ಅದುವರೆಗೆ, ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿದ್ದ ಕಾರ್ಯಕ್ರಮಗಳು ಈ ಹಿಂದುಳಿದ ವರ್ಗಗಳ ಇಲಾಖೆಗೆ ವರ್ಗಾವಣೆಗೊಂಡವು. ಸಮಾಜ ಕಲ್ಯಾಣ ಇಲಾಖೆಯ ದಿ: ೧೬.೦೨.೨೦೦೬ರ ಆದೇಶದ ಮೂಲಕ ಈ ಇಲಾಖೆಯ ಹೆಸರನ್ನು 'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ', ಎಂದು ಮರು ನಾಮಕರಣ ಮಾಡಲಾಗಿದೆ.

ಟಿ. ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ೧೯೮೩ರಲ್ಲಿ, ಎರಡನೇ ಹಿಂದುಳಿದ ವರ್ಗಗಳ ಆಯೋಗ ಸ್ಥಾಪನೆಗೊಂಡಿತು. ಈ ಆಯೋಗವು ರಾಜ್ಯಾದ್ಯಂತ ಸಮೀಕ್ಷೆ ನಡೆಸಿ, ೧೯೮೬ರಲ್ಲಿ ತನ್ನ ವರದಿಯನ್ನು ಮಂಡಿಸಿತು. ಆದರೆ ಸರ್ವೋಚ್ಚ ನ್ಯಾಯಾಲಯದಿಂದ ನೀಡಲಾದ ಮಾರ್ಗದರ್ಶನಗಳನ್ನು ಈ ಆಯೋಗವು ಅನುಸರಿಸಲು ಸಾಧ್ಯವಾಗದ ಕಾರಣ ಈ ಅಯೋಗದ ವರದಿಯು ಅನುಮೋದನೆಗೊಳ್ಳದೇ, ಒಂದು ಮಧ್ಯಂತರ ಆಜ್ಞೆಯನ್ನು ಅಕ್ಟೋಬರ್ ೧೯೮೬ರಲ್ಲಿ ಸರ್ಕಾರದಿಂದ ಹೊರಡಿಸಲಾಯಿತು. ಈ ಆದೇಶದಂತೆ ಹಿಂದುಳಿದ ಜಾತಿಗಳು ಎ.ಬಿ.ಸಿ.ಡಿ ಮತ್ತು ಇ. ಎಂದು ವರ್ಗೀಕರಣಗೊಂಡವು. ಮತ್ತು ಶೇಕಡ ೫೦ ರಷ್ಟು ಮೀಸಲಾತಿ ನೀಡಬೇಕೆಂಬ ಆದೇಶವನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಯಿತು.

ನಂತರ ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿಯವರ ಅಧ್ಯಕ್ಷತೆಯಲ್ಲಿ, ಮೂರನೇ ಹಿಂದುಳಿದ ವರ್ಗಗಳ ಏಕವ್ಯಕ್ತಿ ಆಯೋಗವು, ಮಾರ್ಚ್ ೧೯೮೮ರಲ್ಲಿ ಸರ್ಕಾರದಿಂದ ರಚನೆಗೊಂಡು. ಏಪ್ರಿಲ್ ೧೯೯೦ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ, ೧೯೯೪ ರಲ್ಲಿ ಮೀಸಲಾತಿ ನಿಯಮಾವಳಿಗಳ ಕುರಿತಂತೆ ಎರಡು ಸರ್ಕಾರಿ ಆದೇಶಗಳನ್ನು ಹೊರಡಿಸಿ, ಮೀಸಲಾತಿ ಪ್ರಮಾಣವನ್ನು ಮೊದಲೊಮ್ಮೆ ಶೇ.೫೭ಕ್ಕೆ, ಆನಂತರ ಶೇ.೭೩ಕ್ಕೆ ಹೆಚ್ಚಿಸಲಾಯಿತು. ಆದರೆ ಇದರಿಂದ ಅಸಮಾಧಾನಗೊಂಡ ಹಲವರು ಭಾರತ ಸರ್ವೋಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದರು. ರಾಜ್ಯಗಳಲ್ಲಿನ ಮೀಸಲಾತಿಯು ಯಾವುದೇ ಸಂದರ್ಭದಲ್ಲಿಯೂ,

ಪರಿಶಿಷ್ಟ ಜಾತಿ ಮತ್ತು ವರ್ಗವನ್ನೂ ಸೇರಿಸಿದಂತೆ ಒಟ್ಟು ಶೇ.೫೦ರ ಪ್ರಮಾಣವನ್ನು ಮೀರಬಾರದೆಂದು ಸರ್ವೋಚ್ಛ ನ್ಯಾಯಾಲಯವು ಸೆಪ್ಟೆಂಬರ್ ೧೯೯೪ರಲ್ಲಿ ನೀಡಿದ ಮಧ್ಯಂತರ ತೀರ್ಪಿನನ್ವಯ, ಸರ್ಕಾರವು ಆದೇಶ ದಿನಾಂಕ ೧೭-೯-೧೯೯೪ರ ಅನುಬಂಧದಲ್ಲಿ ಮುಂದೆ ತಿಳಿಸಿರುವಂತೆ ಪ್ರವರ್ಗವಾರು ಮೀಸಲಾತಿಯನ್ನು ನಿಗದಿಗೊಳಿಸಿತು. ಪ್ರವರ್ಗ-೧, ಶೇ.೪; ಪ್ರವರ್ಗ-೨ಎ ಶೇ.೧೫; ಪ್ರವರ್ಗ-೨ಬಿ ಶೇ.೪; ಪ್ರವರ್ಗ-೩ಎ ಶೇ.೪; ಪ್ರವರ್ಗ-೩ಬಿ ಶೇ.೫; ಪರಿಶಿಷ್ಟ ಜಾತಿ, ಶೇ.೧೫; ಪರಿಶಿಷ್ಟ ಪಂಗಡ, ಶೇ.೩; ಒಟ್ಟು ಶೇ.೫೦.

## ಹಿಂದುಳಿದ ವರ್ಗಗಳ ಶಾಶ್ವತ ಆಯೋಗ

ಮಂಡಲ್ ಮೊಕದ್ದಮೆಯಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯವು, ೧೯೯೨ರ ನವೆಂಬರ್ ಹದಿನಾರಂದು ನೀಡಿದ ತೀರ್ಪಿನಲ್ಲಿ, ಹಿಂದುಳಿದ ವರ್ಗಗಳ ಪಟ್ಟಿಗೆ, ಹೆಚ್ಚುವರಿಯಾಗಿ ಮತ್ತು ಇಳುವರಿಯಾಗಿ ಸೇರ್ಪಡೆಯಾಗಿರುವ ವಿವಿಧ ಜಾತಿ ಉಪ ಜಾತಿಗಳ ಕುರಿತಂತೆ ಹಾಗೂ ಇವರಿಗಾಗಿ ಇರುವ ಕಾರ್ಯಕ್ರಮಗಳ ಜಾರಿ ಕುರಿತಂತೆ ಪರಿಶೀಲಿಸಿ ಸೂಕ್ತ ಶಿಫಾರಸುಗಳನ್ನು ನೀಡುವುದಕ್ಕಾಗಿ ಕೇಂದ್ರದಲ್ಲಿ ಹಾಗೂ ಪ್ರತಿಯೊಂದು ರಾಜ್ಯದಲ್ಲಿ ಒಂದೊಂದು ಶಾಶ್ವತ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸುವಂತೆ ನಿರ್ದೇಶನ ನೀಡಿದ ಮೇಲೆ ಕರ್ನಾಟಕ ರಾಜ್ಯದಲ್ಲಿ, ೧೯೯೩ರಲ್ಲಿ ಶಾಶ್ವತವಾಗಿ ಹಿಂದುಳಿದ ವರ್ಗಗಳ ಆಯೋಗವನ್ನು ಸ್ಥಾಪಿಸಲಾಯಿತು. ಈ ಆಯೋಗದ ಅಧ್ಯಕ್ಷರಾಗಿದ್ದ ಪ್ರೊ. ರವಿವರ್ಮಕುಮಾರರವರು, ಒಂದು ವಿಶೇಷ ವರದಿಯನ್ನೂ, ಮತ್ತು ಎಪ್ಪತ್ತೊಂದು ಸಲಹೆಗಳನ್ನೂ, ಡಿಸೆಂಬರ್ ೨೦೦೦ದಲ್ಲಿ ಸಲ್ಲಿಸಿದರು. ಸರ್ಕಾರವು ಸಂಪೂರ್ಣ ವರದಿಯ ಪರಿಶೀಲನೆಯನ್ನು ಬಾಕಿ ಇಟ್ಟು, ದಿನಾಂಕ ೩೦.೦೩.೨೦೦೨ರ ಆದೇಶವನ್ನು ಹೊರಡಿಸಿ, ರಾಜ್ಯದ ಹಿಂದುಳಿದ ಜಾತಿ, ಉಪಜಾತಿಗಳ ಪರಿಷ್ಕೃತ ಪಟ್ಟಿಯನ್ನು ಪ್ರಕಟಿಸಿತು. ಅದರಂತೆ ರಾಜ್ಯದಲ್ಲಿ, ಪ್ರಧಾನ ಮತ್ತು ಪರ್ಯಾಯ ನಾಮ/ಉಪನಾಮಗಳೂ ಸೇರಿದಂತೆ ಸುಮಾರು ೮೨೩ ಜಾತಿ, ಉಪಜಾತಿಗಳು ಹಿಂದುಳಿದ ವರ್ಗವಾಗಿ ಪರಿಗಣಿಸಲ್ಪಟ್ಟಿದ್ದವು. ನಂತರ ೨೦೦೯ರ ಫೆಬ್ರವರಿಯಲ್ಲಿ ವೀರಶೈವ-ಲಿಂಗಾಯತ ಜಾತಿಗೆ ಇನ್ನಷ್ಟು ಉಪಜಾತಿಗಳನ್ನು ಸೇರ್ಪಡೆಗೊಳಿಸಿರುವುದರಿಂದ ಈ ಸಂಖ್ಯೆ ಇನ್ನೂ ಹೆಚ್ಚಿದೆ. ಈ ಜಾತಿಗಳ ವಿಂಗಡಣೆ ಮತ್ತು ಶೇಕಡ ಮೀಸಲಾತಿಯ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಅಂದರೆ ದಿ. ೧೭.೯.೧೯೯೪ರ ಆದೇಶದಲ್ಲಿ ನಿಗದಿಪಡಿಸಿದ ಪ್ರಮಾಣವೇ ಈಗಲೂ ಜಾರಿಯಲ್ಲಿರುತ್ತದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-೧ರ ಅಭ್ಯರ್ಥಿಗಳನ್ನು ಹಾಗೂ 'ಕೆನೆಪದರ ನೀತಿ'ಗೆ ಒಳಪಡುವ ವರ್ಗವನ್ನು ಹೊರತು ಪಡಿಸಿ ಹಿಂದುಳಿದ ಜಾತಿಗೆ ಸೇರಿದ ಇತರ ಅಭ್ಯರ್ಥಿಗಳೆಲ್ಲ ಮೀಸಲಾತಿಯ ಸೌಲಭ್ಯವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ ಹಾವನೂರು ಆಯೋಗದ ಶಿಫಾರಸ್ಸಿನ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಿಂದುಳಿದ ವರ್ಗಗಳ ಇಲಾಖೆಯು ೧೯೭೭ರಲ್ಲಿ ಪ್ರಾರಂಭಗೊಂಡಿತು. ಈ ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು ಇವನ್ನು ಈ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳ ಮೂಲಕ ಅನುಷ್ಠಾನಗೊಳಿಸುತ್ತದೆ.

ಆಯುಕ್ತರು ಅಥವಾ ನಿರ್ದೇಶಕರು, ಈ ಇಲಾಖೆಯ ಮುಖ್ಯಸ್ಥರಾಗಿದ್ದು ಇವರ ಸಹಾಯಕ್ಕೆ ಇಬ್ಬರು ಜಂಟಿ ನಿರ್ದೇಶಕರು, ಮೂವರು ಉಪ ನಿರ್ದೇಶಕರು, ಐದು ಸಹಾಯಕ ನಿರ್ದೇಶಕರು, ಒಬ್ಬರು ಲೆಕ್ಕಾಧಿಕಾರಿಗಳು ಮತ್ತು ಒಬ್ಬರು ಗೆಸೆಟೆಡ್ ವ್ಯವಸ್ಥಾಪಕರು ಕೇಂದ್ರ ಸ್ಥಾನದಲ್ಲಿ ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಈ ಇಲಾಖೆಗೆ ಹಾಗೂ ಅಲ್ಪ ಸಂಖ್ಯಾತರ ಇಲಾಖೆಗೂ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ, ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ.

**ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ:** ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಶಿಕ್ಷಣ ಸಂಸ್ಥೆ (ಕಾಲೇಜುಗಳು) ನಡೆಯುತ್ತಿರುವ ಸ್ಥಳಗಳಲ್ಲಿ ಮೆಟ್ರಿಕ್ ನಂತರದ ಬಾಲಕ/ ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿ ಮಾಹೆಯಾನ ₹ ೬೫೦ ರ ವೆಚ್ಚದಲ್ಲಿ ಹತ್ತು ತಿಂಗಳ ಅವಧಿಗೆ ಆಹಾರ ಮತ್ತು ವಸತಿ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ₹ ೧೦೦೦ರ ವೆಚ್ಚದಲ್ಲಿ ಹತ್ತು ತಿಂಗಳ ಅವಧಿಗೆ ಸಾದಿಲ್ವಾರು ವೆಚ್ಚ ಮಾಡಲಾಗುವುದಲ್ಲದೆ, ಪ್ರತೀ ನಿಲಯಕ್ಕೆ ಎರಡು ದಿನಪತ್ರಿಕೆಗಳ ಪೂರೈಕೆಗಾಗಿ ₹ ೧೫೦೦ಗಳ ವೆಚ್ಚ ಭರಿಸಲಾಗುತ್ತದೆ. ಈ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರಿ/ಸರ್ಕಾರಿ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಾದ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಬಿ.ಇ., ಎಂಬಿಬಿಎಸ್., ಡಿಪ್ಲೊಮ, ವೃತ್ತಿಶಿಕ್ಷಣ ಕೋರ್ಸುಗಳು ಇತ್ಯಾದಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಕಾಲೇಜುಗಳಿಂದ ಐದು ಕಿ.ಮೀ.ಗಿಂತ ದೂರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳು ಮತ್ತು ಕುಟುಂಬದ ವಾರ್ಷಿಕ ವರಮಾನ ₹ ೧೫,೦೦೦ ಕ್ಕಿಂತ ಕಡಿಮೆ ಇರುವವರು ಮಾತ್ರ, ಈ ನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹರು. ಸ್ಥಳೀಯ ವಿದ್ಯಾರ್ಥಿಗಳು ಪ್ರವೇಶಕ್ಕೆ ಅನರ್ಹರು.

ಜಿಲ್ಲೆಯಲ್ಲಿ ಒಟ್ಟು ಎರಡು ಗಂಡು ಮಕ್ಕಳ ಮತ್ತು ಮೂರು ಹೆಣ್ಣು ಮಕ್ಕಳ ಒಟ್ಟು ಐದು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿದ್ದು, ೨೦೧೦-೧೧ನೇ ಸಾಲಿನಲ್ಲಿ, ಜಿಲ್ಲೆಯಲ್ಲಿರುವ ಮೆಟ್ರಿಕ್ ವಿದ್ಯಾರ್ಥಿನಿಲಯಗಳ ಸಂಖ್ಯೆ ಮತ್ತು ನಿಲಯಾರ್ಥಿಗಳ ವಿವರಗಳನ್ನ ಕೋಷ್ಟಕ ೧೬.೪೨ ಮತ್ತು ೧೬.೪೩ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೨: ಜಿಲ್ಲೆಯಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮತ್ತು ಬಾಲಕ, ಬಾಲಕಿಯರ ಸಂಖ್ಯೆಯ ವಿವರಗಳು**

| ತಾಲ್ಲೂಕು | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ಚಾಮರಾಜನಗರ | ೩ | ೩ | ೬ | ೨೬೫ | ೨೮೦ | ೫೪೫ |
| ಗುಂಡ್ಲುಪೇಟೆ | ೧ | ೧ | ೨ | ೭೫ | ೭೫ | ೧೫೦ |
| ಕೊಳ್ಳೇಗಾಲ | ೧ | ೧ | ೨ | ೨೦೦ | ೧೦೦ | ೩೦೦ |
| ಯಳಂದೂರು | – | ೧ | ೧ | – | ೧೦೦ | ೧೦೦ |
| ಒಟ್ಟು | ೫ | ೬ | ೧೧ | ೫೪೦ | ೫೫೫ | ೧೦೯೫ |

*(ಮಾಹಿತಿ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಕೋಷ್ಟಕ ೧೬.೪೩: ಜಿಲ್ಲೆಯಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ೨೦೦೫–೦೬ರಿಂದ ೨೦೧೦–೧೧ರ ವರೆಗೆ ಪ್ರಯೋಜನ ಪಡೆದವರ ಮತ್ತು ಆದ ವೆಚ್ಚದ ವಿವರಗಳು (ಯೋಜನೆ+ಯೋಜನೇತರ)**

| ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಬಾಲಕಿಯರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಒಟ್ಟು ನಿಲಯಗಳು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ವೆಚ್ಚ ₹ ಲಕ್ಷಗಳಲ್ಲಿ |
|---|---|---|---|---|---|
| ೨೦೦೫–೦೬ | ೧ | ೩ | ೪ | ೨೧೬ | ೧೧.೨೩ |
| ೨೦೦೬–೦೭ | ೧ | ೩ | ೪ | ೨೩೫ | ೧೨.೮೪ |
| ೨೦೦೭–೦೮ | ೨ | ೩ | ೫ | ೨೩೫ | ೧೪.೫೨ |
| ೨೦೦೮–೦೯ | ೪ | ೪ | ೮ | ೫೨೯ | ೩೧.೮೫ |
| ೨೦೦೯–೧೦ | ೫ | ೫ | ೧೦ | ೬೨೯ | ೪೭.೪೭ |
| ೨೦೧೦–೧೧ | ೫ | ೬ | ೧೧ | ೬೪೪ | ೪೫.೨೯ |

*(ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳ ನಿರ್ವಹಣೆ:** ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ, ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ಇಲಾಖೆಯಿಂದ ನಡೆಸಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿನ ಮಂಜೂರಾತಿ ಸಂಖ್ಯೆಯ ಶೇಕಡ ೭೫ ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ, ಶೇಕಡ ೨೫ ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೂ ನೀಡಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯಾರ್ಥಿಗಳಿಗೆ, ಕೆಳಕಂಡ ಸೌಲಭ್ಯಗಳನ್ನು ನೀಡಲಾಗುವುದು.

ಉಚಿತ ವಸತಿ ಸೌಕರ್ಯ, ಮಾಹೆಯಾನ ₹ ೫೦ ರಂತೆ ೧೦ ತಿಂಗಳ ಅವಧಿಗೆ ಇತರೇ ವಸ್ತುಗಳು(ಸೋಪು, ಎಣ್ಣೆ ಇತ್ಯಾದಿ), ₹ ೨೦೦ರ ವೆಚ್ಚದಲ್ಲಿ ವರ್ಷಕ್ಕೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿಗಳು, ಮೂರು ವರ್ಷಕ್ಕೊಮ್ಮೆ ₹ ೪೫೦ರ ವೆಚ್ಚದಲ್ಲಿ ಹಾಸಿಗೆ ಹೊದಿಕೆಗಳು, ₹ ೪೦೦ರ ವೆಚ್ಚದಲ್ಲಿ ವರ್ಷಕ್ಕೆ ಎರಡು ಜೊತೆ ಉಡುಪುಗಳ ಪೂರೈಕೆ. (ಒಂದು ಸೆಟ್ ಟೆರಿಕಾಟ್ ಮತ್ತು ಒಂದು ಸೆಟ್ ಕಾಟನ್), ಪ್ರತಿ ಬಾಲಕ ವಿದ್ಯಾರ್ಥಿಗೆ ವಾರ್ಷಿಕ ₹ ೫೦ ರಂತೆ ಕ್ಷೌರದ ವೆಚ್ಚ—ಇವು ಪ್ರತಿ ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳಾಗಿವೆ. ಇವಲ್ಲದೆ, ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ₹ ೧೦೦ ರಂತೆ ಹತ್ತು ತಿಂಗಳ ಅವಧಿಗೆ ವೈದ್ಯಕೀಯ ವೆಚ್ಚ ನೀಡಿಕೆ, ಮಂಜೂರಾತಿ ಸಂಖ್ಯೆ ಐವತ್ತು ಇರುವ ನಿಲಯಕ್ಕೆ ಮಾಹೆಯಾನ ₹ ೪೦೦ ಗೌರವಧನ ನೀಡಿ, ಮೂವರು ಅಲ್ಪಕಾಲಿಕ ಭೋಧಕರಿಂದ ಕಠಿಣ ವಿಷಯಗಳಲ್ಲಿ ಪಾಠ ಬೋಧನೆಯನ್ನೂ, ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ ₹ ೭೫೦ ವೆಚ್ಚದಲ್ಲಿ ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆಗಳ ಸರಬರಾಜನ್ನೂ ಮಾಡಲಾಗುತ್ತದೆ.

ಸರ್ಕಾರಿ ಅಥವಾ ಸರ್ಕಾರದಿಂದ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಐದರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಶೈಕ್ಷಣಿಕ ಸಂಸ್ಥೆಯಿಂದ ಐದು ಕಿ.ಮೀ. ದೂರದಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಶೇಕಡ ೯೦ ರಷ್ಟು ಸ್ಥಾನಗಳನ್ನೂ ಹಾಗೂ ಐದು ಕಿ.ಮೀ.ಗಳಿಗಿಂತ ಕಡಿಮೆ ಅಂತರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಉಳಿದ ಹತ್ತು ಸ್ಥಾನಗಳನ್ನೂ ಕಾಯ್ದಿರಿಸಿ, ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ನೀಡಲಾಗುತ್ತದೆ.

ಜಿಲ್ಲೆಯಲ್ಲಿ, ಹನ್ನೆರಡು ಮೆಟ್ರಿಕ್ ಪೂರ್ವ ಬಾಲಕರ ನಿಲಯಗಳೂ ಮತ್ತು ಒಂದು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯವು, ಒಟ್ಟು ಹದಿಮೂರು ನಿಲಯಗಳಿದ್ದು ಅವುಗಳಲ್ಲಿ ೬೭೫ ಬಾಲಕರು ಮತ್ತು ೬೦ ಬಾಲಕಿಯರು ಒಟ್ಟು ೭೩೫ ವಿದ್ಯಾರ್ಥಿಗಳು ಇದ್ದಾರೆ. ಸದರಿ ನಿಲಯಗಳ ವಿವರಗಳನ್ನು ಕೋಷ್ಟಕ ೧೬.೪೪ ಮತ್ತು ೧೬.೪೫ರಲ್ಲಿ ಕೊಡಲಾಗಿದೆ.

**ಕೋಷ್ಟಕ೧೬.೪೪: ಜಿಲ್ಲೆಯಲ್ಲಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು ಬಾಲಕ, ಬಾಲಕಿಯರ ಸಂಖ್ಯೆಯ ವಿವರಗಳು**

| ತಾಲೂಕು | ಮೆಟ್ರಿಕ್ ಪೂರ್ವ ನಿಲಯಗಳ ಸಂಖ್ಯೆ | | | ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ಚಾಮರಾಜನಗರ | ೪ | ೧ | ೫ | ೨೦೦ | ೬೦ | ೨೬೦ |
| ಗುಂಡ್ಲುಪೇಟೆ | ೩ | – | ೩ | ೧೭೫ | – | ೧೭೫ |
| ಕೊಳ್ಳೇಗಾಲ | ೩ | – | ೩ | ೨೦೦ | – | ೨೦೦ |
| ಯಳಂದೂರು | ೨ | – | ೨ | ೧೦೦ | – | ೧೦೦ |
| ಒಟ್ಟು | ೧೨ | ೧ | ೧೩ | ೬೭೫ | ೬೦ | ೭೩೫ |

*(ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಕೋಷ್ಟಕ ೧೬.೪೫: ಜಿಲ್ಲೆಯಲ್ಲಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ೨೦೦೫–೦೬ರಿಂದ ೨೦೧೦–೧೧ರ ವರೆಗೆ ವೆಚ್ಚ ಮತ್ತು ಫಲಾನುಭವಿಗಳ ವಿವರಗಳು (ಯೋಜನೆ+ಯೋಜನೇತರ)**

| ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಬಾಲಕಿಯರ ನಿಲಯಗಳ ಸಂಖ್ಯೆ | ಒಟ್ಟು ನಿಲಯಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ವೆಚ್ಚ ₹ ಲಕ್ಷಗಳಲ್ಲಿ |
|---|---|---|---|---|---|
| ೨೦೦೫–೦೬ | ೧೨ | ೧ | ೧೩ | ೬೬೯ | ೩೭.೭೬ |
| ೨೦೦೬–೦೭ | ೧೨ | ೧ | ೧೩ | ೬೭೨ | ೩೪.೨೩ |
| ೨೦೦೭–೦೮ | ೧೨ | ೧ | ೧೩ | ೬೨೮ | ೩೬.೦೩ |
| ೨೦೦೮–೦೯ | ೧೨ | ೧ | ೧೩ | ೬೧೦ | ೪೧.೩೯ |
| ೨೦೦೯–೧೦ | ೧೨ | ೧ | ೧೩ | ೫೫೩ | ೩೪.೩೯ |
| ೨೦೧೦–೧೧ | ೧೨ | ೧ | ೧೩ | ೩೫೧ | ೨೪.೯೪ |

*(ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಶುಲ್ಕ ವಿನಾಯಿತಿ:** ಸರಕಾರಿ ಮತ್ತು ಸರಕಾರದಿಂದ ಮಾನ್ಯತೆ ಪಡೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಯಾವುದೇ ಜಾತಿ ಮತ್ತು ಧರ್ಮಗಳಿಗೆ ಸೇರಿರುವ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ₹ ೧೧,೦೦೦ ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳಿಂದ ವಿನಾಯಿತಿ ನೀಡಲಾಗುತ್ತದೆ. ಇನ್ನಿತರ ನಿಯಮಗಳೊಂದಿಗೆ, ವಿದ್ಯಾರ್ಥಿಗಳ ಸದ್ವರ್ತನೆ ಮತ್ತು ನಿಯಮಿತ ಹಾಜರಾತಿಯನ್ನೂ ಗಮನಿಸಿ ಈ ಶುಲ್ಕ ವಿನಾಯಿತಿಯನ್ನು ನೀಡಲಾಗುತ್ತದೆ. ೨೦೧೦–೧೧ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಪ್ರಯೋಜನ ಪಡೆದವರ ಮತ್ತು ಇದಕ್ಕಾಗಿ ಖರ್ಚು ಮಾಡಿದ ವಿವರಗಳನ್ನು ಕೋಷ್ಟಕ ೧೬.೪೬ರಲ್ಲಿ ನೀಡಲಾಗಿದೆ.

**ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ:** ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಇಲಾಖಾ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ವಿವಿಧ ಪಬ್ಲಿಕ್ ಪರೀಕ್ಷೆಗಳಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಲು ಸ್ಪರ್ಧಾತ್ಮಕ ಮನೋಭಾವ ಮೂಡಿಸುವ ದೃಷ್ಠಿಯಿಂದ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಜಿಲ್ಲೆಯಲ್ಲಿ ೨೦೧೦–೧೧ನೇ ಸಾಲಿನಲ್ಲಿ ಪ್ರೋತ್ಸಾಹಧನವನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಈ ಸಂಬಂಧವಾಗಿ ಮಾಡಿದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೪೬ರಲ್ಲಿ ನೀಡಲಾಗಿದೆ.

**ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:** ಕಾಲೇಜುಗಳಲ್ಲಿ ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅವರ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ನೆರವಾಗುವ ದೃಷ್ಠಿಯಿಂದ, ಪ್ರವರ್ಗ–೧ನ್ನು ಹೊರತುಪಡಿಸಿ ವಾರ್ಷಿಕ ರೂ. ೧೫,೦೦೦ಗಳಿಗಿಂತ ಕಡಿಮೆ ಆದಾಯವಿರುವ ವಿದ್ಯಾರ್ಥಿಗಳಿಗೆ, ಇತರೇ ನಿಯಮಗಳನ್ನನುಸರಿಸಿ, ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮೊತ್ತವನ್ನು ನಿಗದಿಸಲಾಗಿದ್ದು ಅದರಂತೆ ಮಂಜೂರು ಮಾಡಲಾಗುತ್ತದೆ.

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:** ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಉತ್ತೇಜನ ನೀಡುವ ದೃಷ್ಟಿಯಿಂದ ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ.

**ಹೆಚ್ಚುವರಿ ಭೋಜನ ವೆಚ್ಚ:** ಇಲಾಖೆಯ ವಸತಿ ನಿಲಯಗಳಲ್ಲಿ ವಾಸ್ತವ್ಯ ಮಾಡದೆ ಸ್ವಂತ ವಾಸ್ತವ್ಯ ಕಲ್ಪಿಸಿಕೊಂಡಂತಹ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನ ವೆಚ್ಚವನ್ನು ಮಂಜೂರು ಮಾಡಲಾಗುತ್ತದೆ. ಪ್ರವರ್ಗ–೧ಕ್ಕೆ ಸೇರಿದ ವಿದ್ಯಾರ್ಥಿಗಳು ಮಾತ್ರ ಈ ಸೌಲಭ್ಯ ಪಡೆಯಲು ಅರ್ಹರು.

**ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ:** ರಾಜ್ಯದ ಮಾನ್ಯತೆ ಪಡೆದ ವಾಣಿಜ್ಯ ವಿದ್ಯಾಶಾಲೆಗಳಲ್ಲಿ ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆಯುತ್ತಿರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಮಾಹೆಯಾನ ₹ ಐವತ್ತರಂತೆ ಹತ್ತು ತಿಂಗಳ ಅವಧಿಗೆ ಶಿಷ್ಯವೇತನ ನೀಡಲಾಗುತ್ತದೆ. ಶಿಷ್ಯವೇತನ ಮಂಜೂರಾತಿಗೆ ಆಗಸ್ಟ್, ಮೇ ಹಾಗೂ ಜನವರಿಯಿಂದ ಅಕ್ಟೋಬರ್, ಹೀಗೆ ಎರಡು ತಂಡಗಳಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತದೆ. ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಆಯ್ಕೆಯಲ್ಲಿ ಆದ್ಯತೆ ನೀಡಲಾಗುತ್ತದೆ. ೨೦೧೦–೧೧ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಪ್ರಯೋಜನ ಪಡೆದವರ ಮತ್ತು ಇದಕ್ಕಾಗಿ ಖರ್ಚು ಮಾಡಿದ ವಿವರಗಳನ್ನು ಕೋಷ್ಟಕ ೧೬.೪೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೬: ಜಿಲ್ಲೆಯಲ್ಲಿ ವಿವಿಧ ಯೋಜನೆಗಳಿಗೆ ೨೦೧೦–೧೧ನೇ ಸಾಲಿನಲ್ಲಿ ಮಾಡಿದ ವೆಚ್ಚ ಹಾಗೂ ಫಲಾನುಭವಿಗಳ ವಿವರಗಳು**

| ಕ್ರ ಸಂ | ವಿವಿಧ ಯೋಜನೆಗಳು | ಫಲಾನುಭವಿಗಳ ಸಂಖ್ಯೆ | ವೆಚ್ಚ (₹ ಲಕ್ಷಗಳಲ್ಲಿ) |
|---|---|---|---|
| ೧ | ಶುಲ್ಕ ವಿನಾಯಿತಿ | ೬೯೪೭ | ೫೧.೦೦ |
| ೨ | ಪ್ರೋತ್ಸಾಹಧನ ಪಡೆದ ವಿದ್ಯಾರ್ಥಿಗಳು | ೭೦ | ೦.೨೧ |
| ೩ | ವಿದ್ಯಾರ್ಥಿ ವೇತನ | ೧೮೧೬೭ | ೨೨.೩೬ |
| ೪ | ಹೆಚ್ಚುವರಿ ಭೋಜನ ವೆಚ್ಚ | ೨೮೮ | ೪.೫೫ |
| ೫. | ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿಯ ಸೌಲಭ್ಯ | – | – |
| ೬. | ಮಾಂಗಲ್ಯ ಭಾಗ್ಯ | – | – |
| | ಒಟ್ಟು | **೨೫೪೭೨** | **೭೮.೧೨** |

*(ಮಾಹಿತಿ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಹೊಲಿಗೆ ತರಬೇತಿ ಕೇಂದ್ರಗಳು

ಕನಿಷ್ಠ ಏಳನೇ ತರಗತಿಯಲ್ಲಿ ತೇರ್ಗಡೆಯಾದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ನಿರುದ್ಯೋಗಿ ಮಹಿಳೆಯರಿಗೆ, ಅವರು ಜೀವನದಲ್ಲಿ ಸ್ವಾವಲಂಬಿಗಳಾಗಲು ಇಲಾಖೆಯು ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ವೃತ್ತಿಯಲ್ಲಿ ಒಂದು ವರ್ಷದ ತರಬೇತಿಯನ್ನು ನೀಡುತ್ತಿದೆ. ಈ ಕೇಂದ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ, ವಿಧವೆಯರು ಮತ್ತು ನಿರ್ಗತಿಕರಿಗೆ ಆದ್ಯತೆ ನೀಡಲಾಗುತ್ತದೆ. ತರಬೇತಿಯ ಅಂತ್ಯದಲ್ಲಿ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಇಲಾಖಾ ವತಿಯಿಂದ ಪ್ರಮಾಣ ಪತ್ರವನ್ನು ಮತ್ತು ಅವರು ಸ್ವಯಂ ಉದ್ಯೋಗದಲ್ಲಿ ತೊಡಗಲು ಅನುಕೂಲವಾಗುವಂತೆ ಉಚಿತವಾಗಿ ಒಂದು ಹೊಲಿಗೆ ಯಂತ್ರವನ್ನೂ ನೀಡಲಾಗುತ್ತದೆ. ಅನುತ್ತೀರ್ಣರಾಗುವ ಅಭ್ಯರ್ಥಿಗಳು ಎರಡು ವರ್ಷದೊಳಗೆ ಮತ್ತೊಮ್ಮೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು. ಈ ಕೇಂದ್ರಗಳಲ್ಲಿ ತಯಾರುಗೊಂಡ ಉಡುಪುಗಳನ್ನು ಪ್ರವಾಹ ಪೀಡಿತ ಅಥವಾ ಬರಪೀಡಿತ ಪ್ರದೇಶಗಳ ಮಕ್ಕಳಿಗೆ ಮತ್ತು ಕೊಳಚೆ ಪ್ರದೇಶದ ಹಾಗೂ ನಿರ್ಗತಿಕ ಮಕ್ಕಳಿಗೆ ಉಚಿತವಾಗಿ ಆದ್ಯತೆಯ ಮೇಲೆ, ಹಂಚಿಕೆ ಮಾಡಲಾಗುತ್ತದೆ. ಈ ಜಿಲ್ಲೆಯಲ್ಲಿ ಇಲಾಖೆಯು ನಡೆಸುತ್ತಿರುವ ಒಂದು ಹೊಲಿಗೆ ತರಬೇತಿ ಕೇಂದ್ರವಿದೆ.

**ಕೋಷ್ಟಕ ೧೬.೪೭: ೨೦೦೫–೦೬ರಿಂದ ೨೦೧೦–೧೧ರವರೆಗಿನ ವರ್ಷಗಳಲ್ಲಿ ಜಿಲ್ಲೆಯ ಹೊಲಿಗೆ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದವರ ಸಂಖ್ಯೆ ಮತ್ತು ವೆಚ್ಚದ ವಿವರಗಳು (ಯೋಜನೆ+ಯೋಜನೇತರ)**

| ವರ್ಷ | | ತರಬೇತಿ ಪಡೆದ ಮಹಿಳೆಯರ ಸಂಖ್ಯೆ | ತೇರ್ಗಡೆಯಾದವರ ಸಂಖ್ಯೆ | ವಿತರಿಸಿದ ಹೊಲಿಗೆ ಯಂತ್ರಗಳ ಸಂಖ್ಯೆ | ವೆಚ್ಚ ₹ ಲಕ್ಷಗಳಲ್ಲಿ |
|---|---|---|---|---|---|
| ೨೦೦೫–೦೬ | ಗುಂಡ್ಲುಪೇಟೆ ಟೌನ್ | ೨೦ | ೧೮ | ೧೭ | ೦.೭೧ |
| ೨೦೦೬–೦೭ | ಗುಂಡ್ಲುಪೇಟೆ ಟೌನ್ | ೧೯ | ೧೯ | ೧೯ | ೦.೭೧ |
| ೨೦೦೭–೦೮ | ಗುಂಡ್ಲುಪೇಟೆ ಟೌನ್ | ೨೦ | ೧೮ | – | – |
| ೨೦೦೮–೦೯ | ಗುಂಡ್ಲುಪೇಟೆ ಟೌನ್ | ೧೮ | ೧೮ | ೧೮ | ೦.೭೮ |
| ೨೦೦೯–೧೦ | ಗುಂಡ್ಲುಪೇಟೆ ಟೌನ್ | ೧೫ | ೧೫ | ೧೫ | ೦.೮೦ |
| ೨೦೧೦–೧೧ | ಗುಂಡ್ಲುಪೇಟೆ ಟೌನ್ | ೧೦ | ೧೦ | ೧೦ | ೦.೫೪ |

*(ಮಾಹಿತಿ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

## ಖಾಸಗಿ ಮೆಟ್ರಿಕ್ ಪೂರ್ವ ಹಿಂದುಳಿದ ವಿದ್ಯಾರ್ಥಿ ನಿಲಯಗಳಿಗೆ ಅನುದಾನ

ಖಾಸಗಿ ಮೆಟ್ರಿಕ್ ಪೂರ್ವ ಹಿಂದುಳಿದ ವಿದ್ಯಾರ್ಥಿನಿಲಯಗಳಿಗೆ ೨೦೦೫–೦೬ರಿಂದ ೨೦೧೦–೨೦೧೧ರವರೆಗಿನ ವರ್ಷಗಳಲ್ಲಿ ನೀಡಲಾದ ಅನುದಾನ ಮತ್ತು ಪ್ರಯೋಜನ ಪಡೆದವರ ವಿವರಗಳನ್ನು ಕೋಷ್ಟಕ ೧೬.೪೮ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೪೮: ಖಾಸಗಿ ಮೆಟ್ರಿಕ್ ಪೂರ್ವ ಹಿಂದುಳಿದ ವಿದ್ಯಾರ್ಥಿ ನಿಲಯಗಳಿಗೆ ನೀಡಲಾದ ಅನುದಾನ ಮತ್ತು ಪ್ರಯೋಜನ ಪಡೆದವರ ವಿವರಗಳು**

| ವರ್ಷ | ಅನುದಾನಿತ ಬಾಲಕರ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಅನುದಾನಿತ ಬಾಲಕಿಯರ ವಿದ್ಯಾರ್ಥಿನಿಲಯಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ವೆಚ್ಚ ₹ ಲಕ್ಷಗಳಲ್ಲಿ |
|---|---|---|---|---|---|
| ೨೦೦೫–೦೬ | ೨ | ೨ | ೪ | ೨೦೦ | ೬.೧೮ |
| ೨೦೦೬–೦೭ | ೩ | ೨ | ೫ | ೨೫೦ | ೮.೧೯ |
| ೨೦೦೭–೦೮ | ೩ | ೨ | ೫ | ೨೫೦ | ೭.೨೫ |
| ೨೦೦೮–೦೯ | ೩ | ೨ | ೫ | ೨೫೦ | ೮.೮೭ |
| ೨೦೦೯–೧೦ | ೩ | ೨ | ೫ | ೨೩೦ | ೮.೦೧ |
| ೨೦೧೦–೧೧ | ೪ | ೨ | ೬ | ೨೫೫ | ೧೧.೦೧ |

*(ಮಾಹಿತಿ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಹಿಂದುಳಿದ ವರ್ಗಗಳ ಖಾಸಗಿ ಅನುದಾನಿತ ಅನಾಥಾಲಯಗಳು:** ಪ್ರಾಥಮಿಕ ತರಗತಿ, ಮಾಧ್ಯಮಿಕ ತರಗತಿಗಳು ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ಅನಾಥ ಮತ್ತು ನಿರ್ಗತಿಕ ಮಕ್ಕಳ, ಶಿಕ್ಷಣಕ್ಕೆ ಅನುಕೂಲವಾಗುವಂತೆ, ಕೆಲವು ಸ್ವಯಂ ಸೇವಾ ಸಂಸ್ಥೆಗಳು ನಡೆಸುವ, ಅನಾಥಾಲಯಗಳಿಗೆ, ಎಲ್ಲಾ ರೀತಿಯಲ್ಲಿಯೂ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಸಹಾಯಧನ ಮಂಜೂರು ಮಾಡಲಾಗುತ್ತದೆ. ಅನಾಥಾಲಯದಲ್ಲಿರುವ ಅನಾಥರ ನಿರ್ಗತಿಕ ಮಕ್ಕಳ ಸಂಖ್ಯೆಗನುಗುಣವಾಗಿ, ಮಾಹೆಯಾನ ₹ ೧೫೦ರ ದರದಲ್ಲಿ ವರ್ಷದ ಹನ್ನೆರಡೂ ತಿಂಗಳುಗಳಿಗೆ ಆಹಾರದ ಬಾಬ್ತಾಗಿ ಸಹಾಯಧನ ಮಂಜೂರು ಮಾಡಲಾಗುತ್ತದೆ. ಈ ಜಿಲ್ಲೆಯಲ್ಲಿ ಇಲಾಖೆಯಿಂದ ಅನುದಾನ ಪಡೆಯುತ್ತಿರುವ ಏಳು ಹಿಂದುಳಿದ ವರ್ಗಗಳ ಖಾಸಗಿ ಅನಾಥಾಲಯಗಳು ಇರುತ್ತವೆ. ಇವುಗಳಿಗೆ ನೀಡಲಾದ ಅನುದಾನದ ವಿವರಗಳನ್ನು ಕೋಷ್ಟಕ ೧೬.೪೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೯: ಜಿಲ್ಲೆಯಲ್ಲಿರುವ ಹಿಂದುಳಿದ ಖಾಸಗಿ ಅನುದಾನಿತ ಅನಾಥಾಲಯಗಳಿಗೆ ನೀಡಲಾದ ಅನುದಾನದ ವೆಚ್ಚ ಮತ್ತು ಫಲಾನುಭವಿಗಳ ವಿವರಗಳು (ಯೋಜನೆ+ಯೋಜನೇತರ)**

| ವರ್ಷ | ಬಾಲಕರ ಅನಾಥಾಲಯಗಳ ಸಂಖ್ಯೆ | ಬಾಲಕಿಯರ ಅನಾಥಾಲಯಗಳ ಸಂಖ್ಯೆ | ಒಟ್ಟು ಅನಾಥಾಲಯ ಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ವೆಚ್ಚ ₹ ಲಕ್ಷಗಳಲ್ಲಿ |
|---|---|---|---|---|---|
| ೨೦೦೫–೦೬ | ೭ | – | ೭ | ೪೩೪ | ೬.೨೦ |
| ೨೦೦೬–೦೭ | ೭ | – | ೭ | ೪೩೭ | ೭.೨೬ |
| ೨೦೦೭–೦೮ | ೭ | – | ೭ | ೪೪೬ | ೬.೫೬ |
| ೨೦೦೮–೦೯ | ೭ | – | ೭ | ೪೪೫ | ೮.೧೦ |
| ೨೦೦೯–೧೦ | ೭ | – | ೭ | ೪೪೬ | ೧೬.೧೧ |
| ೨೦೧೦–೧೧ | ೭ | – | ೭ | ೪೪೬ | ೧೫.೬೧ |

*(ಮಾಹಿತಿ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಕಾನೂನು ಪದವೀಧರರಿಗೆ ತರಬೇತಿ:** ಸರಕಾರಿ ಆದೇಶ ದಿ:೩೦–೩–೧೯೯೫ರನ್ವಯ ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರುದ್ಯೋಗಿಗಳನ್ನು ಆಯ್ಕೆ ಮಾಡಿ ಅವರಿಗೆ ನಾಲ್ಕು ವರ್ಷಗಳ ಅವಧಿಗೆ ವಕೀಲ ವೃತ್ತಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಪ್ರವರ್ಗ–೧ಕ್ಕೆ ಸೇರಿದ ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿದಂತಹ ಮುವ್ವತ್ತೊಂದರ ವಯೋಮಿತಿಯೊಳಗಿನ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗಿದ್ದು, ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ದೊರಕದಿದ್ದಲ್ಲಿ ಉಳಿದ ವರ್ಗಗಳಿಂದ ಅರ್ಹ ಅಭ್ಯರ್ಥಿಗಳನ್ನು ನಿಯಮಾನುಸಾರ ಆಯ್ಕೆ ಮಾಡಲಾಗುವುದು. ಪ್ರವರ್ಗ–೧ನ್ನು ಹೊರತುಪಡಿಸಿ ಇತರೆ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ₹ ೧೫,೦೦೦ ಗಳ ವಾರ್ಷಿಕ ಆದಾಯಮಿತಿಯನ್ನು ನಿಗದಿಪಡಿಸಲಾಗಿದೆ. ತಿಂಗಳಿಗೆ ₹ ಒಂದು ಸಾವಿರದಂತೆ, ನಾಲ್ಕು ವಾರ್ಷಗಳ ಅವಧಿಗೆ ಶಿಷ್ಯ ವೇತನ ನೀಡಲಾಗುತ್ತದೆ.

**ಕೋಷ್ಟಕ ೧೬.೫೦: ಕಾನೂನು ಪದವೀಧರ ತರಬೇತಿ ಪಡೆದ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಮತ್ತು ವೆಚ್ಚದ ವಿವರಗಳು**

| ವರ್ಷ | ಪುರಷರ ಸಂಖ್ಯೆ | ಮಹಿಳೆಯರ ಸಂಖ್ಯೆ | ವೆಚ್ಚ ₹ ಲಕ್ಷಗಳಲ್ಲಿ |
|---|---|---|---|
| ೨೦೦೫–೦೬ | ೩ | ೫ | ೧.೩೬ |
| ೨೦೦೬–೦೭ | ೧೮ | ೪ | ೧.೮೮ |
| ೨೦೦೭–೦೮ | ೨೩ | ೫ | ೨.೮೭ |
| ೨೦೦೮–೦೯ | ೩೦ | ೫ | ೩.೯೩ |
| ೨೦೦೯–೧೦ | ೩೧ | ೨ | ೩.೮೪ |
| ೨೦೧೦–೧೧ | ೨೬ | – | ೨.೭೨ |

*(ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ)*

**ಗಗನಸಖಿ ತರಬೇತಿ:** ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಗಗನಸಖಿ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ೨೦೦೬–೦೭ನೇ ಸಾಲಿನಿಂದ ಜಾರಿಗೊಳಿಸಲು ಸರ್ಕಾರವು ಅನುಮೋದನೆ ನೀಡಿದೆ. ಈ ತರಬೇತಿಯ ಅವಧಿ ಒಂದು ವರ್ಷವಾಗಿರುತ್ತದೆ. ಕುಟುಂಬದ ವಾರ್ಷಿಕ ವರಮಾನ ₹ ಒಂದು ಲಕ್ಷಕ್ಕೆ ಮೀರಿರದ, ಹಿಂದುಳಿದ ವರ್ಗಗಳ ಅಭ್ಯರ್ಥಿಗಳಲ್ಲಿ ಶೇಕಡ ೮೦ರಷ್ಟು ಯುವತಿಯರಿಗೆ ಮತ್ತು ಶೇಕಡ ೨೦ರಷ್ಟು ಯುವಕರಿಗೆ, ಗಗನಸಖಿ ತರಬೇತಿ ನೀಡಲು ಅವಕಾಶವಿದ್ದು, ಈ ತರಬೇತಿಗೆ ಅರ್ಹ ಅಭ್ಯರ್ಥಿಗಳನ್ನು, ಬೆಂಗಳೂರಿನಲ್ಲಿರುವ, ಇಲಾಖೆಯ ಕೇಂದ್ರ ಕಛೇರಿಯಿಂದ ಆಯ್ಕೆ ಮಾಡಲಾಗುತ್ತದೆ. ಉತ್ತಮ ತರಬೇತಿ ನೀಡುವ ಖ್ಯಾತ ಸಂಸ್ಥೆಗಳ ಮೂಲಕ ಈ ತರಬೇತಿಯನ್ನು ಕೊಡಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಪೂರ್ಣ ತರಬೇತಿಯನ್ನು ಪಡೆಯದೇ ಅರ್ಧಕ್ಕೆ ಬಿಟ್ಟರೆ, ಅವರನ್ನು ತಪ್ಪಿತಸ್ಥರೆಂದು ಪರಿಗಣಿಸಿ, ಅವರೆಗೆ ಅವರ ತರಬೇತಿಗಾಗಿ ಮಾಡಿದ ಖರ್ಚನ್ನು ಶೇಕಡ ಹನ್ನೆರಡರಂತೆ ಬಡ್ಡಿ ಸಮೇತ ವಸೂಲಿ ಮಾಡಲಾಗುತ್ತದೆ.

೨೦೦೮–೦೯ನೇ ಸಾಲಿನಲ್ಲಿ ಇಡೀ ರಾಜ್ಯದಿಂದ ಒಟ್ಟು ೧೨೫ ಅಭ್ಯರ್ಥಿಗಳನ್ನು ಈ ತರಬೇತಿಗೆ ಆಯ್ಕೆ ಮಾಡಿದ್ದು, ಆಯ್ಕೆಯಾದವರಲ್ಲಿ ಈ ಜಿಲ್ಲೆಯ ನಾಲ್ಕು ಅಭ್ಯರ್ಥಿಗಳಿದ್ದಾರೆ. ಇವರಲ್ಲಿ ಒಬ್ಬರು ಪ್ರವರ್ಗ–೧, ಇಬ್ಬರು ಪ್ರವರ್ಗ ೨'ಎ' ಗೂ ಒಬ್ಬರು ಪ್ರವರ್ಗ ೩ಕ್ಕೂ ಸೇರಿದವರಾಗಿರುತ್ತಾರೆ.

ಮೇಲಿನ ಕಾರ್ಯಕ್ರಮಗಳಲ್ಲದೆ, ಈ ಇಲಾಖೆಯಿಂದ ಗ್ರಾಮೀಣ ಪ್ರತಿಭಾವಂತ ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ಮೋರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು; ವಿವಿಧ ವೃತ್ತಿಗಳಲ್ಲಿ ಕೌಶಲ್ಯ ಹೊಂದಲು ಮಹಿಳೆಯರಿಗೆ ಕೌಶಲ್ಯ ಎಂಬ ಕಾರ್ಯಕ್ರಮ; ವಿದೇಶ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲದ ಸಹಾಯ; ನರ್ಸಿಂಗ್ ಅಭ್ಯರ್ಥಿಗಳಿಗೆ ಶಿಷ್ಯ ವೇತನ, ಸವಿತಾ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ, ಉಪ್ಪಾರ ಸಮಾಜದ ಅಭಿವೃದ್ಧಿಗೆ ಕಾರ್ಯಕ್ರಮ, ಉಪ್ಪಾರ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ನೆರವು, ಉಪ್ಪಾರ ಸಮಾಜದ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಸಹಾಯ, ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿ, ಇತ್ಯಾದಿ ವಿವಿಧ ಕಾರ್ಯಕ್ರಮಗಳನ್ನು ಈ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತದೆ.

## ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ಎರಡನೇ ಹಿಂದುಳಿದ ವರ್ಗಗಳ ಆಯೋಗವು ೧೯೭೫ರಲ್ಲಿ ಸಲ್ಲಿಸಿದ ವರದಿಯಲ್ಲಿ ಮಾಡಿದ ಶಿಫಾರಸ್ಸಿನ ಪ್ರಕಾರ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ೧೯೭೭ರ ಅಕ್ಟೋಬರ್ ಇಪ್ಪತ್ತೆಂಟರಂದು, ಕಂಪನಿಗಳ ಕಾಯಿದೆ ೧೯೫೬ರನ್ವಯ ಸ್ಥಾಪನೆಗೊಂಡಿದೆ. ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸುರವರ ದೂರದರ್ಶಿತ್ವದ ಪ್ರತೀಕವಾದ ಈ ನಿಗಮಕ್ಕೆ ಗೌರವ ಸೂಚಕವಾಗಿ, ೨೦೦೫ರ ಅಕ್ಟೋಬರ್ ಇಪ್ಪತ್ತೆಂಟರಂದು, ಅವರದೇ ಹೆಸರನ್ನಿಟ್ಟು 'ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ' ಎಂದು ಮರುನಾಮಕರಣ ಮಾಡಲಾಗಿದೆ.

ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ ಐವತ್ತಕ್ಕಿಂತ ಹೆಚ್ಚಾಗಿರುವ ಹಿಂದುಳಿದ ವರ್ಗಗಳ ಮತ್ತು ಗ್ರಾಮೀಣ ಜನರು ನಗರದ ಬದುಕಿನತ್ತ ಹೆಚ್ಚು ಆಕರ್ಷಿತರಾಗದಂತೆ ನೋಡಿಕೊಳ್ಳಲು ಮತ್ತು ಗ್ರಾಮೀಣ ಪ್ರದೇಶದಲ್ಲಿಯೇ, ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯ ಆರ್ಥಿಕ ನೆರವನ್ನು ನೀಡುವುದು; ಈ ವರ್ಗದ ಯುವ ನಿರುದ್ಯೋಗಿಗಳು ವೃತ್ತಿ ಕುಶಲತೆ ಬೆಳೆಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಅವಕಾಶ ಕಲ್ಪಿಸುವುದು, ಅವರಿಗೆ ಅಗತ್ಯವಿರುವ ತರಬೇತಿ ನೀಡುವುದು; ಮತ್ತು ಆರ್ಥಿಕ ಅಸಮಾನತೆಗೆ ಒಳಗಾದ ಈ ದುರ್ಬಲ ವರ್ಗದ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸುವುದು– ಇವೇ ಮೊದಲಾದ ಉದ್ದೇಶಗಳಿಂದ, ನಿಗಮವು ಹಿಂದುಳಿದ ವರ್ಗಗಳ ಜನರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುತ್ತದೆ ಮತ್ತು ನಿರುದ್ಯೋಗಿ ಯುವಕರಿಗೆ ವೃತ್ತಿ ಕುಶಲತೆ ಬೆಳೆಸಿಕೊಳ್ಳಲು ವಿವಿಧ ಯೋಜನೆಯಡಿ ತರಬೇತಿ ಹಾಗೂ ನೆರವು ಒದಗಿಸುತ್ತದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಎಲ್ಲಾ ಜಿಲ್ಲಾ ಕಚೇರಿಗಳಲ್ಲಿ, ಜಿಲ್ಲಾ ವ್ಯವಸ್ಥಾಪಕರ ನೇತೃತ್ವದಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಸಂಸ್ಥೆಯ ಆರಂಭದ ಮೂಲ ಬಂಡವಾಳ ಕೇವಲ ₹ ಐದು ಲಕ್ಷಗಳಾಗಿದ್ದು, ೨೦೦೮–೦೯ನೇ ಸಾಲಿಗೆ ಆಯವ್ಯಯದಲ್ಲಿ ಒದಗಿಸಿಕೊಂಡ ಹಣ ರೂ. ೯೪೭೫.೨೫ ಲಕ್ಷಗಳಾಗಿರುತ್ತದೆ.

ಪ್ರಾರಂಭದಲ್ಲಿ ಚೈತನ್ಯ ಮಾರ್ಜಿನ್ ಹಣ ಸಾಲದ ಯೋಜನೆಯೊಂದನ್ನು ಮಾತ್ರ ಜಾರಿಗೊಳಿಸುತ್ತಿತ್ತು. ೧೯೮೩–೮೪ನೇ ಸಾಲಿನಿಂದ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಉಪಕರಣಗಳನ್ನು ನೀಡುವ ಕ್ಯಾಷ್ ಪ್ರೋಗ್ರಾಂ ಯೋಜನೆಯನ್ನು; ೧೯೮೩–೮೪ನೇ ಸಾಲಿನಿಂದ ವಾಹನ ಚಾಲನೆ ತರಬೇತಿ

ಮತ್ತಿತರ ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು; ೧೯೮೮–೮೯ನೇ ಸಾಲಿನಿಂದ ಫೋರ್ ಮನ್‌ಶಿಪ್ ತರಬೇತಿಯನ್ನು; ೧೯೯೫–೯೬ನೇ ಸಾಲಿನಿಂದ ಗಂಗಾಕಲ್ಯಾಣ ನೀರಾವರಿ ಯೋಜನೆಯನ್ನು; ೧೯೯೨–೯೩ನೇ ಸಾಲಿನಿಂದ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಚಾನಲೈಸಿಂಗ್ ಏಜೆನ್ಸಿಯಾಗಿ ನೇರ ಸಾಲ ಯೋಜನೆಯನ್ನು; ೨೦೦೨–೨೦೦೩ನೇ ಸಾಲಿನಿಂದ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಚಾಲನಾ ಸಂಸ್ಥೆಯಾಗಿ ಅಂಗವಿಕಲರಿಗೆ ಅವಧಿ ಸಾಲ ನೀಡುವ ಯೋಜನೆಗಳನ್ನು; ೨೦೦೫–೦೬ನೇ ಸಾಲಿನಿಂದ ಕುಲ ಕಸುಬುದಾರರಿಗೆ ಅಗತ್ಯ ಆರ್ಥಿಕ ನೆರವು ನೀಡಲು 'ಶ್ರಮಶಕ್ತಿ' ಯೋಜನೆಯನ್ನು ಕೈಗೆತ್ತಿಕೊಂಡಿದೆ. ೨೦೦೬–೦೭ನೇ ಸಾಲಿನಿಂದ ಅತ್ಯಂತ ಹಿಂದುಳಿದ ಅಲೆಮಾರಿ ಅರೆಅಲೆಮಾರಿ ಜನಾಂಗದವರಿಗೆ ಹಾಗೂ ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಏಳಿಗೆಗಾಗಿ ಕೆಲವು ವಿಶೇಷ ಯೋಜನೆಗಳನ್ನು ಜಾರಿಗೆ ತಂದಿದೆ.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಹಾಗೂ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮಗಳು, ರಾಜ್ಯದ ಈ ನಿಗಮವನ್ನು ಅವುಗಳ ಕಾರ್ಯ ನಿರ್ವಹಣಾ ಸಂಸ್ಥೆಯಾಗಿ ಪರಿಗಣಿಸಿ, ಕೆಳಗಿನ ಅವಧಿ ಸಾಲ ಯೋಜನೆಗಳಡಿ ಕ್ರಮವಾಗಿ ಹಿಂದುಳಿದ ವರ್ಗದವರಿಗೆ ಮತ್ತು ಅಂಗವಿಕಲರಿಗೆ ಸಾಲ ಸೌಲಭ್ಯವನ್ನು ನೀಡುತ್ತವೆ.

**ಅ) ಸಾಮಾನ್ಯ ಅವಧಿ ಸಾಲ ಯೋಜನೆ:** ೧)ವ್ಯವಸಾಯ ಮತ್ತು ವ್ಯವಸಾಯಾಧಾರಿತ ಯೋಜನೆಗಳು, ೨) ಕುಶಲಕರ್ಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ೩) ಸೇವಾವಲಯ ಯೋಜನೆಗಳು ೪) ಸಾರಿಗೆ ವಲಯ ಯೋಜನೆಗಳು.

**ಆ) ಇತರೆ ಅವಧಿ ಸಾಲ ಯೋಜನೆಗಳು:** ೧. ನ್ಯೂ ಸ್ವರ್ಣಿಮಾ ಯೋಜನೆ(ಮಹಿಳೆಯರಿಗೆ ಮಾತ್ರ), ೨. ಮಹಿಳಾ ಸಮೃದ್ಧಿ ಯೋಜನೆ (ಮಹಿಳೆಯರಿಗೆ ಮಾತ್ರ) ೩. ಸ್ವಯಂ ಸಕ್ಷಮ ಯೋಜನೆ (ವೃತ್ತಿಯಾಧಾರಿತ ಶಿಕ್ಷಣ ಮತ್ತು ತರಬೇತಿ ಪಡೆದವರಿಗೆ ಮಾತ್ರ) ೪. ಮೈಕ್ರೋ ಫೈನಾನ್ಸ್ ಹಾಗೂ ೫) ವಿದ್ಯಾಭಿವೃದ್ಧಿ/ಶೈಕ್ಷಣಿಕ ಸಾಲ.

**ಚೈತನ್ಯ ಸಬ್ಸಿಡಿ ರಹಿತ ಮೃದುಸಾಲ ಯೋಜನೆ (ಸಾಫ್ಟ್ ಲೋನ್ ಸ್ಕೀಂ):** ವ್ಯಾಪಾರ, ಕೈಗಾರಿಕೆ, ಕೃಷಿ ಕ್ಷೇತ್ರದ ಕಸುಬುಗಳು ಮತ್ತು ಸೇವಾ ವಲಯದಲ್ಲಿ ಬರುವ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದಂತಹ, ₹ ಒಂದು ಲಕ್ಷಗಳವರೆಗಿನ ಘಟಕ ವೆಚ್ಚದ ಯೋಜನೆಗಳನ್ನು ಕೈಗೊಳ್ಳುವುದಕ್ಕಾಗಿ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ಮತ್ತು ಸಹಕಾರ ಸಂಘಗಳ ಸಹಯೋಗ ದೊಂದಿಗೆ ಸಾಲ ಸೌಲಭ್ಯವನ್ನು ಸರ್ಕಾರ ಕೊಡುವ ಷೇರು ಬಂಡವಾಳದಿಂದ ನಿಗಮವು ನೀಡುತ್ತದೆ. ಹಿಂದುಳಿದ ವರ್ಗಗಳ ಗುಂಪಿನ ವಾರ್ಷಿಕ ವರಮಾನವು ₹ ೨೨,೦೦೦ಗಳಿಗಿಂತ ಕಡಿಮೆ ಇರುವವರು, ಈ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅರ್ಹರು. ಜಿಲ್ಲಾ ಪಂಚಾಯತ್‌ನಲ್ಲಿರುವ ಸಮಿತಿಯು ಸಾಲವನ್ನು ಮಂಜೂರು ಮಾಡಿ, ಹಣ ಬಿಡುಗಡೆಗೆ ಈ ನಿಗಮಕ್ಕೆ ಪ್ರಸ್ತಾವನೆಯನ್ನು ಕಳಿಸುತ್ತದೆ. ನಿಗಮವು ₹ ೨೫,೦೦೦ ಗಳವರೆಗಿನ ಘಟಕ ವೆಚ್ಚಕ್ಕೆ ಶೇ.೫೦ರಷ್ಟು ಅಥವಾ ಗರಿಷ್ಠ ₹ ೫,೦೦೦ ಗಳ ಸಬ್ಸಿಡಿಯನ್ನೂ; ಘಟಕ ವೆಚ್ಚ ₹ ೨೫,೦೦೧ಕ್ಕಿಂತ ಹೆಚ್ಚಾಗಿದ್ದು, ₹ ಒಂದು ಲಕ್ಷದ ಒಳಗೆ ಇದ್ದಲ್ಲಿ ಈ ಮೊತ್ತಕ್ಕೆ ಶೇ.೨೦ರಷ್ಟು ಆದರೆ ಗರಿಷ್ಟ ₹ ೨೦,೦೦೦ ಗಳವರೆಗೆ ಮಾರ್ಜಿನ್ ಹಣವನ್ನೂ ವಾರ್ಷಿಕ ಶೇ. ೪ರ ಬಡ್ಡಿ ದರದಲ್ಲಿ ಕೊಡುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೮-೦೯ನೇ ಸಾಲಿನಿಂದ ೨೦೧೦-೧೧ನೇ ಸಾಲುಗಳಲ್ಲಿ ಚೈತನ್ಯ ಸಾಲ ಹಾಗೂ ಸಹಾಯ ಧನ ಯೋಜನೆ ಅಡಿಯಲ್ಲಿ ನೀಡಿದ ಸಾಲ ಮತ್ತು ಫಲಾನುಭವಿಗಳ ಮಾಹಿತಿಗಳನ್ನು ಕೋಷ್ಟಕ ೧೬.೫೧ ಮತ್ತು ೧೬.೫೨ರಲ್ಲಿ ನೀಡಲಾಗಿದೆ.

**ಕೋಷ್ಟಕ – ೧೬.೫೧: ಚೈತನ್ಯ ಸಾಲ ಹಾಗೂ ಸಹಾಯ ಧನ ಯೋಜನೆ ಅಡಿಯಲ್ಲಿ ನೀಡಿದ ಸಾಲ ಮತ್ತು ಫಲಾನುಭವಿಗಳ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ಸಹಾಯ ಧನ | ಮಾರ್ಜಿನ್ ಹಣ | ಒಟ್ಟು | ಬ್ಯಾಂಕ್ ಪಾಲಿನ ಹಣ | ಪ್ರವರ್ಗವಾರು ಫಲಾನುಭವಿಗಳ ಸಂಖ್ಯೆ | | | |
|---|---|---|---|---|---|---|---|---|---|
| | | | | | | ೧ | ೨ಎ | ೩ಎ | ೩ಬಿ |
| ೨೦೦೮-೦೯ | ೮೪ | ೪.೨೦ | ೪.೮೧ | ೯.೦೧ | ೨೧.೪೪ | ೩೦ | ೨೪ | ೮ | ೨೨ |
| ೨೦೦೯-೧೦ | ೪೦ | ೨.೦೦ | ೩.೨೭ | ೫.೨೭ | ೧೨.೬೧ | ೧೨ | ೧೫ | ೪ | ೯ |
| ೨೦೧೦-೧೧ | ೭೫ | ೫.೯೫ | ೨.೪೨ | ೬.೧೭ | ೧೨.೭೨ | ೨೩ | ೪೭ | ೨ | ೩ |
| ಒಟ್ಟು | ೧೯೯ | ೯.೯೫ | ೧೦.೫೦ | ೨೦.೪೫ | ೪೬.೭೭ | ೬೫ | ೮೬ | ೧೪ | ೩೪ |

*(ಆಧಾರ : ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

**ಕೋಷ್ಟಕ ೧೬.೫೨: ಚೈತನ್ಯ ಸಾಲ ಹಾಗೂ ಸಹಾಯ ಧನ ಯೋಜನೆಯಡಿಯಲ್ಲಿ ನೀಡಿದ ಸಾಲ ಮತ್ತು ಫಲಾನುಭವಿಗಳ ವಿವರ**

| ವರ್ಷ | ಒಟ್ಟು ಗುರಿ | | ಒಟ್ಟು ಸಾಧನೆ | | ತಾಲೂಕುವಾರು | | | | | | | |
|---|---|---|---|---|---|---|---|---|---|---|---|---|
| | | | | | ಚಾ.ರಾ.ನಗರ | | ಯಳಂದೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೨೦೦೮-೦೯ | ೯೮ | ೧೨.೭೪ | ೮೪ | ೮.೯೮ | ೩೭ | ೪.೧೪ | ೧೫ | ೧.೨೬ | ೨೧ | ೨.೬೩ | ೧೧ | ೦.೯೫ |
| ೨೦೦೯-೧೦ | ೯೧ | ೧೦.೦೧ | ೪೦ | ೫.೧೬ | ವಿಧಾನಸಭಾ ಕ್ಷೇತ್ರವಾರು | | | | | | | |
| | | | | | ಚಾ.ರಾ. ನಗರ | | ಹನೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| | | | | | ೧೭ | ೨.೨೯ | ೮ | ೧.೨೫ | ೫ | ೦.೫೫ | ೧೦ | ೧.೦೭ |
| ೨೦೧೦-೧೧ | ೯೧ | ೧೮.೨೦ | ೭೫ | ೬.೧೭ | ತಾಲೂಕುವಾರು | | | | | | | |
| | | | | | ಚಾ.ರಾ.ನಗರ | | ಯಳಂದೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| | | | | | ೨೩ | ೧.೬೧ | ೨೧ | ೧.೬೧ | ೨೪ | ೧೪.೧೯ | ೭ | ೦.೭೯ |
| | | | | | ವಿಧಾನಸಭಾ ಕ್ಷೇತ್ರವಾರು | | | | | | | |
| | | | | | ಚಾ.ರಾ. ನಗರ | | ಹನೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| | | | | | ೨೩ | ೧.೬೧ | ೬ | ೦.೬೬ | ೩೯ | ೨.೮೩ | ೭ | ೦.೭೯ |

*(ಆಧಾರ: ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

**ಅರಿವು ಯೋಜನೆ:** ವೈದ್ಯಕೀಯ ಮತ್ತು ತಾಂತ್ರಿಕ ಪದವಿ ಕೋರ್ಸ್‌ಗಳಿಗೆ, ಮೆರಿಟ್ ಆಧಾರದ ಮೇಲೆ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ಉಚಿತವಾಗಿ ಸೀಟು ಪಡೆದ ಹಿಂದುಳಿದ ವರ್ಗಗಳ ಪ್ರವರ್ಗ-೧ ಮತ್ತು ಪ್ರವರ್ಗ-೨ಎಗೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷ ಪ್ರವೇಶ ಶುಲ್ಕ, ಟ್ಯೂಷನ್ ಶುಲ್ಕ, ಲ್ಯಾಬೋರೇಟರಿ ಶುಲ್ಕ, ಪರೀಕ್ಷಾ ಶುಲ್ಕಗಳಿಗಾಗಿ ಗರಿಷ್ಠ ₹ ಹತ್ತು ಸಾವಿರಗಳವರೆಗೆ ಸಾಲವನ್ನು ಶೇಕಡ ಎರಡರ ಬಡ್ಡಿ ದರದಲ್ಲಿ ಕೊಡಲಾಗುವುದು.

ಚಾಮರಾಜನಗರ ಜಿಲ್ಲೆಯಲ್ಲಿ ಹಿಂದಿನ ೨೦೦೮–೦೯ರಿಂದ ೨೦೧೦–೨೦೧೧ರವರೆಗಿನ ವರ್ಷಗಳಲ್ಲಿ ಅರಿವು ಯೋಜನೆ ಅಡಿಯಲ್ಲಿ ನೀಡಿದ ಸಾಲ ಮತ್ತು ಫಲಾನುಭವಿಗಳ ವಿವರಗಳನ್ನು ಕೋಷ್ಟಕ–೧೬.೫೩ರಲ್ಲಿ ಮತ್ತು ಕೋಷ್ಟಕ–೧೬.೫೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೫೩: ಅರಿವು ಸಾಲ ಯೋಜನೆ ಅಡಿಯಲ್ಲಿ ೨೦೦೮–೦೯ನೇ ಸಾಲಿನಿಂದ ೨೦೧೦–೧೧ನೇ ಸಾಲುಗಳಲ್ಲಿ ನೀಡಿದ ಸಾಲ ಮತ್ತು ಫಲಾನುಭವಿಗಳ ವಿವರ (₹ ಲಕ್ಷಗಳಲ್ಲಿ)**

| ವರ್ಷ | ನಿಗದಿಸಿಕೊಂಡ ಗುರಿ (ಫಲಾನುಭವಿಗಳು) | ನಿಗದಿಸಿದ ಸಾಲದ ಮೊತ್ತ | ಪ್ರಯೋಜನ ಪಡೆದ ಫಲಾನುಭವಿಗಳು | ನೀಡಲಾದ ಮೊತ್ತ |
|---|---|---|---|---|
| ೨೦೦೮–೦೯ | ೨ | ೧.೧೯ | ೫ | ೦.೫೦ |
| ೨೦೦೯–೧೦ | ಮಿತಿ ಇಲ್ಲ | – | ೩ | ೦.೩೦ |
| ೨೦೧೦–೧೧ | ಮಿತಿ ಇಲ್ಲ | – | ೫ | ೦.೫೦ |
| ಒಟ್ಟು | | | ೧೩ | ೧.೩೦ |

*(ಆಧಾರ : ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

**ಕೋಷ್ಟಕ ೧೬.೫೪: ಅರಿವು ಯೋಜನೆ ಅಡಿಯಲ್ಲಿ ೨೦೦೭–೦೮ನೇ ಸಾಲಿನಿಂದ ೨೦೧೦–೧೧ನೇ ಸಾಲುಗಳಲ್ಲಿ ನೀಡಿದ ಸಾಲ ಮತ್ತು ಫಲಾನುಭವಿಗಳ ಮಾಹಿತಿಗಳು: ತಾಲೂಕುವಾರು (₹ ಲಕ್ಷಗಳಲ್ಲಿ)**

<table>
<tr><th rowspan="3">ವರ್ಷ</th><th colspan="2" rowspan="2">ಒಟ್ಟು ಗುರಿ</th><th colspan="2" rowspan="2">ಒಟ್ಟು ಸಾಧನೆ</th><th colspan="8">ತಾಲೂಕುವಾರು</th></tr>
<tr><th colspan="2">ಚಾ.ರಾ.ನಗರ</th><th colspan="2">ಯಳಂದೂರು</th><th colspan="2">ಕೊಳ್ಳೆಗಾಲ</th><th colspan="2">ಗುಂಡ್ಲುಪೇಟೆ</th></tr>
<tr><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th></tr>
<tr><td>೨೦೦೭–೦೮</td><td>–</td><td>–</td><td>೮</td><td>೦.೮೦</td><td>೪</td><td>೦.೪೦</td><td>೩</td><td>೦.೩೦</td><td>೧</td><td>೦.೧೦</td><td>೦</td><td>೦</td></tr>
<tr><td rowspan="3">೨೦೦೯–೧೦</td><td rowspan="3">–</td><td rowspan="3">–</td><td rowspan="3">–</td><td rowspan="3">–</td><td colspan="8">ವಿಧಾನಸಭಾ ಕ್ಷೇತ್ರವಾರು</td></tr>
<tr><td colspan="2">ಚಾ.ರಾ. ನಗರ</td><td colspan="2">ಹನೂರು</td><td colspan="2">ಕೊಳ್ಳೆಗಾಲ</td><td colspan="2">ಗುಂಡ್ಲುಪೇಟೆ</td></tr>
<tr><td>–</td><td>–</td><td>–</td><td>–</td><td>–</td><td>–</td><td>–</td><td>–</td></tr>
<tr><td rowspan="6">೨೦೧೦–೧೧</td><td colspan="2" rowspan="6">ಮಿತಿ ಇರುವುದಿಲ್ಲ</td><td colspan="2" rowspan="6">ಮಿತಿ ಇರುವುದಿಲ್ಲ</td><td colspan="8">ತಾಲೂಕುವಾರು</td></tr>
<tr><td colspan="2">ಚಾ.ರಾ.ನಗರ</td><td colspan="2">ಯಳಂದೂರು</td><td colspan="2">ಕೊಳ್ಳೆಗಾಲ</td><td colspan="2">ಗುಂಡ್ಲುಪೇಟೆ</td></tr>
<tr><td>೩</td><td>೦.೫೦</td><td>೨</td><td>೦.೨೦</td><td>–</td><td>–</td><td>–</td><td>–</td></tr>
<tr><td colspan="8">ವಿಧಾನಸಭಾ ಕ್ಷೇತ್ರವಾರು</td></tr>
<tr><td colspan="2">ಚಾ.ರಾ. ನಗರ</td><td colspan="2">ಹನೂರು</td><td colspan="2">ಕೊಳ್ಳೆಗಾಲ</td><td colspan="2">ಗುಂಡ್ಲುಪೇಟೆ</td></tr>
<tr><td>೩</td><td>೦.೩೦</td><td>–</td><td>–</td><td>೨</td><td>೦.೨೦</td><td>–</td><td>–</td></tr>
</table>

*(ಆಧಾರ: ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

**ಗಂಗಾ ಕಲ್ಯಾಣ ನೀರಾವರಿ ಯೋಜನೆ:** ಮಳೆಯನ್ನೇ ಆಶ್ರಯಿಸಿ ವ್ಯವಸಾಯ ಮಾಡುವ ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿ ಸಣ್ಣ ರೈತರ ಒಣ ಭೂಮಿಗೆ ನೀರಾವರಿ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಇದರಲ್ಲಿ ಸಾಮೂಹಿಕ ನೀರಾವರಿ, ವೈಯುಕ್ತಿಕ ನೀರಾವರಿ ಯೋಜನೆ ಮತ್ತು ಏತ ನೀರಾವರಿ ಯೋಜನೆ ಎಂಬ ಮೂರು ವಿಧದ ಉಪ ಯೋಜನೆಗಳಿದ್ದು ವಿವಿಧ ಬಗೆಯಲ್ಲಿ ಸಹಾಯಧನವನ್ನು ಮಂಜೂರು ಮಾಡಲಾಗುತ್ತದೆ.

**ಅ) ಸಾಮೂಹಿಕ ನೀರಾವರಿ ಯೋಜನೆ:** ಒಂದು ಭಾಗದಲ್ಲಿ ಮೂರು ಜನರು ಮತ್ತು ಅದಕ್ಕಿಂತ ಹೆಚ್ಚು ರೈತರು ಇರುವ, ಕನಿಷ್ಟ ಎಂಟರಿಂದ ಹದಿನೈದು ಎಕರೆ ಜಮೀನು ಹೊಂದಿರುವ ಕಡೆ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಗರಿಷ್ಟ ₹ ೨.೫೩ ಲಕ್ಷಗಳನ್ನೂ; ಕನಿಷ್ಟ ಹದಿನೈದು ಎಕರೆ ಹೊಂದಿರುವ ಜಮೀನುಗಳಿಗೆ ವೆಚ್ಚ ₹ ೩.೫೯ ಲಕ್ಷಗಳನ್ನೂ ಉಚಿತ ಧನ ಸಹಾಯವಾಗಿ ನೀಡಲಾಗುತ್ತದೆ. ಎಂಟು ಎಕರೆ ಭೂಮಿಗೆ ಎರಡು ಕೊಳವೆ ಭಾವಿಗಳನ್ನು ಹದಿನೈದು ಅಥವಾ ಅದಕ್ಕಿಂತ ಹೆಚ್ಚು ಎಕರೆ ಭೂಮಿಗೆ ಮೂರು ಕೊಳವೆ ಬಾವಿಗಳನ್ನು ಕೊರೆಯಿಸಿ ಪಂಪ್ ಸೆಟ್ ಅಳವಡಿಸಿ, ವಿದ್ಯುದೀಕರಣವನ್ನೂ ಸಹ ಒದಗಿಸಿಕೊಡಲಾಗುತ್ತದೆ.

**ಆ) ವೈಯಕ್ತಿಕ ನೀರಾವರಿ ಯೋಜನೆ:** ಪ್ರವರ್ಗ ಒಂದು ಮತ್ತು ಎರಡನೇ ವರ್ಗಕ್ಕೆ ಸೇರಿದ, ಒಂದೇ ಕಡೆ ಕನಿಷ್ಠ ಎರಡು ಎಕರೆ ಜಮೀನು ಹೊಂದಿದ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ಮಾತ್ರ ಒಂದು ಕೊಳವೆ ಬಾವಿ ಕೊರೆಯಿಸಿ, ₹ ಒಂದು ಲಕ್ಷಗಳ ಘಟಕ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಗರಿಷ್ಠ ₹ ಎಂಬತ್ತಾರು ಸಾವಿರಗಳನ್ನು ಉಚಿತ ಧನ ಸಹಾಯವಾಗಿ ನೀಡಲಾಗುತ್ತದೆ. ಈ ಘಟಕ ವೆಚ್ಚದಲ್ಲಿ ಕೊಳವೆ ಬಾವಿ ಕೊರೆಸುವಿಕೆ, ಪಂಪ್ ಸೆಟ್ ಮತ್ತು ಇತರ ಯಂತ್ರೋಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಲು ಕ್ರಮ ಕೈ ಗೊಳ್ಳಲಾಗುವುದು.

**ಇ) ಏತ ನೀರಾವರಿ ಯೋಜನೆ:** ನಿರಂತರವಾಗಿ ನೀರಿರುವ ಕೆರೆ, ಕೊಳ, ಹಳ್ಳಗಳಿಂದ ನೀರನ್ನು ಕಾಲುವೆಗಳ ಮೂಲಕ ಹರಿಸುವ ಅಥವಾ ವಿದ್ಯುತ್ ಚಾಲಿತ ಯಂತ್ರಗಳ ಮೂಲಕ ನೀರು ಮೊಗೆದು ಕೊಡುವ ವ್ಯವಸ್ಥೆಯನ್ನು ಈ ಯೋಜನೆಯ ಅಡಿ ಮಾಡಿಕೊಡಲಾಗುತ್ತದೆ. ಇದರಿಂದ ಕೃಷಿ ಮಾಡಲು ಸಣ್ಣ ಸಣ್ಣ ರೈತರಿಗೆ ಅನುಕೂಲವಾಗುತ್ತದೆ.

ಜಿಲ್ಲೆಯಲ್ಲಿ ೨೦೦೮-೦೯ರಿಂದ ಸಾಲಿನಿಂದ ೨೦೧೦-೧೧ನೇ ಸಾಲಿನ ವರೆಗಿನ ಅವಧಿಯಲ್ಲಿ ಈ ಮೂರು ಉಪ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳು ಮತ್ತು ವೆಚ್ಚದ ವಿವರಗಳನ್ನು ಕೋಷ್ಟಕ– ೧೬.೫೫ ಮತ್ತು ಕೋಷ್ಟಕ ೧೬.೫೬ರಲ್ಲೂ ಕಾಣಿಸಲಾಗಿದೆ.

**ಕೋಷ್ಟಕ ೧೬.೫೫: ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿ ಒದಗಿಸಿದ ನೆರವಿನ ವಿವರ**

| ವರ್ಷ | ಸಾಧನೆ | | | ಕೊರೆದ ಬಾವಿಗಳ ಒಟ್ಟು ಸಂಖ್ಯೆ | ಏತ ನೀರಾವರಿ ಯೋಜನೆ | ಒಟ್ಟು ಫಲಾನುಭವಿಗಳ ಸಂಖ್ಯೆ | ನೀರಾವರಿಗೊಂಡ ಜಮೀನು ಎಕರೆ.ಗುಂಟೆ | ಒಟ್ಟು ವೆಚ್ಚ ₹ ಲಕ್ಷಗಳಲ್ಲಿ |
|---|---|---|---|---|---|---|---|---|
| | ಸಾಮೂಹಿಕ | | ವೈಯುಕ್ತಿಕ ಸಂಖ್ಯೆ | | | | | |
| | ಘಟಕ | ಸಂಖ್ಯೆ | | | | | | |
| **೨೦೦೮-೦೯** | ೮ | ೨೦.೨೪ | ೫೬ | ೫೬ ೮ಘಟಕ | – | ೫೬ ೮ಘಟಕ | ೧೧೨ಎಕರೆ, ೮೦ಎಕರೆ (೮ಘಟಕ) | ೮೮.೪೮ |
| **೨೦೦೯-೧೦** | ೮ | ೨೦.೨೪ | ೪೨ | ೪೨ ೮ಘಟಕ | – | ೪೨ ೮ಘಟಕ | ೮೪ಎಕರೆ, ೮೦ಎಕರೆ (೮ಘಟಕ) | ೭೪.೪೮ |
| **೨೦೧೦-೧೧** | ೧೦ | ೨೫.೩೦ | ೫೮ | ೫೮ ೧೦ಘಟಕ | – | ೫೮ ೧೦ಘಟಕ | ೧೧೬ಎಕರೆ, ೧೦೦ಎಕರೆ (೧೦ಘಟಕ) | ೮೩.೩೦ |
| ಒಟ್ಟು | **೨೬** | **೬೫.೭೮** | **೧೫೬** | **೧೫೬ ೨೬ಘಟಕ** | – | **೧೫೬ ೨ ೬ಘಟಕ** | **೩೧೨ಎಕರೆ, ೨೬೦ ಎಕರೆ (೨೬ಘಟಕ)** | **೨೪೬.೨೬** |

*(ಆಧಾರ: ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

**ಕೋಷ್ಟಕ ೧೬.೫೬: ಜಿಲ್ಲೆಯಲ್ಲಿ ತಾಲ್ಲೂಕುವಾರು ಗಂಗಾ ಕಲ್ಯಾಣ ಯೋಜನೆಯಡಿ ಒದಗಿಸಿದ ನೆರವಿನ ವಿವರ**

| ವರ್ಷ | ಒಟ್ಟು ಗುರಿ | | ಒಟ್ಟು ಸಾಧನೆ | ₹ ಲಕ್ಷಗಳಲ್ಲಿ | ತಾಲೂಕುವಾರು | | | | | | | |
|---|---|---|---|---|---|---|---|---|---|---|---|---|
| | | | | | ಚಾ.ರಾ.ನಗರ | | ಯಳಂದೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| ೨೦೦೮-೦೯ | ೬೪ | ೮೮.೪೮ | ೫೬(ವೈ) ೮(ಸಾ) | ೮೮.೪೮ | ೧೬ | ೨೨.೧೨ | ೧೬ | ೨೨.೧೨ | ೧೬ | ೨೨.೧೨ | ೧೬ | ೨೨.೧೨ |
| ೨೦೦೯-೧೦ | ೫೦ | ೭೪.೪೮ | ೪೨(ವೈ) ೮(ಸಾ) | ೭೪.೪೮ | ೧೨ | ೧೭.೬೨ | ೧೨ | ೧೭.೬೨ | ೧೩ | ೧೭.೬೨ | ೧೩ | ೧೯.೬೨ |
| ೨೦೧೦-೧೧ | ೬೮ | ೮೩.೩೦ | ೫೮(ವೈ) ೧೦(ಸಾ) | ೮೩.೩೦ | ೧೭ | ೨೦.೮೨ | ೧೭ | ೨೦.೮೨ | ೧೭ | ೨೦.೮೨ | ೧೭ | ೨೧.೮೨ |
| ಒಟ್ಟು | ೧೮೨ | ೨೪೬.೨೬ | ೧೫೬(ವೈ) ೨೬(ಸಾ) | ೨೪೬.೨೬ | ೪೫ | ೬೦.೫೬ | ೪೫ | ೬೦.೫೬ | ೪೬ | ೬೨.೫೬ | ೪೬ | ೬೩.೫೬ |

*(ಆಧಾರ: ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

*(ವೈ: ವೈಯಕ್ತಿಕ; ಸಾ: ಸಾಮೂಹಿಕ)*

**ವೃತ್ತಿಪರ ತರಬೇತಿ ಯೋಜನೆ:** ವಿದ್ಯಾವಂತ ನಿರುದ್ಯೋಗಿ ಹಿಂದುಳಿದ ವರ್ಗಗಳ ಯುವ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಮಾಡಿಕೊಡುವ ಮತ್ತು ಉದ್ಯೋಗ ದೊರಕಿಸಿಕೊಳ್ಳಲು ಅರ್ಹರಾಗಿಸುವ ಉದ್ದೇಶದಿಂದ ಅನೇಕ ವೃತ್ತಿಪರ ತರಬೇತಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಈ ಯೋಜನೆಯ ಅಡಿಯಲ್ಲಿ, ಮೋಟಾರ್ ಡ್ರೈವಿಂಗ್ ತರಬೇತಿ, ಹೌಸ್ ಕೀಪಿಂಗ್ ಮತ್ತು ಹೋಂ ನರ್ಸಿಂಗ್, ಮೊಬೈಲ್ ಫೋನ್ ರಿಪೇರಿ, ಡಿ.ಟಿ.ಪಿ, ಫ್ಯಾಶನ್ ಡಿಸೈನ್, ಮೋಟಾರ್ ರಿವೈಂಡಿಂಗ್, ಯಕ್ಷಗಾನ ತರಬೇತಿ, ಕೇಟರಿಂಗ್ ಮತ್ತು ಹೋಟೆಲ್ ಮ್ಯಾನೇಜ್‌ಮೆಂಟ್, ನ್ಯಾಚುರೋ ಥೆರೆಪಿ(ಪ್ರಕೃತಿ ಚಿಕಿತ್ಸೆ), ಡಿಪ್ಲಮೋ ಹೊಂದಿರುವ ಹಿಂದುಳಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಕೇಂದ್ರ ಸರ್ಕಾರದ ಫೊರ್‌ಮನ್ ತರಬೇತಿ ಸಂಸ್ಥೆಯ ಮೂಲಕ ಒಂದು ವರ್ಷ ಅವಧಿಯ ಫೋರ್‌ಮನ್‌ಶಿಪ್ ತರಬೇತಿ, ಸರ್ಕಾರದಿಂದ ಅಂಗೀಕರಿಸಲ್ಪಟ್ಟ ಸಂಸ್ಥೆಗಳ ಮೂಲಕ ಕಂಪ್ಯೂಟರ್ ತರಬೇತಿ ಇವೇ ಮುಂತಾದ ಅನೇಕ ರೀತಿಯ ಉದ್ಯೋಗಗಳಿಗೆ ಸಂಬಂಧಿಸಿದಂತೆ ತರಬೇತಿಯನ್ನು ಸ್ಟೈಫಂಡ್ ಸಹಿತ ನೀಡಲಾಗುತ್ತದೆ.

**ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಹಾಯ ಯೋಜನೆ:** ಅಲೆಮಾರಿ ಜನಾಂಗದವರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದನ್ನು ತಡೆಗಟ್ಟಿ ಒಂದೆಡೆ ನೆಲೆಯೂರುವಂತೆ ಮಾಡಲು ಹಾಗೂ ಅವರಿಗಿರುವ ಕುಲಕಸುಬಿನ ನೈಪುಣ್ಯತೆಯನ್ನು ಆರ್ಥಿಕಾನುಕೂಲಕ್ಕೆ ಪರಿವರ್ತಿಸುವಂತೆ ಮಾಡಲು, ಅವರಿಗೆ ಅಗತ್ಯವಿರುವ ಆರ್ಥಿಕ ನೆರವನ್ನು ನೀಡುವುದು ಅಥವಾ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದ್ದು, ಈ ಯೋಜನೆಯನ್ನು ೨೦೦೬ರಲ್ಲಿ ಜಾರಿಗೆ ತರಲಾಗಿದೆ. ದಿ.೩೦.೩.೨೦೦೨ರ ಸರ್ಕಾರಿ ಆದೇಶದಲ್ಲಿ ಪ್ರವರ್ಗ-೧ರಡಿಯಲ್ಲಿ ಸೇರ್ಪಡೆಯಾಗಿರುವ ಅತಿ ಹಿಂದುಳಿದ ಜಾತಿಗಳಾದ ಜೋಗಿ, ಗಾರುಡಿಗ, ಬುಡಬುಡುಕೆ, ಹೆಳವ, ಹಾಲಕ್ಕಿ ಒಕ್ಕಲ್, ಕುಡುಬಿ, ದೊಂಬಿದಾಸ, ಮುಂತಾದ ಅಲೆಮಾರಿ ಜನಾಂಗಕ್ಕೆ ಸೇರಿದವರಿಗೆ ಈ ಯೋಜನೆಯ ಸೌಲಭ್ಯಗಳು ದೊರೆಯುತ್ತವೆ. ಸ್ವಯಂ ಉದ್ಯೋಗ ಯೋಜನೆ, ವೈಯುಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಮತ್ತು ಭೂ ಖರೀದಿ ಯೋಜನೆಗಳನ್ನು ಈ ಯೋಜನೆಯಡಿ, ನಿಗಮದಿಂದ ಕಾರ್ಯಗತಗೊಳಿಸಲಾಗುತ್ತದೆ.

ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಹಾಯ ಯೋಜನೆಯಡಿ ಭೂ ಖರೀದಿ ಯೋಜನೆಯಲ್ಲಿ ಅಲೆಮಾರಿ ಜನಾಂಗದ ಕೃಷಿ ಕಾರ್ಮಿಕರಿಗೆ ಎರಡು ಎಕರೆ ಖುಷ್ಕಿ ಜಮೀನು ಅಥವಾ ಒಂದು ಎಕರೆ ತರಿ

ಜಮೀನನ್ನು ನಿಗದಿತ ವಿಧಾನದಲ್ಲಿ ಭೂ ಖರೀದಿ ಮಾಡಿ ಕೊಡುವುದು. ಸ್ವಯಂ ಉದ್ಯೋಗ ಯೋಜನೆಯಲ್ಲಿ ಈ ಜನಾಂಗದ ಆರ್ಥಿಕ ಚಟುವಟಿಕೆಗಳಿಗೆ ಶೇಕಡ ನಾಲ್ಕರ ಬಡ್ಡಿ ದರದಲ್ಲಿ ₹ ಐದು ಸಾವಿರ ಸಹಾಯಧನವನ್ನೂ ಸೇರಿಸಿ ಒಟ್ಟು ₹ ಹದಿನೈದು ಸಾವಿರಗಳನ್ನು ಒದಗಿಸಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೫೭ ಅನ್ನು ನೋಡಿ.

**ಕೋಷ್ಟಕ ೧೬.೫೭: ಅಲೆಮಾರಿ ಜನಾಂಗದವರಿಗೆ ನೆರವು ನೀಡಲು ಹಾಕಿಕೊಳ್ಳಲಾದ ಗುರಿ ಮತ್ತು ಸಾಧಿಸಿದ ಪ್ರಗತಿಯ ವಿವರಗಳು**

| ವರ್ಷ | ಒಟ್ಟು ಗುರಿ | | ಒಟ್ಟು ಸಾಧನೆ | | ತಾಲೂಕುವಾರು | | | | | | | |
|---|---|---|---|---|---|---|---|---|---|---|---|---|
| | | | | | ಚಾ.ರಾ.ನಗರ | | ಯಳಂದೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೨೦೦೮–೦೯ | ೭೧ | ೧೦.೬೫ | ೭೧ | ೧೦.೬೫ | ೧೮ | ೨.೭ | – | – | ೩೪ | ೫.೧೦ | ೧೯ | ೨.೮೫ |
| ೨೦೦೯–೧೦ | ೬೨ | ೯.೩೦ | ೬೭ | ೧೦.೦೫ | ೩೧ | ೪.೬೫ | – | – | ೧೪ | ೨.೧೦ | ೨೨ | ೩.೩೦ |
| ೨೦೧೦–೧೧ | ೨೭ | ೪.೦೫ | ೫೦ | ೭.೫೦ | ೧೩ | ೧.೯೫ | – | – | ೩೭ | ೫.೫೫ | – | – |
| ಒಟ್ಟು | ೧೬೦ | ೨೪.೦೦ | ೧೮೮ | ೨೮.೨೦ | ೬೨ | ೯.೩೦ | | | ೮೫ | ೧೨.೭೫ | ೪೧ | ೬.೧೫ |

*(ಆಧಾರ : ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ*

**ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು:** ಹಿಂದುಳಿದ ವರ್ಗಗಳ ಜನರು ಸ್ವ–ಉದ್ಯೋಗ ಕಾರ್ಯಗಳನ್ನು ಕೈಗೊಳ್ಳಲು ಈ ನಿಗಮಕ್ಕೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ. ನಿಗಮವು ನೇರ ಸಾಲ, ನ್ಯೂ ಸ್ವರ್ಣಿಮಾ ಯೋಜನೆ ಮತ್ತು ಮೈಕ್ರೋ ಫೈನಾನ್ಸ್ ಯೋಜನೆಗಳ ಅಡಿಯಲ್ಲಿ ಅಟೋರಿಕ್ಷಾ, ಟ್ಯಾಕ್ಸಿ, ಟ್ರ್ಯಾಕ್ಟರ್, ಹೈನುಗಾರಿಕೆ, ಕುರಿ ಸಾಕಾಣಿಕೆ, ಜನರಲ್ ಸ್ಟೋರ್, ಕೊಳವೆ ಬಾವಿ ಕೊರೆಸುವಿಕೆ ಮತ್ತು ಪಂಪ್ ಸೆಟ್, ಇತ್ಯಾದಿಗಳಿಗೆ ಆರ್ಥಿಕ ನೆರವಾಗಿ ಈ ಸಾಲವನ್ನು ನೀಡುಲಾಗುತ್ತದೆ.

ಈ ಜಿಲ್ಲೆಯಲ್ಲಿ ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆ ಅಡಿ, ೨೦೦೮–೦೯ನೇ ಸಾಲಿನಿಂದ ೨೦೧೦–೧೧ನೇ ಸಾಲಿನವರೆಗೆ ಸಾಧಿಸಿದ ಪ್ರಗತಿಯ ಮಾಹಿತಿಗಳನ್ನು ಹಾಗೂ ನಿಗಮದ ವಿವಿಧ ಯೋಜನೆಗಳಡಿಯಲ್ಲಿ ೨೦೧೦–೧೧ನೇ ಸಾಲಿನಲ್ಲಿ ನಿಗದಿಪಡಿಸಿಕೊಂಡ ಗುರಿ ಮತ್ತು ಸಾಧಿಸಿದ ಪ್ರಗತಿಯ ವಿವರಗಳನ್ನು ಕೋಷ್ಟಕ–೧೬.೫೮ ಮತ್ತು ೧೬.೫೯ರಲ್ಲೆ ನೀಡಲಾಗಿದೆ.

**ಕೋಷ್ಟಕ ೧೬.೫೮: ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆ ಅಡಿ ಸಾಧಿಸಿದ ಪ್ರಗತಿಯ ವಿವರ (₹ ಲಕ್ಷಗಳಲ್ಲಿ)**

| ವರ್ಷ | ನಿಗದಿಸಿದ ಗುರಿ | | ಸಾಧಿಸಿದ ಪ್ರಗತಿ | | | ಒಟ್ಟು |
|---|---|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಎನ್.ಬಿ.ಸಿ.ಎಫ್.ಡಿ.ಸಿ ಸಾಲ ಯೋಜನೆ | ಕೆ.ಬಿ.ಡಿ.ಸಿ. ಸಾಲ | |
| ೨೦೦೮–೦೯ | ೩೩ | ೯.೭೪ | ೧೧೦ | ೧೪.೬೨ | ೨.೭೪ | ೧೭.೩೬ |
| ೨೦೦೯–೧೦ | ೪೭ | ೧೧.೮೮ | ೫೭ | ೧೩.೩೯ | ೧.೫೫ | ೧೪.೯೪ |
| ೨೦೧೦–೧೧ | ೫೬ | ೧೪.೮೧ | ೧೦೦ | ೧೭.೯೪ | ೨.೧೧ | ೨೦.೦೫ |
| ಒಟ್ಟು | ೧೩೬ | ೩೬.೪೩ | ೨೬೭ | ೪೫.೯೫ | ೬.೪೦ | ೫೨.೩೫ |

*(ಆಧಾರ : ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

**ಕೋಷ್ಟಕ ೧೬.೫೯: ನಿಗಮದ ವಿವಿಧ ಯೋಜನೆಗಳಡಿಯಲ್ಲಿ ೨೦೦೮-೦೯ನೇ ಸಾಲಿನಲ್ಲಿ ನಿಗದಿಪಡಿಸಿಕೊಂಡ ಗುರಿ ಮತ್ತು ಸಾಧಿಸಿದ ಪ್ರಗತಿಯ ವಿವರಗಳು (₹ ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆ ಹೆಸರು | ಒಟ್ಟು ಗುರಿ | | ಒಟ್ಟು ಸಾಧನೆ | | ತಾಲೂಕುವಾರು | | | | | | | |
|---|---|---|---|---|---|---|---|---|---|---|---|---|---|
| | | | | | | ಚಾ.ರಾ.ನಗರ | | ಯಳಂದೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೧ | ಭೂ ರಹಿತ ಕೃಷಿ/ ಕೂಲಿ ಕಾರ್ಮಿಕರ ಸಾಲ | ೧೫೫ | ೨೩.೨೫ | ೧೧೭ | ೧೭.೫೫ | ೧೫ | ೨.೨೫ | ೨೬ | ೩.೯೦ | ೪೭ | ೭.೦೫ | ೨೯ | ೪.೩೫ |
| ೨ | ಉಪ್ಪಾರ (ರಾಜ್ಯ) | ೯೪ | ೧೮.೮೦ | – | – | | | | | | | | |
| ೩ | ದೇವಾಂಗ | ೧೪ | ೧.೪೦ | – | – | – | – | – | – | – | – | – | – |
| ೪ | ಮಡಿವಾಳ | ೩೨ | ೮.೦೦ | – | – | – | – | – | – | – | – | – | – |
| ೫. | ಕುಂಬಾರ | ೨೬ | ೬.೫೦ | – | – | – | – | – | – | – | – | – | – |
| ೬. | ಕಂಬಾರ | ೨೮ | ೭. ೦೦ | – | – | – | – | – | – | – | – | – | – |
| ೭ | ಕ್ಷತ್ರಿಯ | ೪ | ೧.೦೦ | – | – | – | – | – | – | – | – | – | – |
| ೭ | ಮೈಕ್ರೊ ಕ್ರೆಡಿಟ್ | ೧೪೫ | ೭.೨೬ | ೧೩೩ | ೬.೬೫ | ೯೩ | ೪.೬೫ | ೦ | ೦.೦೦ | ೪೦ | ೨.೦೦ | ೦ | ೦.೦೦ |
| ೮ | ಭೂ ಖರೀದಿ | ೨ | ೧.೫೪ | – | – | – | – | – | – | – | – | – | – |
| ೨ | ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆ | | | | | | | | | | | | |
| ಅ) | ಕೃಷಿ ವಲಯ | ೧೪ | ೪.೪೬ | ೩೦ | ೪.೩೧ | ೯ | ೧.೨೮ | ೨ | ೦.೨೯ | ೯ | ೧.೨೮ | ೧೦ | ೧.೪೬ |
| ಆ) | ಸಣ್ಣ ವ್ಯಾಪಾರ | ೬ | ೨.೦೦ | ೧೦ | ೧.೯೦ | ೧ | ೦.೧೯ | ೦ | ೦.೦೦ | ೬ | ೧.೧೪ | ೩ | ೦.೫೭ |
| ಇ) | ನ್ಯೂ ಸ್ವರ್ಣಿಮಾ/ ಸೈಫ್ | ೨೫೫ | ೩೦.೬೦ | ೨೫೫ | ೩೨.೧೬ | ೭೭ | ೯.೮೧ | ೮೫ | ೧೦.೨೦ | ೫೯ | ೭.೬೫ | ೩೪ | ೪.೫೦ |
| ಈ | ಸ್ವಯಂ ಸಕ್ಷಮ | ೧ | ೦.೯೫ | – | – | – | – | – | – | – | – | – | – |
| ಉ | ಸಾರಿಗೆ ವಲಯ | ೩ | ೩.೧೨ | | – | – | – | – | – | – | – | – | – |
| ಊ | ಸೇವಾ ವಲಯ | ೧೧ | ೨.೧೯ | ೭ | ೧.೨೭ | ೫ | ೦.೯೦ | ೦ | ೦.೦೦ | ೦ | ೦ | ೨ | ೦.೩೭ |
| ಋ | ಮಹಿಳಾ ಸಮೃದ್ಧಿ | ೧೧ | ೨.೧೭ | ೧೧ | ೨.೫೧ | ೫ | ೧.೧೪ | ೫ | ೧.೧೪ | ೦ | ೦.೦ | ೧ | ೦.೨೩ |
| ಋ | ಶೈಕ್ಷಣಿಕ ಸಾಲ | ೨ | ೧.೧೯ | – | – | – | – | – | – | – | – | – | – |
| ಎ | ಮೈಕ್ರೋ ಫೈನಾನ್ಸ್ | ೨೦ | ೩.೧೬ | ೫೫ | ೮.೩೭ | ೧೫ | ೨.೩೪ | ೭ | ೧.೧೯ | ೧೮ | ೨.೬೬ | ೧೫ | ೨.೨೮ |
| | ಒಟ್ಟು(ರಾ.ಹಿಂ. ನಿಗಮ.) | ೩೨೩ | ೪೯.೭೪ | ೩೬೮ | ೫೦.೫೨ | ೧೧೨ | ೧೫.೬೬ | ೯೯ | ೧೨.೭೨ | ೯೨ | ೧೨.೭೩ | ೬೫ | ೯.೪೧ |

*(ಆಧಾರ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು)*

**ಕೋಷ್ಟಕ ೧೬.೬೦: ನಿಗಮದ ವಿವಿಧ ಯೋಜನೆಗಳಡಿಯಲ್ಲಿ ೨೦೦೯–೧೦ನೇ ಸಾಲಿನಲ್ಲಿ ನಿಗದಿಪಡಿಸಿಕೊಂಡ ಗುರಿ ಮತ್ತು ಸಾಧಿಸಿದ ಪ್ರಗತಿಯ ವಿವರಗಳು (₹ ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆ ಹೆಸರು | ಒಟ್ಟು ಗುರಿ | | ಒಟ್ಟು ಸಾಧನೆ | | ವಿಧಾನಸಭಾ ಕ್ಷೇತ್ರವಾರು | | | | | | | |
|---|---|---|---|---|---|---|---|---|---|---|---|---|---|
| | | | | | | ಹನೂರು | | ಕೊಳ್ಳೆಗಾಲ | | ಚಾ.ರಾ. ನಗರ | | ಗುಂಡ್ಲು ಪೇಟೆ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೧ | ಭೂ ರಹಿತ ಕೃಷಿ /ಕೂಲಿ ಸಾಲ ಕಾರ್ಮಿಕರ | ೯೧ | ೧೩.೬೫ | ೮೩ | ೧೨.೪೫ | ೧೪ | ೨.೧೦ | ೩೦ | ೪.೫೦ | ೨೩ | ೩.೪೫ | ೧೬ | ೨.೪೦ |
| ೨ | ಕಿರು ಸಾಲ | ೧೮೨ | ೯೧೦ | ೧೭೦ | ೮.೫೦ | ೪೬ | ೨.೩೦ | ೪೮ | ೨.೪೦ | ೩೬ | ೧.೮೦ | ೪೦ | ೨.೦೦ |
| ೩ | ಭೂ ಖರೀದಿ | ೨ | ೧.೫೪ | – | – | – | – | – | – | – | – | – | – |
| ೨ | ಉಪ್ಪಾರ (ರಾಜ್ಯ) | ೧೪೧ | ೩೨.೮೫ | ೧೬೮ | ೩೪.೬೦ | ೪೧ | ೮.೭೫ | ೪೦ | ೮.೫೦ | ೫೬ | ೧೦.೬೫ | ೩೧ | ೬.೭೦ |
| ೩ | ದೇವಾಂಗ | ೧೪ | ೧.೪೦ | ೧೪ | ೨.೧೦ | ೧೪ | ೨.೧೦ | ೦ | ೦ | ೦ | ೦ | ೦ | ೦ |
| ೪ | ಮಡಿವಾಳ | ೫೩ | ೮.೦೦ | ೩೯ | ೫.೮೫ | ೦ | ೦ | ೦ | ೦ | ೩೯ | ೫.೮೫ | ೦ | ೦ |
| ೫ | ಕುಂಬಾರ | ೨೬ | ೬.೫೦ | – | – | – | – | – | – | – | – | – | – |
| ೬ | ಕಂಬಾರ | ೨೮ | ೬.೫೦ | ೧೮ | ೨.೭೦ | ೦ | ೦ | ೧೮ | ೨.೭೦ | ೦ | ೦ | ೦ | ೦ |
| ೭ | ಕ್ಷತ್ರಿಯ | ೨೮ | ೭.೦೦ | ೧೬ | ೨.೪೦ | ೦ | ೦ | ೦ | ೦ | ೦ | ೦ | ೧೬ | ೨.೪೦ |
| ೮ | ವಿವಿಧ ಸಮುದಾಯ | ೩೦ | ೪.೫೦ | – | – | – | – | – | – | – | – | – | – |
| ೯ | ಸಾಂಪ್ರದಾಯಿಕ | ೨೦೦೨ | ೧೧೦.೧೦ | ೩೬೭ | ೧೮.೩೫ | ೦ | ೦ | ೧೨ | ೦.೬೦ | ೧೨೪ | ೬.೨೦ | ೨೩೧ | ೧೧.೫೫ |
| | ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು | | | | | | | | | | | | |
| ಅ | ಕೃಷಿ ವಲಯ | ೧೫ | ೨.೧೬ | ೨೮ | ೪.೬೫ | ೬ | ೦.೮೬ | ೯ | ೧.೧೯ | ೧ | ೧.೦೦ | ೧೨ | ೧.೬೦ |
| ಆ | ಸಣ್ಣ ವ್ಯಾಪಾರ | ೩ | ೧.೧೦ | ೨೭ | ೬.೬೬ | ೮ | ೧.೯೦ | ೩ | ೦.೮೬ | ೧೦ | ೨.೩೮ | ೬ | ೧.೫೨ |
| ಇ | ಸೇವಾ ವಲಯ | ೬ | ೧.೦೭ | ೧೧ | ೧.೯೯ | ೦ | ೦ | ೧೧ | ೧.೯೯ | ೦ | ೦ | ೦ | ೦ |
| ಈ | ಮಹಿಳಾ ಸಮೃದ್ಧಿ | ೫ | ೧.೦೭ | ೯ | ೨.೦೫ | ೯ | ೨.೦೫ | ೦ | ೦ | ೦ | ೦ | ೦ | ೦ |
| ಉ | ಸಾರಿಗೆ ವಲಯ | ೨ | ೨.೧೮ | – | – | – | – | – | – | – | – | – | – |
| ಊ | ಶೈಕ್ಷಣಿಕ ಸಾಲ | ೧ | ೦.೬೪ | – | – | – | – | – | – | – | – | – | – |
| ಋ | ಸ್ವಯಂ ಸಕ್ಷಮ | ೧ | ೦.೪೩ | – | – | – | – | – | – | – | – | – | – |
| ೠ | ಮೈಕ್ರೋ ಫೈನಾನ್ಸ್ | ೧೭ | ೩.೨೨ | ೩೭ | ೭.೨೭ | ೧೭ | ೩.೮೦ | ೦ | ೦ | ೧೫ | ೨.೫೭ | ೫ | ೦.೯೦ |
| ಎ | ನ್ಯೂ ಸ್ವರ್ಣಿಮಾ | ೧೮೩ | ೨೧.೯೯ | ೧೮೩ | ೨೧.೯೬ | ೩೫ | ೪.೨೦ | ೨೮ | ೩.೩೬ | ೬೦ | ೭.೨೦ | ೬೦ | ೭.೨೦ |
| | ಒಟ್ಟು(ರಾ.ಹಿಂ. ನಿಗಮ.) | **೨೩೩** | **೩೩.೮೬** | **೨೯೫** | **೪೪.೫೮** | **೭೫** | **೧೨.೮೧** | **೫೧** | **೭.೪೦** | **೮೬** | **೧೩.೧೫** | **೮೩** | **೧೧.೨೨** |

*(ಆಧಾರ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು)*

**ಕೋಷ್ಟಕ ೧೬.೬೧: ನಿಗಮದ ವಿವಿಧ ಯೋಜನೆಗಳಡಿಯಲ್ಲಿ ೨೦೧೦–೧೧ನೇ ಸಾಲಿನಲ್ಲಿ ನಿಗದಿಪಡಿಸಿಕೊಂಡ ಗುರಿ ಮತ್ತು ಸಾಧಿಸಿದ ಪ್ರಗತಿಯ ವಿವರಗಳು (₹ ಲಕ್ಷಗಳಲ್ಲಿ)**

| ಕ್ರ ಸಂ | ಯೋಜನೆ ಹೆಸರು | ಒಟ್ಟು ಗುರಿ | | ಒಟ್ಟು ಸಾಧನೆ | | ತಾಲೂಕುವಾರು | | | | | | | |
|---|---|---|---|---|---|---|---|---|---|---|---|---|---|
| | | | | | | ಚಾ.ರಾ.ನಗರ | | ಯಳಂದೂರು | | ಕೊಳ್ಳೆಗಾಲ | | ಗುಂಡ್ಲುಪೇಟೆ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೧ | ಭೂ ರಹಿತ ಕೃಷಿ/ ಕೂಲಿ ಕಾರ್ಮಿಕರ ಸಾಲ | ೯೧ | ೧೩.೬೫ | ೯೪ | ೧೪.೧೦ | ೨೯ | ೪.೩೫ | ೨೪ | ೩.೬೦ | ೨೨ | ೩.೩೦ | ೧೯ | ೨.೮೫ |
| ೨ | ಉಪ್ಪಾರ (ರಾಜ್ಯ) | – | – | – | – | – | – | – | – | – | – | – | – |
| ೩ | ದೇವಾಂಗ | – | – | – | – | – | – | – | – | – | – | – | – |
| ೪ | ಮಡಿವಾಳ | – | – | – | – | – | – | – | – | – | – | – | – |
| ೫. | ಕುಂಬಾರ | ೪೦ | ೮.೦೦ | ೨೮ | ೮.೪೦ | ೧೪ | ೪.೨೦ | ೪ | ೧.೨೦ | ೬ | ೧.೮೦ | ೪ | ೧.೨೦ |
| ೬. | ಕಂಬಾರ | – | – | – | – | – | – | – | – | – | – | – | – |
| ೭ | ಕ್ಷತ್ರಿಯ | – | – | – | – | – | – | – | – | – | – | – | – |
| ೭ | ಮೈಕ್ರೊ ಕ್ರೆಡಿಟ್ | ೧೩೨ | ೯.೧೦ | ೧೮೯ | ೯.೪೫ | ೪೬ | ೨.೩೦ | ೫೧ | ೨.೫೫ | ೪೪ | ೨.೨೦ | ೪೮ | ೨.೪೦ |
| ೮ | ಭೂ ಖರೀದಿ | ೨ | ೧.೫೪ | – | – | – | – | – | – | – | – | – | – |
| ೨ | ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ | | | | | | | | | | | | |
| ಅ) | ಕೃಷಿ ವಲಯ | ೨೦ | ೭.೬೦ | ೧೯ | ೭.೨೨ | ೪ | ೧.೫೨ | ೫ | ೧.೯೦ | ೫ | ೧.೯೦ | ೫ | ೧.೯೦ |
| ಆ) | ಸಣ್ಣ ವ್ಯಾಪಾರ | ೨೭ | ೮.೯೮ | ೨೭ | ೮.೯೮ | ೮ | ೨.೬೬ | ೭ | ೨.೩೩ | ೪ | ೧.೩೩ | ೮ | ೨.೬೬ |
| ಇ) | ನ್ಯೂ ಸ್ವರ್ಣಿಮಾ/ ಸೈಫ್ | ೧೭೮ | ೧೮.೩೨ | ೧೩೨ | ೧೯.೮೦ | ೨೪ | ೩.೬೦ | ೩೬ | ೫.೪೦ | ೩೬ | ೫.೪೦ | ೩೬ | ೫.೪೦ |
| ಈ | ಸ್ವಯಂ ಸಕ್ಷಮ | ೧ | ೩.೮೦ | ೧ | ೩.೮೦ | ೧ | ೩.೮೦ | – | – | – | – | – | – |
| ಉ | ಸಾರಿಗೆ ವಲಯ | ೧ | ೦.೯೦ | ೧ | ೦.೯೦ | – | – | – | – | ೧ | ೦.೯೦ | – | – |
| ಊ | ಸೇವಾ ವಲಯ | ೧೬ | ೩.೦೦ | ೧೫ | ೩.೧೫ | – | – | ೪ | ೦.೭೬ | ೬ | ೧.೪೪ | ೫ | ೦.೯೫ |
| ಋ | ಮಹಿಳಾ ಸಮೃದ್ಧಿ | ೧೬ | ೩.೦೪ | ೧೬ | ೩.೮೦ | – | – | ೪ | ೦.೯೫ | ೬ | ೧.೪೩ | ೬ | ೧.೪೨ |
| ೠ | ಶೈಕ್ಷಣಿಕ ಸಾಲ | – | – | – | – | – | – | – | – | – | – | – | – |
| ಎ | ಮೈಕ್ರೋ ಫೈನಾನ್ಸ್ | ೨೫ | ೩.೯೯ | ೨೧ | ೩.೯೯ | – | – | ೫ | ೦.೯೫ | ೧೨ | ೨.೨೮ | ೪ | ೦.೭೬ |
| | ಒಟ್ಟು (ರಾ.ಹಿಂ. ನಿಗಮ.) | ೫೪೯ | ೮೧.೯೨ | ೫೪೩ | ೮೩.೫೯ | ೧೨೬ | ೨೨.೪೩ | ೧೪೦ | ೧೯.೬೪ | ೧೪೨ | ೨೧.೯೮ | ೧೩೫ | ೧೯.೫೪ |

*(ಆಧಾರ: ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

**ಕೋಷ್ಟಕ ೬.೬೨: ನಿಗಮದ ವಿವಿಧ ಯೋಜನೆಗಳಡಿಯಲ್ಲಿ ೨೦೧೦–೧೧ರಲ್ಲಿ ನಿಗದಿಪಡಿಸಿಕೊಂಡ ಗುರಿ ಮತ್ತು ಸಾಧಿಸಿದ ಪ್ರಗತಿಯ ವಿವರ (₹ ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆ ಹೆಸರು | ಒಟ್ಟು ಗುರಿ | | ಒಟ್ಟು ಸಾಧನೆ | | ವಿಧಾನಸಭಾ ಕ್ಷೇತ್ರವಾರು | | | | | | | |
|---|---|---|---|---|---|---|---|---|---|---|---|---|---|
| | | | | | | ಹನೂರು | | ಕೊಳ್ಳೆಗಾಲ | | ಚಾ.ರಾ. ನಗರ | | ಗುಂಡ್ಲುಪೇಟೆ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೧ | ಭೂ ರಹಿತ ಕೃಷಿ/ ಸಾಲ ಕೂಲಿ ಕಾರ್ಮಿಕರ | ೯೧ | ೧೩.೬೫ | ೯೪ | ೧೪.೧೦ | ೨೨ | ೩.೩೦ | ೨೪ | ೩.೬೦ | ೨೯ | ೪.೩೫ | ೧೯ | ೨.೮೫ |
| ೨. | ಕಿರು ಸಾಲ | ೧೩೨ | ೯.೧೦ | ೧೮೯ | ೯.೪೫ | ೪೪ | ೨.೨೦ | ೫೧ | ೨.೫೫ | ೪೬ | ೨.೩೦ | ೪೮ | ೨.೪೦ |
| ೩ | ಭೂ ಖರೀದಿ | ೨ | ೧.೫೪ | – | – | – | – | – | – | – | – | – | – |
| ೨ | ಉಪ್ಪಾರ (ರಾಜ್ಯ) | – | – | – | – | – | – | – | – | – | – | – | – |
| ೩ | ದೇವಾಂಗ | – | – | – | – | – | – | – | – | – | – | – | – |
| ೪ | ಮಡಿವಾಳ | – | – | – | – | – | – | – | – | – | – | – | – |
| ೫. | ಕುಂಬಾರ | ೪೦ | ೮.೦೦ | ೨೮ | ೮.೪೦ | ೬ | ೧.೮೦ | ೮ | ೨.೪೦ | ೯ | ೨.೭೦ | ೫ | ೧.೫೦ |
| ೬. | ಕಂಬಾರ | – | – | – | – | – | – | – | – | – | – | – | – |
| ೭ | ಕ್ಷತ್ರಿಯ | – | – | – | – | – | – | – | – | – | – | – | – |
| ೭ | ವಿವಿಧ ಸಮುದಾಯ | ೯೦ | ೧೩.೫೦ | ೮೭ | ೧೩.೦೫ | ೧೪ | ೨.೧೦ | ೧೮ | ೨.೭೦ | ೩೯ | ೫.೮೫ | ೧೬ | ೨.೪೦ |
| ೮ | ಸಾಂಪ್ರದಾಯಿಕ | ೨೮೮ | ೭೨.೦೦ | ೨೪೮ | ೪೯.೬೦ | ೪೭ | ೯.೪೦ | ೫೮ | ೧೧.೬೦ | ೮೪ | ೧೬.೮೦ | ೫೯ | ೧೧.೮೦ |
| | ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು | | | | | | | | | | | | |
| ಅ) | ಕೃಷಿ ವಲಯ | ೨೦ | ೭.೬೦ | ೧೯ | ೭.೨೨ | ೫ | ೧.೯೦ | ೫ | ೧.೯೦ | ೪ | ೧.೫೨ | ೫ | ೧.೯೦ |
| ಆ) | ಸಣ್ಣ ವ್ಯಾಪಾರ | ೨೭ | ೮.೯೮ | ೨೭ | ೮.೯೮ | ೪ | ೧.೩೩ | ೭ | ೨.೩೩ | ೮ | ೨.೬೬ | ೮ | ೨.೬೬ |
| ಇ) | ಸೇವಾ ವಲಯ | ೧೬ | ೩.೦೦ | ೧೫ | ೩.೧೫ | ೬ | ೧.೪೪ | ೪ | ೦.೭೬ | – | – | ೫ | ೦.೯೫ |
| ಈ | ಮಹಿಳಾ ಸಮೃದ್ಧಿ | ೧೬ | ೩.೦೪ | ೧೬ | ೩.೮೦ | ೬ | ೧.೪೩ | ೪ | ೦.೯೫ | – | – | ೬ | ೧.೪೨ |
| ಉ | ಸಾರಿಗೆ ವಲಯ | ೧ | ೦.೯೦ | ೧ | ೦.೯೦ | ೧ | ೦.೯೦ | – | – | – | – | – | – |
| ಊ | ಶೈಕ್ಷಣಿಕ ಸಾಲ | – | – | – | – | – | – | – | – | – | – | – | – |
| ಋ | ಸ್ವಯಂ ಸಕ್ಷಮ | ೧ | ೩.೮೦ | ೨೧ | ೩.೮೦ | – | – | – | – | – | – | ೧ | ೩.೮೦ |
| ೠ | ಮೈಕ್ರೋ ಫೈನಾನ್ಸ್ | ೨೫ | ೩.೯೯ | ೨೧ | ೩.೯೯ | ೧೨ | ೨.೨೮ | ೫ | ೦.೯೫ | – | – | ೪ | ೦.೭೬ |
| ಎ | ನ್ಯೂ ಸ್ವರ್ಣಿಮಾ | ೩೧೫ | ೩೫.೦೦ | ೨೬೧ | ೩೯.೧೫ | ೭೮ | ೧೧.೭೦ | ೭೦ | ೧೦.೫೦ | ೪೭ | ೭.೦೫ | ೬೬ | ೯.೯೦ |
| | ಒಟ್ಟು (ರಾ.ಹಿಂ. ನಿಗಮ.) | **೧೦೬೪** | **೧೮೪.೧೦** | **೧೦೨೭** | **೧೬೫.೫೯** | **೨೪೫** | **೩೯.೭೮** | **೨೫೪** | **೪೦.೨೪** | **೨೬೬** | **೪೩.೨೩** | **೨೪೨** | **೪೨.೩೪** |

*(ಮಾಹಿತಿ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು)*

**ಶ್ರಮಶಕ್ತಿ ಯೋಜನೆ:** ರಾಜ್ಯದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ಕಸುಬುದಾರರು, ಆಧುನಿಕ ತಂತ್ರಜ್ಞಾನ ಬಳಕೆಯಿಂದಾಗಿ, ತಮ್ಮ ಸಾಂಪ್ರದಾಯಿಕ ಮಾರು ಕಟ್ಟೆ ಮತ್ತು ವೃತ್ತಿ ಕುಶಲತೆಯನ್ನು ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಅವರ ಕುಶಲತೆ ಮತ್ತು ವೃತ್ತಿ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಿ ಜೀವನ ಮಟ್ಟವನ್ನು ಸುಧಾರಿಸಲು ಅಗತ್ಯವಿರುವ ಆರ್ಥಿಕ ನೆರವನ್ನು ಒದಗಿಸುವ ದಿಸೆಯಲ್ಲಿ ಶ್ರಮಶಕ್ತಿ ಎಂಬ ನೂತನ ಯೋಜನೆಯನ್ನು ಸರ್ಕಾರವು ೨೦೦೫–೦೬ನೇ ಸಾಲಿನಿಂದ ಅನಿಷ್ಠಾನಗೊಳಿಸಿ ಜಾರಿಗೆ ತಂದಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ೧೯೯೬ರಲ್ಲಿ ಪ್ರಕಟಿಸಿದ ರೂರಲ್ ಆರ್ಟಿಸಾನ್ಸ್ ಸರ್ವೆ ರಿಪೋರ್ಟ್‌ನಲ್ಲಿ ಗುರುತಿಸಿದ ೩೪ ವೃತ್ತಿ ಕುಲಕಸುಬುಗಳ ಹಾಗೂ ಹೊಸದಾಗಿ ಗುರುತಿಸಿ ಸರ್ಕಾರದಿಂದ ಅನುಮೋದನೆ ಪಡೆಯಲಾದ ೧೧ ವೃತ್ತಿಗಳು ಸೇರಿ ಒಟ್ಟು ೪೫ ಕುಲಕಸುಬುದಾರರಿಗೆ ಗರಿಷ್ಠ ₹ ೨೫,೦೦೦ಗಳ ಸಾಲವನ್ನು ವಾರ್ಷಿಕ ಬಡ್ಡಿ ಶೇ. ೪ರ ದರದಲ್ಲಿ ಕೊಡಲಾಗುತ್ತದೆ. ಈ ಸಾಲಕ್ಕೆ ಶೇ. ೨೫ರಷ್ಟು ಬ್ಯಾಂಕ್ ಎಂಡ್ ಸಬ್ಸಿಡಿಯಾಗಿ ಈ ಯೋಜನೆಯಲ್ಲಿ ನೀಡಲಾಗುತ್ತದೆ.

ಈ ಯೋಜನೆಯ ಉದ್ದೇಶಕ್ಕಾಗಿ ನಲವತ್ತೈದು ಅರ್ಹ ಪರಂಪರಾಗತ ಕುಲಕಸುಬುಗಳನ್ನು ಗುರಿತಿಸಲಾಗಿದೆ. ಅವೆಂದರೆ: ೧. ಬಡಗಿ ಕೆಲಸ/ಮರದ ಕೆತ್ತನೆ ೨. ಚಿನ್ನ ಬೆಳ್ಳಿ ಕೆಲಸ, ಕಂಚು ಕೆಲಸ, ೩. ದರ್ಜಿ/ಹೊಲಿಗೆ ಕೆಲಸ ೪. ಶೀಟ್ ಮೆಟಲ್ ಕೆಲಸ ೫. ಉಣ್ಣೆ ಮತ್ತು ಕಂಬಳಿ ನೇಯ್ಗೆ ೬. ನಾರಿನಿಂದ ವಿವಿಧ ವಸ್ತುಗಳ ತಯಾರಿಕೆ ಕೆಲಸ ೭. ಕುಂಬಾರಿಕೆ/ ಕಲಾತ್ಮಕ ಮಡಿಕೆ ತಯಾರಿಕೆ ೮. ಬಣ್ಣಗಾರಿಕೆ ಮತ್ತು ಮುದ್ರಣ ೯. ದಂತ ಕೆತ್ತನೆ ೧೦. ಕಮ್ಮಾರಿಕೆ ೧೧. ಹತ್ತಿ ನೇಯ್ಗೆ ೧೨ ಮ್ಯಾಟ್ ತಯಾರಿಕೆ ೧೩. ಉಣ್ಣೆ ನೇಯ್ಗೆ ಮತ್ತು ಹಾಸು ಕಂಬಳಿ ತಯಾರಿಕೆ ೧೪. ಬೆತ್ತದ ಕೆಲಸ(ರಟ್ಟನ್) ೧೫. ಚರ್ಮದ ವಸ್ತುಗಳ ತಯಾರಿಕೆ ೧೬. ಬಿದಿರು ಕೆಲಸ ೧೭. ಸಿಲ್ಕ್ ರೀಲಿಂಗ್ ಮತ್ತು ಸಿಲ್ಕ್ ಟ್ವಿಸ್ಟಿಂಗ್ ಕೆಲಸ ೧೮. ಆಟಿಕೆ/ಗೊಂಬೆ ತಯಾರಿಕೆ ಮತ್ತು ಕೆತ್ತನೆ ಕೆಲಸ ೧೯. ಅಗರಬತ್ತಿ ತಯಾರಿಕೆ ೨೦. ಗಾಡಿ/ರಥ ತಯಾರಿಕೆ ೨೧. ಪೊರಕೆ ಕಡ್ಡಿ ತಯಾರಿಕೆ ೨೨. ಟಿನ್ ವಸ್ತುಗಳ ತಯಾರಿಕೆ ೨೩. ಕಾಯಿರ್ ಫೈಬರ್ ತಯಾರಿಕೆ ೨೪. ಗಾಜಿನ ಮಣಿ ತಯಾರಿಕೆ ೨೫. ಬಿದರಿ ವೇರ್ ಕೆಲಸ ೨೬. ಜೇನು ಸಾಕಾಣಿಕೆ ೨೭. ಕಲ್ಲು ಕೆತ್ತನೆ ೨೮. ಮೆಟಲ್ ಕ್ರಾಫ್ಟ್ ೨೯. ಸುಣ್ಣ ಸುಡುವುದು ೩೦. ನಿಟ್ಟಿಂಗ್ ಕೆಲಸ ೩೧. ಲಾಂಡ್ರಿ/ಧೋಬಿ ಕೆಲಸ ೩೨. ಹೊಸೈರಿ ವಸ್ತುಗಳ ತಯಾರಿಕೆ ೩೩. ಕ್ಷೌರಿಕ ವೃತ್ತಿ ೩೪. ಗಾಣದ ಕೆಲಸ ೩೫. ಮೀನುಗಾರಿಕೆ ೩೬. ಪಾತ್ರೆಗಳಿಗೆ ಕಲಾಯಿ ೩೭ ವಾಲಗ ಊದುವುದು ೩೮. ಸೇಂದಿ ತೆಗೆಯುವುದು ೩೯. ನಾಟಿ ಔಷಧ ೪೦. ವಾದ್ಯವೃಂದ ವೃತ್ತಿ ೪೧. ದನಗಾಹಿ ವೃತ್ತಿ ೪೨. ಹೂ ಕಟ್ಟುವ ವೃತ್ತಿ ೪೩. ಬಣ್ಣ/ಶೃಂಗಾರ ಮಾಡುವ ವೃತ್ತಿ ೪೪. ಗೌಳಿ ವೃತ್ತಿ ಮತ್ತು ೪೫. ಅಡಿಕೆ ಹಾಳೆಯಿಂದ ಊಟದ ತಟ್ಟೆ, ಬಟ್ಟಲು ತಯಾರಿಕೆ.

ಕುಶಲಕರ್ಮಿಗಳ ಸ್ವಸಹಾಯ ಗುಂಪುಗಳ ಗುಂಪು ಚಟುವಟಿಕೆಗೆ ಗರಿಷ್ಠ ಹತ್ತು ಜನರಿಗೆ ವೃತ್ತಿ/ಕುಲಕಸುಬನ್ನು ಆಧರಿಸಿದ ಯೋಜನೆಗೆ ತಕ್ಕಂತೆ ಅಥವಾ ಪ್ರತಿ ವ್ಯಕ್ತಿಗೆ ಗರಿಷ್ಠ ₹ ೧೫,೦೦೦ ಮೀರದಂತೆ, ಗುಂಪಿಗೆ ಗರಿಷ್ಠ ₹ ಒಂದೂವರೆ ಲಕ್ಷಗಳನ್ನೂ; ಕುಶಲಕರ್ಮಿಗಳ ಸಹಕಾರ ಸಂಘಗಳ ಮೂಲಕ ಗುಂಪು ಚಟುವಟಿಕೆಗೆ ಗರಿಷ್ಠ ಇಪ್ಪತ್ತು ಜನರಿಗೆ ವೃತ್ತಿ/ಕುಲಕಸುಬನ್ನು ಆಧರಿಸಿದ ಯೋಜನೆಗೆ ತಕ್ಕಂತೆ ಅಥವಾ ಪ್ರತಿ ವ್ಯಕ್ತಿಗೆ ಗರಿಷ್ಠ ₹ ೧೫,೦೦೦ ಗಳು ಮೀರದಂತೆ, ಗುಂಪಿಗೆ ಸಹಕಾರ ಸಂಘದ ಮೂಲಕ ಗರಿಷ್ಠ ₹ ಮೂರು ಲಕ್ಷಗಳನ್ನೂ; ಮಂಜೂರು ಮಾಡಲಾಗುತ್ತದೆ. ಶ್ರಮಶಕ್ತಿ ಯೋಜನೆಯಲ್ಲಿ ಕೊಡುವ ಸಾಲಕ್ಕೆ ವಾರ್ಷಿಕ ಶೇಕಡ ನಾಲ್ಕರಂತೆ ಸರಳ ಬಡ್ಡಿಯನ್ನು ವಿಧಿಸಲಾಗುತ್ತದೆ.

ಈ ಜಿಲ್ಲೆಯಲ್ಲಿ ೨೦೦೭–೦೮ರಿಂದ ೨೦೦೯–೧೦ನೇ ಸಾಲಿನ ವರೆಗಿನ ಅವಧಿಯಲ್ಲಿ ಶ್ರಮಶಕ್ತಿ ಯೋಜನೆ ಅಡಿಯಲ್ಲಿ ನೀಡಿದ ಸಾಲ ಮತ್ತು ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೬೩ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬೩:**

**₹ ಲಕ್ಷಗಳಲ್ಲಿ**

| ವರ್ಷ | ಒಟ್ಟು ಗುರಿ | | ಒಟ್ಟು ಸಾಧನೆ | | ತಾಲ್ಲೂಕುವಾರು | | | | | | | |
|---|---|---|---|---|---|---|---|---|---|---|---|---|
| | | | | | ಚಾ.ನಗರ | | ಯಳಂದೂರು | | ಕೊಳ್ಳೇಗಾಲ | | ಗುಂಡ್ಲುಪೇಟೆ | |
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೨೦೦೭–೦೮ | ೪೧೧ | ೭೩.೯೧ | ೪೭೧ | ೮೭.೫೦ | ೧೯೮ | ೩೪.೫ | ೬೨ | ೧೦.೨೫ | ೧೩೫ | ೨೬.೫೫ | ೭೬ | ೧೬.೨೦ |
| ೨೦೦೯–೧೦ | ೫೮ | ೧೧.೬೦ | ೬೪ | ೧೧.೬೫ | ವಿಧಾನಸಭಾ ಕ್ಷೇತ್ರವಾರು | | | | | | | |
| | | | | | ಚಾ.ನಗರ | | ಹನೂರು | | ಕೊಳ್ಳೇಗಾಲ | | ಗುಂಡ್ಲುಪೇಟೆ | |
| | | | | | ೧೫ | ೨.೯೫ | ೧೭ | ೩.೦೦ | ೧೬ | ೨.೯೦ | ೧೬ | ೨.೯೦ |
| ೨೦೧೦–೧೧ | ಈ ಸಾಲಿನಲ್ಲಿ ಸಾಲ ನೀಡಿರುವುದಿಲ್ಲ | | | | | | | | | | | |

***(ಆಧಾರ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು)***

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವ ದೆಹಲಿ, ಇದು ರಾಷ್ಟ್ರ ಮಟ್ಟದಲ್ಲಿ ರಾಜ್ಯಗಳ ಚಾನಲೈಸಿಂಗ್ ಏಜೆನ್ಸಿಗಳಿಗೆ ಅತ್ಯುತ್ತಮ "ಕಾರ್ಯಕ್ಷಮತಾ' ಪ್ರಶಸ್ತಿಯನ್ನು ನೀಡುತ್ತ ಬಂದಿದ್ದು, ೨೦೦೭–೦೮ನೇ ಸಾಲಿಗೆ ರಾಜ್ಯದ ಈ ನಿಗಮವು ಪ್ರಥಮ ಸ್ಥಾನ ಪಡೆದಿದೆ. ಅಲ್ಲದೆ ಕಳೆದ ನಾಲ್ಕು ವರ್ಷಗಳಿಂದಲೂ "ಕಾರ್ಯಕ್ಷಮತಾ' ಪ್ರಶಸಿಯನ್ನು ಪಡೆಯುತ್ತ ಬಂದಿದೆ. ೨೦೦೯–೧೦ನೇ ಸಾಲಿಗೆ ಉತ್ತಮ ಕಾರ್ಯ ಸಾಧನೆ ಮಾಡಿರುವುದಕ್ಕೆ ಸಾರ್ವಜನಿಕ ಉದ್ದಿಮೆಗಳಿಗೆ ನೀಡಲಾಗುವ "ಸನ್ಮಾನ್ಯ ಮುಖ್ಯ ಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿ'ಯನ್ನೂ ಈ ನಿಗಮವು ಪಡೆದಿದೆ.

## ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು

ಈ ನಿಗಮವನ್ನು ರಾಷ್ಟ್ರ ಮಟ್ಟದಲ್ಲಿ ಅಂಗವಿಕಲರ ಅಭಿವೃದ್ಧಿಗಾಗಿ ೧೯೯೭ರ ಜನವರಿ ೨೪ರಂದು ಸ್ಥಾಪಿಸಲಾಗಿದೆ. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವನ್ನು ಚಾನಲೈಸಿಂಗ್ ಏಜೆನ್ಸಿಯಾಗಿ ನಿರ್ವಹಿಸಲು ೨೦೦೨ರ ಜೂನ್ ಆರರಂದು ರಾಜ್ಯ ಸರ್ಕಾರವು ನೇಮಿಸಿರುತ್ತದೆ. ೨೦೦೩–೦೪ನೇ ಸಾಲಿನಿಂದ ಜಾರಿಗೊಳ್ಳುತ್ತಿರುವ ಈ ಯೋಜನೆಯಡಿಯಲ್ಲಿ ಎಲ್ಲ ರೀತಿಯ ಅಂಗವಿಕಲರೂ, ಅವರವರ ಅರ್ಹತೆಗೆ ತಕ್ಕ ಉದ್ಯೋಗವನ್ನು ಕೈಗೊಂಡು, ಸ್ವಾವಲಂಬಿಗಳಾಗಲು ಸಾಧ್ಯವಾಗುವಂತೆ, ಅವರಿಗೆ ಗರಿಷ್ಠ ಒಂದು ₹ ಲಕ್ಷಗಳವರೆಗೆ ಸಾಲವನ್ನು ನೀಡಲಾಗುತ್ತದೆ. ₹ ೫೦,೦೦೦ಗಳ ವರೆಗಿನ ಸಾಲಕ್ಕೆ ಶೇಕಡ ಐದರ ಬಡ್ಡಿಯನ್ನು ಹಾಗೂ ₹ ೫೦,೦೦೦ಗಳಿಂದ ₹ ಒಂದು ಲಕ್ಷಗಳ ವರೆಗಿನ ಸಾಲಕ್ಕೆ ವಿಧಿಸಲಾಗುವ ಬಡ್ಡಿಯ ದರ ವರ್ಷಕ್ಕೆ ಶೇಕಡ ಆರು.

ಶೇಕಡ ನಲವತ್ತಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿದ್ದು, ಹದಿನೆಂಟರಿಂದ ಐವತ್ತೇಳು ವರ್ಷದೊಳಗಿದ್ದರೆ, ಗ್ರಾಮಾಂತರ ಪ್ರದೇಶದವರಾದರೆ ಅವರ ವಾರ್ಷಿಕ ಆದಾಯ ₹ ೮೦,೦೦೦ ಗಿಂತ ಕಡಿಮೆ ಹಾಗೂ ಪಟ್ಟಣ ಪ್ರದೇಶದವರಾದರೆ ₹ ಒಂದು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಅಂಥವರು, ಈ ಸಾಲವನ್ನು ಪಡೆಯಲು ಅರ್ಹರಾಗುತ್ತಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೮–೦೯ನೇ ಸಾಲಿನಿಂದ ೨೦೧೦–೧೧ನೇ ಸಾಲಿನ ವರೆಗೆ ಈ ಯೋಜನೆ ಅಡಿ ನೀಡಿದ ಸಾಲದ ಮೊತ್ತ ಮತ್ತು ಪ್ರಯೋಜನ ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೬೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬೪**

| ವರ್ಷ | ನಿಗದಿಪಡಿಸಿದ ಗುರಿ | | ಸಾಧಿಸಿದ ಪ್ರಗತಿ | |
|---|---|---|---|---|
| | **ಭೌತಿಕ** | **ಆರ್ಥಿಕ** | **ಭೌತಿಕ** | **ಆರ್ಥಿಕ** |
| ೨೦೦೮–೦೯ | ೨೩೫ | ೪೯.೫೭ | ೨೮೫ | ೪೫.೫೫ |
| ೨೦೦೯–೧೦ | ೫೮ | ೧೨.೯೨ | ೭೮ | ೧೩.೮೫ |
| ೨೦೧೦–೧೧ | – | – | – | – |
| ಒಟ್ಟು | **೨೯೩** | **೬೨.೩೯** | **೩೬೩** | **೫೯.೪೦** |

*(ಆಧಾರ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು)*

ಈ ನಿಗಮವು ಕೇವಲ ಸಾಲ ಮತ್ತು ತರಬೇತಿಗಳನ್ನು ಮಾತ್ರ ನೀಡುವ ಸಂಸ್ಥೆಯಾಗಿರದೇ, ನಿಗಮದ ಯೋಜನೆಗಳ ಬಗ್ಗೆ ಅರಿವು ಮೂಡಿಸಲು, ಯೋಜನೆಗಳ ಅನುಷ್ಠಾನದಲ್ಲಿರುವ ಕೊರತೆಗಳನ್ನು ನಿವಾರಿಸಲು, ಸಾಲ ಹಾಗು ಸಬ್ಸಿಡಿಗಳ ಮಹತ್ವವನ್ನು ಜನರಿಗೆ ತಿಳಿಸಲು, ಪರಸ್ಪರ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಮತ್ತು ಸಾಧನೆಗಳ ಬಗ್ಗೆ ಸಾರ್ವಜನಿಕರಲ್ಲಿ ಪ್ರಕಟ ಪಡಿಸಲು, ಸಾಧಕರ ಉದಾಹರಣೆಗಳನ್ನು ಪರಿಚಯಿಸಲು, ಕೆಲವಾರು ಕಾರ್ಯಕ್ರಮಗಳನ್ನೂ ನಡೆಸುತ್ತದೆ. ಸಂವಾದ, ಸಾಲ ವಿತರಣಾ ಪೂರ್ವ ಸಮಾಲೋಚನೆ, ಸಾಲ ವಿತರಣಾ ಪರ್ಯಾಲೋಚನೆ, ಮಂಥನ, ಪ್ರಾದೇಶಿಕ ರೈತರ ವಿಚಾರ ವಿನಿಮಯ ಕಾರ್ಯಕ್ರಮ ಮುಂತಾದವು ಇಂಥ ಕೆಲವು ಕಾರ್ಯಕ್ರಮಗಳಾಗಿದ್ದು, ಇದರಲ್ಲಿ ಫಲಾನುಭವಿಗಳು ಹಾಗೂ ಫಲಾಸಕ್ತರೆಲ್ಲ ಭಾಗವಹಿಸಿ ತಮ್ಮ ತಮ್ಮ ಸಾಧನೆಗಳನ್ನು ಹೊರಗೆಡಹಲು ಹಾಗೂ ಅನುಮಾನಗಳಿದ್ದಲ್ಲಿ ಪ್ರಶ್ನಿಸಲು ಮತ್ತು ಯಾವುದೇ ಸೋಲು ಗೆಲವುಗಳ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಒದಗಿಸಲಾಗುತ್ತದೆ. ಇದರಿಂದ ಸಾಲ ಅಥವಾ ಸ್ವ–ಉದ್ಯೋಗ ಕೈಕೊಳ್ಳುವವರಿಗೂ ಅದರ ಪ್ರಯೋಜನ ಪಡೆದು ಸಾಧನೆ ಮಾಡಿದವರಿಗೂ ಪರಿಚಯ ಮತ್ತು ಅತ್ಮ ವಿಶ್ವಾಸಗಳನ್ನೂ ಬೆಳೆಸುವಲ್ಲಿ ಈ ನಿಗಮವು ಸಹಾಯಿಸುತ್ತದೆ.

ನಿಗಮದ ಈ ಪ್ರಶಂಸಾರ್ಹ ಕಾರ್ಯನಿರ್ವಹಣೆಯು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದ್ದು, ರಾಷ್ಟ್ರದಲ್ಲಿಯೇ ಉತ್ತಮವಾಗಿ ಸಾಲ ಯೋಜನೆಯ ಕಾರ್ಯ ನಿರ್ವಹಣೆ ಮಾಡಿದ ಸಂಸ್ಥೆಯಾಗಿ ಈ ನಿಗಮವು, ೨೦೦೧–೦೨, ೨೦೦೨–೦೩, ೨೦೦೪–೦೫ ಮತ್ತು ೨೦೦೬–೦೭ನೇ ಸಾಲುಗಳಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಿಂದ 'ಅತ್ಯುತ್ತಮ ಕಾರ್ಯಕ್ಷಮತಾ ಪ್ರಶಸ್ತಿ'ಗಳನ್ನು ಪಡೆದಿರುತ್ತದೆ.

## ಅಲ್ಪ ಸಂಖ್ಯಾತರ ಕಲ್ಯಾಣ

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ೧೯೯೮ರ ವರೆಗೆ ಒಂದೇ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿದ್ದು, ಕರ್ನಾಟಕ ಸರ್ಕಾರವು, ೧೯೯೮ರ ಡಿಸೆಂಬರ್ ಒಂಭತ್ತರ ಆದೇಶದಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯನ್ನು ರಚಿಸಿ, ಈ ಸಂಬಂಧದ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಪ್ರತ್ಯೇಕಗೊಳಿಸಿದೆ. ಅದರಂತೆ ಈ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯು ೧೯೯೯ ರ ಮೇ ತಿಂಗಳ ಇಪ್ಪತ್ತನೇ ತಾರೀಖಿನಿಂದ ಕಾರ್ಯಾರಂಭ ಮಾಡಿದೆ. ಆದರೆ ಜಿಲ್ಲಾ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳೇ ಈ ನಿರ್ದೇಶನಾಲಯದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.

ರಾಜ್ಯದಲ್ಲಿ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿಗಳನ್ನು ಮತೀಯ ಅಲ್ಪ ಸಂಖ್ಯಾತರೆಂದು ಪರಿಗಣಿಸಲಾಗಿದ್ದು, ೨೦೦೧ರ ಜನಗಣತಿಯ ಪ್ರಕಾರ ಈ ಅಲ್ಪ ಸಂಖ್ಯಾತರ ಜನಸಂಖ್ಯೆಯು ರಾಜ್ಯದಲ್ಲಿ ೮೨.೯೩ ಲಕ್ಷಗಳಿದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೧೫.೬೯ರಷ್ಟಿರುತ್ತದೆ. ೨೦೦೧ರ ಜನಗಣತಿಯನ್ವಯ ಇವರ ಜನಸಂಖ್ಯಾ ಪ್ರಮಾಣವನ್ನು ಕೋಷ್ಟಕದಲ್ಲಿ ನೀಡಿದೆ.

**ಕೋಷ್ಟಕ ೧೬.೬೫: ೨೦೦೧ನೇ ಸಾಲಿನಲ್ಲಿದ್ದ ಅಲ್ಪ ಸಂಖ್ಯಾತರ ಜನಸಂಖ್ಯಾ ಪ್ರಮಾಣ**

| ಸಮುದಾಯ | ಜನಸಂಖ್ಯೆ(ಲಕ್ಷಗಳಲ್ಲಿ) |
|---|---|
| ಮುಸಲ್ಮಾನರು | ೬೪.೬೩ |
| ಕ್ರಿಶ್ಚಿಯನ್ | ೧೦.೦೯ |
| ಜೈನರು | ೪.೧೩ |
| ಸಿಖ್ಖರು | ೦.೧೫ |
| ಬೌದ್ಧರು | ೩.೯೩ |
| ಒಟ್ಟು | **೮೨.೯೩** |

*(ಆಧಾರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ)*

**ಕೋಷ್ಟಕ ೧೬.೬೬: ೨೦೧೦–೧೧ನೇ ಸಾಲಿನಲ್ಲಿದ್ದ ಅಲ್ಪ ಸಂಖ್ಯಾತರ ಜನಸಂಖ್ಯಾ ಪ್ರಮಾಣ**

| ಸಮುದಾಯ | ಜನಸಂಖ್ಯೆ |
|---|---|
| ಮುಸಲ್ಮಾನರು | ೩೯೭೬೪ |
| ಕ್ರಿಶ್ಚಿಯನ್ | ೨೧೨೩೭ |
| ಜೈನರು | ೧೦೩೪ |
| ಸಿಖ್ಖರು | ೫೬ |
| ಬೌದ್ಧರು | ೩೪೧೧೪ |
| ಒಟ್ಟು | ೯೬೨೦೫ |

*(ಆಧಾರ : ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಾಮರಾಜನಗರ ಜಿಲ್ಲೆ)*

ಕಾನೂನು ಪದವೀಧರರಿಗೆ ತರಬೇತಿ, ಐ.ಟಿ.ಐ./ ಡಿಪ್ಲಮೊ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ, ಅಲ್ಪ ಸಂಖ್ಯಾತರ ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ಅನುದಾನ ಮತ್ತು ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಅನುದಾನ, ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವವರಿಗೆ ತರಬೇತಿ, ಕಂಪ್ಯೂಟರ್ ತರಬೇತಿ, ಕೌಶಲ್ಯ ಅಭಿವೃದ್ಧಿ ಯೋಜನೆ, ಗಗನಸಖಿಯರ ತರಬೇತಿ, ವಿಮಾನ ಚಾಲನೆ ತರಬೇತಿ, ಮುಂತಾಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಜಾರಿಗೊಳಿಸುವ ಹಲವಾರು ಕಾರ್ಯಕ್ರಮಗಳನ್ನೇ, ಹೆಚ್ಚಿನ ಪ್ರಮಾಣದಲ್ಲಿ ಅದೇ ನಿಯಮಗಳನ್ನನುಸರಿಸಿ ಅಲ್ಪ ಸಂಖ್ಯಾತರಿಗಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಾರಿಗೊಳಿಸಬೇಕಾಗಿರುತ್ತದೆ.

ಅಲ್ಪ ಸಂಖ್ಯಾತರ ಸಮುದಾಯ ಭವನ/ಶಾದಿ ಮಹಲ್ ನಿರ್ಮಾಣಕ್ಕೆ ಅನುದಾನ ನೀಡುವಂತಹ ಒಂದು ಪ್ರತ್ಯೇಕ ಕಾರ್ಯಕ್ರಮವನ್ನು ಈ ಇಲಾಖೆಯಿಂದ ಜಾರಿಗೊಳಿಸಲು ಸರ್ಕಾರವು ೨೦೦೦ನೇ ಸಾಲಿನ ಅಕ್ಟೋಬರ್ ಐದರ ಆದೇಶದಲ್ಲಿ ಮಂಜೂರಾತಿ ನೀಡಿದೆ. ಅಲ್ಪ ಸಂಖ್ಯಾತರ ಸಮುದಾಯದವರು, ಸಾಂಸ್ಕೃತಿಕ,

ಸಾಮಾಜಿಕ ಕಾರ್ಯಕ್ರಮಗಳನ್ನು, ಮದುವೆ, ಔತಣ, ಇತ್ಯಾದಿಗಳನ್ನು ನಡೆಸಲು ಅನುಕೂಲವಾಗುವಂತಹ ಸಮುದಾಯ ಭವನ ಅಥವಾ ಶಾದಿ ಮಹಲ್‌ಗಳನ್ನು ನಿರ್ಮಿಸಲು ₹ ಐದು ಲಕ್ಷ ಅನುದಾನವನ್ನು ನಿಗದಿತ ನಿಯಮಗಳನ್ನನುಸರಿಸಿ ಈ ಕಾರ್ಯಕ್ರಮದ ಅಡಿಯಲ್ಲಿ ಮಂಜೂರು ಮಾಡಲಾಗುತ್ತದೆ. ₹ ಐದು ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಸ್ವಯಂ ಸಂಸ್ಥೆಯವರೇ ಹೊಂದಿಸಬೇಕಾಗುತ್ತದೆ. ಈ ಮಹಲ್‌ಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸಲು ಅವಕಾಶವಿಲ್ಲ.

### ಟಿಬೇಟಿನ ನಿರಾಶ್ರಿತರ ಕಲ್ಯಾಣ ಮತ್ತು ಪುನರ್ವಸತಿ

ಟಿಬೇಟಿನ ನಿರಾಶ್ರಿತರಿಗೆ, ಕೊಳ್ಳೇಗಾಲ ತಾಲೂಕಿನ ಒಡೆಯರ ಪಾಳ್ಯದಲ್ಲಿ, ಸುಮಾರು ಎರಡು ಸಾವಿರ ಎಕರೆಗಳಷ್ಟು ಭೂಮಿಯನ್ನು ಅವರ ಕಲ್ಯಾಣ ಮತ್ತು ಪುನರ್ವಸತಿಗಾಗಿ ಸರ್ಕಾರದಿಂದ ಒದಗಿಸಲಾಗಿದೆ. ಸೆಂಟ್ರಲ್ ಸ್ಕೂಲ್ ಫಾರ್ ಟಿಬೇಟಿಯನ್ಸ್ ಎಂಬ ಕೇಂದ್ರೀಯ ವಿದ್ಯಾಲಯವನ್ನು ಕೇಂದ್ರ ಸರ್ಕಾರದ ನೆರವು ಪಡೆದು ಶಿಕ್ಷಣ ಇಲಾಖೆಯು ನಡೆಸುತ್ತಿದೆ. ಕ್ರೀಡಾ ಸಾಮಗ್ರಿಗಳು, ಮಧ್ಯಾಹ್ನದ ಬಿಸಿಯೂಟ, ಗ್ರಂಥಾಲಯ, ಪ್ರಯೋಗಾಲಯ, ನೃತ್ಯ ಕೊಠಡಿ ಮುಂತಾದ ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗುತ್ತದೆ.

## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ

ನಾಮಕರಣ, ಮದುವೆ, ಮುಂಜಿ, ಮನರಂಜನೆ, ಮುಂತಾದ ಹಲವು ರೀತಿಯ ಕೌಟುಂಬಿಕ ಸಂಭ್ರಮ, ಮೋಜುಗಳ ಕಡೆ ಗಮನವೇ ಹರಿಸದೇ, ಸಾಂಸಾರಿಕ ಸುಖ–ಸವಲತ್ತುಗಳನ್ನು ನೆಮ್ಮದಿಯಾಗಿ ಅನುಭವಿಸದೆ; ಜಾತಿ, ಮತ ಪಂಥಗಳ ಮಿತಿ ಹಾಕಿಕೊಳ್ಳದೆ; ಕೇವಲ ದೇಶದ ರಕ್ಷಣೆಗಾಗಿಯೇ ತಮ್ಮ ಜೀವನವನ್ನೇ ಮುಡಿಪಾಗಿಡುವ ಸೈನಿಕರ ಮತ್ತು ಮಾಜಿ ಸೈನಿಕರ ಕುಟುಂಬಗಳ ರಕ್ಷಣೆ ಮತ್ತು ಪೋಷಣೆಗಳು ಅಗತ್ಯ ಎಂಬುದನ್ನು, ಮೊದಲ ಮಹಾ ಯುದ್ಧದ ಸಮಯದಲ್ಲಿ ಭಾರತೀಯ–ಬ್ರಿಟಿಷ್ ಸರ್ಕಾರ ಕಂಡುಕೊಂಡಿತು ಮತ್ತು ಅವರ ಕುಟುಂಬಗಳ ಸರ್ವ ರೀತಿಯ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿ, ಬುನಾದಿ ಹಾಕಿ ಕೊಟ್ಟಿತು. ದಕ್ಷಿಣ ಆಫ್ರಿಕಾ, ಇಟಲಿ, ಬರ್ಮಾ, ಇಂಡೋನೇಷಿಯಾ – ಹೀಗೆ ಹಲವಾರು ದೇಶಗಳಿಗಾಗಿ ತಮ್ಮ ದೇಶದ ನೆಲದಿಂದ ಬಹುದೂರದ ರಣರಂಗಗಳ ಸೇನಾಪಡೆಯಲ್ಲಿದ್ದ ಭಾರತೀಯ ಸೈನಿಕರು, ಯುದ್ಧ ನಿರತರಾಗಿದ್ದರು. ಬಹುತೇಕ ಸೈನಿಕರು ಗ್ರಾಮೀಣ ಹಿನ್ನೆಲೆ ಹೊಂದಿದವರಾಗಿದ್ದು ಅವರ ಮಡದಿಯರು ಅಶಿಕ್ಷಿತರಾಗಿದ್ದರು. ಇದರಿಂದ ಈ ಸೈನಿಕರು ತಮ್ಮ ಕುಟುಂಬಗಳೊಂದಿಗೆ ಸಂಪರ್ಕಿಸಲು ಸಮಸ್ಯೆಯಾಗುತ್ತಿತ್ತು. ತಮ್ಮ ಕುಟುಂಬಗಳಿಂದ ದೀರ್ಘಕಾಲ ದೂರವಿರುತ್ತಿದ್ದ ಸೈನಿಕರ ಮನಸ್ಥಿತಿಯನ್ನು ಮತ್ತು ನೈತಿಕ ಬಲವನ್ನು ಉನ್ನತ ಮಟ್ಟದಲ್ಲಿಟ್ಟರೆ, ಅವರು ಉತ್ಸಾಹದಿಂದ ರಣರಂಗದಲ್ಲಿ ಕಾರ್ಯೋನ್ಮುಖರಾಗಲು ಸಾಧ್ಯ ಎಂಬುದನ್ನು ಮನಗಂಡ ಆಗಿನ ಬ್ರಿಟಿಷ್ ಸರ್ಕಾರವು, ಈ ಸೈನಿಕರ ಕುಟುಂಬಗಳ ಪೋಷಣೆ ಮತ್ತು ಪ್ರಗತಿಯತ್ತ ಗಮನ ಹರಿಸಿತು. ಈ ಕಾರ್ಯಕ್ಕಾಗಿ ಸೈನಿಕರ ಮಂಡಳಿಯನ್ನು (ದಿ ಇಂಡಿಯನ್ ಸೋಲ್ಜರ್ಸ್ ಬೋರ್ಡ್ (The Indian Soldiers Board) ಅನ್ನು ರಚನೆ ಮಾಡಲಾಯಿತು.

ಭಾರತೀಯ ನೌಕಾ ಪಡೆ ಮತ್ತು ವಾಯು ಪಡೆಗಳು ವಿಸ್ತೃತಗೊಂಡಾಗ ಭಾರತೀಯ ಸೈನಿಕ ಮಂಡಳಿಗೆ ನೌಕಾದಳ ಮತ್ತು ವಾಯು ದಳಗಳಲ್ಲಿದ್ದ ಸೈನಿಕರ ಕುಟುಂಬಗಳನ್ನೂ ನೋಡಿಕೊಳ್ಳುವ, ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ, ಇದರ ಹೆಸರನ್ನು 'ಇಂಡಿಯನ್ ಸೋಲ್ಜರ್ಸ್, ಸೇಲರ್ಸ್ ಅಂಡ್ ಏರ್‌ಮೆನ್ಸ್ ಬೋರ್ಡ್' (Indian Soldiers, Sailors and Airmen's Board) ಎಂಬುದಾಗಿ ಮಾರ್ಪಡಿಸಲಾಯಿತು. ನಂತರದಲ್ಲಿ ಸೈನಿಕರ ಸಂಖ್ಯೆ ಹೆಚ್ಚುತ್ತ ಹೋದಂತೆ ಈ ಮಂಡಳಿಯ ಹೊಣೆಗಾರಿಕೆ ಮತ್ತು ಕಾರ್ಯ ಒತ್ತಡಗಳೂ ಹೆಚ್ಚಿ, ಸೈನಿಕರ

ಕುಟುಂಬಗಳ ಪೋಷಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ಎಲ್ಲ ರಾಜ್ಯಗಳಲ್ಲಿ ನಂತರ ಜಿಲ್ಲೆಗಳಲ್ಲಿ ಮಂಡಳಿಗಳನ್ನು ಸ್ಥಾಪಿಸುವುದು ಅಗತ್ಯವೆಂಬುದನ್ನು ಮನಗಾಣಲಾಯಿತು.

**ಕರ್ನಾಟಕದಲ್ಲಿ**

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರಿನ ಮಹಾರಾಜರು ಮೈಸೂರು ರಾಜ್ಯದ ಸೇನೆಯ ಮತ್ತು ಈ ಸೇನೆಯಲ್ಲಿ ಸೇವೆ ಸಲ್ಲಿಸಿದ ಮಾಜಿ ಸೈನಿಕರ ಕುಟುಂಬ ಕಲ್ಯಾಣಕ್ಕಾಗಿ 'ಸೋಲ್ಜರ್ಸ್, ಸೇಲರ್ಸ್ ಅಂಡ್ ಏರ್‌ಮೆನ್ಸ್ ಬೋರ್ಡ್'(Soldiers, Sailors and Airmens Board)ನ್ನು ಆರಂಭಿಸಿದ್ದರು. ೧೯೫೬ರಲ್ಲಿ ರಾಜ್ಯದ ಏಕೀಕರಣವಾದ ಮೇಲೆ, ರಾಜ್ಯದಲ್ಲಿದ್ದ ಹತ್ತೊಂಬತ್ತು ಜಿಲ್ಲೆಗಳ ಕಾರ್ಯಭಾರವನ್ನು ಆಗ ಅಸ್ತಿತ್ವದಲ್ಲಿದ್ದ ಎಂಟು ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಗಳಿಗೆ ಮರುಹಂಚಿಕೆ ಮಾಡಲಾಯಿತು. ೧೯೬೩ರಲ್ಲಿ ಸೈನಿಕ ಮಂಡಳಿ ವ್ಯವಸ್ಥೆಯನ್ನು ಶಾಶ್ವತ ಗೊಳಿಸಿ, ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕ ಮಂಡಳಿಗಳ ಎಂಟು ಕಛೇರಿಗಳ ನೌಕರರನ್ನು ಸರ್ಕಾರಿ ನೌಕರರೆಂಬುದಾಗಿ ಪರಿಗಣಿಸಲಾಯಿತು. ೧೯೬೭ರಲ್ಲಿ ಅಧಿಕ ಕಾರ್ಯ ಒತ್ತಡಗಳನ್ನು ಮನಗಂಡು, ಮೈಸೂರು ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿಯನ್ನು, ಇದಕ್ಕಾಗಿಯೇ ಸಂಪೂರ್ಣ ಮೀಸಲಾದ ಕಾರ್ಯದರ್ಶಿಯೊಂದಿಗೆ ಸ್ಥಾಪಿಸಿ, ಗೃಹ ಇಲಾಖೆಯ ಅಧೀನದಲ್ಲಿಡಲಾಯಿತು. ೧೯೭೬ರಲ್ಲಿ ಭಾರತ ಸರ್ಕಾರದ ಕೋರಿಕೆಯಂತೆ ಈ ಮಂಡಳಿಗಳು ಕ್ರಮವಾಗಿ ಕರ್ನಾಟಕ ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿ ಹಾಗೂ ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಗಳೆಂದು ನಾಮಕರಣಗೊಂಡವು. ೧೯೮೦ರಲ್ಲಿ ಈ ಇಡೀ ವ್ಯವಸ್ಥೆಯು ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯೆಂಬುದಾಗಿ ಹೆಸರು ಹೊಂದಿ ಅದೇ ರೀತಿ ಈ ವರೆಗೆ ಮುಂದುವರಿಯುತ್ತಿದೆ. ಕರ್ನಟಕ ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿಯ ಕಾರ್ಯದರ್ಶಿಗಳು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶಕರಾಗಿಯೂ, ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಯ ಕಾರ್ಯದರ್ಶಿಗಳು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರಾಗಿಯೂ, ನಾಮಾಂಕಿತಗೊಂಡವರಾಗಿದ್ದಾರೆ.

ರಾಜ್ಯದಲ್ಲಿ ಎಲ್ಲ ಇಪ್ಪತ್ತೇಳು ಜಿಲ್ಲೆಗಳ ಕಾರ್ಯವನ್ನು ಈ ಇಲಾಖೆಯ ಹನ್ನೊಂದು ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರ ಕಾರ್ಯಾಲಯಗಳು ನೋಡಿಕೊಳ್ಳುತ್ತಿವೆ. ಈ ಅಧಿಕಾರಿಗಳಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯಾ ಕಾರ್ಯವ್ಯಾಪ್ತಿಯ ಜಿಲ್ಲೆಗಳ ಜಿಲ್ಲಾ ಸೈನಿಕ ಮಂಡಳಿಯನ್ನು ರಚಿಸಲಾಗಿದೆ. ಈ ಮಂಡಳಿಗಳು ಕಾಲ ಕಾಲಕ್ಕೆ ಸಭೆ ಸೇರಿ, ಜಿಲ್ಲಾ ಮಟ್ಟದಲ್ಲಿ ಮಾಜಿ ಸೈನಿಕರ ಹಾಗೂ ಅವರ ಅವಲಂಬಿತರ ಕಲ್ಯಾಣ ಮತ್ತು ಪುನರ್ವಸತಿಗಾಗಿ ಸೂಕ್ತ ಸಲಹೆ ನೀಡುತ್ತವೆ.

ಭಾರತ ಸಮಿತಿಯ ಭೂ ಸೇನಾ ದಳ, ನೌಕಾ ದಳ ಮತ್ತು ವಾಯು ದಳಗಳಲ್ಲಿ ಯೋಧನಾಗಿ ಅಥವಾ ಯೋಧನಲ್ಲದೆ ಯಾವುದೇ ದರ್ಜೆಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು 'ಮಾಜಿ ಸೈನಿಕ' ಎಂದು ಪರಿಗಣಿಸಲಾಗುತ್ತದೆ. (ಡಿಫೆನ್ಸ್ ಕಾರ್ಪ್ಸ್, ಜನರಲ್ ರಿಸರ್ವ್ ಎಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ್ ಮತ್ತು ಇತರ ವ್ಯತಿರಿಕ್ತ (ಪ್ಯಾರಾ) ಮಿಲಿಟರಿ ಸೇನಾ ಪಡೆಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಇದು ಒಳಗೊಳ್ಳುವುದಿಲ್ಲ).

ಮೈಸೂರಿನ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರ ಕಾರ್ಯಾಲಯದ ವ್ಯಾಪ್ತಿಗೆ ಚಾಮರಾಜನಗರ ಜಿಲ್ಲೆಯು ಸೇರಿರುತ್ತದೆ. ಮೈಸೂರು ಜಿಲ್ಲೆಯ ಉಪ ನಿರ್ದೇಶಕರೇ ಈ ಜಿಲ್ಲೆಯ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರಿಗಳಾಗಿರುತ್ತಾರೆ. ಸೈನಿಕರ ಅವಲಂಬಿತರು, ಮಾಜಿ ಸೈನಿಕರು ಮತ್ತು ಮಾಜಿ ಸೈನಿಕರ ಅವಲಂಬಿತರಿಗೆ ಸಂಬಂಧಿಸಿದಂತಹ ಎಲ್ಲ ರೀತಿಯ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಈ ಕಛೇರಿಯು ನಿರ್ವಹಿಸುತ್ತದೆ. ಜಿಲ್ಲಾ ಮಟ್ಟದಲ್ಲಿನ ಈ ಉಪ ನಿರ್ದೇಶಕರೇ, ಜಿಲ್ಲಾ ಸೈನಿಕ ಮಂಡಳಿಯ ಕಾರ್ಯದರ್ಶಿಯೂ ಆಗಿದ್ದು, ಜಿಲ್ಲಾ ಸೈನಿಕ ಮಂಡಳಿಯ ಸಭೆಗಳನ್ನು ಕರೆದು ಸೇರಿಸುವ ಕಾರ್ಯನಿರ್ವಹಿಸುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಮಾಜಿ ಸೈನಿಕರಿದ್ದು, ಅವರ ಅವಲಂಬಿತರು ಸುಮಾರು ಮೂರು ಲಕ್ಷ ಇರುತ್ತಾರೆಂದು ಈ ಇಲಾಖೆಯ ೨೦೦೪–೦೫ನೇ ಸಾಲಿನ ವರದಿ ತಿಳಿಸುತ್ತದೆ. ಅವರ ಕಲ್ಯಾಣ ಮತ್ತು ಪುರ್ನವಸತಿಗಾಗಿ ಕರ್ನಾಟಕ ಸರ್ಕಾರವು ಈ ಮುಂದಿನ ಹಲವಾರು ಸವಲತ್ತುಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಉದ್ಯೋಗದಲ್ಲಿ ಮೀಸಲಾತಿ ಮತ್ತು ಸ್ವ–ಉದ್ಯೋಗ, ವೇತನ ನಿಗದಿ, ತಾಂತ್ರಿಕ ಶಿಕ್ಷಣದಲ್ಲಿ ಸೀಟುಗಳ ಕಾಯ್ದಿರಿಸುವಿಕೆ, ಅವಲಂಬಿತರ ಮಕ್ಕಳಿಗೆ ಪುಸ್ತಕ ನೆರವು, ಸ್ಥಳ ನೆರವು, ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗೆ ವಿಧವಾ ವೇತನ; ಜಿಲ್ಲಾ ಯೋಧರಿಗೆ ವಾರ್ಷಿಕ ಪರಿಹಾರ ಧನ ಮಂಜೂರಾತಿ; ಅಪಾಯಕಾರಿ ಸನ್ನಿವೇಷಗಳಲ್ಲಿ ಶೌರ್ಯದಿಂದ ಹೋರಾಡಿ ಗ್ಯಾಲಂಟರಿ/ ಗ್ಯಾಲಂಟರಿಯಲ್ಲದ ಪ್ರಶಸ್ತಿಗಳನ್ನು ಪಡೆದ ಯೋಧರಿಗೆ ನಗದು ಹಣ ಮತ್ತು ವರ್ಷಾಸನ ನೀಡಿಕೆ; ವೈದ್ಯಕೀಯ ವೆಚ್ಚ ಮರುಪಾವತಿ, ಮುಂತಾದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದಲ್ಲದೆ, ಮಾಜಿ ಸೈನಿಕರಿಗೆ, ಯೋಧರ ವಿಧವೆಯರಿಗೆ ಮತ್ತು ಅವರ ಅವಲಂಬಿತರಿಗೆ ನೌಕರಿ ಕೊಡಿಸಿಕೊಡುವುದು; ಮಾಜಿ ಮತ್ತು ಸೇವೆಯಲ್ಲಿರುವ ಸೈನಿಕರಿಗೆ ನಿವೇಶನ/ಮನೆ/ಅಂಗಡಿಗಳನ್ನು ಅಲಾಟ್ ಮಾಡುವುದು; ಆಸ್ತಿ ಮತ್ತು ಜೀವಗಳ ರಕ್ಷಣೆ; ಆಸ್ಪತ್ರೆಗಳಲ್ಲಿ ವೈದ್ಯಕೀಯ ಅನುಕೂಲತೆ; ವಿದ್ಯಾರ್ಥಿ ವೇತನ ಮಂಜೂರಾತಿ: ಯೋಧರ ವಿಧವೆಯರಿಗೆ ಮತ್ತು ಸೇವೆಯಲ್ಲಿ ಮಡಿದವರ ವಿಧವೆಯರಿಗೆ ವಿವಾಹಾನುದಾನ ಮುಂತಾದ ಕಾರ್ಯಗಳನ್ನೂ ನಿರ್ವಹಿಸುವುದು ಈ ಕಛೇರಿಯ ಜವಾಬ್ದಾರಿಯಾಗಿರುತ್ತದೆ. ಬಾವುಟಗಳ ಮಾರಾಟ, ಜಾಹಿರಾತುಗಳು, ಕಲ್ಯಾಣ ನಿಧಿ, ಸಶಸ್ತ್ರ ಪಡೆಗಳ ಧ್ವಜ ದಿನದ ನಿಧಿ, ಮಾಜಿ ಸೈನಿಕರ ಪಿಂಚಣಿ ಅಹವಾಲುಗಳನ್ನು ಸಂಬಂಧಿತ ಅಧಿಕಾರಿಗಳ ಮುಂದಿಟ್ಟು ಇತ್ಯರ್ಥಗೊಳಿಸುವಿಕೆ – ಇವೇ ಮುಂತಾದುವು ಈ ಇಲಾಖೆಯು ನಿರ್ವಹಿಸುವ ಇನ್ನಿತರ ವಿಭಿನ್ನ ಕಾರ್ಯಕ್ರಮಗಳಾಗಿವೆ.

## ಪ್ರಶಸ್ತಿ ವಿಜೇತರಿಗೆ ವರ್ಷಾಶನ ನೀಡಿಕೆ

ದೇಶದ ರಕ್ಷಣೆಗಾಗಿ ನಿಷ್ಠೆಯಿಂದ ದುಡಿಯುವ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಮತ್ತು ಅಗತ್ಯ ಸಂದರ್ಭಗಳಲ್ಲಿ ಭಯಭೀತಿಗೊಳ್ಳದೆ ಶೌರ್ಯದಿಂದ ಕಾರ್ಯ ಸಾಧಿಸುವ, ವೀರಯೋಧರಿಗೆ ಕೇಂದ್ರ ಸರ್ಕಾರದಿಂದ, ವೀರ ಚಕ್ರ, ಕೀರ್ತಿ ಚಕ್ರ, ಯುದ್ಧ ಸೇವಾ ಮೆಡಲ್, ಪರಮ ವಿಶಿಷ್ಟ ಸೇವಾ ಮೆಡಲ್, ಮುಂತಾದ ಶೌರ್ಯ ಹಾಗೂ ಶೌರ್ಯೇತರ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ಪ್ರಶಸ್ತಿ ವಿಜೇತರಿಗೆ ಅವರಿಗೆ ಸಂಬಂಧಿಸಿದ ಜಿಲ್ಲೆಗಳಲ್ಲಿ, ಒಂದು ಬಾರಿ ನಗದು ಹಣ ಮತ್ತು ವರ್ಷಾಸನಗಳನ್ನು ಕೊಡಲಾಗುತ್ತದೆ.

**ವೈದ್ಯಕೀಯ ಚಿಕಿತ್ಸೆ ಮತ್ತು ಮರುಪಾವತಿ:** ರಾಜ್ಯದ ಮಿಲಿಟರಿ ಆಸ್ಪತ್ರೆಗಳಲ್ಲಿ ಸೇನಾ ನಿವೃತ್ತರ ಪಿಂಚಣಿದಾರರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವ ಸೌಲಭ್ಯವಿದೆ. ಸೇನಾ ನಿವೃತ್ತರಿಗೆ ಮತ್ತು

ಅವರ ಕಿರಿಯ ವಯಸ್ಸಿನ ಮಕ್ಕಳಿಗೆ ಹಾಗೂ ಸೇನಾ ಪಡೆಯಲ್ಲಿರುವಾಗಲೇ ಮಡಿದಂತಹವರ ಪತ್ನಿಯರು ಮತ್ತು ಕಿರಿಯವಯಸ್ಸಿನ ಮಕ್ಕಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು, ಅನಾರೋಗ್ಯದ ಸಮಯದಲ್ಲಿ ಮಾಡಿದ ವೆಚ್ಚಗಳನ್ನು ಈ ಇಲಾಖೆಯು ನಿಯಮಗಳನ್ವಯ ಭರಿಸಿಕೊಡುತ್ತದೆ.

**ಸಶಸ್ತ್ರ ಪಡೆಗಳ ಧ್ವಜ ನಿಧಿ:** ಸ್ವಾತಂತ್ರ್ಯ ಪೂರ್ವದಲ್ಲಿ ಮಾಜಿ ಸೈನಿಕರ ಕಲ್ಯಾಣಕ್ಕಾಗಿ ನಿಧಿಯನ್ನು ಸಂಗ್ರಹಿಸಲು ಪ್ರತಿ ವರ್ಷ ಹನ್ನೊಂದನೇ ನವೆಂಬರ್‌ನಂದು 'ಸ್ಮರಣೆಯ ದಿನ' ಎಂದು ಆಚರಿಸಲಾಗುತ್ತಿತ್ತು. ೧೯೪೯ರ ಆಗಸ್ಟ್ ಇಪತ್ತೆಂಟರಂದು ರಕ್ಷಣಾಮಂತ್ರಿಗಳ ಕಮಿಟಿಯು ೧೯೪೯ರ ನಂತರ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು, ದೇಶಾದ್ಯಂತ ಏಳನೇ ಡಿಸೆಂಬರ್‌ನಂದು ಆಚರಿಸಬೇಕೆಂದು ನಿರ್ಧರಿಸಿತು. ಅದರಂತೆ, ಈ ಇಲಾಖೆಯಿಂದ ಪ್ರತಿ ವರ್ಷ ಡಿಸೆಂಬರ್ ಏಳರಂದು ಈ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಆ ದಿನ ಸಶಸ್ತ್ರ ಪಡೆಗಳ ಸಾಂಕೇತಿಕ ಮತ್ತು ವಾಹನ ಧ್ವಜಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಮತ್ತು ಸಶಸ್ತ್ರ ಪಡೆಗಳು ಮಾಡಿರುವ ಸೇವೆ ಹಾಗೂ ತ್ಯಾಗಗಳ ಕುರಿತು ವಿವಿಧ ಮಾಧ್ಯಮಗಳ ಮೂಲಕ ಜನರ ಅರಿವಿಗೆ ತರಲಾಗುತ್ತದೆ. ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ, ಸೇನೆಯ ಯೂನಿಟ್‌ಗಳಲ್ಲಿ; ನಾಟಕ, ವಿವಿಧ ವಿನೋದ ಕಾರ್ಯಕ್ರಮಗಳನ್ನೂ ಆಯೋಜಿಸಲಾಗುವುದು. ಅಂದು ಎಲ್ಲಾ ವರ್ಗದ ಜನರು, 'ಸಶಸ್ತ್ರ ಪಡೆಗಳ ಧ್ವಜ ನಿಧಿ'ಗೆ ತಮ್ಮ ದೇಣಿಗೆಯನ್ನು ನೀಡಿ, ದೇಶಕ್ಕಾಗಿ ಜೀವ ತೆತ್ತ ಹುತಾತ್ಮ ಯೋಧರಿಗೆ ತಮ್ಮ ಗೌರವಗಳನ್ನು ಮತ್ತು ದೇಶದ ಬಗೆಗಿನ ಕಾಳಜಿ ಹಾಗೂ ಭಕ್ತಿಯನ್ನು ಸೂಚಿಸಲು ಸರ್ಕಾರವು ಒದಗಿಸಿರುವ ಒಂದು ಸದವಕಾಶವಿದು. ಈ ಒಂದು ದಿನವಲ್ಲದೆ, ನಾಗರಿಕರು ವರ್ಷ ಪೂರ್ತಿ ಈ ನಿಧಿಗೆ ದೇಣಿಗೆಯನ್ನು ನೀಡಬಹುದು. ಈ ದೇಣಿಗೆ ನೀಡುವವರಿಗೆ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗುತ್ತದೆ. ಸರ್ಕಾರಿ ಕಛೇರಿಗಳು, ಶಾಲಾ, ಕಾಲೇಜುಗಳಿಗೆ ಮತ್ತಿತರರಿಗೆ ಬಾವುಟಗಳನ್ನು ಮಾರಿ ಹಣ ಸಂಗ್ರಹಿಸಲಾಗುತ್ತದೆ. ಈ ಮೂಲಕ ಸಂಗ್ರಹಿಸಿದ ನಿಧಿಯ ಹಣವನ್ನು ಮಾಜಿ ಸೈನಿಕರಿಗೆ, ಅವರ ಅವಲಂಬಿತರಿಗೆ, ಗಾಯಗೊಂಡವರಿಗೆ, ಅವರುಗಳ ವೈದ್ಯಕೀಯ ಮರುಪಾವತಿಗೆ ಮತ್ತಿತರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೬೭ ಅನ್ನು ನೋಡಿ.

**ಕೋಷ್ಟಕ ೧೬.೬೭: ಜಿಲ್ಲೆಯಲ್ಲಿ ಬಾವುಟಗಳ ಮಾರಾಟ, ಜಾಹಿರಾತುಗಳು ಇತ್ಯಾದಿಗಳ ಮೂಲಕ ನಿಧಿ ಸಂಗ್ರಹಣೆಯಾದ ವಿವರಗಳು**

| ವರ್ಷ | ಕಾರ್ಯಕ್ರಮಗಳ ಹೆಸರು | ಸಂಗ್ರಹಿಸಲಾದ ಹಣ | ಮೊತ್ತವನ್ನು ಬಳಸಿದ ವಿಧಾನ |
|---|---|---|---|
| ೨೦೦೭–೦೮ | ಸಶಸ್ತ್ರ ಪಡೆಗಳ ಧ್ವಜ ನಿಧಿ ದಿನಾಚರಣೆ | ೧,೦೯,೩೨೫ | ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಕಲ್ಯಾಣಕ್ಕಾಗಿ ನಿರ್ದೇಶಕರ ಅನುಮತಿ ಮೇರೆಗೆ ಬಳಸಲಾಗುತ್ತದೆ. |
| ೨೦೦೮–೦೯ | | ೧,೬೫,೮೧೦ | |
| ೨೦೦೯–೧೦ | | ೧,೭೬,೦೯೦ | |
| ೨೦೧೦–೧೧ | | ೩೦,೧೯೦ ಜೂನ್ ೨೦೧೨ರ ತಿಂಗಳಿನವರೆಗೆ | |

*(ಆಧಾರ: ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮೈಸೂರು)*

**ವಿದ್ಯಾರ್ಥಿವೇತನ:** ಸೇನೆಯಲ್ಲಿ ದುಡಿಯುವವರು ಮತ್ತು ಸೇನಾ ನಿವೃತ್ತರ ಮಕ್ಕಳಿಗೆ ಹಾಗೂ ಅವರ ಅವಲಂಬಿಗಳಿಗೆ ಪೂರ್ಣ ಶೈಕ್ಷಣಿಕ ರಿಯಾಯಿತಿಯನ್ನು ಕೊಡಲಾಗುತ್ತದೆ. ಈ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು, ಅವರಿಗೆ ನಿಗದಿತ ನಿಯಮಗಳನ್ನನುಸರಿಸಿ, ವಿದ್ಯಾರ್ಥಿವೇತನ ಮತ್ತು ಪುಸ್ತಕಗಳ ನೆರವನ್ನು ನೀಡಲಾಗುತ್ತದೆ. ಹೆಚ್ಚಿನ ವಿವರಗಳನ್ನು ಕೋಷ್ಟಕ ೧೬.೬೮ರಲ್ಲಿ ನೀಡಿದೆ.

**ಕೋಷ್ಟಕ ೧೬.೬೮: ಇಲಾಖೆಯಿಂದ ಈ ಜಿಲ್ಲೆಯ ಮಾಜಿ ಸೈನಿಕರ ಮಕ್ಕಳಿಗೆ ಮಂಜೂರು ಮಾಡಲಾದ ವಿದ್ಯಾರ್ಥಿವೇತನದ ವಿವರಗಳು.**

| ವರ್ಷ | ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆ | | | ವಿದ್ಯಾರ್ಥಿ ವೇತನದ ಒಟ್ಟುಮೊತ್ತ | | |
|---|---|---|---|---|---|---|
| | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ೨೦೦೫-೦೬ | ೧೩ | ೮ | ೨೧ | ೩೪೫೨ | ೨೯೦೩ | ೬೩೫೫ |
| ೨೦೦೬-೦೭ | ೧೦ | ೧೧ | ೨೧ | ೨೮೦೧ | ೩೯೫೪ | ೬೭೬೫ |
| ೨೦೦೭-೦೮ | ೧೧ | ೧೨ | ೨೩ | ೨೪೦೩ | ೩೪೦೯ | ೫೮೧೨ |
| ೨೦೦೮-೦೯ | ೧೧ | ೮ | ೧೯ | ೪೭೫೧ | ೧೯೬೮ | ೬೭೧೯ |
| ೨೦೦೯-೧೦ | ೧೨ | ೯ | ೨೧ | ೮೨೩೭ | ೬೬೫೫ | ೧೪೮೯೨ |
| ೨೦೧೦-೧೧ | ೯ | ೭ | ೧೬ | ೮೫೬೮ | ೨೦೫೫ | ೧೦೬೨೩ |
| ೨೦೧೦-೧೨ | ೧೭ | ೧೧ | ೨೮ | ೧೬೭೨೯ | ೩೩೪೯ | ೨೦೦೭೮ |

*(ಆಧಾರ: ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆ, ಮೈಸೂರು)*

ಮಾಜಿ ಸೈನಿಕರ ಮಕ್ಕಳಿಗಾಗಿ ಚಾಮರಾಜನಗರ ಜಿಲ್ಲೆಯಲ್ಲಿ ಯಾವುದೇ ಮಿಲಿಟರಿ ಶಾಲೆಗಳಿರುವುದಿಲ್ಲ. ಮಾಜಿ ಸೈನಿಕರು ಇತರೇ ಜಿಲ್ಲೆಗಳಿಗೆ ಯಾವುದೇ ಕೆಲಸಗಳಿಗೆ ಹೋದಾಗ, ಅವರಿಗೆ ಒಳ್ಳೆಯ ಹಾಗೂ ಎಲ್ಲ ಸೌಕರ್ಯಗಳಿರುವ ತಾತ್ಕಾಲಿಕ ವಸತಿಗೃಹಗಳಾಗಿ ಈ ಇಲಾಖೆಯಿಂದ ಕೆಲವು ಆರಾಮಗೃಹಗಳನ್ನು ನಡೆಸಲಾಗುತ್ತದೆ. ಆದರೆ ಈ ಜಿಲ್ಲೆಯಲ್ಲಿ ಯಾವುದೇ ಆರಾಮಗೃಹವು ಇರುವುದಿಲ್ಲ.

**ಯುದ್ಧ ಪ್ರಶಸ್ತಿಗಳು:** ಸೇನೆಯಲ್ಲಿ ಸೇವೆ ಸಲ್ಲಿಸಲು ಸೇರಿಸುವ ತಂದೆ ತಾಯಿಯರಿಗೆ, ಅವರ ಒಪ್ಪಿಗೆ, ಧೈರ್ಯ ಮತ್ತು ತ್ಯಾಗಗಳನ್ನು ಗುರುತಿಸಿ, ಯುದ್ಧ ಪ್ರಶಸ್ತಿ ಎಂಬ ಹೆಸರಿನಲ್ಲಿ ನಿಗದಿತ ಮೊತ್ತವನ್ನು ವರ್ಷಾಶನವಾಗಿ ನೀಡುವ ಒಂದು ಯೋಜನೆ ಇದು. ಕುಟುಂಬದಲ್ಲಿ ಮೂರು ಮಕ್ಕಳು ರಕ್ಷಣಾ ಪಡೆಯಲ್ಲಿದ್ದರೆ ₹ ೮೫೦ಗಳನ್ನು; ಇಬ್ಬರು ಮಕ್ಕಳಿದ್ದರೆ ₹ ೬೫೦ಗಳನ್ನು ಮತ್ತು ಒಬ್ಬ ಮಗ ಮಾತ್ರ ಇದ್ದರೆ ₹ ೪೫೦ಗಳನ್ನು ಈ ಸೈನಿಕರ ಕುಟುಂಬ ಪಾಲಕರಿಗೆ ವಾರ್ಷಿಕವಾಗಿ ನೀಡಲಾಗುತ್ತದೆ. ಈ ಜಿಲ್ಲೆಯಲ್ಲಿ ಕೊಳ್ಳೇಗಾಲ ತಾಲೂಕಿನ ಒಂದು ಕುಟುಂಬಕ್ಕೆ ಈ ಯುದ್ಧ ಪ್ರಶಸ್ತಿಯು ಮಂಜೂರಾಗಿದೆ. ಈ ಮೊತ್ತವಾಗಿ ₹ ೭೫೦ಗಳನ್ನು ವಾರ್ಷಿಕ ನೀಡಲಾಗುತ್ತಿದ್ದು, ೨೦೦೫-೦೬ನೇ ಸಾಲಿನಿಂದ ೨೦೦೭-೦೮ನೇ ಸಾಲಿನ ವರೆಗೆ ₹ ೨೨೫೦ಗಳನ್ನು ಇದಕ್ಕಾಗಿ ಖರ್ಚು ಮಾಡಲಾಗಿದೆ.

## ಮಾಜಿ ಸೈನಿಕರ ಮರು ನೇಮಕಾತಿಗೆ ನೆರವು

ಅ) ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಎಲ್ಲ ಹುದ್ದೆಗಳನ್ನೂ, ಮಾಜಿ ಸೈನಿಕರು ಮತ್ತು ಸೇವಾ ನಿವೃತ್ತರು, ಇವರುಗಳಿಂದಲೇ ತುಂಬಲಾಗುತ್ತದೆ. ಆದರೆ ಈ ಒಂದು ಇಲಾಖೆಯಲ್ಲಿಯೇ ಎಲ್ಲರನ್ನೂ ನೇಮಿಸಿಕೊಳ್ಳುವುದು ಸಾಧ್ಯವಿಲ್ಲವಾದ್ದರಿಂದ, ಖಾಸಗಿ ಮತ್ತು ಸರ್ಕಾರದ ಇತರ ಸಂಸ್ಥೆ ಹಾಗೂ ಇಲಾಖೆಗಳಲ್ಲೂ ಇವರನ್ನು ನೇಮಿಸಿಕೊಳ್ಳಲು ಹಲವು ರೀತಿಯಲ್ಲಿ ಈ ಇಲಾಖೆಯು ಸಾಧ್ಯವಾದ ಸಹಾಯವನ್ನು ಮಾಡುತ್ತದೆ. ನೌಕರಿಗೆ ಸೇರ ಬಯಸುವ ಮಾಜಿ ಸೈನಿಕರು, ಬೆಂಗಳೂರಿನಲ್ಲಿರುವ ನಿರ್ದೇಶಕರನ್ನು ಅಥವಾ ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರನ್ನು ಸಂಪರ್ಕಿಸಿ, ನೋಂದಣಿ ಮಾಡಿಸಬೇಕು.

(ಆ) ಸರ್ಕಾರದ ಎ.ಬಿ.ಸಿ ಮತ್ತು ಡಿ ದರ್ಜೆಯ ನೇಮಕಾತಿಗಳಲ್ಲಿ ಪ್ರತಿ ಹತ್ತು ಹುದ್ದೆಗೆ ಒಬ್ಬರಂತೆ, ಶೇಕಡ ಹತ್ತು ಹುದ್ದೆಗಳನ್ನು ಮಾಜಿ ಸೈನಿಕರಿಗಾಗಿ ಮೀಸಲಿರಿಸಲು ಕರ್ನಾಟಕ ಸರ್ಕಾರವು ಆದೇಶ ಮಾಡಿದ್ದು ಜಾರಿಯಲ್ಲಿದೆ. ಅದರಂತೆ ಸರ್ಕಾರದ ಯಾವುದೇ ಇಲಾಖೆಯಲ್ಲಿ ಮತ್ತು ರಾಜ್ಯಾಧೀನ ಸಾರ್ವಜನಿಕ ಉದ್ದಿಮೆ ಸಂಸ್ಥೆಗಳಲ್ಲಿ ಮಾಜಿ ಸೈನಿಕರಿಗೆ ಶೇಕಡ ಹತ್ತರಷ್ಟು ಹುದ್ದೆಗಳನ್ನು ಮೀಸಲಿಟ್ಟು ಭರ್ತಿ ಮಾಡುವುದು ಕಡ್ಡಾಯವಾಗಿ ಜಾರಿಗೊಳ್ಳುತ್ತಿರುವ ಒಂದು ನಿಯಮ.

## ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಧಾರ್ಮಿಕ ಸಂಸ್ಥೆಗಳ ಅಭ್ಯುದಯಕ್ಕೆ ಮತ್ತು ಧರ್ಮದ ಏಳಿಗೆಗೆ, ದತ್ತಿ ನಿಧಿಯ ಹಣದಿಂದ ಅಗಾಧವಾದ ನೆರವು ಸಿಗುತ್ತದೆ. ಧರ್ಮ ಹಾಗೂ ಪಾವಿತ್ರ್ಯಕ್ಕೆ ಪೂಜ್ಯವೆಂದು ಹೆಸರಾದ ಕೆಲವು ಪ್ರಾಚೀನ ಸಂಸ್ಥೆಗಳನ್ನು, ಮುಜರಾಯಿ ಸಂಸ್ಥೆಗಳೆಂದು ವಿಂಗಡಿಸಲ್ಪಟ್ಟಿದ್ದು, ಈ ಸಂಸ್ಥೆಗಳ ಕ್ರಮಬದ್ಧ ನಿರ್ವಹಣೆಗೆ, ಸಂಬಂಧಿತ ಅಧಿಕಾರಿಗಳು ಕೆಲವು ನಿಯಮ ಮತ್ತು ಕಾಯಿದೆಗಳನ್ನು ರಚಿಸಿದ್ದರು. ಆ ನಂತರದಲ್ಲಿ, ಈ ಸಂಸ್ಥೆಗಳನ್ನು ನೋಡಿಕೊಳ್ಳಲು ಪ್ರತ್ಯೇಕವಾದೊಂದು ಇಲಾಖೆಯೂ ಮತ್ತು ಧಾರ್ಮಿಕ ದತ್ತಿನಿಧಿಗಳ ನಿರ್ವಹಣೆಗೆ ಸಮಗ್ರವಾದೊಂದು ಕರಡು ವಿಧೇಯಕವೂ ರಚನೆಗೊಂಡವು.

ಕ್ರಿ.ಶ. ೧೭೯೯ರ ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲೇ ಮುಜರಾಯಿ ಇಲಾಖೆಯ ಉಗಮವಾಗಿರುವುದು ಕಂಡು ಬರುತ್ತದೆ. ಆಗಿನ ಮೈಸೂರು ಜಿಲ್ಲೆಯಲ್ಲಿ, ಕೊಳ್ಳೇಗಾಲ ತಾಲೂಕು ಒಂದನ್ನು ಹೊರತು ಪಡಿಸಿ, ಉಳಿದೆಲ್ಲ ಕಡೆಯ ಮುಜರಾಯಿ ಸಂಸ್ಥೆಗಳ ಆಡಳಿತವು ಮೈಸೂರು ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಕಾಯಿದೆ ೧೯೨೭ರ ಅಡಿ ರೂಪಿಸಲಾದ ನಿಯಮಗಳಿಗೆ ಒಳಪಟ್ಟಿತ್ತು. ಕೊಳ್ಳೇಗಾಲ ತಾಲೂಕಿನ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಆಡಳಿತವು, ೧೯೫೧ರ ಮದರಾಸಿನ ಮತೀಯ ಮತ್ತು ಧಾರ್ಮಿಕ ಉಂಬಳಿಗಳ ಅಧಿನಿಯಮದ ಪ್ರಕಾರವೂ, ಜಿಲ್ಲೆಯ ಇನ್ನಿತರ ಎಲ್ಲ ಮುಸ್ಲಿಂ ಮುಜರಾಯಿ ಸಂಸ್ಥೆಗಳ ಆಡಳಿತವು ಕೇಂದ್ರ ವಕ್ಫ್ ಕಾಯಿದೆ ೧೯೫೪ರಡಿಯ ನಿಯಮಗಳಂತೆಯೂ ಪರಿಪಾಲಿಸಲಾಗುತ್ತಿತ್ತು. ಕೊಳ್ಳೇಗಾಲ ತಾಲೂಕಿನಲ್ಲಿ ಆಗ ಪಟ್ಟಿ ಮಾಡಲ್ಪಟ್ಟ ಒಂದು ಸಂಸ್ಥೆ, ಪಟ್ಟಿ ಮಾಡದ ೬೨ ಸಂಸ್ಥೆಗಳು ಮತ್ತು ಒಂದು ಟ್ರಸ್ಟ್ ಇದ್ದವು.

೧೯೫೧ರ ಮದರಾಸಿನ ಮತೀಯ ಮತ್ತು ಧಾರ್ಮಿಕ ಉಂಬಳಿಗಳ ಅಧಿನಿಯಮವು ಅನ್ವಯವಾಗುತ್ತಿದ್ದ ಸಂಸ್ಥೆಗಳಲ್ಲಿ ₹ ೨೦,೦೦೦ ಮತ್ತು ಅದಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯವಿದ್ದ ಸಂಸ್ಥೆಗಳು ಪಟ್ಟಿಯಲ್ಲಿ ಸೇರ್ಪಡೆಗೊಂಡಿದ್ದು, ಉಳಿದವು ಪಟ್ಟಿ ಮಾಡದ ಸಂಸ್ಥೆಗಳಾಗಿ ಉಳಿದಿದ್ದವು. ಪಟ್ಟಿಯಲ್ಲಿ ಸೇರಿದ ಸಂಸ್ಥೆಗಳು ಡೆಪ್ಯೂಟಿ ಕಮಿಷನರ್‌ರವರ ಅಧೀನದಲ್ಲಿದ್ದವು. ಪಟ್ಟಿ ಮಾಡದ ಸಂಸ್ಥೆಗಳು ಸರ್ಕಾರ ರಚಿಸಿದ್ದ ಪ್ರಾದೇಶಿಕ ಸಮಿತಿಗಳ ಉಸ್ತುವಾರಿ–ವ್ಯಾಪ್ತಿಯಲ್ಲಿದ್ದು ಇದಕ್ಕೆ ಧಾರ್ಮಿಕ ಧರ್ಮಾರ್ಥಕ ದತ್ತಿಗಳ ಅಸಿಸ್ಟೆಂಟ್ ಕಮೀಷನ್‌ರವರೇ ಅಧ್ಯಕ್ಷರಾಗಿದ್ದರು. ಆದ್ದರಿಂದ, ಇವು ಸಹಾಯಕ ಕಮೀಷನರ್‌ರವರ ಅಧೀನಕ್ಕೆ ಬರುತ್ತಿದ್ದವು.

ಮೈಸೂರು ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಕಾಯಿದೆ ೧೯೨೭ರ ನಿಯಮಗಳನ್ವಯ ಕಾರ್ಯ ನಿರ್ವಹಿಸುತ್ತಿದ್ದ ಹಳೆಯ ಮೈಸೂರು ಪ್ರದೇಶದ ಮುಜರಾಯಿ ಸಂಸ್ಥೆಗಳನ್ನು ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಮೂರು ಗುಂಪುಗಳಾಗಿ ವಿಭಾಗಿಸಲಾಗಿತ್ತು. ವಾರ್ಷಿಕ ₹ ಒಂದು ಸಾವಿರಕ್ಕಿಂತ ಹೆಚ್ಚಿನ ಆದಾಯವಿರುವ ಹಾಗೂ ಆಯಾ ಕಾಲದಲ್ಲಿ ವಿಶೇಷ ಸಂಸ್ಥೆಗಳೆಂದು ಸೂಚಿಸಲಾದವನ್ನು, ಹಿರಿಯ ಸಂಸ್ಥೆಗಳೆಂದೂ; ₹ ಒಂದು

ನೂರರಿಂದ ₹ ಒಂದು ಸಾವಿರದ ವರೆಗಿನ ವಾರ್ಷಿಕ ಆದಾಯವಿರುವ ಸಂಸ್ಥೆಗಳಿಗೆ ಕಿರಿಯ ಸಂಸ್ಥೆಗಳೆಂದೂ; ಹಾಗೂ ವಾರ್ಷಿಕ ₹ ಒಂದು ನೂರಕ್ಕಿಂತ ಕಡಿಮೆ ಆದಾಯವಿರುವಂತಹವು ಗ್ರಾಮೀಣ ಸಂಸ್ಥೆಗಳೆಂದೂ ವಿಂಗಡಣೆಗೊಂಡಿದ್ದವು.

ಜಿಲ್ಲೆಯಲ್ಲಿ ಜಾರಿಯಲ್ಲಿದ್ದ, ೧೯೫೧ರ ಮದ್ರಾಸು ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮವು ನಿರಸನಗೊಂಡು, ಈಗ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಅಧಿನಿಯಮ ೧೯೯೭ ಎಂಬ ಏಕ ರೂಪ ಕಾಯಿದೆ ಮತ್ತು ೨೦೦೨ರ ನಿಯಮಗಳು ಪಾಲನೆಯಲ್ಲಿವೆ.

ಈಗಿರುವ ವ್ಯವಸ್ಥೆಯ ಪ್ರಕಾರ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ, ಇಲಾಖೆಯ ಆಯುಕ್ತರು ಮುಖ್ಯಸ್ಥರಾಗಿರುತ್ತಾರೆ. ಇವರು ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಇಲಾಖೆಗೆ ಸೇರಿದ ಅಧಿಸೂಚಿತ ಸಂಸ್ಥೆಗಳು, ಧರ್ಮಾದಾಯ ದತ್ತಿಗಳು, ಛತ್ರಗಳು ಇವುಗಳ ಆಡಳಿತ ವ್ಯವಸ್ಥೆಯ ನಿಯಂತ್ರಣ, ಉಸ್ತುವಾರಿ ಮತ್ತು ಇವುಗಳ ಬಗ್ಗೆ ಸರ್ಕಾರದ ನೀತಿ, ನಿಯಮ ಹಾಗೂ ಆದೇಶಗಳನ್ನು ಸರ್ಕಾರದ ಪರವಾಗಿ ಕಾರ್ಯಗತಗೊಳಿಸಲು ಹೊಣೆಗಾರರಾಗಿರುತ್ತಾರೆ. ಇಲಾಖೆಯ ಇತರ ವಿವಿಧ ಪ್ರಾಧಿಕಾರಿಗಳು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ ೧೯೯೭ ಮತ್ತು ಅದರಡಿ ರೂಪಿತವಾಗಿರುವ ನಿಯಮ ೨೦೦೨ರಲ್ಲಿ ನೀಡಲಾದ ಅಧಿಕಾರದನ್ವಯ ರಾಜ್ಯಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅಧಿಕಾರ ಹೊಂದಿರುತ್ತಾರೆ.

ಪ್ರಸ್ತುತ ಜಾರಿಗೆ ಬಂದಿರುವ ನೂತನ ಕಾಯಿದೆಯು ಒಂದು ಮಠಕ್ಕೆ ಅಥವಾ ಅದಕ್ಕೆ ಸೇರಿದ ಒಂದು ದೇವಸ್ಥಾನಕ್ಕೆ ಇಲ್ಲವೇ ಹಿಂದೂ ಧಾರ್ಮಿಕ ಪಂಗಡವೊಂದು ಸ್ಥಾಪಿಸಿರುವ, ವ್ಯವಸ್ಥೆಗೊಳಿಸಿರುವ ಅಥವಾ ನಿರ್ವಹಿಸುತ್ತಿರುವ ಯಾವುದೇ ಧಾರ್ಮಿಕ ಸಂಸ್ಥೆಗಳು ಅಥವಾ ಧರ್ಮಾದಾಯ ದತ್ತಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಒಂದೇ ವರ್ಗದ ಜನರಿಗೆ ಸಂಬಂಧಿಸಿದ್ದು, ಇಲಾಖಾ ವ್ಯಾಪ್ತಿಗೆ ಒಳ ಪಟ್ಟಂತೆ ಜಿಲ್ಲೆಯಲ್ಲಿ ಇದ್ದ ಧರ್ಮ ಛತ್ರಗಳನ್ನು ಮತ್ತು ಮಠಗಳನ್ನು ೧೯೯೭ರ ಕಾಯಿದೆಯನ್ವಯ ಇಲಾಖೆಯ ಆಡಳಿತ ವ್ಯಾಪ್ತಿಯಿಂದ ಹೊರತಾಗಿಸಲಾಗಿದೆ.

೧೯೯೭ರ ಕಾಯಿದೆಯ ವಿಧಿ ೨೩ರ ಅಡಿಯಲ್ಲಿ ಪ್ರಸ್ತುತ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಮುಜರಾಯಿ ಸಂಸ್ಥೆಗಳನ್ನು ಅಧಿಸೂಚಿತ ಸಂಸ್ಥೆಗಳನ್ನಾಗಿ ಘೋಷಿಸಿ, ಸರ್ಕಾರವು ಪ್ರಕಟಣೆ ನೀಡಿರುತ್ತದೆ. ನೂತನ ಕಾಯಿದೆಯನ್ವಯ ದಿ.೧.೫.೨೦೦೩ರಿಂದ ವಾರ್ಷಿಕ ಆದಾಯದ ಆಧಾರದ ಮೇಲೆ, ಪ್ರವರ್ಗ ಎ, ಬಿ, ಮತ್ತು ಸಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅದರಂತೆ ವಾರ್ಷಿಕ ₹ ಹತ್ತು ಲಕ್ಷಕ್ಕಿಂತ ಹೆಚ್ಚಿನ ಆದಾಯವಿರುವ ಸಂಸ್ಥೆಗಳು ಪ್ರವರ್ಗ 'ಎ'ನಲ್ಲೂ; ವಾರ್ಷಿಕ ₹ ಒಂದು ಲಕ್ಷಕ್ಕಿಂತ ಹೆಚ್ಚು ಆದರೆ ₹ ಹತ್ತು ಲಕ್ಷಗಳಿಗಿಂತ ಕಡಿಮೆ ಆದಾಯವಿರುವ ಸಂಸ್ಥೆಗಳು ಪ್ರವರ್ಗ 'ಬಿ' ನಲ್ಲೂ; ವಾರ್ಷಿಕ ₹ ಒಂದು ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಸಂಸ್ಥೆಗಳು ಪ್ರವರ್ಗ 'ಸಿ' ನಲ್ಲೂ ಬರುತ್ತವೆ. ಚಾಮರಾಜನಗರ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆ ಸೇರಿದ ಒಟ್ಟು ೨೭೯ ದೇವಸ್ಥಾನಗಳು ಇರುತ್ತವೆ. ಅವುಗಳಲ್ಲಿ ಎರಡು ದೇವಸ್ಥಾನಗಳು ಪ್ರವರ್ಗ 'ಎ'ನಲ್ಲೂ; ಮೂರು ದೇವಸ್ಥಾನಗಳು ಪ್ರವರ್ಗ 'ಬಿ'ನಲ್ಲೂ; ೨೭೪ ದೇವಸ್ಥಾನಗಳು ಪ್ರವರ್ಗ 'ಸಿ'ನಲ್ಲೂ ಬರುತ್ತವೆ.

ಜಿಲ್ಲೆಯ ದೇವಸ್ಥಾನಗಳಲ್ಲಿ ಆಡಳಿತಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುವ ವಿವಿಧ ಹುದ್ದೆಗಳ ಅಧಿಕಾರಿಗಳಲ್ಲದೆ, ಆಗಮಿಕರು, ಅರ್ಚಕರು, ಸ್ಥಾನಿಕರು, ಪರಿಚಾರಕರು, ಋಗ್ವೇದ, ಯಜುರ್ವೇದ, ಅಡಿಗೆ ಅಗ್ರೋದಕ, ಗೊಲ್ಲ, ಮಸಾಲ್ತಿ, ಬಂಡೀಗಾರ, ಊವಾಡಿ, ಜಾಗಟೆ, ಕೈ ತಾಳ, ಮುಂತಾದ ಹುದ್ದೆಗಳಿದ್ದು, ಇವರುಗಳಿಗೆ, ದೇವಾಲಯದ ಆದಾಯದಲ್ಲಿ ಶೇಕಡ ೩೫ಕ್ಕೆ ಮೀರದಂತೆ, ಅರ್ಚಕರಿಗೆ ವೇತನವನ್ನು ನೀಡಲಾಗುತ್ತದೆ. ದೇವಾಲಯದಲ್ಲಿನ ಸೇವಾ ರಶೀತಿಯಲ್ಲಿ ಬರುವ ಆದಾಯದ ಶೇಕಡ ೩೦ರಷ್ಟನ್ನು ಮಿರಾಸೆಯಾಗಿ (ವಂಶಪಾರಂಪರ್ಯವಾಗಿ ಬಂದ ಅರ್ಚಕರಿಗೆ) ನೀಡಲಾಗುತ್ತದೆ ಮತ್ತು ವರ್ಷಕ್ಕೊಂದು ಬಾರಿ ಸಮವಸ್ತ್ರವನ್ನೂ ಕೊಡಲಾಗುತ್ತದೆ. ಕೆಲವು ದೇವಸ್ಥಾನಗಳಲ್ಲಿ ಆದಾಯ ಕಡಿಮೆ ಇರುವುದರಿಂದ ವೇತನ ನೀಡದೇ ಪೂಜೆಯನ್ನು ಗ್ರಾಮಸ್ಥರಿಂದಲೇ ನಿರ್ವಹಿಸಲಾಗುತ್ತದೆ.

ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಅಧೀಕ್ಷಕರುಗಳಿಗೆ, ಸರ್ಕಾರಿ ಸೇವಾ ನಿಯಮಗಳನ್ವಯ ವೇತನ ಮತ್ತಿತರ ಸೌಲಭ್ಯಗಳನ್ನು, ದೇವಸ್ಥಾನದ ನಿಧಿಯಿಂದ ಭರಿಸಲಾಗುತ್ತದೆ.

೧೯೯೭ರ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಕಾಯಿದೆಯಲ್ಲಿ ಸಮಾಜದಲ್ಲಿ ಸಮಾನತೆ ತರುವ ಕೆಲವಾರು ಅಂಶಗಳ ಕುರಿತೂ ನಿರ್ದೇಶನಗಳಿವೆ. ಮೇಲೆ ತಿಳಿಸಿದ ಸಾಮಾನ್ಯ ಶೇಖರಣ ನಿಧಿಯಿಂದ ಖರ್ಚು ಭರಿಸಿ, ಅರ್ಚಕರಿಗೆ ತರಬೇತಿ ನೀಡುವುದಕ್ಕಾಗಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿದ್ದು ಅದರಲ್ಲಿ ಆಸಕ್ತ ಮಹಿಳೆಯರೂ ತರಬೇತಿ ಪಡೆಯಬಹುದಾಗಿದೆ.

## ವಕ್ಫ್ ಸಂಸ್ಥೆಗಳು

೧೯೫೪ರ ಕೇಂದ್ರ ವಕ್ಫ್ ಕಾನೂನನ್ನು, ೧೯೫೫ರ ಹದಿನೈದನೇ ಜನವರಿಯಿಂದ ಹಳೇ ಮೈಸೂರಿನಲ್ಲಿ ಜಾರಿಗೆ ತರಲಾಯಿತು (ಗೆಜೆಟ್ ಆಫ್ ಇಂಡಿಯಾ, ಭಾಗ–೨). ಮತ್ತು ೧೯೫೬ರಿಂದ ಕರ್ನಾಟಕ ರಾಜ್ಯಾದ್ಯಂತ ಬಳಸಲಾಯಿತು. ೧೯೫೯, ೧೯೬೪ ಮತ್ತು ೧೯೬೮ ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ೧೯೫೪ರ ಕೇಂದ್ರ ವಕ್ಫ್ ಕಾನೂನಿಗಿಂತ ಮೊದಲು ಮೈಸೂರು ಪ್ರದೇಶದ ಮುಸಲ್ಮಾನರ ಮುಜರಾಯಿ ಸಂಸ್ಥೆಗಳ ಆಡಳಿತವು ದತ್ತಿ ಇಲಾಖೆಯ ಕೈ ಕೆಳಗಿತ್ತು. ಹಾಗೂ ಮುಸಲ್ಮಾನ ಮುಜರಾಯಿ ಸಂಸ್ಥೆಗಳೆಲ್ಲ ೧೯೨೭ರ ಮೈಸೂರು ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳ ಅಧಿನಿಯಮಗಳಿಗೆ ಒಳಪಟ್ಟಿತ್ತು. ೧೯೬೧ ರಲ್ಲಿ ಹನ್ನೊಂದು ಸದಸ್ಯರಿರುವ ವಕ್ಫ್ ಮಂಡಲಿಯನ್ನು ರಚಿಸಲಾಯಿತು. ನಂತರದ ವರ್ಷಗಳಲ್ಲಿ ಹೈದರಾಬಾದ್ ಪ್ರದೇಶದಲ್ಲಿದ್ದ ಎಲ್ಲಾ ಪ್ರಾದೇಶಿಕ ಸಮಿತಿಗಳನ್ನು ರದ್ದು ಮಾಡಲಾಯಿತು. ಮುಂಬೈ ಸಾರ್ವಜನಿಕ ಟ್ರಸ್ಟ್ ಅಧಿನಿಯಮದ ಪ್ರಕಾರ ನೋಂದಣಿಯಾಗಿದ್ದ ಎಲ್ಲಾ ಆಸ್ತಿಗಳೂ ತಾವಾಗಿಯೇ ವಕ್ಫ್ ಮಂಡಲಿಗೆ ವರ್ಗಾಯಿಸಲ್ಪಟ್ಟವು. ಧಾರ್ಮಿಕ ಮತ್ತು ಧರ್ಮಾರ್ಥಕ ದತ್ತಿ ಇಲಾಖೆಯ ವಶದಲ್ಲಿದ್ದ ಚಾಮರಾಜನಗರ ಜಿಲ್ಲೆಯ ಎಲ್ಲ ಮುಸ್ಲಿಂ ಮುಜರಾಯಿ ಸಂಸ್ಥೆಗಳನ್ನೂ ಸರ್ಕಾರದ ಆದೇಶ ಸಂಖ್ಯೆ ಆರ್ ಡಿ. ೨೬.ಸಿಡಬ್ಲೂಎಫ್.೬೭, ದಿ.೬.೪.೧೯೭೩ರನ್ವಯ ವಕ್ಫ್ ಮಂಡಲಿಗೆ ವರ್ಗಾಯಿಸಲಾಯಿತು.

ಈ ಜಿಲ್ಲೆಯ ವಕ್ಫ್ ಮಂಡಳಿಯನ್ನು ೧೯೫೪ನೇ ಮತ್ತು ೧೯೫೫ರ ವಕ್ಫ್ ಕಾಯಿದೆಯನ್ವಯ ರಚಿಸಲಾಗಿದೆ. ಈ ವಕ್ಫ್ ಮಂಡಳಿಗೆ ೧೯೯೫ನೇ ವಕ್ಫ್ ಕಾಯಿದೆ ಮತ್ತು ೧೯೬೪ನೇ ವಕ್ಫ್ ಕಾಯಿದೆಗಳು ಅನ್ವಯಿಸುತ್ತವೆ.

ಚಾಮರಾಜನಗರ ಜಿಲ್ಲೆಯನ್ನು ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಳಿಸಿದಾಗಿನಿಂದ, ಅಂದರೆ ೧೯೯೮ರಿಂದ ಈ ಜಿಲ್ಲೆಯ ವಕ್ಫ್ ಆಸ್ತಿಯ ಉಸ್ತುವಾರಿಗೆ, ಪ್ರತ್ಯೇಕ ಕಛೇರಿಯನ್ನು ಚಾಮರಾಜನಗರದಲ್ಲಿ ಸ್ಥಾಪಿಸಲಾಗಿದೆ. ಆರಂಭದಲ್ಲಿ ಜಿಲ್ಲಾ ಆಯುಕ್ತರ ಕಛೇರಿಯ ಕಟ್ಟಡದಲ್ಲಿಯೇ ಕೆಲಸ ನಡೆಯುತ್ತಿದ್ದು, ಆ ನಂತರದಲ್ಲಿ ಪ್ರತ್ಯೇಕ ಕಛೇರಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ. ಈಗ ಚಾಮರಾಜನಗರ ಜಿಲ್ಲೆಯ ವಕ್ಫ್ ಆಸ್ತಿಯ ಆಡಳಿತ ನಿರ್ವಹಣೆಗೆ, ೨೦೦೮ರ ಮಾರ್ಚ್‌ನಲ್ಲಿ ಕರ್ನಾಟಕ ಸರ್ಕಾರದಿಂದ ಮೂರು ವರ್ಷಗಳ ಅವಧಿಗಾಗಿ ರಚಿತವಾದ ಜಿಲ್ಲಾ ವಕ್ಫ್ ಸಮಿತಿಯು ಇರುತ್ತದೆ. ಈ ಸಮಿತಿಯಲ್ಲಿ ಒಬ್ಬರು ಅಧ್ಯಕ್ಷರು, ಇಬ್ಬರು ಉಪಾಧ್ಯಕ್ಷರು ಇರುತ್ತಾರೆ. ಕೊಳ್ಳೇಗಾಲ ತಾಲೂಕಿನ ರಾಗಿ ಆಲಿ ಶಾಹ್, ಮಹಲೆಗಾನ ಕಟ್ಟೆ ಗೋರಿಯಲ್ಲಿ ಪ್ರತಿ ವರ್ಷ ಉರುಸ್ ನಡೆಯುತ್ತದೆ. ಶಿವನ ಸಮುದ್ರದ ಮೆರ್ಧಿಯನ್–ಇ–ಘೈಬ್ ಎಂಬ ದರ್ಗಾದಲ್ಲಿ ಎಲ್ಲ ಸಮುದಾಯದ ಜನರೂ ತಮ್ಮ ಆಶಯಗಳ ಈಡೇರಿಕೆಗಾಗಿ, ಪ್ರಾರ್ಥನೆಗಳನ್ನು ಸಲ್ಲಿಸುವ ಪರಿಪಾಠವಿದೆ. ಇದು ಈ ಜಿಲ್ಲೆಯ ಒಂದು ಪ್ರಮುಖ ದರ್ಗಾ ಆಗಿರುತ್ತದೆ. ಪ್ರಸ್ತುತ, ಚಾಮರಾಜನಗರ ಜಿಲ್ಲೆಯಲ್ಲಿರುವ ವಕ್ಫ್ ಸಂಸ್ಥೆಗಳ ಸಂಖ್ಯಾ ವಿವರವನ್ನು ಕೋಷ್ಟಕ ೧೬.೭೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೭೯: ಜಿಲ್ಲೆಯಲ್ಲಿರುವ ವಕ್ಫ್ ಸಂಸ್ಥೆಗಳ ಸಂಖ್ಯಾ ವಿವರಗಳು**

| ಕ್ರಮ ಸಂಖ್ಯೆ | ಧಾರ್ಮಿಕ ಸಂಸ್ಥೆಗಳು | ಗೆಸೆಟೆಡ್ ಪ್ರಕಟಣೆ | ಹೊಸ ನೋಂದಾವಣೆ |
|---|---|---|---|
| ೧ | ಮಸೀದಿಗಳು | ೪೬ | ೧೪ |
| ೨ | ದರ್ಗಾ ಮತ್ತು ಮಕಾನ್‌ಗಳು | ೦೫ | – |
| ೩ | ಈದ್ಗಾ | ೨೫ | – |
| ೪ | ಖಬರಸ್ಥಾನ | ೩೫ | ೦೩ |
| ೫ | ಆಶೂರ್ಖಾನ | ೦೯ | ೦೩ |
| ೬ | ಅರೇಬಿ ಮದರಸಾ ಇತ್ಯಾದಿ | – | – |

*(ಆಧಾರ: ವಕ್ಫ್ ಅಧಿಕಾರಿ, ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಕಛೇರಿ, ಚಾಮರಾಜನಗರ)*

**ಕೋಷ್ಟಕ ೧೬.೭೭: ಚಾಮರಾಜನಗರ ಜಿಲ್ಲೆಯಲ್ಲಿನ ವಕ್ಫ್ ಸಂಸ್ಥೆಗಳಿಗೆ ನೀಡಲಾದ ಅನುದಾನದ ವಿವರಗಳು**

| ವರ್ಷ | ವಕ್ಫ್ ಸಂಸ್ಥೆಗಳ ಸಂಖ್ಯೆ | ಅನುದಾನ (₹ ಲಕ್ಷಗಳಲ್ಲಿ) |
|---|---|---|
| ೨೦೦೪–೨೦೦೫ | ೨೩ | ೪.೬೦ |
| ೨೦೦೫–೨೦೦೬ | ೨೨ | ೫.೧೦ |
| ೨೦೦೬–೨೦೦೭ | ೧೫ | ೧೭.೯೦ |
| ೨೦೦೭–೨೦೦೮ | ೭ | ೪.೦೦ |
| ೨೦೦೮–೨೦೦೯ | – | – |
| ೨೦೦೯–೨೦೧೦ | ೧೭ | ೧೪.೫೦ |
| ೨೦೧೦–೨೦೧೧ | ೨೧ | ೨೪.೫೦ |

*(ಆಧಾರ: ವಕ್ಫ್ ಅಧಿಕಾರಿ, ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಕಛೇರಿ, ಚಾಮರಾಜನಗರ)*

ವಕ್ಫ್ ಸಂಸ್ಥೆಗಳ ನಿರ್ವಹಣೆಯ ಖರ್ಚನ್ನು ಭರಿಸಿದ ನಂತರ ಉಳಿಯುವ ಆದಾಯದ ಆಧಾರದ ಮೇಲೆ ವಕ್ಫ್ ಸಂಸ್ಥೆಗಳಿಂದ ಶೇಕಡ ಏಳರಷ್ಟು ಮೊತ್ತವನ್ನು ವಂತಿಗೆಯಾಗಿ ವಸೂಲಿಸಲಾಗುತ್ತದೆ. ೨೦೦೪–೦೫ನೇ

ಸಾಲಿನಿಂದ ೨೦೧೦-೧೧ನೇ ಸಾಲಿವನವರೆಗಿನ ವರ್ಷಗಳಲ್ಲಿ ಸಂಗ್ರಹಿಸಲಾದ ವಂತಿಕೆಯ ವಿವರಗಳನ್ನು ಕೋಷ್ಟಕ-೧೬.೭೦ರಲ್ಲಿ ನೋಡ ಬಹುದಾಗಿದೆ.

**ಕೋಷ್ಟಕ ೧೬.೭೦: ಚಾಮರಾಜನಗರ ಜಿಲ್ಲೆಯಲ್ಲಿ ೨೦೦೪-೦೫ರಿಂದ ೨೦೧೦-೧೧ನೇ ಸಾಲುಗಳಲ್ಲಿ ಇಲಾಖೆಯ ಮೂಲಕ ವಕ್ಫ್ ಸಂಸ್ಥೆಗಳಿಂದ ಸಂಗ್ರಹಿಸಲಾದ ವಂತಿಗೆಯ ವಿವರಗಳು:**

| ವರ್ಷ | ವಂತಿಗೆ ಹಣ ₹ ಗಳಲ್ಲಿ |
|---|---|
| ೨೦೦೪-೦೫ | ೧,೩೮,೮೩೪-೦೦ |
| ೨೦೦೫-೦೬ | ೧,೨೮,೭೦೦-೦೦ |
| ೨೦೦೬-೦೭ | ೧,೮೦,೯೩೮-೦೦ |
| ೨೦೦೭-೦೮ | .೨,೨೨,೩೪-೦೦ |
| ೨೦೦೮-೦೯ | .೨,೫೪,೨೩೮-೦೦ |
| ೨೦೦೯-೧೦ | .೨,೭೦,೪೪೭-೦೦ |
| ೨೦೧೦-೧೧ | .೨,೭೬,೬೪೬-೦೦ |

*(ಆಧಾರ: ವಕ್ಫ್ ಅಧಿಕಾರಿ, ಜಿಲ್ಲಾ ವಕ್ಫ್ ಸಲಹಾ ಸಮಿತಿ, ಚಾಮರಾಜನಗರ)*

## ವಕ್ಫ್ ಅಭಿವೃದ್ಧಿ ನಿಗಮ

ಮಂಡಲಿಯು ಕರ್ನಾಟಕ ಸರ್ಕಾರದ ಅನುಮತಿಯನ್ನು ಪಡೆದು ೧೯೭೮ ರಲ್ಲಿ ವಕ್ಫ್ ಅಭಿವೃದ್ಧಿ ಕಾರ್ಪೊರೇಷನ್ (ಲಿಮಿಟೆಡ್) ಅನ್ನು ರೂಪಿಸಿತು. ಇದರ ಅಧಿಕೃತ ಪಾಲು ಬಂಡವಾಳವು ₹ ಒಂದು ಕೋಟಿಗಳ ಮತ್ತು ₹ ಐವತ್ತು ಲಕ್ಷಗಳ ಸಂದಾಯದ ಬಂಡವಾಳದಿಂದ ಆರಂಭವಾಯಿತು. ಈ ಕಾರ್ಪೊರೇಷನ್‌ನಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಒಂಬತ್ತು ಜನ ನಿರ್ದೇಶಕರು ಇರುತ್ತಾರೆ. ಕೈಗಾರಿಕೆಗಳನ್ನು ನಡೆಸಲು ವಕ್ಫ್ ಸಂಸ್ಥೆಗಳಿಗೆ ಧನ ಸಹಾಯ ನೀಡುವುದು, ಹೌಸಿಂಗ್ ಕೋ-ಆಪರೇಟಿವ್, ಬಳಕೆದಾರರ ಸಂಘ, ಕೈಗಾರಿಕಾ ಸಹಕಾರ ಸಂಘ ಮತ್ತು ರೈತರ ಸಹಕಾರ ಸಂಘಗಳ ಸ್ಥಾಪನೆಗೆ ನೆರವು ನೀಡುವುದು, ಯಾತ್ರಾರ್ಥಿಗಳಿಗೆ ಅನುಕೂಲವನ್ನು ಒದಗಿಸಲು ವಿಶ್ರಾಂತಿ ಗೃಹಗಳನ್ನು ನಿರ್ಮಾಣ ಮಾಡುವುದು ಮತ್ತು ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು, ವ್ಯವಸಾಯ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ ಮಾಡುವುದು, ಇವೇ ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು, ವಕ್ಫ್ ಅಭಿವೃದ್ಧಿ ನಿಗಮವು ರಾಜ್ಯ ಮಟ್ಟದಲ್ಲಿ ಸ್ಥಾಪನೆಗೊಂಡಿದೆ. ಆದರೆ ಜಿಲ್ಲಾ ಮಟ್ಟದಲ್ಲಿ, ಈ ಜಿಲ್ಲೆಯಲ್ಲಿ ನಿಗಮದ ಯಾವುದೇ ಕಛೇರಿಯು ಅಸ್ತಿತ್ವದಲ್ಲಿರುವುದಿಲ್ಲ

## ವೃದ್ಧಾಪ್ಯ ವೇತನ, ಅಂಗ ವಿಕಲ ವೇತನ ಮತ್ತು ವಿಧವಾ ವೇತನಗಳು

ಭಾರತ ಸಂವಿಧಾನದ ೪೧ನೇ ವಿಧಿಚ್ಛೇದದನ್ವಯ; ವೃದ್ಧರು, ಅನಾರೋಗ್ಯದಿಂದ ನರಳುತ್ತಿರುವವರು, ಅಂಗವಿಕಲರು, ನಿರುದ್ಯೋಗಿಗಳು ಹಾಗೂ ಇತರೇ ಕಾರಣಗಳಿಂದ ಬಡತನದ ಬವಣೆಯಲ್ಲಿರುವವರು- ಇವರುಗಳಿಗೆ ಆರ್ಥಿಕ ಸಾಮರ್ಥ್ಯಕ್ಕನುಸಾರವಾಗಿ ನೆರವು ನೀಡುವುದು ಮತ್ತು ಅವರ ಸಾಮಾಜಿಕ ಸ್ಥಿತಿಯನ್ನು ಸುಧಾರಣೆಗೊಳಿಸುವುದು ರಾಜ್ಯ ಸರ್ಕಾರದ ಅದ್ಯ ಕರ್ತವ್ಯವಾಗಿದೆ ಎಂಬುದನ್ನು ಸರ್ಕಾರವು ಮನಗಂಡಿರುತ್ತದೆ.

ಇಂಥವರಿಗೆ ರಕ್ಷಣೆಯನ್ನು ಮತ್ತು ಸಾಮಾಜಿಕ ನ್ಯಾಯವನ್ನು ನಿರಂತರವಾಗಿ ಒದಗಿಸುವ ದೃಷ್ಟಿಯಿಂದ ಸರ್ಕಾರವು ಪಿಂಚಣಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದಿದೆ.

ಜೀವನಕ್ಕೆ ಯಾವುದೇ ಆಧಾರವಿಲ್ಲದ, ೨೦ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳು ಇಲ್ಲದಿರುವ ಹಾಗೂ ಕರ್ನಾಟಕದಲ್ಲಿ ಮೂರು ವರ್ಷಗಳ ಕಾಲದಿಂದ ನಿರಂತರವಾಗಿ ವಾಸಿಸುತ್ತಿರುವ, ೭೦ ವರ್ಷಕ್ಕೆ ಮೇಲ್ಪಟ್ಟು ವಯಸ್ಸಾಗಿದ್ದು, ಅಥವಾ ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನ ವೃದ್ಧರಿಗೆ ವೃದ್ಧಾಪ್ಯ ವೇತನವನ್ನು ನೀಡುವ ಒಂದು ಯೋಜನೆಯನ್ನು ಕರ್ನಾಟಕ ಸರ್ಕಾರವು ಕಂದಾಯ ಇಲಾಖೆಯ ಮೂಲಕ ೧೯೬೫ರಲ್ಲಿ ಪ್ರಾರಂಭಿಸಿತು. ಅದೇ ವರ್ಷದಲ್ಲಿ ೨೭೫ ವೃದ್ಧರು ಇದರ ಸೌಲಭ್ಯವನ್ನು ಪಡೆದರು. ಇದಕ್ಕಾಗಿ ₹ ೪೧೨೫ ಗಳನ್ನು ವೆಚ್ಚ ಮಾಡಲಾಯಿತು. ಆ ನಂತರ ವಯಸ್ಸಿನ ಮಿತಿಯನ್ನು ೬೫ಕ್ಕೆ ಇಳಿಸಲಾಯಿತು. ಸಾಮಾಜಿಕ ಭ್ರದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವು ಈಗ ಈ ಯೋಜನೆಗಳನ್ನು ಕಾರ್ಯಗತಗೊಳಿಸುವ ಪ್ರಾಧಿಕಾರವಾಗಿರುತ್ತದೆ.

ರಾಜ್ಯದಲ್ಲಿ ಈ ಯೋಜನೆಗೆ ಅರ್ಹರಾದ ಎಲ್ಲ ಹಿರಿಯ ನಾಗರಿಕರಿಗೂ ನೀಡಲಾಗುತ್ತಿರುವ ವೃದ್ಧಾಪ್ಯ ವೇತನವನ್ನು, ೨೦೦೭ರ ಆಗಸ್ಟ್ ಒಂದರಿಂದ ಮಾಸಿಕ ₹ ನಾಲ್ಕು ನೂರುಗಳಿಗೆ ಹೆಚ್ಚಿಸಲಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ, ೨೦೦೫-೦೬ ರಿಂದ ೨೦೧೦-೧೧ರ ವರೆಗಿನ ವರ್ಷಗಳಲ್ಲಿ, ಈ ವೃದ್ಧಾಪ್ಯ ವೇತನವನ್ನು ಪಡೆದವರ ತಾಲೂಕುವಾರು ವಿವರಗಳನ್ನು ಕೋಷ್ಟಕ ೧೬.೭೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೭೧: ಜಿಲ್ಲೆಯಲ್ಲಿ, ೨೦೦೫-೦೬ ರಿಂದ ೨೦೦೭-೦೮ರ ವರೆಗಿನ ವರ್ಷಗಳಲ್ಲಿ, ವೃದ್ಧಾಪ್ಯ ವೇತನ ಪಡೆದವರ ತಾಲೂಕುವಾರು ವಿವರಗಳು**

| ತಾಲೂಕು | ೨೦೦೫-೦೬ | | ೨೦೦೬-೦೭ | | ೨೦೦೭-೦೮ | |
|---|---|---|---|---|---|---|
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಚಾಮರಾಜನಗರ | ೧೫೦೬೩ | ೧೮೬೦೭೬೦೦ | ೧೪೮೭೪ | ೩೧೦೨೪೦೬೦ | ೧೮೮೫೬ | ೭೯೨೫೫೭೫೦ |
| ಗುಂಡ್ಲುಪೇಟೆ | ೪೬೮೧ | ೫೯೬೩೪೧೦ | ೪೮೯೧ | ೮೪೬೪೨೪೫ | ೮೬೫೬ | ೨೯೯೪೧೧೮೦ |
| ಕೊಳ್ಳೇಗಾಲ | ೮೭೨೭ | ೧೦೭೧೧೯೨೫ | ೯೪೨೮ | ೨೧೬೪೭೧೫೫ | ೧೨೧೪೫ | ೪೮೬೭೮೮೩೦ |
| ಯಳಂದೂರು | ೩೬೧೯ | ೫೦೩೩೭೭೫ | ೩೫೭೫ | ೮೬೭೨೧೬೦ | ೩೬೧೮ | ೧೫೯೭೪೮೫೦ |
| ತಾಲೂಕು | ೨೦೦೮-೦೯ | | ೨೦೦೯-೧೦ | | ೨೦೧೦-೧೧ | |
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಚಾಮರಾಜನಗರ | ೧೮೬೭೮ | ೯೩೭೨೨೫೮೦ | ೧೭೮೯೨ | ೯೯೨೬೦೩೬೦ | ೧೭೧೧೮ | ೮೧೩೨೦೨೬೦ |
| ಗುಂಡ್ಲುಪೇಟೆ | ೮೬೪೬ | ೪೮೧೬೧೧೮೦ | ೯೯೦೪ | ೫೨೬೭೯೬೪೦ | ೯೪೨೨ | ೩೮೧೨೪೨೦೦ |
| ಕೊಳ್ಳೇಗಾಲ | ೧೪೪೪೨ | ೬೦೪೧೯೪೦೦ | ೧೫೩೬೮ | ೭೯೮೧೧೦೪೦ | ೧೫೨೭೫ | ೫೦೬೨೬೩೯೮ |
| ಯಳಂದೂರು | ೩೪೬೧ | ೧೭೯೦೨೮೮೦ | ೩೩೨೧ | ೧೫೬೮೧೨೮೦ | ಸ್ಮಾರ್ಟ್ ಕಾರ್ಡ್ | |

*(ಆಧಾರ: ಜಿಲ್ಲಾ ಖಜಾನಾಧಿಕಾರಿಗಳು, ಚಾಮರಾಜನಗರ)*

**ಅಂಗವಿಕಲ ವೇತನ:** ಅಂಗವಿಕಲರಾದರೆ, ಈ ವೃದ್ಧಾಪ್ಯ ವೇತನ ಪಡೆಯಲು ಕನಿಷ್ಠ ಅರವತ್ತೈದು ವರ್ಷವಾಗಿರಬೇಕೆಂಬ ನಿಯಮ ಮೊದಲಿಗೆ ಇತ್ತು. ಕಾಲಕ್ರಮೇಣ, ಈ ವಯೋಮಿತಿಯನ್ನು ಅಂಗವಿಕಲರಿಗೆ ೧೯೭೪ರಲ್ಲಿ ೪೫ ವರ್ಷಕ್ಕೂ, ೧೯೭೭ರಲ್ಲಿ ೧೭ ವರ್ಷಕ್ಕೂ ಇಳಿಸಲಾಯಿತು. ದಿ.೮.೧೧.೧೯೭೭ರ ಸರ್ಕಾರಿ ಆದೇಶದಂತೆ, ಅಂಗವಿಕಲರಿಗೆ ವಯಸ್ಸಿನ ನಿರ್ಬಂಧವನ್ನು ಸಂಪೂರ್ಣವಾಗಿಯೇ ತೆಗೆದುಹಾಕಲಾಯಿತು. ಐದು ವರ್ಷಗಳ ಕಾಲ ಖಾಯಂ ನಿವಾಸಿಯಾಗಿದ್ದು, ವರ್ಷಕ್ಕೆ ಆರು ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯವಿರುವ, ಅಂಗವಿಕಲರು ತಮಗಿರುವ ಅಂಗ ವಿಕಲತೆಯ ಬಗ್ಗೆ ತಾಲೂಕು ವೈದ್ಯಾಧಿಕಾಯವರಿಂದ ಪ್ರಮಾಣ ಪತ್ರ ನೀಡಿದಲ್ಲಿ ಅಂಥವರು ಅಂಗವಿಕಲ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೫–೦೬ರಿಂದ ೨೦೧೦–೧೧ರ ವರೆಗಿನ ಸಾಲುಗಳಲ್ಲಿ ಅಂಗವಿಕಲ ವೇತನವನ್ನು ಪಡೆದ ಫಲಾನುಭವಿಗಳ ತಾಲ್ಲೂಕುವಾರು ಮಾಹಿತಿಯನ್ನು ಕೋಷ್ಟಕ ೧೬.೭೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೭೨: ಅಂಗವಿಕಲ ವೇತನ ಪಡೆದವರ ವಿವರ**

| ತಾಲೂಕು | ೨೦೦೫–೦೬ | | ೨೦೦೬–೦೭ | | ೨೦೦೭–೦೮ | |
|---|---|---|---|---|---|---|
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಚಾಮರಾಜನಗರ | ೩೭೦೩ | ೬೧೬೬೨೬೮ | ೩೮೦೫ | ೭೬೪೪೨೮೫ | ೪೧೭೦ | ೨೧೦೮೩೭೧೦ |
| ಗುಂಡ್ಲುಪೇಟೆ | ೧೭೪೬ | ೨೭೨೧೬೫೦ | ೧೮೩೭ | ೪೦೧೭೧೦೪ | ೨೧೪೪ | ೯೨೪೯೦೪೦ |
| ಕೊಳ್ಳೇಗಾಲ | ೩೬೩೦ | ೬೩೯೭೨೯೫ | ೩೭೫೪ | ೮೯೪೯೪೭೯ | ೪೧೧೨ | ೧೯೪೬೬೭೮೦ |
| ಯಳಂದೂರು | ೧೦೬೭ | ೧೯೩೦೫೦೪ | ೧೧೫೦ | ೨೬೯೬೯೯೨ | ೧೩೫೭ | ೫೬೫೨೭೩೦ |
| **ಒಟ್ಟು** | **೧೦೧೪೬** | **೧೭೨೧೫೭೧೭** | **೧೦೫೪೬** | **೨೩೩೦೭೮೬೦** | **೧೧೭೮೩** | **೫೫೪೫೨೨೬೦** |
| | | | | | | |
| ತಾಲೂಕು | ೨೦೦೮–೦೯ | | ೨೦೦೯–೧೦ | | ೨೦೧೦–೧೧ | |
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಚಾಮರಾಜನಗರ | ೪೨೫೪ | ೧೯೬೦೪೨೦೦ | ೩೫೩೭ | ೧೮೧೭೬೫೭೬೦ | ೫೪೦೭ | ೧೧೩೨೩೪೦೦ |
| | ೧೧೯(೭೫%) | ೧೫೧೮೦೦ | ೨೭೧೧(೭೫%) | ೪೫೭೯೮೯೦ | ೧೦೮೮(೭೫%) | ೨೨೮೪೮೦೦ |
| ಗುಂಡ್ಲುಪೇಟೆ | ೨೧೭೫ | ೧೧೩೨೩೪೦೦ | ೪೯೦೫ | ೨೫೩೮೭೬೮೦ | ೨೩೦೪ | ೧೦೮೭೮೫೨೦ |
| | ೭೫(೭೫%) | ೧೫೧೮೦೦ | ೨೪೩೪(೭೫%) | ೧೧೭೧೯೮೦೦ | ೮೯೩(೭೫%) | ೮೯೦೩೮೮೦೦ |
| ಕೊಳ್ಳೇಗಾಲ | ೮೦೯೫ | ೨೭೫೩೨೩೨೦ | ೪೯೦೫ | ೧೫೭೬೨೪೦ | ೮೦೯೫ | ೧೪೭೬೩೧೮೦ |
| | ೨೩೮೬(೭೫%) | ೧೧೦೦೪೦೦೦ | ೫೬೯(೭೫%) | ೩೭೮೩೦೦೦ | ೨೩೮೬(೭೫%) | ೧೧೦೦೪೦೦೦ |
| ಯಳಂದೂರು | ೧೫೩೪ | ೬೬೮೦೯೪೦ | ೧೨೫೦ | ೬೭೦೯೭೦೦ | ಸ್ಮಾರ್ಟ್ ಕಾರ್ಡ್ | |
| | | | ೩೯೯(೭೫%) | ೩೧೯೦೮೫೦ | | |
| **ಒಟ್ಟು** | **೧೮೬೩** | **೭೬೪೪೮೪೬೦** | **೨೦೭೧೦** | **೭೫೧೦೨೯೨೦** | **೨೦೧೭೩** | **೫೯೧೫೭೭೦೦** |

*(ಆಧಾರ: ಜಿಲ್ಲಾ ಖಜಾನಾಧಿಕಾರಿಗಳು, ಚಾಮರಾಜನಗರ)*

**ವಿಧವಾ ವೇತನ:** ಜೀವನ ನಿರ್ವಹಣೆಗೆ ಯಾವುದೇ ಆಧಾರವಿಲ್ಲದೆ, ಯಾರ ನೆರವೂ ಇಲ್ಲದೆ, ಬದುಕು ನಡೆಸುವುದೇ ಅಶಕ್ಯವೆನಿಸುವ ಪರಿಸ್ಥಿತಿ ಇರುವವರಿಗೆ, ಆರ್ಥಿಕ ಸಹಾಯವನ್ನು ನೀಡಬೇಕೆಂಬ ಉದ್ದೇಶದಿಂದ ದಿ. ೧೫.೧೨.೧೯೬೪ರ ಸರ್ಕಾರಿ ಆದೇಶದ ಮೂಲಕ, ಈ ಯೋಜನೆಯನ್ನು ಸರ್ಕಾರವು ಪ್ರಾರಂಭಿಸಿರುತ್ತದೆ. ಯಾವುದೇ ದುಡಿಮೆಗೆ ದಾರಿ ಇಲ್ಲದೆ ತೊಂದರೆಯಲ್ಲಿರುವ ವಿಧವೆಯರಿಗೆ, ಆಕೆಯ ಸಾವಿನವರೆಗೆ ಅಥವಾ ಮರು ಮದುವೆಯಾಗವವರೆಗೆ ಅಥವಾ ವಾರ್ಷಿಕ ನಿಗದಿತ ಆದಾಯ ಗಳಿಸಿಕೊಡುವಂತಹ ನೌಕರಿ ಸಿಗುವವರೆಗೆ, ಆಕೆಯ ಜೀವನೋಪಾಯಕ್ಕೆ ನೆರವಾಗಲು ಈ ಪಿಂಚಣಿಯನ್ನು ನೀಡಲು ಸರ್ಕಾರವು ಇದನ್ನು ಯೋಜಿಸಿದೆ. ಅರ್ಜಿದಾರರು ಅಥವಾ ಮೃತ ಪತಿ, ಕನಿಷ್ಠ ಮೂರು ವರ್ಷಗಳ ಕಾಲ ಸತತವಾಗಿ, ಸಂಬಂಧಿತ ಪ್ರದೇಶದ ನಿವಾಸಿಯಾಗಿದ್ದರೆ ಮತ್ತು ವಾರ್ಷಿಕ ವರಮಾನವು ಆಯಾ ಕಾಲಕ್ಕೆ ಸರ್ಕಾರವು ನಿಗದಿಸುವ ಮೊತ್ತದ ಮಿತಿಯೊಳಗಿದ್ದು, ಆಕೆಯ ವಯಸ್ಸು ಹದಿನೆಂಟಕ್ಕಿಂತ ಮೇಲ್ಪಟ್ಟಿದ್ದರೆ ಅಂತಹ ವಿಧವೆಯರಿಗೆ ವಿಧವಾ ವೇತನವನ್ನು ನೀಡಲಾಗುತ್ತದೆ. ಆರಂಭದಲ್ಲಿ ಈ ವೇತನವು ಐವತ್ತು ರೂಪಾಯಿಗಳಾಗಿದ್ದು, ಅನಂತರ ಮಾಸಿಕ ನೂರು ರೂಪಾಯಿಗಳಾಗಿ, ಏಪ್ರಿಲ್ ೨೦೦೭ರಿಂದ ತಿಂಗಳಿಗೆ ನಾಲ್ಕು ನೂರು ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ವಿಧವಾ ವೇತನ ಪಡೆದ ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೭೩ರಲ್ಲಿ ಕಾಣಬಹುದಾಗಿದೆ.

**ಕೋಷ್ಟಕ ೧೬.೭೩: ವಿಧವಾ ವೇತನ ಪಡೆದ ಫಲಾನುಭವಿಗಳ ವಿವರಗಳು**

| ತಾಲೂಕು | ೨೦೦೫-೦೬ | | ೨೦೦೬-೦೭ | | ೨೦೦೭-೦೮ | |
|---|---|---|---|---|---|---|
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಚಾಮರಾಜನಗರ | ೯೫೪೮ | ೧೨೫೩೫೨೩೦ | ೯೭೩೦ | ೨೦೧೮೫೩೬೫ | ೧೦೩೯೮ | ೪೪೪೬೩೬೯೦ |
| ಗುಂಡ್ಲುಪೇಟೆ | ೫೯೩೪ | ೭೪೮೪೬೪೦ | ೬೦೬೯ | ೧೧೯೬೩೯೦೫ | ೬೫೫೯ | ೨೯೨೫೫೭೦೦ |
| ಕೊಳ್ಳೇಗಾಲ | ೬೬೫೫ | ೮೭೬೬೩೯೦ | ೬೮೯೩ | ೧೫೨೧೩೦೯೪ | ೭೪೧೧ | ೩೧೭೪೪೧೩೫ |
| ಯಳಂದೂರು | ೨೪೦೨ | ೩೪೦೭೫೬೫ | ೨೪೪೬ | ೫೮೨೮೨೩೦ | ೨೫೦೯ | ೧೦೯೪೯೭೮೦ |
| ಒಟ್ಟು | **೨೪೭೩೯** | **೩೨೧೯೩೮೨೫** | **೨೫೧೩೮** | **೫೩೧೯೦೫೯೪** | **೨೬೮೭೭** | **೧೧೬೪೧೩೩೦೫** |
| | | | | | | |
| ತಾಲೂಕು | ೨೦೦೮-೦೯ | | ೨೦೦೯-೧೦ | | ೨೦೧೦-೧೧ | |
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಚಾಮರಾಜನಗರ | ೧೦೫೦೮ | ೫೦೭೦೮೯೮೦ | ೧೧೫೩೦ | ೫೪೪೪೪೭೭೦ | ೧೧೯೩೩ | ೪೯೨೪೦೪೦ |
| ಗುಂಡ್ಲುಪೇಟೆ | ೬೫೫೯ | ೩೨೪೩೩೬೦೦ | ೭೦೯೦ | ೩೨೪೩೩೬೦೦ | ೭೭೪೮ | ೩೨೬೯೬೧೬೦ |
| ಕೊಳ್ಳೇಗಾಲ | ೮೨೭೭ | ೪೭೮೧೦೪೦೦ | ೯೧೯೫ | ೪೪೫೭೨೮೦೦ | ೮೧೭೮ | ೩೭೭೮೬೨೦೦ |
| ಯಳಂದೂರು | ೨೫೫೯ | ೧೦೫೩೩೨೫೦೦ | ೨೯೦೪ | ೨೪೨೬೧೬೦ | ಸ್ಮಾರ್ಟ್ ಕಾರ್ಡ್ | |
| ಒಟ್ಟು | **೨೭೯೦೩** | **೧೪೧೪೮೫೪೮೦** | **೩೦೭೧೯** | **೧೩೩೮೭೭೩೩೦** | **೨೭೮೫೯** | **೧೧೯೭೨೩೪೦೦** |

*(ಆಧಾರ: ಜಿಲ್ಲಾ ಖಜಾನಾಧಿಕಾರಿಗಳು, ಚಾಮರಾಜನಗರ)*

**ಸ್ವಾತಂತ್ರ್ಯ ಯೋಧರ ವಿಶ್ರಾಂತಿ ವೇತನ:** ಸ್ವಾತಂತ್ರ್ಯಕ್ಕಾಗಿ ನಡೆದ ಯಾವುದೇ ಚಳುವಳಿ ಅಥವಾ ಹೋರಾಟದಲ್ಲಿ ಭಾಗವಹಿಸಿದ ಯೋಧರಿಗೆ ಮಾಸಿಕ ವಿಶ್ರಾಂತಿ ವೇತನವನ್ನು ನೀಡುವಂತಹ ಒಂದು ಯೋಜನೆಯನ್ನು ಸರ್ಕಾರವು, ೧೯೬೯ರ ಡಿಸೆಂಬರ್ ಇಪ್ಪತ್ತೊಂದರಲ್ಲಿ ಆದೇಶ ಹೊರಡಿಸುವ ಮೂಲಕ ಆರಂಭಗೊಳಿಸಿತು. ಸ್ವಾತಂತ್ರ್ಯ ಹೋರಾಟಗಾರರೆಂಬ ಬಗ್ಗೆ ರಾಜ್ಯ ಪತ್ರವನ್ನು ಅಥವಾ ಕೇಂದ್ರ ಸರ್ಕಾರದಿಂದ ತಾಮ್ರ ಪತ್ರವನ್ನು ಹೊಂದಿದ್ದು, ಸ್ವಾತಂತ್ರ್ಯ ಸಂದರ್ಭದಲ್ಲಿನ ಯಾವುದೇ ಚಳವಳಿಯಲ್ಲಿ ಭಾಗವಹಿಸಿದ ಕುರಿತು ಆ ಚಳುವಳಿಯ ಅಧ್ಯಕ್ಷರು ನೀಡಿದ ದೃಢೀಕರಣ ಪತ್ರವಿದ್ದಲ್ಲಿ ಅಂತಹ ಯೋಧರು, ಈ ಮಾಸಿಕ ವಿಶ್ರಾಂತಿ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ. ಇದರಲ್ಲಿ ವಿವಿಧ ರೀತಿಯ ಯೋಜನೆಗಳಿದ್ದು ಅವುಗಳ ವಿವರಗಳನ್ನು ಕೋಷ್ಟಕ ೧೬.೭೪ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ ೧೬.೭೪**

| ವಿವಿಧ ಪ್ರಕರಣಗಳ ಹೆಸರು | ಸರ್ಕಾರದ ಆದೇಶ ಮತ್ತು ದಿನಾಂಕ | ನೀಡಲಾಗುವ ಧನ/ಪಿಂಚಣಿ |
|---|---|---|
| **ಗೋವಾ ವಿಮೋಚನೆ ಚಳುವಳಿಗಾರರಿಗೆ** | ಸಿಆಸುಇ ೧೩೪೭ ಪಿ ಎಫ್ಎಸ್ ೮೭ ದಿ.೨೯.೧.೧೯೯೭ ರಂತೆ | ಗೌರವ ಧನ |
| **ತಾಮ್ರ ಪತ್ರ ಹೊಂದಿದ ಸ್ವಾತಂತ್ರ್ಯ ಯೋಧರಿಗೆ** | ಸಿಆಸುಇ ೧೬ ಪಿ ಎಫ್‌ಜಿ ೨೦೦೪ ದಿ.೬.೧.೨೦೦೫ ರಂತೆ | ₹ ೧೨೦೦ |
| **ಸ್ವಾತಂತ್ರ್ಯ ಸೈನಿಕರಿಗೆ ೦೧.೦೧.೧೯೯೦ರಿಂದ ಅನ್ವಯವಾಗುವಂತೆ** | ಕೇಂದ್ರ ಸರ್ಕಾರದ ಆದೇಶ ಸಂಖ್ಯೆ ೮/೧೭/೮೯ ಎಫ್ (ಪಿ) ದಿನಾಂಕ ೧.೫.೧೯೯೨ ರಂತೆ | ಸನ್ಮಾನ್ ಪೆನ್‌ಶನ್ |
| **ಹೈದರಾಬಾದ್ ಚಳುವಳಿಯಲ್ಲಿ ಭಾಗವಹಿಸಿದವರಿಗೆ** | ಕೇಂದ್ರದ ಆದೇಶ ಸಂಖ್ಯೆ. ೨೮೨/ ಎಸ್ ಆರ್/ಎಚ್‌ಸಿ ೯೯ ಎಫ್ ಎಫ್(ಎಚ್‌ಸಿ) ದಿ.೧.೧.೨೦೦೧ರಂತೆ | ಕೇಂದ್ರ ಸ್ವಾತಂತ್ರ್ಯ ಸೈನಿಕ ಸನ್ಮಾನ ಗೌರವ ಧನ |
| **ಸ್ವಾತಂತ್ರ್ಯ ಹೋರಾಟಗಾರರು ಮತ್ತು ಮೃತ ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ಪತಿ ಅಥವಾ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ.** | ಕರ್ನಾಟಕ ಸ್ವಾತಂತ್ರ್ಯ ಸೈನಿಕ ಸನ್ಮಾನ ಗೌರವಧನ ಪರಿಯೋಜನೆ ೧೦೬೯ರ ನಿಯಮ ೩(೧)ರನ್ವಯ | ಮಾಸಿಕ ಪಿಂಚಣಿ |

ಇದರಲ್ಲಿ ಮೊದಲು ₹ ೧೨೦೦ ಗಳಿದ್ದ ಗೌರವ ಧನವನ್ನು, ₹ ೧೫೦೦ಕ್ಕೆ ಆ ನಂತರದಲ್ಲಿ ₹ ಮೂರು ಸಾವಿರಗಳಿಗೆ ಏರಿಸಲಾಗಿದೆ. ಹೋರಾಟಗಾರರ ಮರಣದ ನಂತರ ಈ ವೇತನವನ್ನು ಅವರ ಪತ್ನಿಗೆ ಆ ಪತ್ನಿಯ ಮರಣಾಂತ್ಯದವರೆಗೆ ನೀಡಲು ಅವಕಾಶವಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೮–೦೯ರಿಂದ ೨೦೧೦–೧೧ರ ವರ್ಷಗಳಲ್ಲಿ ವಿಶ್ರಾಂತಿ ವೇತನ ಪಡೆದ ಸ್ವಾತಂತ್ರ್ಯ ಯೋಧರ ಹಾಗೂ ಆದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೭೫ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೭೫: ವಿಶ್ರಾಂತಿ ವೇತನ ಪಡೆದ ಸ್ವಾತಂತ್ರ್ಯ ಯೋಧರ ವಿವರ**

| ತಾಲೂಕು | ೨೦೦೮-೦೯ | | ೨೦೦೯-೧೦ | | ೨೦೧೦-೧೧ | |
|---|---|---|---|---|---|---|
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಚಾಮರಾಜನಗರ | ೭೩ | ೨೯೦೮೩೫೧ | ೭೨ | ೩೦೦೮೫೩೮ | ೭೨ | ೩೫೪೬೦೦೦ |
| ಗುಂಡ್ಲುಪೇಟೆ | ೨ | ೪೦೦೦೦ | ೨ | ೯೬೦೦೦ | – | – |
| ಕೊಳ್ಳೇಗಾಲ | ೧ | ೩೬೦೦೦ | ೧ | ೩೬೦೦೦ | ೨ | ೩೮೦೦೦ |
| ಯಳಂದೂರು | – | – | – | – | – | – |
| ಒಟ್ಟು | ೭೬ | ೨೯೮೪೩೫೧ | ೭೫ | ೩೧೪೦೫೩೮ | ೭೪ | ೩೫೮೪೦೦೦ |

*(ಮಾಹಿತಿ: ಜಿಲ್ಲಾ ಖಜಾನಾಧಿಕಾರಿಗಳು, ಚಾಮರಾಜನಗರ)*

## ಅಬಕಾರಿ ಇಲಾಖೆ

ಮದ್ರಾಸ್ ಮದ್ಯಪಾನ ನಿಷೇಧ ಕಾಯಿದೆ ೧೯೩೭ರ ಅಡಿಯಲ್ಲಿ, ೧೯೪೬ರಲ್ಲಿ ಕೊಳ್ಳೇಗಾಲ ತಾಲೂಕಿನಲ್ಲಿ ಮೊದಲು ನಿಷೇಧವು ಜಾರಿಗೆ ಬಂದಿತು. ೧೯೬೦ರಲ್ಲಿ ಮೈಸೂರಿನಲ್ಲಿ, ಮೈಸೂರು ನಗರವನ್ನು ಹೊರತು ಪಡಿಸಿ, ನಿಷೇಧ ತರಲಾಯಿತು. ೧೯೬೧ರಲ್ಲಿ ಮೈಸೂರು ತಾಲೂಕು ಪಾನ ನಿಷೇಧಕ್ಕೆ ಒಳಪಟ್ಟಿತು. ಆ ನಂತರ ಕರ್ನಾಟಕ ಮದ್ಯಪಾನ ನಿಷೇಧ ಕಾಯಿದೆ ೧೯೬೧ ಎಂದು ಕರೆಯಲ್ಪಟ್ಟ, ಪರಿಷ್ಕೃತ ಸಮಾನತೆ ಕಾಯಿದೆಯು, ೧೯೬೨ರ ಅವಧಿಯಲ್ಲಿ ಆಗಿನ ಇಡೀ ಮೈಸೂರು ಜಿಲ್ಲೆಯಲ್ಲಿ ಜಾರಿಗೊಂಡಿತು. ಸ್ವಾತಂತ್ರ್ಯ ಸಂಗ್ರಾಮದ ಚಳವಳಿಯ ಸಮಯದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪರ್ಯಾಯ ಆಲೋಚನೆಯಿಂದಾಗಿ ಈ ಕಾನೂನು ಕ್ರಮವು ಚಾಲನೆಗೊಂಡಿತು. ಆದರೆ ರಾಜ್ಯದ ಖಜಾನೆಗೆ ಆದಾಯ ನಷ್ಟ, ಹೆಚ್ಚಿನ ಅಕ್ರಮ ಸಾರಾಯಿ ತಯಾರಿಕೆ–ಇವೇ ಮುಂತಾದ ಕಾರಣಗಳಿಗಾಗಿ, ರಾಜ್ಯದಲ್ಲಿ ೧೯೬೭ರಲ್ಲಿ, ಕರ್ನಾಟಕ ಮದ್ಯಪಾನ ನಿಷೇಧ (ಪರಿಷ್ಕೃತ) ೧೯೬೭ರ ಕಾಯಿದೆಯು, ಜಾರಿಗೊಂಡು ಕರ್ನಾಟಕ ನಿಷೇಧ ೧೯೬೧ರ ಕಾಯಿದೆಯನ್ನು ರಾಜ್ಯದ ಕೆಲವು ಸೂಚಿತ ಪ್ರದೇಶಗಳಿಂದ ಹೊರತು ಪಡಿಸಲಾಯಿತು. ಇದರ ಪರಿಣಾಮವಾಗಿ, ಚಾಮರಾಜನಗರ ಮತ್ತು ಎಳಂದೂರು ತಾಲೂಕುಗಳನ್ನು ಹೊರತು ಪಡಿಸಿ, ಆಗಿನ ಮೈಸೂರು ಜಿಲ್ಲೆಯಲ್ಲಿ ಮದ್ಯಪಾನ ನಿಷೇಧವನ್ನು ಸಡಲಿಸಲಾಯಿತು. ಚಾಮರಾಜನಗರ ತಾಲೂಕಿನಲ್ಲಿ ೧೯೭೩ರ ಜುಲೈ ಒಂದರಿಂದಲೂ ಹಾಗೂ ಯಳಂದೂರು ತಾಲೂಕಿನಲ್ಲಿ ೧೯೮೧ರ ಜುಲೈ ಒಂದರಿಂದಲೂ ಈ ನಿಷೇಧವನ್ನು ಸಡಲಿಸಲಾಯಿತು.

ಕುಡಿತರಹಿತ ಜಿಲ್ಲೆಗಳಿಗೆ ಸಮೀಪವಿದ್ದ (adjacent to dry districts), ಆ ಮೊದಲೇ ಸಮಾಜ ಸುಧಾರಣಾ ಕ್ರಮಗಳನ್ನು ಆರಂಭಿಸಲಾಗಿದ್ದಂತಹ, ಕೆಲವು ಆಯ್ದ ಜಿಲ್ಲಾ ಪ್ರದೇಶಗಳಲ್ಲಿ, ಮದ್ಯ ಪಾನ ನಿಷೇಧವನ್ನು ಹಂತಹಂತವಾಗಿ ಜಾರಿಗೆ ತರಲು ಸರ್ಕಾರವು ಸ್ವಾತಂತ್ರ್ಯಪೂರ್ವ ಸಮಯದಲ್ಲಿ ಪ್ರಯತ್ನಿಸಿತು. ಕುಡಿತಕ್ಕೆ ಮಿತಿ, ಮದ್ಯ ವರ್ಜ್ಯಕ್ಕೆ ಮಾರ್ಗದರ್ಶನಗಳು, ಆ ಸಮಯದಲ್ಲಿ ಹೊರ ಬಂದವು. ಪ್ರಥಮ ದೃಷ್ಟಾಂತವಾಗಿ, ಕನಿಷ್ಠ ಕೆಲವು ಜಿಲ್ಲೆಗಳಲ್ಲಾದರೂ ಮದ್ಯಪಾನ ನಿಷೇಧಿಸಬೇಕೆಂದು, ನಿರಂತರ ಚಳವಳಿಗಳೂ ನಡೆದಿದ್ದವು. ಆದರೆ ಇದರಿಂದ ರಾಜ್ಯದ ಬೊಕ್ಕಸಕ್ಕೆ ಬರುತ್ತಿದ್ದ ಲಾಭ ನಿಂತು ಹೋಗುತ್ತದೆಂಬ ಕಾರಣವನ್ನು ಸರ್ಕಾರವು

ಮುಂದೊಡ್ಡಿತು. ರಾಜ್ಯದಲ್ಲಿ ೧೯೪೭ರಲ್ಲಿ ಜವಾಬದಾರ ಸರ್ಕಾರ ಮೇಲೆದ್ದಾಗ, ಪುನ; ಇದೊಂದು ಜೀವಂತ ಸಮಸ್ಯೆಯಾಯಿತು. ೧೯೪೭ರಲ್ಲಿ ಕಾಯಿದೆಯಾಗಿ ಪರಿಣಮಿಸಿದ, ಮೈಸೂರು ಪ್ರೊಹಿಬಿಷನ್ ಬಿಲ್ಲನ್ನು ಹೊರ ತರಲು ಸರ್ಕಾರ ಅಂತಿಮವಾಗಿ ನಿರ್ಧರಿಸಿತು.

ಆರಂಭದಲ್ಲಿ ೧೯೪೭ರ ಮೈಸೂರು ಮದ್ಯಪಾನ ನಿಷೇಧ ಕಾಯಿದೆಯಲ್ಲಿನ ನಿಯಮಗಳನ್ನು ಮೈಸೂರು ಅಬಕಾರಿ ಇಲಾಖೆಯಿಂದ ಕಾರ್ಯಗತ ಗೊಳಿಸಲಾಗುತ್ತಿತ್ತು. ಕಾನೂನು ಬಾಹಿರವಾಗಿ ಸಾರ ಇಳಿಸುವುದನ್ನು ಮತ್ತು ಅದರೊಂದಿಗಿನ (attendant) ಇನ್ನಿತರ ಅತಿಕ್ರಮಗಳನ್ನು ಕಂಡು ಹಿಡಿಯುವುದು ಸದರಿ ಇಲಾಖೆಗೆ ಕಷ್ಟವಾಗುತ್ತಿತ್ತು. ಈ ಕಾರ್ಯವನ್ನು ಪೋಲೀಸ್ ಇಲಾಖೆಗೆ ವಹಿಸಿಕೊಡುವಂತೆ ಮೈಸೂರು ಶಾಸನ ಸಭೆಯು ಮೇಲಿಂದ ಮೇಲೆ ಒತ್ತಾಯ ಪಡಿಸಿತು. ಅದರಂತೆ, ಈ ನಿಷೇಧ ಕ್ರಮವನ್ನು ಜಾರಿಗೆ ತರುವ ಕಾರ್ಯವನ್ನು ಒಂದನೇ ಏಪ್ರಿಲ್ ೧೯೫೦ರಿಂದ ಪೋಲೀಸ್ ಇಲಾಖೆಗೆ ವರ್ಗಾಯಿಸಲಾಯಿತು.

'ಕರ್ನಾಟಕ ಅಬಕಾರಿ ಕಾಯಿದೆ ೧೯೬೫'ಕ್ಕೆ ರಾಷ್ಟ್ರಪತಿಗಳ ಒಪ್ಪಿಗೆಯನ್ನು ೧೯೬೬ರ ಆಗಸ್ಟ್ ಮೂರರಂದು ಪಡೆಯಲಾಯಿತು. ಈ ಕಾಯಿದೆಯಲ್ಲಿ, ಜಿಲ್ಲಾಧಿಕಾರಿಗಳ ದರ್ಜೆಗೆ ಕಡಿಮೆಯಲ್ಲದ, ಅಬಕಾರಿ ಆಯುಕ್ತರು, ಜಂಟಿ ಅಬಕಾರಿ ಆಯುಕ್ತರು. ಉಪ ಅಬಕಾರಿ ಆಯುಕ್ತರು, ಅಬಕಾರಿ ವ್ಯವಸ್ಥಾಪಕರು ಮುಂತಾದ ಹುದ್ದೆಗಳ ನೇಮಕಾತಿಗೆ ಮಂಜೂರಾತಿ ದೊರಕಿತು. ಈ ಅಬಕಾರಿ ಕಾಯಿದೆಯ ಅನುಷ್ಠಾನಕ್ಕೆ ಜಿಲ್ಲಾಧಿಕಾರಿಗಳ ಎಲ್ಲ ಅಧಿಕಾರವನ್ನು ಹಾಗೂ ಅಬಕಾರಿ ಇಲಾಖೆಯ ಆಡಳಿತದ ಮೇಲೆ ನಿಯಂತ್ರಣವನ್ನು, ಅಬಕಾರಿ ಆಯುಕ್ತರಿಗೆ ಈ ಕಾಯಿದೆಯ ಮೂಲಕ ನೀಡಲಾಯಿತು. ಅಲ್ಲದೆ, ಈ ಕಾಯಿದೆಯ ಉದ್ದೇಶಕ್ಕೆ, ಎಲ್ಲ ಜಿಲ್ಲಾಧಿಕಾರಿಗಳನ್ನು ಅಬಕಾರಿ ಆಯುಕ್ತರ ಅಧೀನ ಅಧಿಕಾರಿಗಳೆಂದು ಸ್ಪಷ್ಟನೆ ನೀಡಲಾಯಿತು. ಅಬಕಾರಿ ಜಂಟಿ ಆಯುಕ್ತರು, ಅಬಕಾರಿ ಉಪ ಆಯುಕ್ತರು, ಅಬಕಾರಿ ವ್ಯವಸ್ಥಾಪಕರು ಅಬಕಾರಿ ಪರಿವೀಕ್ಷಕರು, ಅಬಕಾರಿ ಉಪ ಪರಿವೀಕ್ಷಕರು, ಅಬಕಾರಿ ಅಧಿಕಾರಿಗಳು, ಮುಂತಾದ ಅಬಕಾರಿ ಆಯುಕ್ತರ ಇತರ ಹಲವು ಅಗತ್ಯ ಅಧೀನ ಹುದ್ದೆಗಳ ನೇಮಕಾತಿಗೆ ಹಾಗೂ ಇಂಟೆಲಿಜೆನ್ಸ್ ಬ್ಯೂರೋ ಸ್ಥಾಪನೆಗೆ ಈ ೧೯೬೫ರ ಕಾಯಿದೆಯಲ್ಲಿ ಮತ್ತು ಇದರ ಪರಿಷ್ಕೃತ ಅಧಿನಿಯಮಗಳಲ್ಲಿ, ಸ್ಪಷ್ಟ ಪರವಾನಿಗೆ ದೊರಕಿತು.

ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ, ಪಾನ ನಿಷೇಧವನ್ನು ತೆಗೆದು ಹಾಕಿದರು. ಕೋಲಾರದಲ್ಲಿ ಕೆಲಜನರು ಕಳ್ಳಭಟ್ಟಿ ಕುಡಿದು ಸತ್ತದ್ದನ್ನು ನೋಡಿ, ಕದ್ದು ಮುಚ್ಚಿ ಕುಡಿದು ಸಾಯುವುದಕ್ಕೆ ಅವಕಾಶ ಮಾಡಿ ಕೊಡುವ ಬದಲು ಜನರ ವಿವೇಚನೆಗೆ ಬಿಡುವುದು ಒಳ್ಳೆಯ ಮಾರ್ಗವೆಂದು ಭಾವಿಸಿ ಪಾನ ನಿರೋಧವನ್ನು ಅವರು ತೆಗೆದುಹಾಕಿದುದಾಗಿ ಹೇಳಲಾಗುತ್ತದೆ. ಈ ವಿಷಯವಾಗಿ ಆ ಸಮಯದಲ್ಲಿ ಸಚಿವೆಯರಾಗಿದ್ದ ಯಶೋದರಮ್ಮ ದಾಸಪ್ಪನವರು ಇದನ್ನು ವಿರೋಧಿಸಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಇತ್ತರು. ಆದರೆ, ಅವರ ವಿರೋಧಕ್ಕೆ ಹೆಚ್ಚಿನ ಬೆಂಬಲ ದೊರಕಲಿಲ್ಲ. ಆ ನಂತರದಲ್ಲಿ, ರಾಜ್ಯದಲ್ಲಿ ಮದ್ಯಪಾನವು, ಸರ್ಕಾರಕ್ಕೆ ಹೆಚ್ಚಿನ ಆದಾಯ ತರುವ ಒಂದು ಸಾಧನವಾಗಿ ಮುಂದುವರಿದಿದೆ.

ಮದ್ಯಪಾನ ನಿರೋಧವನ್ನು ತೆಗೆದು ಹಾಕಿದರೂ, ಇದರೊಂದಿಗೇ, ಈ ದುಶ್ಚಟವನ್ನು ಜನಜಾಗೃತಿಯ ಮೂಲಕ ಪರಿಣಾಮಕಾರಿಯಾಗಿ ನಿಗ್ರಹಿಸುವ ಪ್ರಯತ್ನವನ್ನೂ ಸರ್ಕಾರವು ಮಾಡಿದೆ. ೧೯೭೭ರಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯನ್ನು ರಚಿಸಿದ್ದು, ಮದ್ಯ ಮತ್ತು ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಎಚ್ಚರಿಕೆ ಮೂಡಿಸುವ ಕಾರ್ಯಕ್ರಮಗಳನ್ನೂ ಇದು ಕಾರ್ಯಗತಗೊಳಿಸುತ್ತಿದೆ.

ಕುಡಿತಕ್ಕೆ ಬಲಿಯಾಗುವ ವ್ಯಕ್ತಿಗೆ ಅದರಿಂದ ವಿಮುಖನಾಗಲು ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ ಪರಿಣತರಿಂದ ಸಲಹೆಯನ್ನು ಕೊಡಿಸುವುದು, ಭಿತ್ತಿ ಪತ್ರಗಳು, ದಾಖಲೆ ಚಿತ್ರಗಳು, ಚಲನಚಿತ್ರಗಳು ಇತ್ಯಾದಿಗಳ ಮೂಲಕ ಕುಡಿತದಿಂದಾಗುವ ಆರೋಗ್ಯ ನಷ್ಟ ಮತ್ತು ಹಣ ನಷ್ಟದ ಬಗ್ಗೆ ಸಾರ್ವಕಜನಿಕರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಈ ಮದ್ಯಪಾನ ಸಂಯಮ ಮಂಡಳಿಯು ಜಾರಿಗೊಳಿಸಿದೆ. ಕೂಲಿ ಕಾರ್ಮಿಕರು ವಾಸಿಸುವ ಮತ್ತು ಕೊಳಚೆ ಪ್ರದೇಶಗಳಲ್ಲಿ, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತಹ ಸ್ಥಳಗಳಲ್ಲಿ ನಕಲಿ ಮದ್ಯ ಮತ್ತು ಕಳ್ಳಭಟ್ಟಿ ಸಾರಾಯಿ ಅಥವಾ ಕಾನೂನು ಬಾಹಿರ ಮದ್ಯಗಳನ್ನು ಸೇವಿಸಬಾರದೆಂಬ ಕುರಿತು ಕರ ಪತ್ರಗಳನ್ನು ಹಂಚಿ ಅಥವಾ ಅಂಟಿಸಿ, ಘೋಷಣೆಗಳನ್ನು ಕೂಗಲಾಗುತ್ತದೆ. ಈ ತಿಳಿವಳಿಕೆ ಮೂಡಿಸುವ ಪ್ರಯತ್ನವನ್ನೂ. ಈ ಇಲಾಖೆಯಿಂದ ಹಾಗೂ ಮಂಡಳಿಯಿಂದ ಮಾಡಲಾಗುತ್ತದೆ.

ಕರ್ನಾಟಕ ಸರ್ಕಾರವು ೨೦೦೭ರ ಜುಲೈ ಒಂದರಿಂದ ರಾಜ್ಯಾದ್ಯಂತ ಸಾರಾಯಿ ಮಾರಾಟವನ್ನು ನಿಷೇಧಗೊಳಿಸಿದ್ದು, ಈ ಜಿಲ್ಲೆಗೂ ಈ ನಿಷೇಧದ ನಿಯಮಗಳು ಅನ್ವಯಗೊಂಡಿವೆ. ಆರಂಭದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಸಾರಾಯಿ ಪ್ಯಾಕೆಟ್‌ಗಳನ್ನು ಪತ್ತೆ ಹಚ್ಚಿ ವಶ ಪಡಿಸಿಕೊಳ್ಳಲು ಇಲ್ಲಿ ಸತತವಾಗಿ ಅಬಕಾರಿ ಧಾಳಿ ಮಾಡಲಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾ ಅಬಕಾರಿ ಉಪ ಆಯುಕ್ತರ ಕಛೇರಿಯು ಏಪ್ರಿಲ್ ೧೯೯೮ರಿಂದ ಪ್ರಾರಂಭಗೊಂಡಿದೆ. ಕರ್ನಾಟಕ ಅಬಕಾರಿ ನಿಯಮಗಳು ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ವಯ ಇದು ಕಾರ್ಯ ನಿರ್ವಹಿಸುತ್ತಿದೆ. ಈ ಜಿಲ್ಲೆಯ ನಾಲ್ಕು ತಾಲೂಕುಗಳು ಈ ಉಪ ಆಯುಕ್ತರ ಅಧೀನಕ್ಕೆ ಒಳ ಪಟ್ಟಿವೆ. ಜಿಲ್ಲಾ ಮಟ್ಟದಲ್ಲಿ ಇಬ್ಬರು ಅಬಕಾರಿ ಉಪ ಅಧೀಕ್ಷಕರ ಹುದ್ದೆಗಳಿವೆ. ತಾಲೂಕು ಮಟ್ಟದಲ್ಲಿ ಅಬಕಾರಿ ನಿರೀಕ್ಷಕರು ಹಾಗೂ ಅಬಕಾರಿ ಉಪ ನಿರೀಕ್ಷಕರುಗಳಿದ್ದು, ಈ ಅಧಿಕಾರಿಗಳು ಸಂಬಂಧಿಸಿದ ವಲಯ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳ ತಪಾಸಣೆಯನ್ನು ಹಾಗೂ ಅಕ್ರಮ ವಹಿವಾಟುಗಳ ಸಂಪೂರ್ಣ ನಿಯಂತ್ರಣವನ್ನು ಸ್ವತಂತ್ರವಾಗಿ ಕೈಗೊಳ್ಳುವ ಅಧಿಕಾರ ಹೊಂದಿರುತ್ತಾರೆ.

ಸಾರಾಯಿ ನಿಷೇಧ ಜಿಲ್ಲೆಯಲ್ಲಿ ಜಾರಿಗೆ ತರುವ ಮುನ್ನ, ೨೦೦೬–೦೭ನೇ ಸಾಲಿನಲ್ಲಿ, ವಾರ್ಷಿಕ ₹ ೩೧,೯೩,೦೧,೯೨೩ಗಳು ಸರ್ಕಾರಕ್ಕೆ ಈ ಜಿಲ್ಲೆಯಿಂದ ಬಂದ ಆದಾಯವಾಗಿರುತ್ತದೆ. ನಂತರದಲ್ಲಿ ೨೦೦೮ರ ಜುಲೈ ಒಂದರಿಂದ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ ಜಾರಿಗೊಂಡಿದೆ.

## ಇತರ ಸಮಾಜ ಸೇವಾ ನಿರತ ವ್ಯಕ್ತಿಗಳು ಮತ್ತು ಸಂಸ್ಥೆಗಳು

ಪರರ ಹಿತಕ್ಕಾಗಿ ದಾನ–ದತ್ತಿಗಳನ್ನು ಕೊಡುವುದು, ಕೆರೆ, ಬಾವಿ, ದೇವಾಲಯಗಳನ್ನು ಕಟ್ಟಿಸುವುದು, ಅರವಟ್ಟಿಗೆಗಳನ್ನು ಕಟ್ಟಿಸಿ ಜನರ ದಾಹವನ್ನು ತಣಿಸುವುದು, ಧರ್ಮ ಛತ್ರಗಳನ್ನು ಕಟ್ಟಿಸಿ ಉಚಿತ ವಸತಿ ಹಾಗೂ ಊಟಗಳಿಗೆ ವ್ಯವಸ್ಥೆ ಮಾಡುವುದು, ಪ್ರಯಾಣಿಕರಿಗೆ ನೆರಳು ನೀಡಲು ಸಾಲು ಮರಗಳನ್ನು ನೆಡುವುದು, ಇವೆಲ್ಲ ಧರ್ಮದ ಹೆಸರಿನಲ್ಲಿ ನಡೆಸಿಕೊಂಡು ಬಂದಿರುವ ಸಮಾಜ–ಸೇವಾ ಕಾರ್ಯಗಳಾಗಿವೆ. ದೇವಸ್ಥಾನಗಳಲ್ಲಿ ವಿದ್ಯೆ–ಅಧ್ಯಯನಗಳು, ಧ್ಯಾನ–ಸಂಸ್ಕೃತಿ ಪಾಠಗಳು ನಡೆಯುತ್ತಿದ್ದವು. ಅಪರಿಚಿತರಿಗೆ, ಬಡವರಿಗೆ, ದಾರಿಹೋಕರಿಗೆ, ಅನಾಥರಿಗೆ ಈ ರೀತಿಯ ಧಾರ್ಮಿಕ ಕಾರ್ಯಗಳಿಂದ, ವಿದ್ಯೆ, ಊಟ, ಪಾಠ, ನೆಮ್ಮದಿ, ವಿಶ್ರಾಂತಿಗಳು ಲಭ್ಯವಾಗುತ್ತಿದ್ದವು. ಈ ಜಿಲ್ಲೆಯಲ್ಲಿ ಇಂತಹ ಧಾರ್ಮಿಕ ಕಾರ್ಯಗಳ ಮೂಲಕ, ಸಮಾಜ ಸೇವೆ ಮಾಡಿದ ವ್ಯಕ್ತಿಗಳು, ಬಹಳ ಹಿಂದಿನ ಕಾಲದಿಂದಲೂ ಬಹು ಸಂಖ್ಯೆಯಲ್ಲಿ ದೊರಕುತ್ತಾರೆ.

ಕಳಲೆ ನಂಜರಾಜಯ್ಯನ ಮನೆವಾರ್ತೆ ನಿರ್ವಹಿಸುತ್ತಿದ್ದ ವೀರಯ್ಯ ಎಂಬುವವ, ಕ್ರಿ.ಶ. ೧೭೫೮ರಲ್ಲಿ ಮಲ್ಲದೇವನ ಹಳ್ಳಿಯಲ್ಲಿ ಕೆರೆಯೊಂದನ್ನು ಕಟ್ಟಿಸಿದ್ದನೆಂದು, ಚಾಮರಾಜನಗರದ ೨೨೮ನೇ ಶಾಸನ ಹೇಳುತ್ತದೆ. ಕ್ರಿ.ಶ. ೧೮೭೦ರಲ್ಲಿ ಮೈಸೂರು ಅರಮನೆಯ 'ಖಾಸ ಚಾರಿ' ಊಳಿಗದ ಮಲ್ಲಪ್ಪನವರ ಧರ್ಮ ಪತ್ನಿಯಾದ ಪುಟ್ಟ ನಂಜಮ್ಮನವರು, 'ಅಮೃತ ಸರೋವರ'ವನ್ನು ಕಟ್ಟಿಸಿದ್ದರೆಂದು ಮರಿಯಾಲದ ಕೊಳದ ಮೇಲ್ಭಾಗದಲ್ಲಿರುವ (ಚಾ.ನ.೬೬) ಶಾಸನದಿಂದ ತಿಳಿದು ಬರುತ್ತದೆ. ಪೆರ್ಮಾಡಿಯ ವೇಶ್ಯೆ ಜೋಗಬ್ಬೆಯ ಮಗಳು ಚಾವುಂಡಬ್ಬೆ ಕ್ರಿ.ಶ. ಒಂಬತ್ತನೇ ಶತಮಾನದಲ್ಲಿ ಹೆಗ್ಗೊಠಾರದಲ್ಲಿ ದೇವಾಲಯವೊಂದನ್ನು ಕಟ್ಟಿಸಿದ್ದಳು(ಚಾ.ನ.೩೮೫). ಹೊಯ್ಸಳ ಸೇನಾನಿ ಪಣಿಸಯ್ಯನು ಕ್ರಿ.ಶ. ೧೨ನೇ ಶತಮಾನದಲ್ಲಿ ಚಾಮರಾಜನಗರದಲ್ಲಿ ತ್ರಿಕೂಟ ಬಸದಿಯನ್ನು ಕಟ್ಟಿಸಿದ(ಚಾ.ನ.–೨). ಶಂಭು ಗಾಮುಂಡನು ಕ್ರಿ.ಶ.೧೨೪೨–೪೩ರಲ್ಲಿ ಹೆಗ್ಗವಾಡಿಯ ಶಂಭು ಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿದ.(ಚಾ.ನ.೮೫) ಕ್ರಿ.ಶ. ೧೩೪೦ರಲ್ಲಿ ಮಂಚೇಗೌಡ, ಹಿರಿಯಗೌಡ ಮತ್ತಿತರರು. ಹರದನಹಳ್ಳಿಯಲ್ಲಿ ದಿವ್ಯ ಲಿಂಗೇಶ್ವರ ದೇವಾಲಯದ ರಂಗ ಮಂಟಪಗಳನ್ನು ಕಟ್ಟಿಸಿದರು(ಚಾ.ನ.ಶಾಸನ ೨೭೫). ಬೆನಕ ಎಂಬಾತ ಈ ದೇವಾಲಯದ ಸುಖನಾಸಿಯೊಳಗೆ ಇರುವ ಕಲ್ಲು ತೊಟ್ಟಿಯನ್ನು ಕಟ್ಟಿ ಕೊಟ್ಟ. (ಚಾ.ನ.ಶಾಸನ–೨೭೯). 'ನಿರಾಸಿ ಮಠ'ವೆಂದು ಹೆಸರಿದ್ದ ಉಮ್ಮತ್ತೂರ ಉಪ್ಪರಿಗೆಯ ಮಠದ ಆರೋಗಣೆಯ ಅವಸರಕ್ಕೆ ಶ್ರೀರಂಗಪಟ್ಟಣದ ಉಭಯ ಕಾವೇರಿ ಮಧ್ಯದ ಗಂಗಾಧರ ದೇವರ ಸನ್ನಿಧಿಯಲ್ಲಿ ಕ್ರಿ.ಶ. ೧೫೪೪ರಲ್ಲಿ, ಗ್ರಾಮವೊಂದನ್ನು ನೀಡಲಾದ ಬಗ್ಗೆ ಚಾಮರಾಜನಗರ ಶಾಸನ ೨೧೭ರಲ್ಲಿ ಉಲ್ಲೇಖವಿದೆ. ಕಾಶಿಯಲ್ಲಿ ವಿಶ್ವೇಶ್ವರನ ಪೂಜಾಭಿಷೇಕಗಳಿಗಲ್ಲದೇ, ಕಾರ್ತೀಕ, ಮಾಘ ಮತ್ತು ವೈಶಾಖ ಮಾಸಗಳಲ್ಲಿ ಸ್ನಾನದಾನ, ನಿತ್ಯದಲ್ಲಿ ನೂರು ಬ್ರಾಹ್ಮಣರಿಗೆ ಮೃಷ್ಟಾನ್ನ, ಛತ್ರ ಕಾಶಿವಾಸಿಗಳಿಗೆ ವರ್ಷಾಸನ ಪ್ರಯಾಣದಲ್ಲಿ ಮಾಘಸ್ನಾನ, ಇವೇ ಮುಂತಾದ ಸೇವೆಗಳಿಗಾಗಿ, ಕಂಠೀರವ ನರಸರಾಜನ ಹೊಂಗನೂರು ಸ್ಥಳವನ್ನು ದಾನವಾಗಿ ನೀಡಿದ್ದನೆಂದು ಚಾಮರಾಜನಗರ ಶಾಸನ ೧೭೧ರಲ್ಲಿದೆ.

ಸುರಗಿಯ ಬಸವಣ್ಣವಪಡೆಯನ್ ೧೮ನೆಯ ಶತಮಾನದಲ್ಲಿ ಗೆಬ್ಬರೂರು ಮತ್ತು ಯೆಗಾಲೂರಿನ ಜಂಗಮರ ಆರೋಗಣೆಯ ನಿರ್ವಹಣೆಗಾಗಿ ಭೂದಾನ ಮಾಡಿದ್ದನು(ಚಾ.ನ.೨೧೨). ಹರದನಹಳ್ಳಿಯ ಛತ್ರದ ನಿರ್ವಹಣೆಗಾಗಿ, ೧೬೭೬ರಲ್ಲಿ ಮೈಸೂರಿನ ದೇವರಾಜ ಒಡೆಯನು ಬೊಮ್ಮಹಳ್ಳಿ ಗ್ರಾಮವನ್ನು ದಾನ ಮಾಡಿದ ವಿಷಯವು ವೆಂಟಯ್ಯನ ಛತ್ರದ ಶಾಸನ(ಚಾ.ನ.೨೪೯)ರಲ್ಲಿ ಹೇಳಲಾಗಿದೆ.

ಚಾಮರಾಜನಗರ ತಾಲೂಕಿನ ಉಮ್ಮತ್ತೂರಿನ ನಂಜರಾಜನು ದೈವ ಭಕ್ತನಾಗಿದ್ದು, ಜನರ ನೆಮ್ಮದಿಗಾಗಿ, ಸುತ್ತೂರು, ನಂಜನಗೂಡು, ಹೊಂಡರಬಾಳು, ನಮಸ್ಕಾರಪುರ(ಯರಗಂಬಳ್ಳಿ) ಕುಂತೂರುಗಳಲ್ಲಿ ಮಠಗಳನ್ನು ಸ್ಥಾಪಿಸಿದ. ಅಲ್ಲದೆ ಶಿವನಸಮುದ್ರ ಪಟ್ಟಣವನ್ನು ಕಟ್ಟಿಸಿದ. ನಂಜನಗೂಡಿನ ಶ್ರೀಕಂಠೇಶ್ವರನ ನೈವೇದ್ಯ ಮತ್ತು ಅಲಂಕಾರಗಳಿಗಾಗಿ ಗ್ರಾಮದಾನ ಮಾಡಿದ.

ಹರಿಜನೋದ್ಧಾರ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ದೇವಸ್ಥಾನ ಮತ್ತು ಹೋಟೆಲ್‌ಗಳಿಗೆ ಹರಿಜನರ ಪ್ರವೇಶ, ಸ್ತ್ರೀ ಪ್ರಗತಿ, ಹಾಗೂ ಗ್ರಾಮೋದ್ಯೋಗಗಳ ಉತ್ಥಾನ, ಇವೇ ಮುಂತಾಗಿ ಸಮಾಜ ಸುಧಾರಣೆಯ ಉದ್ದೇಶದ ವಿಭಿನ್ನ ಚಳವಳಿಗಳು ದೇಶದ ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ನಡೆದವು. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ತಗಡೂರು ರಾಮಚಂದ್ರ ರಾಯರ ನೇತೃತ್ವದಲ್ಲಿ ಸುಮಾರು ೧೯೨೫ರಿಂದಲೇ ಚಳವಳಿ ಆರಂಭವಾಗಿತ್ತು. ಹರಿಜನರಲ್ಲಿ ಮಾನವ ಹಕ್ಕುಗಳ ಬಗ್ಗೆ ಜಾಗೃತಿ, ಸಮಾನತೆಯ ಪ್ರಜ್ಞೆ ಮೂಡಿಸುವುದು ಇತ್ಯಾದಿ ಕೆಲಸಗಳು ಹರಿಜನಕೇರಿಗಳಲ್ಲಿ, ಸಂತೆ, ಜಾತ್ರೆಗಳಲ್ಲಿ ಸಭೆ ಸೇರಿ ನಡೆಸಲಾಗುತ್ತಿತ್ತು. ಕಿರಗುಂದ ಗ್ರಾಮದಲ್ಲಿ ಮುವತ್ಮೂರು ಹಳ್ಳಿಗಳ ಹರಿಜನರನ್ನು ಕೊಂಬು, ಕಹಳೆ,

ಜಾಗಟೆ, ತಮಟೆಗಳ ಸಹಿತ ಮೆರವಣಿಗೆಯಲ್ಲಿ ಕರೆತಂದು, ಐ.ಜಿ.ಪಿ. ಆಗಿದ್ದ ಅಂಬಳೆ ಸುಬ್ರಹ್ಮಣ್ಯ ಐಯ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿ, ಸಾಲಗಾರ ಹರಿಜನರ ಮತ್ತು ಸಾಲಿಗ ಸಾಹುಕಾರರ ನಡುವೆ ಒಂದು ಒಪ್ಪಂದ ಮಾಡಲಾಯಿತು. ಇನ್ನು ಮುಂದೆ ಸಾಲಗಾರರನ್ನು ಸಾಹುಕಾರರು ಮನುಷ್ಯರೆಂಬ ದೃಷ್ಟಿಯಿಂದ ನೋಡಬೇಕೆಂದು ಆದ ತೀರ್ಮಾನವು ಇಡೀ ಪ್ರಾಂತ್ಯದಲ್ಲೇ ಒಂದು ಕ್ರಾಂತಿಯೆಂದು ಭಾವಿಸಲಾಗಿತ್ತು. ಯಳಂದೂರಿನಲ್ಲಿ ಹರಿಜನ ಬಾಲಕರನ್ನು ಶಾಲೆಗೆ ಸೇರಿಸುವ ಕಾರ್ಯಕ್ರಮ ಬಹಳ ನಿಷ್ಠುರದಿಂದ ನಡೆಯಿತು. ಇಲ್ಲಿನ ಉಪಾಧ್ಯಾಯರಿಗೆ ಮತದವರೂ, ಊರವರೂ ಬಹಿಷ್ಕಾರ ಹಾಕಿದ್ದರು. ಚಾಮರಾಜನಗರದ ಚಿ.ಗೋಪಾಲ ರಾವ್, ದೊಡ್ಡರಾಯಪೇಟೆ ಡಿ.ಜೆ.ಶಂಕರಪ್ಪ ಕಾಂಗ್ರೆಸ್‌ನ ಈ ರಚನಾತ್ಮಕ ಕಾರ್ಯಗಳಲ್ಲಿ ಭಾಗವಹಿಸಿ ಕ್ರಿಯಾತ್ಮಕ ಕೆಲಸಗಳನ್ನು ಮಾಡಿದ್ದರು.

ಚಾಮರಾಜನಗರದ ಆಲೂರು ಗ್ರಾಮದ ದಲಿತ ಜನಾಂಗಕ್ಕೆ ಸೇರಿದ ಬಿ.ರಾಚಯ್ಯನವರು ಕಾಲೇಜು ದಿನಗಳಲ್ಲೇ ತಮ್ಮ ತಾಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿನ ದಲಿತರನ್ನು ಸಂಘಟಿಸಿ ದಲಿತ ಯುವಕರಲ್ಲಿ ನಾಗರಿಕತೆಯನ್ನು ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ ಕೆಲಸ ಆರಂಭಿಸಿದರು. ೧೯೫೦ರ ಸುಮಾರಿಗೆ 'ಚಾಮರಾಜನಗರ ತಾಲೂಕು ಆದಿ ಕರ್ನಾಟಕ ಅಭಿವೃದ್ಧಿ ಸಂಘ'ವು ರಾಚಯ್ಯನವರ ನೇತೃತ್ವದಲ್ಲಿ ಸ್ಥಾಪನೆಗೊಂಡಿತು. ಈ ಸಂಘದವರು ಪ್ರತಿ ತಾಲೂಕಿನಲ್ಲಿಯೂ ಸಂಚರಿಸಿ, ದಲಿತ ವರ್ಗದವರಲ್ಲಿ ಸ್ವಾಭಿಮಾನದ ಭಾವನೆಯನ್ನು ಬಿತ್ತಿ, ನೈತಿಕ ಶಕ್ತಿಯನ್ನು ತುಂಬಿ, ಹೆಂಡ ಸಾರಾಯಿಗಳ ಕುಡಿತದ ಚಟಕ್ಕೆ ಬಿದ್ದು, ಬದುಕು ಹಾಳು ಮಾಡಿಕೊಳ್ಳುತ್ತಿದ್ದ ಜನರಿಗೆ ಕುಡಿತದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಅಲ್ಲದೆ, ಅಲ್ಲಿನ ಮುಖಂಡರು ಮತ್ತು ಯುವಕರ ಬೆಂಬಲ ಗಳಿಸಿ, ಹೆಂಡದ ಮರಗಳನ್ನು ಬುಡ ಸಮೇತ ಉರುಳಿಸಿ, ಹೆಂಡದ ಗುಡಿಸಲುಗಳಿಗೆ ಬೆಂಕಿ ಹಾಕಿಸಿದರು. ಸುಮಾರು ಮುವ್ವತ್ಮೂರು ಹಳ್ಳಿಗಳಲ್ಲಿ ಮದ್ಯಪಾನದ ವಿರುದ್ಧ ಜಾಗೃತರಾಗುವಂತೆ ಮಾಡಿದರು. ರಾಚಯ್ಯನವರ ರಾಜಕೀಯ ಪ್ರವೇಶವಾದ ಮೇಲೆ, ಅರಣ್ಯ, ಕೃಷಿ, ಸಹಕಾರ, ಶಿಕ್ಷಣ. ಮೀನುಗಾರಿಕೆ, ಕಂದಾಯ, ರೇಷ್ಮೆ, ಕನ್ನಡ ಮತ್ತು ಸಂಸ್ಕೃತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ತೋಟಗಾರಿಕೆ, ಗೃಹ ಖಾತೆ, ಮುಂತಾಗಿ ಬಹಳಷ್ಟು ಖಾತೆಗಳಲ್ಲಿ ಜನಹಿತ ಸೇವೆ ಸಲ್ಲಿಸಿದರು. ಅರಣ್ಯ ಖಾತೆ ಸಚಿವರಾಗಿದ್ದಾಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ಅರಣ್ಯ ಇಲಾಖೆಯ ಉನ್ನತ ಹುದ್ದೆಗಳಿಗೆ ಮೀಸಲಾತಿ ಕ್ರಮವನ್ನು ಅಳವಡಿಸಿ ಲೋಕಸೇವಾ ಆಯೋಗದ ಮೂಲಕ ಮೊದಲ ಬಾರಿಗೆ ದಲಿತ ಐ.ಎ.ಎಸ್. ಅಧಿಕಾರಿಗಳ ನೇಮಕ ಪ್ರಕ್ರಿಯೆಗೆ ಕಾರಣರಾದರು. ಕಂದಾಯ ಇಲಾಖೆಯ ಮೂಲಕ ಹಲವಾರು ಹಿಂದುಳಿದ ಬುಡಕಟ್ಟು ಮತ್ತು ದಲಿತ ವರ್ಗದವರಿಗೆ ಜಮೀನು ನೀಡಿ ಅವರನ್ನು ಸಾಗುವಳಿದಾರರನ್ನಾಗಿಸಿದರು. ರಾಜ್ಯಾದ್ಯಂತ ಹೊಸ ಕಾಲೋನಿಗಳು ಸೃಷ್ಟಿಗೊಂಡು, ಅನೇಕರು ಸ್ವಂತ ನೆಲೆಯನ್ನೂ, ಜಮೀನನ್ನೂ ಪಡೆದು ನೆಮ್ಮದಿಯ ಜೀವನ ಕಾಣುವಂತಾಯಿತು. ಚಿಕ್ಕಮೂಡಹಳ್ಳಿ, ಹೊಂಡರಬಾಳು, ಮಹದೇಶ್ವರ ಕಾಲೋನಿ, ಸಿದ್ದಯ್ಯನಪುರ, ಕುಂಬೇಶ್ವರ ಕಾಲೋನಿ, ಬೆಲವತ್ತ ಹೊಂಗಲವಾಡಿ ಕಾಲೋನಿ ಒಂದು ಮತ್ತು ಎರಡು, ಗೋಡೆ ಮಡುವಿನ ದೊಡ್ಡಿ, ಮುರಟಿಪಾಳ್ಯ, ಕಾಳಿಕಾಂಬ ಕಾಲೋನಿ, ತಿಮ್ಮೇಗೌಡನಪಾಳ್ಯ, ಕನ್ನೇರಿ ಕಾಲೋನಿ, ಮುಂತಾದವು ಚಾಮರಾಜನಗರ ತಾಲೂಕಿನಲ್ಲಿ ಸೃಷ್ಟಿಯಾದ ಹೊಸ ಕಾಲೋನಿಗಳು. ಪ್ರತಿ ಗ್ರಾಮದ ಮಕ್ಕಳೂ ವಿದ್ಯೆ ಕಲಿಯ ಬೇಕೆಂಬ ಉದ್ದೇಶದಿಂದ ಶಿಕ್ಷಣ ಸಚಿವರಾದ ಸಮಯದಲ್ಲಿ, ಪ್ರತಿ ಗ್ರಾಮದಲ್ಲೂ ಪ್ರಾಥಮಿಕ ಶಾಲೆಗಳನ್ನು, ನಾಲ್ಕು ನೂರಕ್ಕೂ ಹೆಚ್ಚು ಪ್ರೌಢ ಶಾಲೆಗಳನ್ನೂ ತೆರೆಸಿದರು. ಮಹಿಳಾ ಪರ ಕಾನೂನುಗಳನ್ನು ಹೊರತಂದು, ಮಹಿಳಾ ಪೋಲಿಸ್ ಘಟಕಗಳನ್ನು ಸ್ಥಾಪಿಸಿದರು. ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ದಲಿತ ಹೆಣ್ಣು ಮಕ್ಕಳ ನಗ್ನ ಸೇವೆಯು ಶಾಶ್ವತವಾಗಿ ನಿಲ್ಲುವಂತೆ ಆ ಬಗ್ಗೆ ವಿಶೇಷ ಕಾನೂನು ಜಾರಿಗೆ ತಂದರು.

ಕೆ.ಸಿ. ರಂಗಯ್ಯನವರು ಹರಿಜನ ಶಿಕ್ಷಣಕ್ಕಾಗಿ ಬಹಳವಾಗಿ ದುಡಿದರು. ಚಾಮರಾಜನಗರದಿಂದ ಐದಾರು ಕಿ.ಮೀ. ದೂರದಲ್ಲಿರುವ ಛತ್ರ ಹೊಸೂರು ಗ್ರಾಮದ ಶಾಂತಗೌಡರು ಅನ್ನದಾನಕ್ಕೆ ಪ್ರಸಿದ್ಧರು. ಇವರು ತಮ್ಮ ಮನೆಯಲ್ಲಿ ಛತ್ರದಲ್ಲಿ ಹಾಕುವಂತೆ ಪ್ರತಿನಿತ್ಯ ನೂರಾರು ಜನರಿಗೆ ದಾಸೋಹ ನಡೆಸುತ್ತಿದರೆಂದು ಹೇಳಲಾಗುತ್ತದೆ. ಶೋಷಣೆಗೆ ಒಳಗಾದ ರೈತರನ್ನು ಸಂಘಟಿಸಿ, ಅವರ ಸಮಸ್ಯೆಗಳ ಪರಿಹಾರಕ್ಕೆ ಮತ್ತು ಅವರ ಹಿತಕ್ಕಾಗಿ ಕೊನೆ ತನಕ ಹೋರಾಡಿದ ಎಂ.ಡಿ. ನಂಜುಂಡ ಸ್ವಾಮಿಯವರ ಸಮಾಧಿ ಸ್ಥಳವಾದ ಅಮೃತಭೂಮಿಯು, ಚಾಮರಾಜನಗರ ತಾಲೂಕಿನ ಹೊಂಡರ ಬಾಳು ಗ್ರಾಮದ ಬಳಿ ಇದೆ.

ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಗ್ರಾಮದವರಾದ ಎಸ್. ಮರಿಸ್ವಾಮಿಯವರು, ಐ.ಪಿ.ಎಸ್. ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದು, ನಿವೃತ್ತಿಯ ನಂತರ 'ಜ್ಯೋತಿಧಾಮ' ಎಂಬ ಸಮಾಜ ಸೇವಾ ಸಂಘಟನೆ ಸ್ಥಾಪಿಸಿದ್ದಾರೆ. ಚಾಮರಾಜನಗರ ತಾಲೂಕಿನ ಕುದೇರು ಸಂಗಶೆಟ್ಟಿಯವರ ಮಕ್ಕಳಾದ ಕೆ.ಎಸ್. ಮಹದೇವಪ್ಪ ಮತ್ತಿತರ ಮೂವರು ಮಕ್ಕಳು, ಧನ ದಾನ, ಕಟ್ಟಡ ನಿರ್ಮಾಣ ಇತ್ಯಾದಿಗಳ ಮೂಲಕ ಉಲ್ಲೇಖನೀಯ ಸಹಾಯ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ; ಐವತ್ತರ ದಶಕದಲ್ಲಿ ಕುದೇರಿನ ಪ್ರೌಢ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಹೆಚ್ಚಿನ ಮೊತ್ತದ ಹಣ ಕೊಟ್ಟರಲ್ಲದೆ, ಕುದೇರಿನ ಸರ್ಕಾರಿ ಆಸ್ಪತ್ರೆ, ದೇವನೂರಿನ ಪ್ರೌಢ ಶಾಲೆ, ಟಿ.ನರಸೀಪುರದ ವಿದ್ಯೋದಯ ಪ್ರೌಢ ಶಾಲೆ, ಚಾಮರಾಜನಗರದ ರೋಟರಿ ಶಾಲೆ, ಶರಣ ಸಾಹಿತ್ಯ ಪರಿಷತ್ತಿಗೆ ದತ್ತಿ, ಮಲೆಯೂರಿನ ಕನಕಗಿರಿಯ ಉಚಿತ ವಿದ್ಯಾರ್ಥಿ ನಿಲಯ, ಚಾಮರಾಜನಗರದ ದೀನ ಬಂಧು ಸಂಸ್ಥೆ– ಇವುಗಳಿಗೆ ಧನ ಸಹಾಯ ಮಾಡಿದ್ದಾರೆ.

ವಿದ್ಯಾ ಪ್ರಚಾರವಲ್ಲದೆ, ವೀರಶೈವ ಸಮಾಜದ ಅಭಿವೃದ್ಧಿಗಾಗಿ ಬಹಳವಾಗಿ ದುಡಿದವರೆಂದು ಹೇಳಲಾಗುವ, ವ್ಯಾಕರಣ ಪಂಡಿತ ಬಿ. ಮಲ್ಲಪ್ಪನವರು, ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದವರು. ವಿಧಾನ ಸಭೆಯ ಸ್ಪೀಕರ್‌ಆಗಿದ್ದ ಕೆ.ಎಸ್. ನಾಗರತ್ನಮ್ಮನವರು, ಗುಂಡ್ಲುಪೇಟೆ ತಾಲೂಕಿನ ಕೆ.ಸಿ. ಸುಬ್ಬಣ್ಣನವರ ಪತ್ನಿ. ಪತಿಯ ನಿಧನದ ನಂತರ ಜನಸೇವೆಗೆ ನಿಂತರು. ಗುಂಡ್ಲುಪೇಟೆ ತಾಲೂಕಿನಲ್ಲಿ ನೀರಾವರಿ ಸೌಲಭ್ಯಕ್ಕಾಗಿ ನಳೂರು ಅಮಾನಿಕೆರೆ, ಕಲ್ಲಕಟ್ಟೆ ಹಳ್ಳಗಳ ನಿರ್ಮಾಣಕ್ಕೆ, ವಡ್ಡಗಟ್ಟೆ ಮುಂಟಿಪುರದ ಕೆರೆಗಳ ನಿರ್ಮಾಣಕ್ಕೆ ಮತ್ತು ಗುಂಡ್ಲುಪೇಟೆಯಲ್ಲಿ ತಾಲೂಕು ಕಛೇರಿ ಕಟ್ಟಡ ಹಾಗೂ ಮಿನಿ ಸೌಧ ನಿರ್ಮಾಣಕ್ಕೆ ಕಾರಣಕರ್ತರು. ಮೈಸೂರಿನಲ್ಲಿ ಇವರು ಮಹಿಳೆಯರ ಪ್ರಗತಿಗಾಗಿ ಮಾತೃಮಂದಿರ ಸ್ಥಾಪಿಸಿದರು. ಅದರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಗುಂಡ್ಲುಪೇಟೆಯಲ್ಲಿ ಕೆ.ಎಸ್. ನಾಗರತ್ನಮ್ಮ ಬಾಲಿಕಾ ಪ್ರೌಢ ಶಾಲೆಯ ಸ್ಥಾಪನೆಗೆ ಕಾರಣರಾಗಿ, ಇದರ ಮಹಾ ಪೋಷಕರಾಗಿ ಬೆಂಬಲವಿತ್ತರು. ತೆರಕಣಾಂಬಿಯಲ್ಲಿ ಸರ್ಕಾರಿ ಪ್ರೌಢಶಾಲೆಯನ್ನೂ, ಗುಂಡ್ಲುಪೇಟೆಯಲ್ಲಿ ಸರ್ಕಾರಿ ಆರೋಗ್ಯ ಕೇಂದ್ರವನ್ನೂ ಪ್ರಾರಂಭಿಸಿದರು. ವಿಧಾನ ಸಭೆ ಮತ್ತು ಪರಿಷತ್‌ಗಳಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ ಗುಂಡ್ಲುಪೇಟೆ ತಾಲೂಕಿನ ಹುಂಡೀಪುರದ ಎಚ್.ಕೆ. ಶಿವರುದ್ರಪ್ಪ, ಸಮಾಜ ಸೇವೆಗೆ ಹೆಸರಾಗಿದ್ದರು. ಹುಂಡೀಪುರದಲ್ಲಿ ೧೯೫೨ರಲ್ಲಿ ಸಹಕಾರ ಸಂಘವನ್ನು, ೧೯೫೪ರಲ್ಲಿ ತಂದೆ ರುದ್ರಪ್ಪ ಉರುಫ್ ಕರಿಯಪ್ಪನವರ ಹೆಸರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು, ಬಾಚಹಳ್ಳಿಯಲ್ಲಿ ೧೯೫೮ರಲ್ಲಿ ಶ್ರೀ ಬಸವೇಶ್ವರ ಅನಾಥಾಲಯವನ್ನು ಸ್ಥಾಪಿಸಿದರು. ಅನಾಥಾಲಯದ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದರು. ಹುಂಡೀಪುರದ ಪ್ರಾಥಮಿಕ ಶಾಲೆಗೆ ಎರಡು ಎಕರೆ ಜಮೀನನ್ನೂ; ನೀರಾವರಿ ಸೌಕರ್ಯಕ್ಕಾಗಿ ಕೋಡಹಳ್ಳಿ ಕಲ್ಲುಕಟ್ಟೆ ಹಳ್ಳದ ನಿರ್ಮಾಣವಾದಾಗ, ನಲವತ್ತು ಎಕರೆ ಜಮೀನನ್ನೂ ಬಿಟ್ಟು ಕೊಟ್ಟರು. ಗುಂಡ್ಲುಪೇಟೆ ತಾಲೂಕಿನಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಇವರು ಮಾಡಿಸಿಕೊಟ್ಟುದಾಗಿ ಹೇಳಲಾಗುತ್ತದೆ.

ಈ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಕೊಡುಗೈ ದಾನಿಗಳೂ, ಜನ ಹಿತ ಬಯಸುವ ಸಮಾಜ ಸೇವಕರೂ ಹೆಚ್ಚಿನ ಸಂಖ್ಯೆರಲ್ಲಿ ಇರುವುದಾಗಿ ತಿಳಿದು ಬರುತ್ತದೆ. 'ವೈದ್ಯರತ್ನಂ" ಎಂಬ ಬಿರುದನ್ನು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಪಡೆದ, ಗುಂಡ್ಲು ಪಂಡಿತ ಮನೆತನದ ಲಕ್ಷ್ಮಣಾಚಾರ್ಯರು ತ್ಯಾಗರಾಜ ರಸ್ತೆಯಲ್ಲಿ ಗೋಪಾಲ ಕೃಷ್ಣ ದೇವಾಲಯವನ್ನೂ, ಮೈಸೂರಿನಲ್ಲಿ ಆಯುರ್ವೇದ ಮಹಾ ಪಾಠಶಾಲೆಯನ್ನೂ(ಆರ್ಯುವೇದಿಕ್ ಕಾಲೇಜ್), ಸಾರ್ವಜನಿಕರ ಪ್ರಯೋಜನಕ್ಕಾಗಿ ಕಟ್ಟಿಸಿದ್ದಾರೆ.

ಬಡವರ ಬಗ್ಗೆ ಅನುಕಂಪವಿದ್ದ ಕಬ್ಬಹಳ್ಳಿಯ ಸಾಹುಕಾರ ಚನ್ನಬಸಪ್ಪನವರು, ೧೯೧೩ರಲ್ಲಿ ತಮ್ಮ ತಂದೆ ಸಿದ್ದಲಿಂಗಪ್ಪನವರ ಹೆಸರಿನಲ್ಲಿ ಕಬ್ಬಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯನ್ನೂ, ನಂತರ ಅಣ್ಣಂದಿರಾದ ಸುಬ್ಬಪ್ಪ ಮತ್ತು ಪುಟ್ಟಪ್ಪನವರ ಹೆಸರಿನಲ್ಲಿ ಶಿಕ್ಷಕರ ವಸತಿ ಗೃಹಗಳನ್ನೂ ಕಟ್ಟಿಸಿದರು. ಕಬ್ಬಹಳ್ಳಿ ಶಾಲೆಯ ಅಭಿವೃದ್ಧಿಗೆ, ವಿದ್ಯಾರ್ಥಿ ನಿಲಯದ ಸುಧಾರಣೆಗೆ ಮತ್ತು ಗ್ರಂಥ ಭಂಡಾರ ಸ್ಥಾಪನೆಗೆ ಎಂದು ಸಾವಿರಾರು ರುಪಾಯಿಗಳ ವಿವಿಧ ಠೇವಣಿಗಳನ್ನು ಇಟ್ಟರು. ಶ್ರೀ ಗುರುಮಲ್ಲೇಶ್ವರ ಭಿಕ್ಷದ ಮಠ, ಕಾಳಿಕಾಂಬ ದೇವಸ್ಥಾನಗಳಿಗೆ ಸ್ಥಳದಾನ ಮಾಡಿದರು. ೧೯೨೦ರಲ್ಲಿ ವೀರಶೈವ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ನಂಜನಗೂಡಿನ ಪ್ರೌಢ ಶಾಲಾ ಕಟ್ಟಡಕ್ಕೆ ಹಣ ದಾನ, ಕೋಡಹಳ್ಳಿಯಲ್ಲಿ ನಲವತ್ತು ಎಕರೆ ಗದ್ದೆಯಲ್ಲಿ ಬೆಳೆಯುವ ಭತ್ತವನ್ನು ಮೈಸೂರಿನ ವಿದ್ಯಾರ್ಥಿ ನಿಲಯದ ಮಕ್ಕಳಿಗೆ ಬಳಸಬೇಕೆಂಬ ಉದ್ದೇಶದಿಂದ, ನಲವತ್ತು ಎಕರೆ ಗದ್ದೆಯನ್ನು, ವಿದ್ಯಾರ್ಥಿ ನಿಲಯಕ್ಕೆ ಬಿಟ್ಟಿದ್ದಲ್ಲದೆ, ಬಡ ವಿದ್ಯಾರ್ಥಿಗಳಿಗೆ ಕಬ್ಬಹಳ್ಳಿಯ ತಮ್ಮ ಮನೆಯಲ್ಲೂ ಆಶ್ರಯ ನೀಡಿದ್ದರು.

ಪುತ್ತನಪುರದ ಚಿಕ್ಕಮಲ್ಲಪ್ಪನವರು, ಗುಂಡ್ಲುಪೇಟೆ ತಾಲೂಕಿನ ವಿದ್ಯಾರ್ಥಿಗಳಿಗೆ ವಿದ್ಯಾನುಕೂಲಕ್ಕಾಗಿ ೧೯೨೮ರಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ಇದರ ನಿರ್ವಹಣೆಗಾಗಿ ಹುಲ್ಲೇಪುರದ ಹತ್ತಿರ ಮುವ್ವತ್ತೈದು ಎಕರೆ ಜಮೀನನ್ನು ದಾನ ಮಾಡಿದ್ದರು. ಹಲವಾರು ವರ್ಷಗಳು ನಡೆಸಿದ ನಂತರ, ಈ ನಿಲಯವನ್ನು ಸರ್ಕಾರಕ್ಕೆ ಒಪ್ಪಿಸಿದ್ದು, ಇದು ಈಗ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಟ್ಟಡವಾಗಿ ಪರಿವರ್ತನೆಗೊಂಡಿದೆ.

ದೊಡ್ಡಹುಂಡಿ ಭೋಗಪ್ಪನವರು ಶಾಲೆ ಮತ್ತು ಆಟದ ಮೈದಾನಕ್ಕಾಗಿ ಒಂಬತ್ತೂವರೆ ಎಕರೆ ಜಮೀನನ್ನು ಬಿಟ್ಟು ಕೊಟ್ಟಿದ್ದರಿಂದ, ೧೯೫೩ರಲ್ಲಿ ಗುಂಡ್ಲುಪೇಟೆಯಲ್ಲಿ ಇವರ ಹೆಸರಿನ ಪ್ರೌಢ ಶಾಲೆ ಆರಂಭಗೊಂಡಿತು. ಈ ಶಾಲೆಯ ಎದುರಿಗೆ ಗಫಾರ್ ಖಾನ್‌ಅವರು ವಿದ್ಯಾರ್ಥಿ ನಿಲಯ ಆರಂಭಿಸಿದ ನಂತರ, ಭೋಗಪ್ಪನವರು ಸ್ಥಿರ ಠೇವಣಿಯೊಂದನ್ನು ಇಟ್ಟು ಈ ನಿಲಯದ ಮಕ್ಕಳ ಅಗತ್ಯ ವಸ್ತುಗಳನ್ನು ಪೂರೈಸುವಂತೆ ನೋಡಿಕೊಂಡರು. ಭೋಗಪ್ಪನವರು ಓಂಕಾರ ಸಿದ್ದೇಶ್ವರ ಬೆಟ್ಟದಲ್ಲಿ ಒಂದು ಕಲ್ಯಾಣ ಮಂಟಪವನ್ನೂ, ಅರವಟ್ಟಿಗೆ ಜಗುಲಿಯನ್ನೂ, ಎರಡು ಬಾವಿಗಳನ್ನೂ ಕಟ್ಟಿಸಿದ್ದಲ್ಲದೆ, ಜಾತ್ರೆಯ ದಿನ ಅನ್ನ ದಾಸೋಹವನ್ನೂ ನಡೆಸುತ್ತಿದ್ದರು. ಈಗ ಈ ದಾಸೋಹ ಕಾರ್ಯವು ಅವರ ಮನೆತನದ ಡಿ.ಎಸ್.ರಾಜು ಮತ್ತು ಸಹೋದರರ ಮೂಲಕ ಮುಂದುವರಿದಿದೆ.

ಕಬ್ಬಹಳ್ಳಿ ಸಿರಿಯಪ್ಪನವರು, ಬಡ ಮಕ್ಕಳು ಮತ್ತು ಹೆಣ್ಣು ಮಕ್ಕಳು ತಮ್ಮ ವಿದ್ಯಾ ವ್ಯಾಸಂಗವನ್ನು ತೊಂದರೆ ಇಲ್ಲದೆ ಮುಂದುವರೆಸಲು ಅನುಕೂಲ ಮಾಡಿ ಕೊಡಬೇಕೆಂಬ ಉದ್ದೇಶದಿಂದ ೧೯೩೬ರಲ್ಲಿ ನಂಜನಗೂಡಿನಲ್ಲಿ ತಮ್ಮ ತಾತನ ಹೆಸರಿನಲ್ಲಿ 'ಶ್ರೀ ಜವನಪ್ಪ ವಿದ್ಯಾರ್ಥಿ ನಿಲಯ'ವನ್ನೂ; ೧೯೪೯ರಲ್ಲಿ ತಮ್ಮ ತಾಯಿಯ ಹೆಸರಿನಲ್ಲಿ 'ಶ್ರೀಮತಿ ಕೆಂಪದೇವಮ್ಮ ಪ್ರೌಢ ಶಾಲೆ'ಯನ್ನೂ; ೧೯೬೬ರಲ್ಲಿ ತಮ್ಮ ಭಾವನವರ ಹೆಸರಿನಲ್ಲಿ, ಕಲ್ಲಹಳ್ಳಿಯ 'ಶ್ರೀ ಕಪ್ಪಣ್ಣ ಬಾಲಕಿಯರ ವಿದ್ಯಾರ್ಥಿ ನಿಲಯ'ವನ್ನೂ ಕಟ್ಟಿಸಿದರು. ಕಬ್ಬಹಳ್ಳಿಯಲ್ಲಿ ೧೯೪೩ರಲ್ಲಿ, ತಮ್ಮ ತಾತ ಮರಿಯಪ್ಪನವರ ಹೆಸರಿನಲ್ಲಿ ಪಶುವೈದ್ಯ ಚಿಕಿತ್ಸಾಲಯವನ್ನು ಪ್ರಾರಂಭಿಸಿದರು. ಈ ಹಳ್ಳಿಯ ಜನರು ಆಸ್ಪತ್ರೆ ಇಲ್ಲದೆ

ಗುಂಡ್ಲುಪೇಟೆಗೆ ಹೋಗಬೇಕಾಗುತ್ತಿದ್ದು, ವಾಹನ ಸೌಕರ್ಯವಿಲ್ಲದ ರೋಗಿಗಳಿಗೆ ಆಗುತ್ತಿದ್ದ ತೊಂದರೆಯನ್ನು ತಪ್ಪಿಸಲು, ೧೯೬೬ರಲ್ಲಿ, ತಮ್ಮ ಪತ್ನಿಯ ಹೆಸರಿನಲ್ಲಿ "ಶ್ರೀಮತಿ ಸುಬ್ಬಮ್ಮ ಸಿರಿಯಪ್ಪ ಸಮುದಾಯ ಆರೋಗ್ಯ ಕೇಂದ್ರ'ವನ್ನು ಕಟ್ಟಿಸಿದರು. ಸಿರಿಯಪ್ಪನವರಿಗೆ, ಶ್ರೀ ಜಯಚಾಮರಾಜೇಂದ್ರ ಒಡೆಯರಿಂದ ೧೯೫೫ರಲ್ಲಿ 'ಗೋಲ್ಡ್ ಮೆಡಲ್' ಪ್ರಶಸ್ತಿಯೂ, ೧೯೬೪ರಲ್ಲಿ ಸರ್ಕಾರದಿಂದ 'ಸಾರ್ವಜನಿಕ ಸೇವಾ ಪ್ರಶಸ್ತಿ'ಯೂ, ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಂದ 'ಧರ್ಮ ಪ್ರಕಾಶ' ಎಂಬ ಬಿರುದೂ ಇವರ ಸಾಮಾಜಿಕ ಸೇವೆಯ ಗುರುತಾಗಿ ಕೊಡಲ್ಪಟ್ಟಿವೆ.

ಕಲ್ಲಹಳ್ಳಿ ಗೌಡರ ಕೊಂಗಳಪ್ಪನವರು, ಕಬ್ಬಹಳ್ಳಿಯಲ್ಲಿ ೧೯೪೮ರಲ್ಲಿ ಮದ್ದಾನೇಶ್ವರ ಅನಾಥಾಲಯವನ್ನು ಸ್ಥಾಪಿಸಿ, ಇದಕ್ಕಾಗಿ ಹದಿನೈದು ಎಕರೆ ಜಮೀನನ್ನು ದಾನ ಮಾಡಿದ್ದಾರೆ. ಗುಂಡ್ಲುಪೇಟೆಯ ಅಬ್ದುಲ್ ಗಫಾರ್ ಖಾನ್ ಅವರು, ವೆಲ್ಲೂರು ಆಸ್ಪತ್ರೆಗೆ ಹಣದ ನೆರವು ನೀಡಿದ್ದಲ್ಲದೆ, ಮೈಸೂರಿನ ಪಿ.ಕೆ. ಸ್ಯಾನಿಟೋರಿಯಂನಲ್ಲಿ ಒಂದು ವಾರ್ಡನ್ನೂ ಮತ್ತು ಕೆ.ಆರ್. ಆಸ್ಪತ್ರೆಯಲ್ಲಿ ಒಂದು ವಾರ್ಡನ್ನೂ ಕಟ್ಟಿಸಿಕೊಟ್ಟಿದ್ದಾರೆ. ಹಾಲಹಳ್ಳಿ ಸೋಮಾರಾಧ್ಯರು ೧೯೫೩ರಲ್ಲಿ ಶಾಲಾ ಕಟ್ಟಡ, ಪಶು ವೈದ್ಯ ಶಾಲೆಗಳನ್ನು ಕಟ್ಟಿಸಿ, ಪ್ರಾಥಮಿಕ ಶಾಲೆಗಾಗಿ ಒಂದು ಎಕರೆ ಹದಿಮೂರು ಗುಂಟೆ ಭೂಮಿದಾನ ಮಾಡಿದ್ದಾರೆ. ಮೂಡುಗೂರು ಗೌಡರ ಸುಬ್ಬಣ್ಣನವರು, ಕಿರಿಯ ಪ್ರಾಥಮಿಕ ಶಾಲೆಯ ನಿರ್ಮಾಣ ಮತ್ತು ೧೯೬೮ರಲ್ಲಿ ರೈತರ ಸೇವಾ ಸಹಕಾರ ಸಂಘದ ಸ್ಥಾಪನೆ ಮಾಡಿ, ಈ ಶಾಲೆಗೆ ಐದು ಎಕರೆ ಜಮೀನು ದಾನ ಮಾಡಿದ್ದಾರೆ. ಹೆಗ್ಗಡಹಳ್ಳಿ ಕೊಂಗಳಪ್ಪನವರು ತೆರಕಣಾಂಬಿಯಲ್ಲಿ ಒಂದು ಆಸ್ಪತ್ರೆಯನ್ನೂ, ೧೯೫೨ರಲ್ಲಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡವನ್ನೂ ಕಟ್ಟಿಸಿ, ಶಾಲೆಯ ವಿದ್ಯಾರ್ಥಿಗಳಿಗೆ ಹತ್ತು ವರ್ಷಗಳ ಕಾಲ ಮಧ್ಯಾಹ್ನದ ಊಟಕ್ಕೆ ವ್ಯವಸ್ಥೆ ಮಾಡಿದ್ದರು. ಸೋಮಹಳ್ಳಿ ಶಿವರಾಮಪ್ಪ ಮತ್ತು ಪುಟ್ಟಸ್ವಾಮಯ್ಯ ಸಹೋದರರು, ತಂದೆಯವರ ಹೆಸರಿನಲ್ಲಿ 'ಪುಟ್ಟಬಸಪ್ಪ ಕಿರಿಯ ಪ್ರಾಥಮಿಕ ಶಾಲೆ'ಯನ್ನು, ತಾಯಿಯ ಹೆಸರಿನಲ್ಲಿ 'ಸುಬ್ಬಮ್ಮ ಪ್ರಾಥಮಿಕ ಶಾಲೆ'ಯನ್ನು ಕಟ್ಟಿಸಿದ್ದಾರೆ. ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಕುಡಿಯುವ ನೀರಿಗಾಗಿ ಬಾವಿ ನಿರ್ಮಾಣ, ಆರು ಎಕರೆ ಜಮೀನು ದಾನ, ಹಾಲಿನ ಡೈರಿ ನಿರ್ಮಾಣಕ್ಕೆ ಸ್ಥಳ ದಾನ, ೧೯೫೮ರಲ್ಲಿ ಸೋಮನಹಳ್ಳಿಗೆ ವಿದ್ಯುತ್ ಸಂಪರ್ಕ ಇವೇ ಮುಂತಾದ ಸೇವೆಯನ್ನು ಜನರ ಸೌಕರ್ಯಕ್ಕಾಗಿ ಸಲ್ಲಿಸಿದ್ದಾರೆ. ಬರಗಿ ದೊಡ್ಡಲಿಂಗಪ್ಪನವರು, ೧೯೪೧ರಲ್ಲಿ ತಮ್ಮ ಪತ್ನಿಯ ಹೆಸರಿನಲ್ಲಿ ಊರಿನ ಶಾಲೆಗೆ ಮೂರು ಕೊಠಡಿಗಳನ್ನು ನಿರ್ಮಿಸಿ, ವಸತಿಹೀನರು ಮನೆಕಟ್ಟಿಕೊಳ್ಳಲು ಎರಡು ಎಕರೆ ಜಮೀನನ್ನೂ, ಶಾಲೆಯ ಮಕ್ಕಳ ಆಟದ ಮೈದಾನಕ್ಕಾಗಿ ಮುವ್ವತ್ತು ಗುಂಟೆ ಜಮೀನನ್ನೂ ದಾನ ಮಾಡಿದ್ದಾರೆ. ಬರಗಿ ಬಿ.ಎಲ್. ನಾಗಮಲ್ಲಪನವರು, ತಮ್ಮ ಬೆಂಗಹಳ್ಳಿ ಹೊಲ ಮಾರಿ ಶಾಲಾ ಕೊಠಡಿಯನ್ನೂ; ಕಬ್ಬಹಳ್ಳಿ ಪಟೇಲ್ ರಾಮಪ್ಪನವರು, ಕಬ್ಬಹಳ್ಳಿಯ ಮದ್ದಾನೇಶ್ವರ ವಿದ್ಯಾರ್ಥಿ ನಿಲಯಕ್ಕೆ ಸ್ಥಳದಾನವನ್ನೂ ಮಾಡಿದ್ದಾರೆ. ರಾಮೇಗೌಡರ ಸಿದ್ದಪ್ಪನವರು ಒಂದು ಎಕರೆ ಭೂಮಿದಾನ ಮಾಡಿದ್ದು ಅದರಲ್ಲಿ ಸೋಮನಹಳ್ಳಿ ಪಿಣ್ಣಮ್ಮನ ನಿಂಗಪ್ಪನವರು, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವನ್ನು ೧೯೩೨ರಲ್ಲಿ ಕಟ್ಟಿಸಿದ್ದಾರೆ.

ಹಾಲಹಳ್ಳಿ ಎಚ್.ಬಿ. ಲಿಂಗಪ್ಪನವರು, ದೇವಸ್ಥಾನ, ನಾಗರಕಟ್ಟೆಗಳಲ್ಲದೆ, ಅಪಘಾತದಲ್ಲಿ ಮಡಿದ ಮಗನ ಸ್ಮರಣಾರ್ಥ ಬೇಗೂರಿನಲ್ಲಿ ಆಸ್ಪತ್ರೆ ಕಟ್ಟಿಸಿ, ಎರಡು ಎಕರೆ ಮುವ್ವತ್ತು ಗುಂಟೆ ಜಮೀನನ್ನು ಸಾರ್ವಜನಿಕ ಬಳಕೆಗೆ ಬಿಟ್ಟುಕೊಟ್ಟಿದ್ದಾರೆ. ಮಹಾರಾಜರಿಂದ 'ಗೋಲ್ಡ್ ಮೆಡಲ್' ಪಡೆದ ಕಲ್ಲಹಳ್ಳಿ ಪಟೇಲ್ ಚಿಕ್ಕ ಮಲ್ಲಪ್ಪನವರು, ೧೯೨೭ರಲ್ಲಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡವನ್ನೂ; ಕಲ್ಲಹಳ್ಳಿ ಕಪ್ಪಣ್ಣನವರು ಹೆಣ್ಣು ಮಕ್ಕಳಿಗಾಗಿ ಬಾಲಕಿಯರ ವಿದ್ಯಾರ್ಥಿ ನಿಲಯವನ್ನೂ; ಬಾಚಹಳ್ಳಿ ಹುಚ್ಚೇಗೌಡರು ೧೯೧೮ರಲ್ಲಿ ಪ್ರಾಥಮಿಕ ಶಾಲೆಯ ಕಟ್ಟಡವನ್ನೂ; ಪಡಗೂರು ಪಡುವಲ ಹಟ್ಟಿ ನಂಜಪ್ಪನವರು ೧೯೬೦ರಲ್ಲಿ ಕಿರಿಯ ಪ್ರಾಥಮಿಕ ಶಾಲೆಯನ್ನೂ; ಚೌಡಹಳ್ಳಿ

ನಂಜಪ್ಪನವರು ೧೯೧೬ರಲ್ಲಿ ಹುಂಡಿಪುರ ಗ್ರಾಮದಲ್ಲಿ ಪ್ರಾಥಮಿಕ ಶಾಲಾ ಕಟ್ಟಡವನ್ನೂ; ಚೌಡಹಳ್ಳಿ ಸಿ.ಎನ್. ಮಾದಪ್ಪನವರು, ತಮ್ಮ ತಾಯಿಯ ಹೆಸರಿನಲ್ಲಿ ಹುಂಡಿಪುರದ ಆಸ್ಪತ್ರೆಯಲ್ಲಿ ಕೆಂಪಮ್ಮ ಹೆರಿಗೆ ವಾರ್ಡನ್ನೂ; ಬಲಚವಾಡಿ ಬಿ.ಎಸ್. ಚನ್ನಬಸಪ್ಪನವರು ಮಲ್ಲಮ್ಮನ ಹುಂಡಿಯಲ್ಲಿ ಒಂದು ಶಾಲಾ ಕೊಠಡಿಯನ್ನು ಹಾಗೂ ತಂದೆ ಸಿದ್ದಲಿಂಗಪ್ಪನವರ ಹೆಸರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನೂ; ಶಿವಪುರದ ಕಪನಪ್ಪನವರು ೧೯೮೩ರಲ್ಲಿ ಪ್ರಾಥಮಿಕ ಶಾಲಾ ಕಟ್ಟಡವನ್ನೂ; ಕಿಲಗೆರೆ ನಾಗಮ್ಮ ಗುರಿಕಾರ್ ಬಸಪ್ಪನವರು ಸ್ಥಳ ಕೊಟ್ಟು ಎನ್.ಇ.ಎಸ್. ನೆರವಿನಿಂದ ೧೯೫೯ರಲ್ಲಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡವನ್ನೂ ಮತ್ತು  ದೊಡ್ಡ ತುಪ್ಪೂರು ಮತ್ತು ಶಿಂಡಿನಪುರದ ನಡುವೆ, ಸಾರ್ವಜನಿಕರಿಗಾಗಿ 'ಗುರಿಕಾರರ ಕೊಳ' ಎಂದೇ ಹೆಸರಾಗಿರುವ ಕೊಳವೊಂದನ್ನೂ; ಬೇರಂಬಾಡಿ ಗೋಪಪ್ಪನವರು ಮೂರು ಎಕರೆ ಭೂಮಿ ದಾನ ಮಾಡಿದ್ದು, ೧೯೭೯ರಲ್ಲಿ ಪ್ರಾಥಮಿಕ ಶಾಲಾ ಕಟ್ಟಡವನ್ನೂ; ಅಲತ್ತೂರು ಕೆಂಪೇಗೌಡನವರು ಊರಿನಲ್ಲಿ ಪಶು ವೈದ್ಯ ಶಾಲೆ ಮತ್ತು ಪ್ರಾಥಮಿಕ ಶಾಲಾ ಕಟ್ಟಡವನ್ನೂ; ಕಡತಾಳ ಕಟ್ಟೆ ಹುಂಡಿ ಗೌಡಿಕೆ ಕುಳ್ಳಪ್ಪನ ನಂಜಪ್ಪನವರು ೧೯೪೮ರಲ್ಲಿ ಶ್ರೀ ಬಸವೇಶ್ವರ ದೇವಸ್ಥಾನವನ್ನೂ; ಇವರ ಮಕ್ಕಳಾದ ಗೌಡಿಕೆ ಕರಿಯಪ್ಪ ಹಾಗೂ ಸಹೋದರರು ೧೯೭೭ರಲ್ಲಿ ಸ್ವಂತ ಸ್ಥಳದಲ್ಲಿ, ಕಿರಿಯ ಪ್ರಾಥಮಿಕ ಶಾಲೆಯನ್ನೂ; ವೀರಮ್ಮನ ಮಾದಪ್ಪನವರು ಪತ್ನಿಯ ಹೆಸರಲ್ಲಿ ಒಂದು ಶಾಲಾ ಕೊಠಡಿಯನ್ನೂ; ಸೋಮನಹಳ್ಳಿ ಚಿನ್ನಸ್ವಾಮಿ ಅಯ್ಯಂಗಾರ್‌ಅವರು, ತಮ್ಮ ತಾಯಿ ನೆನಪಿಗೆ ಚಾಮರಾಜನಗರ ತಾಲೂಕಿನ ಕೃಗಾಣದಲ್ಲಿ, ೧೯೬೧ರಲ್ಲಿ ಪ್ರಾಥಮಿಕ ಶಾಲಾ ಕಟ್ಟಡವನ್ನೂ ಕಟ್ಟಿಸಿದ್ದಾರೆ.

ಅಂಕಹಳ್ಳಿ ಸಿದ್ದಪ್ಪನವರು, ೧೯೩೬ರಲ್ಲಿ ಕಿರಿಯ ಪ್ರಾಥಮಿಕ ಶಾಲೆಯನ್ನು ಕಟ್ಟಿಸಿ, ಇದಕ್ಕೆ ಎರಡು ಎಕರೆ ಜಮೀನು ಹಾಗೂ ಮಲ್ಲನ ಮಾಲೆ ಮಠಕ್ಕೆ ಎರಡು ಎಕರೆ  ಮತ್ತು ಮಹದೇಶ್ವರ ದೇವಸ್ಥಾನದ ಪೂಜಾ ನಿರ್ವಹಣೆಗೆಂದು ಎರಡು ಎಕರೆ ಜಮೀನು, ೧೯೭೩ರಲ್ಲಿ ಶಾಲೆ ಮತ್ತು ಸೇವಾ ಸಹಕಾರ ಸಂಘಕ್ಕೆ ಇಪ್ಪತ್ತೂರು ಗುಂಟೆ ಜಮೀನು ನೀಡಿದ್ದಾರೆ. ಪರಿಶಿಷ್ಟ ವರ್ಗದ ಕುಂದೊಡ್ಡಯ್ಯ ಹಾಗೂ ಕತಗಯ್ಯ ಎಂಬುವವರಿಗೆ ಮೂರು ಎಕರೆ ಜಮೀನು ದಾನ ಮಾಡಿದ್ದಾರೆ. ೧೯೪೬ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯಿಂದ ಬೊಮ್ಮಲಾಪುರದ ವರೆಗೆ ತಮ್ಮ ಜಮೀನಿನಲ್ಲಿ ರಸ್ತೆ ನಿರ್ಮಿಸಲು ಅನುಕೂಲ ಮಾಡಿಕೊಟ್ಟಿದ್ದಾರೆ. ಗುಂಡ್ಲುಪೇಟೆ ಹಳೆಕಟ್ಟೆ ವೆಂಕಟಶೆಟ್ಟರು, ಪಾರ್ವತಿ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ ಮತ್ತು ಹುಲಿಗನ ಮೊರಡಿಗಳಲ್ಲಿ ಸಾರ್ವಜನಿಕರಿಗಾಗಿ ಮಂಟಪಗಳನ್ನು ಕಟ್ಟಿಸಿದ್ದಾರೆ. ಕಂದೇಗಾಲ ನಂಜಪ್ಪನವರು ಪಾರ್ವತಿ ಬೆಟ್ಟದಲ್ಲಿ ಒಂದು ಛತ್ರವನ್ನು ಮತ್ತು ಊರಿನವರಿಗಾಗಿ ಒಂದು ಕುಡಿಯುವ ನೀರಿನ ಟ್ಯಾಂಕನ್ನು ಕಟ್ಟಿಸಿದ್ದಾರೆ.

ಸಿ.ಪಿ. ಹುಚ್ಚೇಗೌಡರು ಊರಿನಲ್ಲಿ ನೀರು ಪೂರೈಕೆಗಾಗಿ ಬಾವಿ ತೆಗೆಸಿದ್ದಾರೆ. ಗುಂಡ್ಲುಪೇಟೆ ಜವಳಿ ಅಂಗಡಿ ಕೃಷ್ಣಪ್ಪನವರು, ತೆರಕಣಾಂಬಿಯ ಹುಲುಗನ ಮೊರಡಿ ವೆಂಕಟರಮಣಸ್ವಾಮಿ ಬೆಟ್ಟಕ್ಕೆ ಮತ್ತು ಪಾರ್ವತಿ ಬೆಟ್ಟಕ್ಕೆ, ವಿದ್ಯುತ್ ಸೌಕರ್ಯ ಕಲ್ಪಿಸಿ, ಬ್ರಾಹ್ಮಣರ ಬೀದಿಯಲ್ಲಿ ಮಾರಮ್ಮನ ದೇವಸ್ಥಾನವನ್ನೂ ಕಟ್ಟಿಸಿದ್ದಾರೆ. 'ಚಿಕ್ಕತುಪ್ಪೂರಿನ ಗಾಂಧಿ' ಎಂದೇ ಕರೆಯಲ್ಪಡುವ ಕಾಳವೀರಪ್ಪನವರು ಸರ್ಕಾರಿ ಪ್ರೌಢ ಶಾಲೆಗೆ ಒಂದೂವರೆ ಎಕರೆ ಸ್ಥಳ ದಾನ ಮಾಡಿದ್ದು, ೧೯೬೩ರಲ್ಲಿ ಶ್ರೀ ಸೋಮೇಶ್ವರ ವಿದ್ಯಾರ್ಥಿ ನಿಲಯಕ್ಕೆ ಹಣದಾನ ಮಾಡಿದ್ದಾರೆ. ಅಣ್ಣೂರುಕೇರಿ ಪಳ್ಳಿಮಾದ ಶೆಟ್ಟರು, ಮಹದೇಶ್ವರ ದೇವಸ್ಥಾನಕ್ಕೆ ತೇರನ್ನೂ; ದೊಡ್ಡ ತಾಯಮ್ಮ ದೇವಸ್ಥಾನಕ್ಕೆ ವರಾಂಡವನ್ನೂ; ಹಲವು ಜನರಿಗೆ ಧರ್ಮಾರ್ಥವಾಗಿ ಮಾಂಗಲ್ಯದೊಂದಿಗೆ ಮದುವೆಯನ್ನೂ ಮಾಡಿಸಿ ಕೊಟ್ಟಿದ್ದಾರೆ. ಕುಡಿಯುವ ನೀರಿಗೆ ಬಾವಿ ತೆಗೆಸಿದ್ದಾರೆ.  ಶ್ರೀ ಮಹದೇಶ್ವರ ಬೆಟ್ಟದಲ್ಲಿ ಮೂರು ಅಂಕಣ ಹೆಂಚಿನ ಮನೆ ಕಟ್ಟಿಸಿ ಛತ್ರವಾಗಿ ಬಳಸಲು ಕೊಟ್ಟಿದ್ದಾರೆ.

ಶಿವಪುರದ ಬಾಳೆ ತೋಟದ ಬಸಪ್ಪನವರು, ಬಹಳ ಹಿಂದೆಯೇ ಜಮೀನು ಖರೀದಿಸಿ, ಜೆ.ಎಸ್. ಎಸ್ ಪ್ರೌಢಶಾಲೆಗೆ ದಾನ ಮಾಡಿದ್ದಾರೆ. ೧೯೮೩ರಲ್ಲಿ ಪ್ರಾಥಮಿಕ ಶಾಲಾ ಕಟ್ಟಡವನ್ನು ಎನ್.ಇ.ಎಸ್. ನೆರವಿನೊಂದಿಗೆ ನಿರ್ಮಿಸಿದ್ದೇ ಅಲ್ಲದೇ ಲಕ್ಷಾಂತರ ರುಪಾಯಿ ಬೆಲೆಯುಳ್ಳ ಮನೆಯೊಂದನ್ನು ಶ್ರೀ ಬಸವೇಶ್ವರ ಅನಾಥಾಲಯಕ್ಕೆ ನೀಡಿದ್ದಾರೆ. ರಾಘವಾಪುರದ ಅರಸಯ್ಯನವರು ಕುಡಿಯುವ ನೀರಿಗಾಗಿ ಬಾವಿ ತೆಗೆಸಿ, ಅರಸಯ್ಯನಕಟ್ಟೆ ಎನ್ನಲಾಗುವ ಕಟ್ಟೆಯನ್ನು ದನಕರುಗಳಿಗೆ ನೀರು ಕುಡಿಯುವುದಕ್ಕಾಗಿ ಕಟ್ಟಿಸಿದ್ದಾರೆ. ಕೊಳ್ಳೇಗಾಲ ತಾಲೂಕಿನ ಮುಡಿಗುಂಡಂನ ಗುರಿಕಾರ್ ಸುಬ್ಬಪ್ಪ ವೀರಪ್ಪನವರು ಎಂ.ಜಿ.ಎಸ್.ವಿ. ಪ್ರೌಢಶಾಲೆಯನ್ನು ಕಟ್ಟಲು, ೧೯೭೭–೭೮ರಲ್ಲಿ ₹ ೩೦,೦೦೦ಗಳನ್ನು ದಾನವಾಗಿ ಕೊಟ್ಟು ಸಹಾಯಿಸಿದ್ದಾರೆ. ಮುಡಿಗುಂಡಂನ ಗುರಿಕಾರ್ ಮಾದಪ್ಪನವರು ತಮ್ಮ ಮಗಳ ಹೆಸರಿನಲ್ಲಿ ಬಾಲಕಿಯರ ಪ್ರೌಢ ಶಾಲೆಗಾಗಿ ಹಣ ಸಹಾಯ ಮಾಡಿದ್ದಲ್ಲದೆ, ₹ ಒಂದು ಲಕ್ಷ ಠೇವಣಿ ಇಟ್ಟು, ಅದರ ಬಡ್ಡಿ ಹಣದಿಂದ ವಿದ್ಯಾರ್ಥಿ ವೇತನವನ್ನು ಕೊಡುವ ವ್ಯವಸ್ಥೆ ಮಾಡಿದ್ದಾರೆ. ೧೯೩೯ರಲ್ಲಿ ಕೊಳ್ಳೇಗಾಲದಲ್ಲಿ ಹೆರಿಗೆ ಆಸ್ಪತ್ರೆ ನಿರ್ಮಾಣಕ್ಕಾಗಿ ₹ ೪೦,೦೦೦ಗಳನ್ನು ನೀಡಿದ್ದಾರೆ. ಮಾರುಕಟ್ಟೆಯ ಪಕ್ಕದಲ್ಲಿ ಮಕ್ಕಳಿಗಾಗಿ ಉದ್ಯಾನವನವನ್ನು ₹ ೩೦,೦೦೦ಗಳ ಖರ್ಚಿನಲ್ಲಿ ನಿರ್ಮಿಸುವ ವ್ಯವಸ್ಥೆ ಮಾಡಿದ್ದಾರೆ. ಮುಡಿಗುಂಡಂನಲ್ಲಿ ಇವರದೇ ಜಾಗದಲ್ಲಿರುವ ಜೆ.ಎಸ್.ಎಸ್. ಪ್ರೌಢಶಾಲೆಯ ಮಕ್ಕಳಿಗಾಗಿ ಉದ್ಯಾನ ವನವನ್ನು ನಿರ್ಮಿಸಿದ್ದಾರೆ.

ಕಾರಾಗಿಹುಂಡಿ ಎಚ್.ಕೆ.ಗುರುಮಲ್ಲಪ್ಪನವರು ಗ್ರಾಮದ ಜನರನ್ನು ಸಂಘಟನೆ ಮಾಡಿದ್ದು, ಮನೆ ಮನೆಗೂ ಹೋಗಿ ಹಣ ಸಂಗ್ರಹಿಸಿ, ಗುಂಡ್ಲುಪೇಟೆಯಲ್ಲಿ ಬಡವರಿಗಾಗಿಯೇ ಒಂದು ವಿದ್ಯಾರ್ಥಿ ನಿಲಯವನ್ನು ಕಟ್ಟಿಸಿ ನಡೆಸುತ್ತಿದ್ದರು. ಈ ನಿಲಯವು ಈಗಲೂ ನಡೆಯುತ್ತಿದೆ. ಗುರುಮಲ್ಲಪ್ಪನವರು, ವಿದ್ಯಾರ್ಥಿಗಳ ಆರ್ಥಿಕ ಅನುಕೂಲವನ್ನು ಗಮನಿಸಿ ಅದಕ್ಕೆ ತಕ್ಕಂತೆ ಶುಲ್ಕವನ್ನು ಪಡೆಯುತ್ತಿದ್ದರು. ಶಾಸಕರಾದ ಎಚ್.ಕೆ. ಶಿವರುದ್ರಪ್ಪನವರೂ ಇವರೊಂದಿಗೆ ಸೇರಿಕೊಂಡು ಇಬ್ಬರೂ ಸೇರಿ ರಾಗಿಯನ್ನು ಬೆಳೆದು ಬಡವರಿಗೆ ಪ್ರತಿ ಮನೆಗೆ ಹತ್ತು ಸೇರಿನಂತೆ ರಾಗಿಯನ್ನು ಹಂಚುತ್ತಿದ್ದರು. ಅಂಗಳದ ಮರಿಯಪ್ಪನವರು, ಪ್ರತಿ ವರ್ಷ ಏಳನೇ ತರಗತಿಯ ವಿದ್ಯಾರ್ಥಿಗಳನ್ನು ಅವರು ಯಾವುದೇ ಹಳ್ಳಿಯಿಂದ ಬಂದಿದ್ದರೂ, ಪಬ್ಲಿಕ್ ಪರೀಕ್ಷೆ ಮುಗಿಯುವವರೆಗೆ, ತಮ್ಮ ಮನೆಯಲ್ಲಿ ಇಟ್ಟು ಕೊಂಡು, ಅವರಿಗೆ ಊಟ–ತಿಂಡಿಗಳನ್ನು ಒದಗಿಸುತ್ತಿದ್ದರು.

ಚಾಮರಾಜನಗರ ತಾಲೂಕಿನ ಬಿಳಿಗಿರಿ ರಂಗನ ಬೆಟ್ಟದ ಯರಕನಗದ್ದೆಯ ಜಲ್ಲೆ ಸಿದ್ದಮ್ಮ, ಪಾರಂಪರಿಕ ವಿಧಾನದಲ್ಲಿ ಪ್ರಸೂತಿ ಸೇವೆಗೆ ಹೆಸರಾದವರು. ತಮ್ಮ ತಾಯಿಯಿಂದ ಗಿಡಮೂಲಿಕೆಯ ವೈದ್ಯ ಮತ್ತು ಪ್ರಸೂತಿ ವಿಧಾನಗಳನ್ನು ಕಲಿತು, ಹಣ, ಹೆಸರುಗಳ ಆಸೆಯಿಲ್ಲದೆ, ಹಗಲು ರಾತ್ರಿಗಳನ್ನು ಲೆಕ್ಕಿಸದೆ ಅಗತ್ಯ ಸಮಯದಲ್ಲಿ ಹೋಗಿ ಪ್ರಸೂತಿ ಮಾಡಿಸುತ್ತಿದ್ದರು. ಸಾವಿರಕ್ಕೂ ಹೆಚ್ಚು ಪ್ರಸೂತಿಗಳನ್ನು ಇವರು ಮಾಡಿಸಿರುವರೆಂದೂ, ಇವರಿಗೆ ನೂರೈವತ್ತಕ್ಕೂ ಹೆಚ್ಚು ಔಷಧಿಗಳ ಪರಿಚಯವಿತ್ತೆಂದೂ ಹೇಳಲಾಗುತ್ತದೆ. ಈಕೆಯ ಸೇವೆಗೆ ರಾಜ್ಯ ಪ್ರಶಸ್ತಿ ದೊರೆತಿದೆ.

## ಸೇವಾ ಸಂಸ್ಥೆಗಳು

**ದುಡಿ:** ೧೯೮೬ರಲ್ಲಿ 'ದುಡಿ' ಎಂಬ ಸಂಸ್ಥೆಯು ಗ್ರಾಮಗಳ ಪುನರ್‌ಸ್ಥಾಪನೆಗಾಗಿ ಗುಂಡ್ಲುಪೇಟೆಯಲ್ಲಿ ಸ್ಥಾಪನೆಗೊಂಡಿತು. ಈಗ ಈ ಸಂಸ್ಥೆಯು, ಚಾಮರಾಜನಗರ ಮತ್ತು ಕೊಳ್ಳೇಗಾಲಗಳಲ್ಲಿ ದುಡಿಯುತ್ತಿದೆ.

**'ಪರಿಣಿತಿ' ಮತ್ತು 'ವರ್ಲ್ಡ್ ವಿಷನ್':** ಗುಂಡ್ಲುಪೇಟೆಯಲ್ಲಿ ಸ್ಥಾಪನೆಗೊಂಡಿರುವ 'ಪರಿಣಿತಿ' ಮತ್ತು 'ವರ್ಲ್ಡ್ ವಿಷನ್' ಎಂಬ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಇದೇ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಪ್ರಮುಖವಾಗಿ ಶಾಲಾ ಪ್ರಗತಿ, ವಿದ್ಯಾಭಿವೃದ್ಧಿ, ಸ್ವಚ್ಛತಾ ಆಂದೋಲನ, ಜನರಲ್ಲಿ ಸಾಮಾಜಿಕ ಜಾಗೃತಿಯ ಸೃಷ್ಟಿ– ಇವೇ ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು, ಈ ಸಂಸ್ಥೆಗಳು ಕೆಲಸ ಮಾಡುತ್ತಿವೆ.

**'ದೀನಬಂಧು':** ಚಾಮರಾಜನಗರದಲ್ಲಿ ದೀನ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಎಲ್ಲವನ್ನೂ ಉಚಿತವಾಗಿ ಕಲಿಸುವುದಕ್ಕಾಗಿ ಜಿ.ಎಸ್. ಜಯದೇವ್‌ಅವರಿಂದ, ೧೯೯೨ರಲ್ಲಿ ಬಾಡಿಗೆ ಮನೆಯಲ್ಲಿ ಆರಂಭಗೊಂಡ ಸಂಸ್ಥೆ 'ದೀನಬಂಧು'. ಈಗ ಒಂದರಿಂದ ಏಳನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗಾಗಿ ಸ್ವಂತ ಶಾಲೆ ಇದೆ. ಚಿತ್ರಕಲೆ, ಶಿಲ್ಪಕಲೆ, ಹಾಡು, ಅಭಿನಯ, ಇತ್ಯಾದಿ ಪಠ್ಯೇತರ ಚಟುವಟಿಕೆಗಳನ್ನೂ ಒಳಗೊಂಡಂತೆ, ಎಲ್ಲ ವಿದ್ಯೆಗಳನ್ನೂ ಇಲ್ಲಿ ಕಲಿಯಲು ಅವಕಾಶವಿದೆ. ನಲವತ್ತೈದು ಗಂಡು ಮಕ್ಕಳು, ಹನ್ನೊಂದು ಹೆಣ್ಣು ಮಕ್ಕಳು, ಒಟ್ಟು ಐವತ್ತಾರು ಮಕ್ಕಳು ಈ ಸಂಸ್ಥೆಯಲ್ಲಿ ಕಲಿಯುತ್ತಿದ್ದಾರೆ. ಹೊರಗಡೆಯಿಂದಲೂ ಹಲವು ಮಕ್ಕಳು ಇಲ್ಲಿಗೆ ಕಲಿಯಲು ಬರುತ್ತಾರೆ. ನಿತ್ಯ ಪಾಠಗಳಲ್ಲದೆ ಹೆಸರಾಂತ ವಿಷಯ ತಜ್ಞರನ್ನು ಕರೆಸಿ ಸಂಬಂಧಿತ ಚಟುವಟಿಕೆಗಳ ಬಗ್ಗೆ ಕಲಿಸಿ ಕೊಡಲಾಗುತ್ತದೆ. ಕೆಲವು ಸಂಸ್ಥೆಗಳ ಆರ್ಥಿಕ ನೆರವಿನಿಂದ ಮತ್ತು ದಾನ–ದತ್ತಿಗಳಿಂದ ಇದನ್ನು ನಡೆಸಲಾಗುತ್ತಿದೆ. ಮೈಸೂರಿನ ಎಲೆ ತೋಟದ ಹತ್ತಿರ 'ಬೀದಿ ಮಹಿಳೆಯರ ಪುನರ್ವಸತಿ ಕೇಂದ್ರ'ದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿರುವ ಜಿ.ಎಸ್, ಜಯದೇವ್‌ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿ–ಪುರಸ್ಕಾರಗಳು ದೊರೆತಿವೆ. ಇವರು ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ ಪುತ್ರರು.

## 'ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ', ಬಿಳಿಗಿರಿರಂಗನ ಬೆಟ್ಟ

ಇದು ಒಂದು ಸ್ವಯಂ ಸೇವಾ ಸಂಸ್ಥೆ. ಕಾಡುಗಳಲ್ಲಿ ವಾಸಿಸುವ ಅತ್ಯಂತ ಹಿಂದುಳಿದ ಬುಡಕಟ್ಟು ಜನಾಂಗವಾದ ಗಿರಿಜನರ ವಿಶೇಷವಾಗಿ ಸೋಲಿಗರ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಡಾ. ಸುದರ್ಶನ್‌ರವರು ೧೯೮೦ರಲ್ಲಿ ಬಿಳಿಗಿರಿರಂಗನ ಬೆಟ್ಟಕ್ಕೆ ಬಂದರು. ಒಂದು ವರ್ಷ ಕಾಲ ಗಿರಿಜನರ ವಿಶ್ವಾಸವನ್ನು ಗಳಿಸಲು ಶ್ರಮಿಸಿ, ೧೯೮೧ರಲ್ಲಿ ಈ ಕೇಂದ್ರದ ಕಾರ್ಯವನ್ನು ಒಂದು ಸಣ್ಣ ಗುಡಿಸಲಿನಲ್ಲಿ ಆರಂಭಿಸಿದರು. ಈಗ ಇದು ಹಿಂದುಳಿದ ಬುಡಕಟ್ಟು ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಪಣತೊಟ್ಟು ನಿಂತಿರುವ ಬೃಹತ್ ಸಂಸ್ಥೆಯಾಗಿ ಬೆಳೆದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ.

ಆರೋಗ್ಯ, ವಿದ್ಯಾಭ್ಯಾಸ, ಜೀವನ ನಿರ್ವಹಣೆಯ ಭದ್ರತೆ ಮತ್ತು ಜೀವ ವೈವಿಧ್ಯತೆಯ ಸಂರಕ್ಷಣೆಗಳ ಹಕ್ಕುಬಾಧ್ಯತೆಗಳನ್ನು ಪಡೆಯುವುದರ ಮೂಲಕ ನಿರಂತರ ಗಿರಿಜನರ ಅಭಿವೃದ್ಧಿಯನ್ನು ಸಾಧಿಸುವುದು ಈ ಕೇಂದ್ರದ ಧ್ಯೇಯ. ಗಿರಿಜನ ಭಾಷೆ, ಸಂಸ್ಕೃತಿ ಮತ್ತು ಪರಿಸರಕ್ಕೆ ಅನುಗುಣವಾದ ವಿದ್ಯಾಭ್ಯಾಸವನ್ನು ರೂಪಿಸಿ, ಕಿರು ಅರಣ್ಯ ಉತ್ಪನ್ನಗಳ ನಿರಂತರ ಕುಯಿಲನ್ನು ಸಾಧಿಸಿ, ಸಂಘಟನೆಗಳು ಹಾಗೂ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಗಿರಿಜನ ಸಮುದಾಯಗಳ ಸಬಲತೆಯನ್ನು ಇಲ್ಲಿ ಸಾಧಿಸಲಾಗುತ್ತಿದೆ.

ಆರಂಭದ ಸಣ್ಣ ಗುಡಿಸಲಿನ ಮುಂಭಾಗದಲ್ಲಿ, ಇಪ್ಪತ್ತು ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ಇದೆ. ಇಲ್ಲಿ ಒಳರೋಗಿ ಹಾಗೂ ಹೊರ ರೋಗಿಗಳಾಗಿ ಬರುವ ಚಾಮರಾಜನಗರ ಜಿಲ್ಲೆಯ ಎಲ್ಲ ಬುಡಕಟ್ಟು ಜನರಿಗಾಗಿ ಇದನ್ನು ನಡೆಸಲಾಗುತ್ತಿದೆ. ಬೆಂಗಳೂರಿನ ನಾರಾಯಣ ಹೃದಯಾಲಯ ಹಾಗೂ ಇಸ್ರೋ ಸಂಸ್ಥೆಗಳ ಸಹಯೋಗದೊಂದಿಗೆ ಪೋಡಿನ ಜನರಿಗೆ ಮೊಬೈಲ್ ಮೂಲಕ ಸೇವೆ, ಲ್ಯಾಬ್, ಎಕ್ಸ್–ರೇ ಸೌಕರ್ಯಗಳು,

ದೂರ ಸಂವೇದಿ ಚಿಕಿತ್ಸೆ(ಟೆಲಿಮೆಡಿಸಿನ್) ಮತ್ತು ತಪಾಸಣೆ(ಸ್ಕ್ರೀನಿಂಗ್), ಲ್ಯಾಬ್, ಎಕ್ಸ್ ರೇ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಲ್ಲದೆ ಸಂಚಾರಿ ಆರೋಗ್ಯ ಘಟಕಗಳ ಮೂಲಕ ದುರ್ಗಮ ಅರಣ್ಯ ಪ್ರದೇಶಗಳ ನಡುವೆ ವಾಸಿಸುವ ಗಿರಿಜನರಿಗೆ ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತಿದೆ. ಸೋಲಿಗರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ 'ಸಿಕಲ್ ಸೆಲ್ ಅನೀಮಿಯ' ಎಂಬ ಅನುವಂಶೀಯ ಖಾಯಿಲೆಯ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯಗಳನ್ನು ಆಸ್ಪತ್ರೆಯಲ್ಲಿ ಕಲ್ಪಿಸಲಾಗಿದೆ.

ಕಿರು ಅರಣ್ಯ ಉತ್ಪನ್ನಗಳ ಕುಯಿಲು, ನೆಲ್ಲಿಕಾಯಿ, ಜೇನು ಮತ್ತು ಸಸ್ಯೌಷಧಿಗಳ ಸಂರಕ್ಷಣೆ; ಕಾಳ್ಗಿಚ್ಚು, ವನ್ಯ ಜೀವಿಗಳ ಹತ್ಯೆ ಮತ್ತು ಗಣಿಗಾರಿಕೆ ವಿರುದ್ಧ ಜನರನ್ನು ಕ್ರಿಯಾಶೀಲಗೊಳಿಸುವುದು; ಗಿರಿಜನ ಸಹಕಾರ ಸಂಘಗಳ ಸಾಮರ್ಥ್ಯ ನಿರ್ಮಾಣ; ಶಾಲೆಯಲ್ಲಿ ಪರಿಸರ ಶಿಕ್ಷಣ, ಪರಿಸರ ಸಂರಕ್ಷಣೆಗೆ ಶಿಕ್ಷಣ ಮತ್ತು ಪರಿಸರ ಪ್ರವಾಸೋದ್ಯಮಗಳ ಕುರಿತಾಗಿ ಅತ್ಯುಪಯುಕ್ತ ಕಾರ್ಯಗಳನ್ನು ಈ ಕೇಂದ್ರವು ಕೈಗೊಂಡು ನಿರ್ವಹಿಸುತ್ತಿದೆ.

ಅಲ್ಲದೆ, ದಾದಿಯರು, ಆರೋಗ್ಯ ಕಾರ್ಯಕರ್ತರು ಮತ್ತು ಹೌಸ್ ಸರ್ಜನ್‌ಗಳಿಗೆ ತರಬೇತಿ, ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮಗಳು, ಪೌಷ್ಠಿಕತೆ, ಸ್ವಚ್ಛ ಕುಡಿಯುವ ನೀರು, ನೈರ್ಮಲ್ಯದ ಕಾರ್ಯಕ್ರಮಗಳು, ಪಾರಂಪರಿಕ ಔಷಧಿ ಮತ್ತು ಸ್ಥಳೀಯ ಆರೋಗ್ಯ ಪರಂಪರೆಯ ಪುನರುಜ್ಜೀವನ, ಶಿಶು ವಿಹಾರದಿಂದ ಹಿಡಿದು ಹತ್ತನೇ ತರಗತಿಯವರೆಗೆ ೫೦೦ಕ್ಕೂ ಹೆಚ್ಚು ಬಾಲಕ ಮತ್ತು ಬಾಲಕಿಯರಿಗೆ ಗಿರಿಜನ ಶಾಲೆ; ೨೦೦ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ, ಕ್ರೀಡಾ ಶಾಲೆ, ಕೈಗಾರಿಕಾ ತರಬೇತಿ ಶಾಲೆ, ಪದವಿಪೂರ್ವ ಶಿಕ್ಷಣ, ಮತ್ತು ಅರಣ್ಯ ಶಾಸ್ತ್ರದಲ್ಲಿ ವೃತ್ತಿಪರ ಕೋರ್ಸ್‌ಗಳು, ನಾಟಕ ಶಾಲೆ, ವೃತ್ತಿ ಶಿಕ್ಷಣ, ಸಮುದಾಯ ಸಂಘಟನೆ, ಸೋಲಿಗ ಅಭಿವೃದ್ಧಿ ಸಂಘಗಳ ಸ್ಥಾಪನೆ, ಸ್ವಸಹಾಯ ಸಂಘಗಳ ಸಬಲತೆಗೆ ಬೆಂಬಲ, ಗಿರಿಜನ ಒಕ್ಕೂಟಗಳಿಗೆ ಬೆಂಬಲ, ಗಿರಿಜನರಿಗಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟವಾದ 'ಗಿರಿಜನ ಕ್ರಿಯಾ ಕೂಟ'ದಲ್ಲಿ ಭಾಗವಹಿಸುವುದು, ಇವೇ ಮುಂತಾದವು, ವಿವೇಕಾನಂದ ಗಿರಿಜನ ಕೇಂದ್ರದಿಂದ ಸಾಧಿಸಲಾಗುತ್ತಿರುವ ಮಹತ್ವಪೂರ್ಣ ಕಾರ್ಯಗಳಾಗಿವೆ.

ಗಿರಜನರ ಪ್ರಗತಿಗೆ ಶ್ರಮಿಸಿ, ಮಾನವೀಯತೆ ಮತ್ತು ಸೇವಾ ಮನೋಭಾವವನ್ನು ಬೆಳೆಸುತ್ತಿರುವ ಡಾ. ಎಚ್. ಸುದರ್ಶನ್‌ಅವರಿಗೆ ೧೯೮೪ರಲ್ಲಿ ದೊರೆತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ನೂರಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ಸ್ವೀಡನ್ ಸರ್ಕಾರ ೧೯೯೪ರಲ್ಲಿ ನೀಡಿದ ಪರ್ಯಾಯ ನೋಬೆಲ್ ಪಾರಿತೋಷಕವೆಂದೇ ಹೆಸರಾಗಿರುವ ರೈಟ್‌ಲೈವ್ಲಿಹುಡ್ ಪ್ರಶಸ್ತಿ, ಭಾರತ ಸರ್ಕಾರವು ೨೦೦೨ರಲ್ಲಿ ಪದ್ಮಶ್ರೀ ಪ್ರಶಸ್ತಿ, ಹಾಗೂ ಕರ್ನಾಟಕ ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟವು ೨೦೦೨ರಲ್ಲಿ ನೀಡಿರುವ ಫೇವಾರ್ಡ್ ಪ್ರಶಸ್ತಿಗಳು ಪ್ರಮುಖವಾಗಿವೆ.

## 'ಕರುಣಾ ಟ್ರಸ್ಟ್'

ಯಳಂದೂರು ತಾಲೂಕಿನಲ್ಲಿ ಹೆಚ್ಚು ಕುಷ್ಠ ರೋಗಿಗಳು (ಒಂದು ಸಾವಿರಕ್ಕೆ ೨೧.೪) ಇದ್ದುದರಿಂದ, ಇದನ್ನು ನಿಯಂತ್ರಿಸಲು, ೧೯೮೬ರಲ್ಲಿ ಸ್ಥಾಪಿತವಾದ ಸಾರ್ವಜನಿಕ ವಿಶ್ವಸ್ಥ ಸಂಸ್ಥೆ 'ಕರುಣಾ ಟ್ರಸ್ಟ್' ಬಿಳಿಗಿರಿರಂಗನ ಬೆಟ್ಟದಲ್ಲಿರುವ, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಒಂದು ಅಂಗ ಸಂಸ್ಥೆಯಾಗಿ ಸ್ವೀಕರಿಸಲ್ಪಟ್ಟಿದೆ. ಕುಷ್ಠ ರೋಗ, ಮೂರ್ಛೆ ರೋಗ, ಮಾನಸಿಕ ಆರೋಗ್ಯ, ಕ್ಷಯರೋಗಗಳ ನಿಯಂತ್ರಣವೇ ಅಲ್ಲದೆ, ಆರೋಗ್ಯದ ಇತರ ಸಮಸ್ಯೆಗಳು, ಶಿಕ್ಷಣ, ಸಮಗ್ರ-ಗ್ರಾಮೀಣಾಭಿವೃದ್ಧಿ, ವೃತ್ತಿಪರ ತರಬೇತಿ, ಸಮುದಾಯ ಅಭಿವೃದ್ಧಿ, ಮುಂತಾದ ಇತರ ಹಲವು ಜನಹಿತ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ

ಗುಂಬಳ್ಳಿಯ ಪ್ರಾಥಮಿಕ ಆರೋಗ್ಯಕೇಂದ್ರವೂ ಸೇರಿದಂತೆ ಕರ್ನಾಟಕದಾದ್ಯಂತ ಹಿಂದುಳಿದ ಪ್ರದೇಶಗಳಲ್ಲಿರುವ ಇಪ್ಪತ್ತೆಂಟಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು ಕರುಣಾ ಟ್ರಸ್ಟ್ ನಿರ್ವಹಿಸುತ್ತಿದೆ.

## ರೋಟರಿ ಕ್ಲಬ್, ಲಯನ್ಸ್ ಕ್ಲಬ್ ಮತ್ತಿತರ ಸಂಸ್ಥೆಗಳು

ಚಾಮರಾಜನಗರದಲ್ಲಿ ರೋಟರಿ ಕ್ಲಬ್ ೧೯೭೦ರಲ್ಲಿ ಆರಂಭಗೊಂಡಿದ್ದು, ಜನರ ಆರೋಗ್ಯ, ಶಿಕ್ಷಣ, ವಿದ್ಯೆಗೆ ಮತ್ತು ವೃತ್ತಿ–ಸಾಧಕರಿಗೆ ಪ್ರೋತ್ಸಾಹ, ಮುಂತಾದ ಸೇವಾ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಪ್ರತಿವರ್ಷ ನೇತ್ರ ಚಿಕಿತ್ಸಾ ಶಿಬಿರ, ನಿವೃತ್ತ ಶಿಕ್ಷಕರಿಗೆ ಶಿಕ್ಷಕರ ದಿನದಂದು ಸನ್ಮಾನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ, ಇತ್ಯಾದಿ ಕಾರ್ಯಕ್ರಮಗಳಲ್ಲದೆ ಕನ್ನಡವನ್ನು ಬೆಳೆಸಲು, ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಯನ್ನೂ ಆರಂಭಿಸಿದೆ. ಇದರ ಅಂಗ ಸಂಸ್ಥೆಯಾದ ರೊಟರಾಕ್ಟ್ ಕ್ಲಬ್ ಮತ್ತು ಇಲ್ಲಿಯ ಲಯನ್ಸ್ ಕ್ಲಬ್, ಭಾರತ ಯಾತ್ರಾ ಕೇಂದ್ರ, ಮುಂತಾದ ಸಂಸ್ಥೆಗಳು ಸಮಾಜದ ಸ್ವಾಸ್ಥ್ಯ, ಶಿಕ್ಷಣ ಪ್ರಗತಿ, ಮತ್ತು ಉನ್ನತಿಗಾಗಿ ಕೆಲಸ ಮಾಡುತ್ತಿರುವ ಸೇವಾ ಸಂಸ್ಥೆಗಳಾಗಿವೆ. ಜಿಲ್ಲೆಯ ಹನೂರು, ಯಳಂದೂರು, ಕೊಳ್ಳೇಗಾಲ ಮುಂತಾದ ಸ್ಥಳಗಳಲ್ಲಿ ಈ ಸಂಸ್ಥೆಗಳು ಸೇವಾ ಕಾರ್ಯಗಳನ್ನು ನಿರ್ವಹಿಸುತ್ತಿವೆ.

******